## ಅಧ್ಯಾಯ 8

# ಸಂಗಡ ಮಹಿಮೆಯಲ್ಲಿ ಪಾಲುಗಾರಿಕೆ

ರೋಮಾ 8ನೇ ಅಧ್ಯಾಯವು "ಬೈಬಲಿನಲ್ಲಿ ಶ್ರೇಷ್ಠ ಅಧ್ಯಾಯಗಳಲ್ಲೊಂದಾಗಿದೆ,"[1] ವಾಕ್ಯದಲ್ಲಿಯೇ "ಉತ್ತಮ—ಪರಿಚಿತ, ಹೆಚ್ಚು ಪ್ರೀತಿಗೆ ಪಾತ್ರವಾದ ಅಧ್ಯಾಯಗಳಲ್ಲಿ ಒಂದಾಗಿದೆ."[2] 7ನೇ ಅಧ್ಯಾಯದಿಂದ ಹೊರಗೆ ಬಂದು 8ನೇ ಅಧ್ಯಾಯದೊಳಗೆ ಪ್ರವೇಶಿಸುವದು ಒಂದು ರೀತಿಯಲ್ಲಿ ಕತ್ತಲೆಯೊಳಗಿಂದ ಹೊರಬಂದು ಬೆಳಕಿನಲ್ಲಿ ಪ್ರವೇಶಿಸುವಂತಿದೆ, ಒಂದು ರಭಸವಾಗಿ ಹೊಡೆಯುವ ಚಳಿಗಾಲದ ಬಿರುಗಾಳಿಯೊಳಗಿಂದ ಹೊರಬಂದು ಒಂದು ಸುಂದರ ವಸಂತಕಾಲದ ದಿನದೊಳಗೆ ಪ್ರವೇಶಿಸಿದಂತಿರುತ್ತದೆ. ರೋಮಾಪುರದವರಿಗೆ ಬರೆದ ಪುಸ್ತಕವು ಒಂದು ಸುಂದರವಾದ ಉಂಗುರಕ್ಕೆ ಹೋಲಿಸಲಾಗಿದೆ, 8ನೇ ಅಧ್ಯಾಯವು ಆ ಉಂಗುರದ ಮೇಲಿನ ವಜ್ರದಂತೆಯೂ 28ನೇ ವಚನವು ಆ ವಜ್ರದ ಮೇಲಿನ ಹೊಳಿಪಿನಂತೆಯೂ ಇರುತ್ತದೆ.[3]

ಸೌಂದರ್ಯದ ಮಧ್ಯದಿಂದ ಒಂದು ಹೊಸ ಚರ್ಚೆಯ ಅಂಶವು ಎದ್ದೇಳುತ್ತದೆ: "ಮಹಿಮೆಯಲ್ಲಿ ಪಾಲುಗಾರಿಕೆ." "ಮಹಿಮೆ" ಮತ್ತು "ಮಹಿಮೆಯಲ್ಲಿ ಪಾಲುಗಾರಿಕೆ" ಎಂಬ ಪದಗಳು ಈ ಅಧ್ಯಾಯದಲ್ಲಿ ನಾಲ್ಕು ಸಾರಿ ಕಂಡುಬರುತ್ತವೆ:

> . . . ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ *ಮಹಿಮೆಯಲ್ಲಿಯೂ* ಪಾಲುಗಾರರಾಗುವೆವು (8:17; ಒತ್ತಿ ಹೇಳಿದ್ದು ನನ್ನದು).
>
> ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ *ಮಹಿಮಪದವಿಯನ್ನು* ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ (8:18 ಒತ್ತಿ ಹೇಳಿದ್ದು ನನ್ನದು).
>
> . . . ಆ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ *ಮಹಿಮೆಯುಳ್ಳ* ವಿಮೋಚನೆಯಲ್ಲಿ ಪಾಲುಹೊಂದುವದೇ (8:21; ಒತ್ತಿ ಹೇಳಿದ್ದು ನನ್ನದು).
>
> . . . ಯಾರನ್ನು ಕರೆದನೋ ಅವರನ್ನು ನೀತಿವಂತರೆಂದು ನಿರ್ಣಯಿಸಿದನು; ಯಾರನ್ನು ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು *ಮಹಿಮ*ಪದವಿಗೆ ಸೇರಿಸಿದನು (8:30; ಒತ್ತಿ ಹೇಳಿದ್ದು ನನ್ನದು).

ಹೇಗೂ, ನಾವು ನೆನಪಿಟ್ಟುಕೊಳ್ಳತಕ್ಕದ್ದೇನೆಂದರೆ, ಪೌಲನು ಏಕಾಏಕಿ ಒಂದು ಚರ್ಚೆಯಾಂಶವನ್ನು ಮುಗಿಸಿಬಿಟ್ಟು ಮತ್ತೊಂದನ್ನು ಆರಂಭಿಸಲಿಲ್ಲ. 8ನೇ ಅಧ್ಯಾಯದ ಆರಂಭವು ಹಿಂದಿನ ವಿಚಾರವನ್ನೇ ಮುಂದುವರೆಸಿಕೊಂಡು ಹೋಗುತ್ತದೆ. ಶುದ್ಧೀಕರಣದ

ವಿಚಾರವು ವಚನ 4, ವಚನ 13, ಅಥವಾ ವಚನ 17ರಲ್ಲಿ ಸಾಗುವದನ್ನು ನಾವು ಕಾಣಬಹುದು. ಕ್ರೈಸ್ತರನ್ನು ಪರಿಶುದ್ಧಗೊಂಡ (ಪವಿತ್ರ) ಜೀವಿತಗಳನ್ನು ನಡಿಸುವಂತೆ ಪ್ರೋತ್ಸಾಹಿಸುವದನ್ನು ಪೌಲನು ಮುಂದುವರೆಸುತ್ತಾನೆ. ಅದೇ ಸಮಯದಲ್ಲಿ, 1ನೇ ವಚನದಿಂದ ಮೊದಲ್ಗೊಂಡು, ಕ್ರೈಸ್ತರಾಗಿ ನಾವು ನಿತ್ಯತ್ವದಲ್ಲಿ ಪಡೆದುಕೊಳ್ಳಲಿರುವ ಆಶೀರ್ವಾದಗಳನ್ನು ಹೊರತುಪಡಿಸಿ, ಈಗ ನಾವು ಅನುಭವಿಸುತ್ತಿರುವ ಮಹಿಮಕರವಾದ ಆಶೀರ್ವಾದಗಳ ಬಗ್ಗೆ ಪರಿಚಯ ನೀಡುತ್ತಾನೆ. ಹೀಗೆ "ಮಹಿಮೆಯಲ್ಲಿ ಪಾಲುಗಾರಿಕೆ" ಎಂಬ ಪದಗುಚ್ಛವು ಇಡೀ ಅಧ್ಯಾಯಕ್ಕೆ ನಿಖರವಾಗಿ ಅನ್ವಯವಾಗಬಲ್ಲದು.

## "ಕ್ರಿಸ್ತನಲ್ಲಿ ಅಪರಾಧನಿರ್ಣಯವು ಇಲ್ಲ" (8:1-4)

**1ಅದದರಿಂದ ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ.**
**2ಯಾಕೆಂದರೆ ಜೀವವನ್ನುಂಟುಮಾಡುವ ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು**
**ಪಾಪಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು.**
**3ಧರ್ಮಶಾಸ್ತ್ರವು ನಮ್ಮ ಶರೀರಾಧೀನಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು**
**ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನೆಂದರೆ ಆತನು**
**ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ**
**ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು.**
**4ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರತ್ಮಾನುಸಾರವಾಗಿ**
**ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವದಕ್ಕೆ**
**ಮಾರ್ಗವಾಯಿತು.**

ಈ ವಾಕ್ಯಭಾಗವು 7:1ರಲ್ಲಿ ಆರಂಭಗೊಂಡ "ಧರ್ಮಶಾಸ್ತ್ರ" ಕುರಿತ ಚರ್ಚೆಯನ್ನು ಪೂರ್ತಿಗೊಳಿಸುತ್ತದೆ. ಅಲ್ಲದೆ ಇದು 6:1ರಲ್ಲಿ ಆರಂಭಗೊಂಡ ವಿಚಾರವನ್ನು (ಅಥವಾ 4:1ನ್ನು ಸಹ ಎಂದು ಹೇಳಬಹುದು) ಸಹ ಪರಾಕಾಷ್ಠೆಗೆ ಕೊಂಡೊಯ್ಯುತ್ತದೆ ಮತ್ತು 8ನೇ ಅಧ್ಯಾಯದಲ್ಲಿ ವಿವರಿಸಲಾರಂಭಿಸಿದ್ದ ಹಲವಾರು ಮಹತ್ವಪೂರ್ಣವಾದ ಚರ್ಚೆಯ ಅಂಶಗಳನ್ನು ಇಲ್ಲಿ ಪರಿಚಯಿಸುತ್ತದೆ. ರೋಮಾ 7:14–25 ವಚನಗಳು ಒಬ್ಬನು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಯ ಅಡಿಯಲ್ಲಿ ಪರಿಪೂರ್ಣವಾದ ಜೀವನ ನಡಿಸುವದಕ್ಕೆ ಪ್ರಯತ್ನಿಸುವ ಹೋರಾಟವನ್ನು ಕುರಿತು ಬಣ್ಣಿಸಿದವು. ಅಂತಹ ಪ್ರಯತ್ನವು ವ್ಯರ್ಥವಾದದ್ದು ಎಂಬುದಾಗಿ ಪೌಲನು 7:24ನೇ ವಚನದಲ್ಲಿ ವ್ಯಕ್ತಪಡಿಸಿದನು: "ಅಯ್ಯೋ, ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು! ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು?" 7:25ನೇ ವಚನದಲ್ಲಿ, ಪೌಲನು ತನ್ನ ಸ್ವಂತ ಪ್ರಶ್ನೆಗೆ ತಾನೇ ಉತ್ತರಿಸುತ್ತಾನೆ: "ಬಿಡಿಸುವವನು ಇದ್ದಾನೆಂಬುದಕ್ಕಾಗಿ [ನಾನು] ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ [ಬಿಡಿಸಲ್ಪಡಬಲ್ಲೆನು ಎಂಬುದಕ್ಕಾಗಿ] ದೇವರಿಗೆ ಸ್ತೋತ್ರ." 8ನೇ ಅಧ್ಯಾಯವು "ಆದದರಿಂದ," ಎಂಬುದರೊಂದಿಗೆ ಆರಂಭಗೊಳ್ಳುವ ಮೂಲಕ ಪೌಲನು ತನ್ನ ಹಿಂದಿನ ವಿಚಾರವನ್ನು ಮುಂದುವರೆಸುತ್ತಿದ್ದಾನೆಂಬುದನ್ನು ಸೂಚಿಸುತ್ತದೆ.

**ವಚನ 1. ಆದದರಿಂದ ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧನಿರ್ಣಯವು ಈಗ**

**ಇಲ್ಲವೇ ಇಲ್ಲ** ಎಂದು ಪೌಲನು ಹೇಳಿದನು. ಈ ಆಶ್ಚರ್ಯಕಾರಿ ವಾಗ್ದಾನವು ಪ್ರಾಮುಖ್ಯವಾದ ಪದಗಳಿಂದ ಮತ್ತು ಪದಗುಚ್ಛಗಳಿಂದ ತುಂಬಿರುತ್ತದೆ. ಮೊದಲನೆಯದಾಗಿ, "ಅಪರಾಧನಿರ್ಣಯ" ಎಂಬ ಮುಖ್ಯ ಪದವನ್ನು ಕುರಿತು ನೋಡೋಣ. ಈ ಪದವು κατάκριμα (*katakrima*) ಎಂಬುದರ ಅನುವಾದವಾಗಿದೆ, κρίμα (*krima,* "ಅಪರಾಧನಿರ್ಣಯ") ಎಂಬುದರ ಬಲಗೊಂಡ ರೂಪವಾಗಿದೆ. Leon Morris ಇದನ್ನು ಒಂದು "ನ್ಯಾಯಸ್ಥಾಪಕ [ನ್ಯಾಯಾಲಯದ] ಪದಗುಚ್ಛವಾಗಿ ಕಂಡನು, ಅದರಲ್ಲಿ ದಂಡನೆಯತೀರ್ಪು ಹಾಗೂ ಆ ದಂಡನೆಯತೀರ್ಪನ್ನು ಜಾರಿಗೆ ತರುವಿಕೆಗಳೆರಡೂ ಸೇರಿರುತ್ತವೆ."[4] ಈ ವಚನದಲ್ಲಿ, "ಅಪರಾಧನಿರ್ಣಯ" ವು *ಆತ್ಮೀಕ* ಅಪರಾಧನಿರ್ಣಯವನ್ನು ಸೂಚಿಸುತ್ತದೆ.

ಇಲ್ಲಿ ಧಾತು ಕ್ರಿಯಾಪದವು ("is" ಧಾತುವಿನ ಪ್ರಥಮ ಪುರುಷ ವರ್ತಮಾನಕಾಲ) ವರ್ತಮಾನ ಕಾಲ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ, ಹೊರತು ಭವಿಷ್ಯತ್ಕಾಲದಲ್ಲಿ ಅಲ್ಲ—ಒಂದು ಸದ್ಯದ ಅಥವಾ ಹಾಲಿ ಆಶೀರ್ವಾದ, ಹೊರತು ಭವಿಷ್ಯದಲ್ಲಿನ ವಾಗ್ದಾನವಲ್ಲ (*krima*). ಭವಿಷ್ಯದಲ್ಲಿ ದುಷ್ಟರಿಗೆ ದಂಡನೆಯ ತೀರ್ಪು ಕಾದಿರುತ್ತದೆ (ನೋಡಿರಿ ಲೂಕ 20:47), ಆದರೆ ಒಂದು ಅರ್ಥದಲ್ಲಿ ಯೇಸುವನ್ನು ತಿರಸ್ಕರಿಸುವವರಿಗೆ ಈಗಾಗಲೇ ದಂಡನೆಯ ತೀರ್ಪು ಆಗಿಬಿಟ್ಟಿರುತ್ತದೆ. (ನೋಡಿರಿ ಯೋಹಾನ 3:18, ಇಲ್ಲಿ κρίνω [*krínō*, "ದಂಡನೆ"] ಎಂಬ ಕ್ರಿಯಾಪದವು ಉಪಯೋಗಿಸಲ್ಪಟ್ಟಿದೆ.) ಪೌಲನು ಕ್ರೈಸ್ತರಿಗೆ, ಅವರ ವಿಷಯದಲ್ಲಾದರೋ ದಂಡನೆಯ ತೀರ್ಪು ಕೊನೆಗೊಳಿಸಲ್ಪಟ್ಟಿದೆ ಎಂಬ ಶುಭವಾರ್ತೆಯನ್ನು ಹೇಳುತ್ತಿದ್ದಾನೆ! Coy Roper ಇದನ್ನು ಒಂದು ಸಾದೃಶ್ಯದೊಂದಿಗೆ ವ್ಯಕ್ತಪಡಿಸುತ್ತಾನೆ:

> ದಂಡನೆಯ ತೀರ್ಪು ಎತ್ತಿಹಾಕಲ್ಪಟ್ಟಿತು! . . . ಬೇರೊಬ್ಬನು ಈಗಾಗಲೇ ದಂಡನೆಯನ್ನು ಅನುಭವಿಸಿ ತೀರಿಸಿದ್ದನು! ನಾವು ಈ ಪದಗಳನ್ನು ಆಲಿಸಿದ್ದೇವೆ: "ಆರೋಪಿಸಲ್ಪಟ್ಟ ಪ್ರಕಾರ ದೋಷಿ." ನಾವು ಮರಣ ದಂಡನೆಗೆ ಗುರಿಯಾಗಿ ಕುಳಿತಿದ್ದೆವು, ಆ ದಂಡನೆಯು ಜಾರಿಗೆ ತರಲಿರುವ ದುರ್ದಿನವನ್ನು ಎದುರುನೋಡುತ್ತಾ ಇದ್ದೇವಷ್ಟೇ. ಆಗ ಒಂದು ಸ್ವಾಗತಾರ್ಹವಾದ ಸುದ್ದಿಯು ಬಂದಿತು: "ನೀವು ಸ್ವತಂತ್ರರು!" ನಾವು ಇನ್ನು ಮೇಲೆ ನಮ್ಮ ಪಾಪಗಳಿಗಾಗಿ ಅಪರಾಧನಿರ್ಣಯದಲ್ಲಿರುವದಿಲ್ಲ.[5]

ಅದಾದ ಮೇಲೆ, ಪೌಲನಿಗೆ ಅತ್ಯಂಥ ನೆಚ್ಚಿನ ಮಾತುಗಳಲ್ಲೊಂದಾದ, "ಕ್ರಿಸ್ತ ಯೇಸುವಿನಲ್ಲಿ," ಎಂಬ ಮಾತು ಕಾಣಿಸಿಕೊಳ್ಳುತ್ತದೆ. ಇದು ಪುನಃ ನಮ್ಮನ್ನು ರೋಮಾ 6:3 ಕ್ಕೆ ಕರೆದೊಯ್ಯುತ್ತದೆ, ಅಲ್ಲಿ ಪೌಲನು "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ" ಎಂದು ಬರೆಯುತ್ತಾನೆ. F. F. Bruce ಹೀಗೆ ಬರೆದರು,

> "ಕ್ರಿಸ್ತ ಯೇಸುವಿನಲ್ಲಿ" (ಅಥವಾ "ಕ್ರಿಸ್ತನಲ್ಲಿ") ಎಂಬುದು ಪುರುಷ ಮತ್ತು ಸ್ತ್ರೀಯರು ಕ್ರಿಸ್ತನಲ್ಲಿ ತಮ್ಮ ವಿಶ್ವಾಸವನ್ನು ಇಡುವಾಗ ಪ್ರವೇಶಿಸುವ ಒಂದು ನೂತನ ವ್ಯವಸ್ಥೆಯನ್ನು ಬಣ್ಣಿಸುವದಕ್ಕೆ ಪೌಲನು ಅನುಸರಿಸುವ ರೀತಿಯಾಗಿದೆ. ಕ್ರೈಸ್ತ ದೀಕ್ಷಾಸ್ನಾನವು "ಕ್ರಿಸ್ತ ಯೇಸುವಿನಲ್ಲಿ ಸೇರುವದಕ್ಕೆ" ಮಾಡಿಸಿಕೊಳ್ಳುವ ದೀಕ್ಷಾಸ್ನಾನವಾಗಿದೆ (6:3); ಆತನೊಂದಿಗೆ ನಂಬಿಕೆಯ—ಐಕ್ಯದ ಮೂಲಕ ಆತನ ಜನರು ಆತನೊಂದಿಗೆ ಮರಣಿಸಿ, ಹೂಣಲ್ಪಟ್ಟವರು ಮತ್ತು ಆತನೊಂದಿಗೆ ಜೀವಿತರಾಗಿ ಎಬ್ಬಿಸಲ್ಪಟ್ಟವರೆಂದು ಎಣಿಸಲ್ಪಡುತ್ತಾರೆ.[6]

ಅಂತಿಮವಾಗಿ, ಈ ವಾಕ್ಯವು "ಈಗ" ಎಂಬ ಪದವನ್ನೊಳಗೊಳಡಿರುತ್ತದೆ:

“ಆದದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ.” 7:14-25ರಲ್ಲಿ, ಪೌಲನು “ಆಗ”—ಆತನು ತನ್ನ ಸ್ವಬಲದ ಮೇಲೆ ಅವಲಂಬಿತನಾಗಿ ಧರ್ಮಶಾಸ್ತ್ರವನ್ನು ಕೈಗೊಳ್ಳಲು ಪ್ರಯತ್ನಿಸುತ್ತಿದ್ದ ಕಾಲದ ಬಗ್ಗೆ—ಎಂಬುದರ ಬಗ್ಗೆ ಮಾತಾಡುತ್ತಿದ್ದನು. ಆಗ, ಆತನು ಧರ್ಮಶಾಸ್ತ್ರಕ್ಕೆ ಪರಿಪೂರ್ಣತೆಯಿಂದ ವಿಧೇಯನಾಗಲು ಸಾಧ್ಯವಾಗಿರಲಿಲ್ಲವಾದ್ದರಿಂದ ಖಂಡನೆಗೊಳಗಾದವನಾಗಿದ್ದನು—ಆದರೆ ಅದು ಈಗ ಬದಲಾಗಿತ್ತು: ಪೌಲನು ಕ್ರಿಸ್ತನಲ್ಲಿ ವಿಶ್ವಾಸವಿಟ್ಟು ದೀಕ್ಷಾಸ್ನಾನ ಮಾಡಿಸಿಕೊಂಡಿದ್ದನು; ಆತನು ದೇವರ ಕೃಪೆಯ ಮೂಲಕ ರಕ್ಷಣೆ ಹೊಂದಿದ್ದನು. ಈಗ, ಆತನು ಇನ್ನೆಂದಿಗೂ ಅಪರಾಧನಿರ್ಣಯ ಹೊಂದಿದವನಾಗಿರಲಿಲ್ಲ.

ಆ ಪದಗಳನ್ನು ಮತ್ತು ಪದಗುಚ್ಛಗಳನ್ನು ಒಂದುಗೂಡಿಸುವಾಗ, ದೇವರ ಪ್ರತಿಯೊಬ್ಬ ನಂಬಿಗಸ್ತ ಮಗುವಿಗೆ ಕೊಡಲ್ಪಡುವ ಭರವಸೆ ಇದೇ ಆಗಿರುತ್ತದೆ. ಈ ಭರವಸೆಗೆ ನಮ್ಮಲ್ಲಿ ಯಾರೊಬ್ಬರೂ ಯೋಗ್ಯರಲ್ಲ, ಆದರೆ ನಮ್ಮೆಲ್ಲರಿಗೂ ಅದು ಅಗತ್ಯವಿರುವದಾಗಿದೆ!

ವಿಷಾದಕರವಾಗಿ, 1ನೇ ವಚನವು—ರೋಮಾ 8ನೇ ಅಧ್ಯಾಯದಲ್ಲಿನ ಇತರ ವಾಕ್ಯಭಾಗಗಳ ಸಂಗಡ—ದೇವರ ಮಕ್ಕಳು ಕಳೆದುಹೋಗಲು ಸಾಧ್ಯವೇ ಇಲ್ಲ ಎಂಬುದಾಗಿ ಉಪದೇಶಿಸುವದಕ್ಕೆ ದುರುಪಯೋಗಪಡಿಸಿಕೊಳ್ಳಲ್ಪಟ್ಟಿದೆ. ಕ್ಯಾಲ್ವಿನ್‌ತತ್ವದ ಬರಹಗಾರರು ರೋಮಾ 8:1ರ ಮೇಲೆ ವ್ಯಾಖ್ಯೆ ಮಾಡುವಾಗ, ಅವರು “ಈ ಉಕ್ತಿಯಲ್ಲಿ [ಮಾತಿನಲ್ಲಿ] ಅರ್ಹತೆಗಳೇನೂ ಇರುವದಿಲ್ಲ” ಅಥವಾ “ಯಾವದೇ ಶರತ್ತುಗಳು ಕೊಡಲ್ಪಟ್ಟಿರುವದಿಲ್ಲ” ಎಂದು ಹೇಳುವದು ಅಸಹಜವೇನಲ್ಲ. ಒಂದು ವಚನವನ್ನು ಅದರ ಸಂದರ್ಭದೊಳಗಿಂದ ಹೊರಕ್ಕೆ ತೆಗೆದು ಅಪಾರ್ಥ ಕಲ್ಪಿಸುವದು ಯಾವಾಗಲೂ ಒಂದು ತಪ್ಪು ಆಗಿರುತ್ತದೆ. ಒಮ್ಮೆ ಕ್ರೈಸ್ತನು—ಕಳೆದುಹೋಗಲು—ಸಾಧ್ಯವಿಲ್ಲ ಎಂಬ ನಿಲುವು ಹೊಂದಿದ್ದ ಒಬ್ಬ ವ್ಯಕ್ತಿಯು ಸುವಾರ್ತಿಕರಾದ Glen Paceರಿಗೆ ಸವಾಲೊಡ್ಡಿ, “ಕ್ರಿಸ್ತನಲ್ಲಿರುವವರಿಗೆ ಅಪರಾಧನಿರ್ಣಯ ಇರುವದೆಂದು ನೀನು ನಂಬುವವನೆಂದು ಯಾರೋ ನನಗೆ ಹೇಳಿದರು” ಎಂದನು. ಆ ಮನುಷ್ಯನು ರೋಮಾ 8:1ನೇ ವಚನವನ್ನು ಸೂಚಿಸಿ ಈ ಮಾತುಗಳನ್ನಾಡುತ್ತಿದ್ದಾನೆ ಎಂಬುದನ್ನು ಅರಿತ Glen Pace ಆತನಿಗೆ, “ನೀನು ಅಷ್ಟಾಗಿ ಮುಂದಿನ ವಚನಗಳನ್ನು ಓದಿಲ್ಲ. ಮುಂದಕ್ಕೆ ಓದುತ್ತಲೇ ಇರು!” ಎಂದು ಹೇಳಿದರು.[7]

KJV ತರ್ಜುಮೆಯಲ್ಲಿ, 8:1ನೇ ವಚನದ ವಾಗ್ದಾನದ ನಂತರ ತಕ್ಷಣವೇ ಈ ಅರ್ಹತೆಯು ಬರೆಯಲ್ಪಟ್ಟಿದೆ: “ಶರೀರಾಧೀನಸ್ವಭಾವದ ಅನುಸಾರ ನಡೆಯುವವರಲ್ಲ, ಆದರೆ ಆತ್ಮನ ಅನುಸಾರ ನಡೆಯುವವರು.” ಈ ಮಾತುಗಳು ಅತಿ ಹಳೆಯ ಹಸ್ತಪ್ರತಿಗಳಲ್ಲಿನ 1ನೇ ವಚನದೊಳಗೆ ಕಂಡುಬರುವದಿಲ್ಲ, ಆದರೆ 4ನೇ ವಚನದಲ್ಲಿ ಕಾಣಿಸಿಕೊಳ್ಳುತ್ತವೆ. ವಾಸ್ತವಾಂಶವೇನಂದರೆ 8ನೇ ಅಧ್ಯಾಯದಲ್ಲಿ ಅರ್ಹತೆಗಳ ಕೊರತೆಯೇನಿರುವದಿಲ್ಲ. “ದರೆ” (ಇದ್ದಲ್ಲಿ, ದಾದರೆ, ಪಕ್ಷದಲ್ಲಿ) ಎಂಬ ಪದವು “ಆಂಗ್ಲ ಭಾಷೆಯಲ್ಲಿ ಅತ್ಯಂಥ ದೊಡ್ಡದಾದ ಚಿಕ್ಕ ಪದವೆಂದು ಕರೆಯಲ್ಪಟ್ಟುದ್ದು,”[8] ಇದು ಈ ಅಧ್ಯಾಯದಲ್ಲಿ ಹಲವಾರು ಸಾರಿ ಕಾಣಿಸಿಕೊಳ್ಳುತ್ತದೆ.[9] ಉದಾಹರಣೆಗೆ, ಅದು 13ನೇ ವಚನದಲ್ಲಿ ಕಾಣಿಸಿಕೊಳ್ಳುತ್ತದೆ: “ನೀವು ಶರೀರಭಾವವನ್ನು ಅನುಸರಿಸಿ ಬದುಕಿ*ದರೆ* ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವ*ದಾದರೆ* ಜೀವಿಸುವಿರಿ” (ಒತ್ತಿ ಹೇಳಿದ್ದು ನನ್ನದು).

8:1ನೇ ವಚನವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕೆಂದರೆ ಸಮತೋಲನದ ಅಗತ್ಯವಿರುತ್ತದೆ. ಒಬ್ಬನು ಆ ವಚನವು ಹೇಳಿಚ್ಛಿಸುವದಕ್ಕಿಂತಲೂ *ಅಧಿಕವಾದದ್ದನ್ನು* ಅದರಿಂದ ಹೇಳಿಸುವದಕ್ಕೆ ಪ್ರಯತ್ನಿಸಬಾರದು. ಒಬ್ಬ ಕ್ರೈಸ್ತನು ಹೇಗೇ ಜೀವಿಸಿದರೂ, ಆತನು ಎಂದಿಗೂ ಕಳೆದುಹೋಗಲು ಸಾಧ್ಯವಿಲ್ಲ ಎಂದು ಉಪದೇಶಿಸುವದು ಪೌಲನ ಉದ್ದೇಶವಾಗಿರಲಿಲ್ಲ. ಅದೇ ಸಮಯದಲ್ಲಿ, ಈ ವಾಕ್ಯಭಾಗವು ಹೇಳಲಿಚ್ಛಿಸುವದಕ್ಕಿಂತ *ಕಡಿಮೆಯಾದದ್ದನ್ನು* ಹೇಳುವಂತೆ ಮಾಡುವ ಸಾಹಸಕ್ಕೀಳಿಯಬಾರದು. ಇದು ಒಬ್ಬ ಕ್ರೈಸ್ತನಿಗಿರುವ *ಭದ್ರತೆಯ* ಕುರಿತು ಒಂದು ಆಶ್ಚರ್ಯಕರವಾದ ವಾಕ್ಯಭಾಗವಾಗಿರುತ್ತದೆ. ಅದು *ಶರತ್ತಿನಿಂದ* ಕೂಡಿದ ಭದ್ರತೆಯಾಗಿರುತ್ತದೆ; ಹೇಗಿದ್ದರೂ, ಅದು ಭದ್ರತೆಯೇ.

ಕ್ರೈಸ್ತನ ಭದ್ರತೆಯ ವಿಷಯವಾಗಿ, ವಿವಿಧ ವ್ಯಕ್ತಿಗಳು ಕನಿಷ್ಠ ಮೂರು ವಿಧವಾದ ನಿಲುವುಗಳನ್ನು ಹೊಂದಿರುತ್ತಾರೆ.[10] ಮೊದಲನೆಯದು, ನಾನು ಅದನ್ನು "ಶರತ್ತುರಹಿತ ಭದ್ರತೆ" ಎಂದು ಕರೆಯುತ್ತೇನೆ. ಇದು "ಧರ್ಮಭ್ರಷ್ಟತೆಯು *ಅಸಾಧ್ಯತೆಯ*" ಕುರಿತ ಜನಪ್ರಿಯವಾದ ಸಿದ್ಧಾಂತವಾಗಿರುತ್ತದೆ. ದೇವರ ಮಗುವಾಗಿರುವ ಒಬ್ಬನು ಬಿದ್ದುಹೋಗಲು *ಸಾಧ್ಯವಿಲ್ಲ* ಎಂಬದಾಗಿ ಅದು ಕಲಿಸುತ್ತದೆ. Douglas J. Moo ಎತ್ತಿತೋರಿಸಿದ್ದೇನಂದರೆ, "ಜವಾಬ್ದಾರಿಯಿಲ್ಲದ ಭದ್ರತೆಯಿಂದ ಜಡತ್ವ ಉಂಟಾಗುತ್ತದೆ." ಆತನು ದಾಂಪತ್ಯದ ಹೊರಗಡೆಯಲ್ಲಿ ಅನೈತಿಕವಾಗಿ ಲೈಂಗಿಕ ಸಂಬಂಧಗಳನ್ನಿಟ್ಟುಕೊಂಡಿದ್ದ ಸಭೆಯ ಒಬ್ಬ ನಾಯಕನಿಗೆ ಬುದ್ಧಿವಾದ ತಿಳಿಸಿದ್ದರ ಕುರಿತು ಹೇಳುತ್ತಾನೆ. ಆತನಿಗೆ ತನ್ನ ಕ್ರಿಯೆಗಳ ಬಗ್ಗೆ ಸ್ವಲ್ಪವೂ ಕಳಕಳಿಯೇ ಇರಲಿಲ್ಲ; ಆತನು ತನ್ನನ್ನು "ಕ್ರಿಸ್ತನಲ್ಲಿ ಶಾಶ್ವತವಾಗಿ ಭದ್ರತೆಯುಳ್ಳವನು ಎಂಬದಾಗಿ ಪರಿಗಣಿಸಿಕೊಂಡಿದ್ದನು."[11] ದೇವರ ವಾಕ್ಯವು "ಶರತ್ತುರಹಿತ ಭದ್ರತೆ" ಬಗ್ಗೆ ಕಲಿಸುವದಿಲ್ಲ. ದೇವರ ವಾಕ್ಯವು ಬಿದ್ದುಹೋಗುವ ಬಗ್ಗೆ ಎಚ್ಚರದಿಂದಿರ್ರಿ ಎಂದು ಹೇಳುತ್ತದೆ (1 ಕೊರಿಂಥ 10:12), ಹೇಗೆ ಬೀಳದಂತೆ ದೂರವಿರಬೇಕೆಂಬುದಾಗಿ ತಿಳಿಸುತ್ತದೆ (2 ಪೇತ್ರ 1:5-11), ಮತ್ತು ಒಬ್ಬನು ಬಿದ್ದು ಹೋದರೆ ಏನು ಮಾಡತಕ್ಕದೆಂಬುದನ್ನು ವಿವರಿಸುತ್ತದೆ (ಅಪೊಸ್ತಲರ ಕೃತ್ಯಗಳು 8:22, 23).

ಎರಡನೆಯ ನಿಲುವು ಏನೆಂದರೆ, ನಾನು ಅದನ್ನು "ಶರತ್ತುಸಹಿತ ಅಭದ್ರತೆ" ಎಂದು ಕರೆಯುತ್ತೇನೆ. ಇದನ್ನು "ಧರ್ಮಭ್ರಷ್ಟತೆಯ ಸಾಧ್ಯತೆಯ" ಸಿದ್ಧಾಂತ ಎಂದು ಹೆಸರಿಸಬಹುದು. ಈ ನಿಲುವು ಹೊಂದಿರುವವರು ದೇವರ ಮಗುವಾಗಿರುವ ಒಬ್ಬನು ಬೀಳುವದಕ್ಕೆ *ಸಾಧ್ಯವಿದೆ* ಮತ್ತು ಬಹುಶಃ ಬಿದ್ದು *ಹೋಗುವರು* ಎಂಬ ಮನವರಿಕೆ ಹೊಂದಿರುತ್ತಾರೆ. ಯಾರಾದರೂ ನಿಜಕ್ಕೂ ಇದನ್ನು ಉಪದೇಶಿಸುತ್ತಾರೋ ಎಂಬುದು ನನಗೆ ತಿಳಿಯದು, ಆದರೆ ಇದನ್ನು ನಂಬುವಂತೆ ತೋರುವ ಸಭೆಯ ಕೆಲವು ಸದಸ್ಯರನ್ನು ನಾನು ಬಲ್ಲೆನು. ಅವರು ದೇವರ ಕುರಿತಾಗಿ ಆತನು ವಿಶ್ವದ ಒಬ್ಬ ಪೋಲಿಸ್‌ನಂತಿದ್ದು ತನ್ನ ದಿವ್ಯ ಧರ್ಮಶಾಸ್ತ್ರವನ್ನು ಉಲ್ಲಂಘಿಸುವವರನ್ನು ಹಿಡಿದುಕೊಳ್ಳುವದೇ ಆತನ ಪ್ರಾಥಮಿಕ ಚಿಂತನೆ ಎಂಬದಾಗಿ ಯೋಚಿಸುವಂತೆ ಕಾಣಿಸುತ್ತದೆ. ಅವರು ಕ್ರೈಸ್ತ ಜೀವಿತದಲ್ಲಿ ಅಲ್ಪವಾದ ಸುಖಾನುಭವವನ್ನು ಕಾಣುತ್ತಾರೆ. ಅವರು ಬಹುಶಃ, ತಾವು ಪರಲೋಕವನ್ನು ಪ್ರವೇಶಿಸುವದಕ್ಕೆ ಅನುಮತಿಸಲ್ಪಡಬಹುದೆನೋ ಎಂಬ ನಿರೀಕ್ಷೆಯನ್ನು ಕಡೇ ಪ್ರಯತ್ನವೆಂಬಂತೆ ಹಿಡಿದುಕೊಂಡಿರುತ್ತಾರೆ.

ಅದರ ಪ್ರಕಾರ ನೋಡುವದಾದರೆ, ಈ "ಶರತ್ತುಸಹಿತ ಅಭದ್ರತೆ" ಸಹ "ಶರತ್ತುರಹಿತ

ಭದ್ರತೆ" ಯಂತೆಯೇ ದೋಷಪೂರಿತವಾಗಿರುತ್ತದೆ. ಕ್ರೈಸ್ತತ್ವದ ಕುರಿತ ಈ ನಿಲುವು ಕ್ರೈಸ್ತತ್ವದೊಳಗಿಂದ ಆನಂದವನ್ನು ತೆಗೆದುಹಾಕುತ್ತದೆ ಮತ್ತು ಕರ್ತನಿಗೋಸ್ಕರ ಮಾಡಿರುವ ಕೆಲಸವನ್ನು ದುರ್ಬಲಗೊಳಿಸುತ್ತದೆ. ಅಲ್ಲದೆ ಇದು ಒಬ್ಬನು ಕಳೆದು ಹೋಗುವದಕ್ಕೂ ಕಾರಣವಾಗಬಲ್ಲದು: ಒಬ್ಬನು ಬಹಳವಾಗಿ ನಿರಾಶಗೊಂಡವನಾಗಿ ಒಬ್ಬ ಕ್ರೈಸ್ತನಾಗಿ ಜೀವಿಸುವ ಪ್ರಯತ್ನವನ್ನೆ ಬಿಟ್ಟುಬಿಡುವ ಸಾಧ್ಯತೆಯಿರುತ್ತದೆ. "ಜವಾಬ್ದಾರಿಯಿಲ್ಲದ ಭದ್ರತೆಯಿಂದ ಜಡತ್ವ ಉಂಟಾಗುತ್ತದೆ" ಎಂದು ಹೇಳಿದ ಬಳಿಕ, Moo ಇದನ್ನು ಸೇರ್ಪಡೆಗೊಳಿಸಿ ಹೇಳುತ್ತಾನೆ, "ಭದ್ರತೆಯಿಲ್ಲದ ಜವಾಬ್ದಾರಿಯು ಆತಂಕಕ್ಕೆ ದಾರಿಮಾಡುತ್ತದೆ."[12] ಪೌಲನು ಒಬ್ಬ ಸಹೋದರನ ಬಗ್ಗೆ ಬರೆಯುತ್ತಾ ಆತನು ಪಾಪ ಮಾಡಿ "ಅಧಿಕವಾದ ದುಃಖದಲ್ಲಿ ಮುಳುಗಿಹೋಗುವ" ಸ್ಥಿತಿಯಲ್ಲಿದ್ದನು ಎಂದು ಹೇಳುತ್ತಾನೆ (2 ಕೊರಿಂಥ 2:7).

ಮೂರನೆಯ ನಿಲುವು ಏನೆಂದರೆ, ಅದು ವಾಕ್ಯಾಧಾರಿತವಾದದ್ದೆಂದು ನಾನು ನಂಬುತ್ತೇನೆ, ನಾನು ಅದನ್ನು "ಶರತ್ತುಸಹಿತ ಭದ್ರತೆ" ಎಂದು ಕರೆಯುತ್ತೇನೆ. ಇದು "ಧರ್ಮಭ್ರಷ್ಟತೆಯ *ಸಾಧ್ಯತೆ*" ಬಗ್ಗೆ ಕಲಿಸುತ್ತದೆ, ಆದರೆ ದೇವರ ಒಬ್ಬ ಮಗುವು ಬೀಳು*ವದಿಲ್ಲ—ದರೆ* (ಪಕ್ಷದಲ್ಲಿ, ದಾದರೆ, ಇದ್ದಲ್ಲಿ)—ಎಂದು ಹೇಳುತ್ತದೆ. ಕ್ರೈಸ್ತನು "ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮನುಸಾರವಾಗಿ" ನಡೆಯುವದಾದಲ್ಲಿ (8:4), "[ಆತನು] ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವ*ದಾದರೆ*" ಆತನು ಭದ್ರತೆಯುಳ್ಳವನಾಗಿರುತ್ತಾನೆ (8:13; ಒತ್ತಿ ಹೇಳಿದ್ದು ನನ್ನದು).

ನಿಮಗೆ ಅಪರಾಧ ನಿರ್ಣಯ ಮಾಡುವದಕ್ಕಾಗಿ ದೇವರು ಕಾರಣವನ್ನು ಹುಡುಕಾಡುತ್ತಿದ್ದಾನೆಂದು ಯೋಚಿಸುತ್ತೀರೋ? ಮುಂದಿನ 31ನೇ ವಚನವನ್ನು ನೋಡಿರಿ: "ದೇವರು ನಮ್ಮ ಕಡೆ ಇದ್ದರೆ [ಇರುವದರಿಂದ] ನಮ್ಮನ್ನು ಎದುರಿಸುವವರು ಯಾರು?" ದೇವರು ನಿಮ್ಮ "ಕಡೆ" ಇದ್ದಾನೆ! ಆತನು ನಿಮ್ಮ ಪಕ್ಷದಲ್ಲಿ ಇರುವನು. ಆತನು ಒಲವು ನಿಮ್ಮ ಪರವಾಗಿರುತ್ತದೆ. ನಿಮಗೆ ಅಪರಾಧನಿರ್ಣಯ ಮಾಡುವದಕ್ಕೆ ದಾರಿಯೊಂದನ್ನು ಆತನು ಹುಡುಕುತ್ತಿಲ್ಲ; ನಿಮಗೆ ಅಪರಾಧನಿರ್ಣಯವಾಗಬಾರದು ಎಂಬುದಕ್ಕಾಗಿ ಆತನು ನಿಮಗೋಸ್ಕರ ದಾರಿಯೊಂದನ್ನು ಏರ್ಪಡಿಸಿರುತ್ತಾನೆ.

ಒಬ್ಬ ಕ್ರೈಸ್ತನು ದೇವರ ದಾರಿಯನ್ನು ತಿರಸ್ಕರಿಸಲು ಸಾಧ್ಯವೋ? ಹೌದು. ಕ್ರೈಸ್ತನಾಗುವದೆಂದರೆ ಒಬ್ಬನು ಸ್ವೇಚ್ಛಾ-ಚಿತ್ತವನ್ನು ಕಳೆದುಕೊಳ್ಳುತ್ತಾನೆಂದು ಅರ್ಥವಾಗುವದಿಲ್ಲ. ಒಬ್ಬನು ಯೇಸುವಿನ ಬಳಿಗೆ ಬಂದು ರಕ್ಷಣೆ ಹೊಂದುವದು ಸಾಧ್ಯವಿರುವದಾದರೆ, ಆತನು ಯೇಸುವಿನಿಂದ ವಿಮುಖನಾಗಿ ಕಳೆದುಹೋಗುವದೂ ಸಾಧ್ಯವಿರುತ್ತದೆ. ಯಾವನಾದರೂ ಏಕೆ ಹಾಗೆ ಮಾಡುವದಕ್ಕೆ *ಇಚ್ಛಿಸುತ್ತಾನೆ* ಎಂಬುದನ್ನು ನನಗೆ ಊಹಿಸಿಕೊಳ್ಳಲು ಸಾಧ್ಯವಿಲ್ಲ—ಆದರೆ ವ್ಯಕ್ತಿಗಳು ಮಾಡುತ್ತಿರುವ ಅನೇಕ ಕಾರ್ಯಗಳನ್ನು ಏಕಾದರೂ ಮಾಡುತ್ತಾರೆಂಬುದು ನನಗೆ ಅರ್ಥವಾಗುವದಿಲ್ಲ. ಅನುದಿನವೂ ಜನರು ಮೂರ್ಖ ಕಾರ್ಯಗಳನ್ನು ಮಾಡುತ್ತಾರೆ, ಅದರಲ್ಲಿ ಅವರನ್ನು ಪ್ರೀತಿಸುವಾತನನ್ನು ತಿರಸ್ಕರಿಸುವದು ಸಹ ಸೇರಿರುತ್ತದೆ. ಹೇಗೂ, *ನಿಮ್ಮ* ಜೀವನದಲ್ಲಿ ಇದು ಸತ್ಯವಾಗಿರಬೇಕಾದ ಅಗತ್ಯವಿಲ್ಲ. ನಿಮ್ಮ ಹೃದಯವು ದೇವರ ಮೇಲೆಯೇ ನೆಟ್ಟಿರುವದಾದರೆ (ನೋಡಿರಿ 8:6), ನೀವು ಭದ್ರತೆಯನ್ನು ಅನುಭವಿಸಬಹುದು. ಈ

ಪ್ರೋತ್ಸಾಹಕರ ಮಾತು ನಿಮ್ಮ ಪ್ರಯೋಜನಾತ್ಮಕವಾಗಿ ಬರೆಯಲ್ಪಟ್ಟಿದೆ: "ಆದದರಿಂದ ಕ್ರಿಸ್ತ ಯೇಸುವಿನಲ್ಲಿ ಇರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ!"

**ವಚನ 2.** "ಕ್ರಿಸ್ತನಲ್ಲಿ ಇರುವವರಿಗೆ ಅಪರಾಧನಿರ್ಣಯವು ಈಗ ಇಲ್ಲವೇ ಇಲ್ಲ" ಎಂಬದಾಗಿ ಪೌಲನು ಯಾವುದರ ಆಧಾರದಲ್ಲಿ ಹೇಳಿದನು? **ಯಾಕೆಂದರೆ** (γάρ, *gar*) ಎಂಬ ಪ್ರತ್ಯಯವು ಈ ಕೆಳಗಿನ ಹೇಳಿಕೆಯೇ ಅದಕ್ಕೆ ಕಾರಣವೆಂದು ಸೂಚಿಸುತ್ತದೆ: **ಜೀವವನ್ನುಂಟುಮಾಡುವ ಪವಿತ್ರಾತ್ಮನಿಂದಾದ ನಿಯಮವು ನಿನ್ನನ್ನು ಪಾಪಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತ ಯೇಸುವಿನ ಮೂಲಕ ಬಿಡಿಸಿತು.** "ನಿನ್ನನ್ನು" (σε, *se*) ಎಂಬ ಏಕವಚನದ ಸರ್ವನಾಮದ ಬದಲಾಗಿ ಪ್ರಾಚೀನ ಹಸ್ತಪ್ರತಿಗಳಲ್ಲಿ "ನನ್ನನ್ನು" (με, *me*) ಎಂದಿರುತ್ತದೆ. ಈ ಕಾರಣದಿಂದ KJV, NIV, RSV, ಮತ್ತು ಇತರ ತರ್ಜುಮೆಗಳು "ನಿನ್ನನ್ನು" ಎಂಬುದರ ಬದಲಾಗಿ "ನನ್ನನ್ನು" ಎಂದು ಹೊಂದಿರುತ್ತವೆ. ಇದು ಈ ವಚನವನ್ನು ನೇರವಾಗಿ 7:14-25 ರೊಂದಿಗೆ ಜೋಡಿಸುವದಾಗಿರುತ್ತದೆ.

ಪೌಲನು "ಧರ್ಮಶಾಸ್ತ್ರ" (νόμος, *nomos*) ಎಂಬುದನ್ನು ದ್ವಿತಿಯಾರ್ಥದಲ್ಲಿ ಉಪಯೋಗಿಸುವ ತನ್ನ ಶೈಲಿಯನ್ನು ಮುಂದುವರೆಸುತ್ತಾನೆ, ಅದು "ನಿಯಮ" ಅಥವಾ "ಸ್ಥಾಪಿತಗೊಂಡಿರುವ ಪ್ರವೃತ್ತಿ" ಎಂಬ ಅರ್ಥವನ್ನು ಕೊಡುತ್ತದೆ. 7ನೇ ಅಧ್ಯಾಯವು ಎಲ್ಲಿಯ ವರೆಗೆ ಆತನು ತನ್ನ ಸ್ವಬಲವನ್ನು ಅವಲಂಭಿಸುತ್ತಾನೋ, ಅಲ್ಲಿಯ ವರೆಗೆ ಪೌಲನು "ಪಾಪವೆಂಬ ನಿಯಮಕ್ಕೆ ಆಳಾಗಿ" ಸೇವೆಮಾಡುವ ದುಸ್ಥಿತಿಗೆ ಒಳಗಾಗಿರುತ್ತಾನೆ ಎಂಬ ವಿಚಾರದೊಂದಿಗೆ ಮುಕ್ತಾಯಗೊಳ್ಳುತ್ತದೆ (7:25). ಶರೀರಾಧೀನಸ್ವಭಾವದಿಂದ ಉಂಟಾಗುವ ಪ್ರತಿರೋಧವೊಡ್ಡಲಾಗದಂತಹ ಕೆಳಕ್ಕೇಳೆಯುವ ಸೆಳೆತವು ಆತ್ಮೀಕ "ಮರಣ"ಕ್ಕೆ ನಡಿಸುತ್ತದೆ (ನೋಡಿರಿ 7:6, 24; 8:13), ಆದರೆ ತಾನು (ಮತ್ತು ಇತರರು) "ಪಾಪ ಮರಣಗಳಿಗೆ ಕಾರಣವಾದ ನಿಯಮದಿಂದ" *ಬಿಡುಗಡೆ* ಮಾಡಲ್ಪಟ್ಟಿರುವದಾಗಿ ಪೌಲನು ಹೇಳುತ್ತಾನೆ.[13]

ಪೌಲನನ್ನು ಯಾವುದು ಬಿಡುಗಡೆಗೊಳಿಸಿತು? "ಜೀವವನ್ನುಂಟುಮಾಡುವ ಪವಿತ್ರಾತ್ಮನಿಂದಾದ ನಿಯಮವು." "ಜೀವವನ್ನುಂಟು ಮಾಡುವ ಪವಿತ್ರಾತ್ಮನಿಂದಾದ" ಎಂಬುದು ಪವಿತ್ರಾತ್ಮನನ್ನು ಸೂಚಿಸಿ ಹೇಳಲಾಗಿದೆ: ಜೀವವನ್ನು ತರುವಂತಹ ದೇವರಾತ್ಮನು.

ಆದಿಯಲ್ಲಿ, ಪವಿತ್ರಾತ್ಮನು ಶಾರೀರಿಕ ಜೀವವನ್ನು ಅಸ್ತಿತ್ವಕ್ಕೆ ತರುವದರಲ್ಲಿ ಪಾತ್ರವಹಿಸಿದ್ದನು (ಆದಿಕಾಂಡ 1:1, 2, 26; 2:7; AB).

ಪವಿತ್ರಾತ್ಮನು "ಜೀವದಾಯಕ ವಾಕ್ಯ" ವನ್ನು ಪ್ರೇರೆಪಿಸಿದನು (ಫಿಲಿಪ್ಪಿ 2:16; ನೋಡಿರಿ 2 ಪೇತ್ರ 1:21).

ಪಂಚಾಶತ್ತಮ ದಿನದಂದು ಜನರಲ್ಲಿ ಆತ್ಮೀಕ ಜೀವವನ್ನು ಉಂಟುಮಾಡುವಲ್ಲಿ ಪವಿತ್ರಾತ್ಮನು ಒಂದು ಅತ್ಯಾವಶ್ಯಕವಾದ ಶಕ್ತಿಯಾಗಿದ್ದನು (ಅಪೊಸ್ತಲರ ಕೃತ್ಯಗಳು 2:1-4, 33, 37, 38, 41).

ಕ್ರಿಸ್ತನಲ್ಲಿ ಕ್ರೈಸ್ತನಿಗಿರುವ ನೂತನ ಜೀವನದಲ್ಲಿ ಪವಿತ್ರಾತ್ಮನು ಈಗಲೂ ಒಂದು ನಿರಂತರವಾದ ಕಾರ್ಯಭಾರಿಯಾಗಿರುತ್ತಾನೆ (ನೋಡಿರಿ ಅಪೊಸ್ತಲರ ಕೃತ್ಯಗಳು 2:38; 5:32; ರೋಮಾ 8:6).

ಪೌಲನು ತನ್ನ ವಾಚಕರಿಗೆ ಪವಿತ್ರಾತ್ಮನನ್ನು ಈ ರೀತಿಯಾಗಿ ಪರಿಚಯಿಸುತ್ತಾನೆ, ಪವಿತ್ರಾತ್ಮನು ರೋಮಾ 8ನೇ ಅಧ್ಯಾಯದಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಿರುತ್ತಾನೆ.

ನಮ್ಮನ್ನು ಬಿಡಿಸುವಂತಹ "ಪವಿತ್ರಾತ್ಮನಿಂದಾದ ನಿಯಮವು [*nomos*]" ಯಾವುದು? ಕೆಲವರು *nomos* ("ನಿಯಮ") ಎಂಬುದು ಇಲ್ಲಿ ಪ್ರಾಥಮಿಕ ಅರ್ಥದಲ್ಲಿ ಉಪಯೋಗಿಸಲ್ಪಟ್ಟಿದೆ ಎಂದು ಮತ್ತು ಆತ್ಮನಿಂದ ಪ್ರಕಟಿಸಲ್ಪಟ್ಟಿರುವಂತಹ ಸುವಾರ್ತೆಯನ್ನು (ಅಥವಾ ಹೊಸ ಒಡಂಬಡಿಕೆಯನ್ನು ಸೂಚಿಸುತ್ತದೆ) ಎಂದು ನಂಬುತ್ತಾರೆ.[14] ಈ ಸನ್ನಿವೇಶದಲ್ಲಿ, *nomos*ನ್ನು ದ್ವಿತಿಯಾರ್ಥದಲ್ಲಿ ವ್ಯಾಖ್ಯಾನಿಸುವದನ್ನು ಮುಂದುವರೆಸಿದರೆ ಉತ್ತಮವಾಗಿರುತ್ತದೆ. ಹಾಗಿರುವದಾದರೆ, ಈ ವಾಕ್ಯಭಾಗವು ಆ ಅರ್ಥದಲ್ಲಿ ಹೇಳುತ್ತಿರುವದೇನೆಂದರೆ, ಆತ್ಮನಿಂದಾಗುವ *ಮೇಲ್ಸೆಳೆತವು* ನಮ್ಮನ್ನು ಅಪ್ರತಿರೋಧ್ಯವಾದ ಶರೀರಾಧೀನಸ್ವಭಾವದ *ಕೆಳ ಸೆಳೆತದಿಂದ* ನಮ್ಮನ್ನು ಬಿಡಿಸುವದು.

ಈ ನಿಯಮಕ್ಕೆ ಗುರುತ್ವಾಕರ್ಷಣದ ನಿಯಮವು (ಸೂತ್ರವು) ಒಂದು ದೃಷ್ಟಾಂತವಾಗಿರುತ್ತದೆ. ನಮಗೆಲ್ಲಾ ಗುರುತ್ವಾಕರ್ಷಣ ನಿಯಮದ ಬಗ್ಗೆ ತಿಳಿದಿರುತ್ತದೆ–ವಿಶ್ವದ ಕೆಳಸೆಳೆತವು ನಮ್ಮನ್ನು ಭೂಮಿಯ ಮೇಲೆ ಗಟ್ಟಿಯಾಗಿ ನೆಲೆಯೂರುವಂತೆ ಮಾಡುತ್ತದೆ ಮತ್ತು ಆಕಾಶದಲ್ಲಿ ಸುತ್ತುತ್ತಿರದಂತೆ ತಡೆಯುತ್ತದೆ. ಹೇಗೂ, "ವಾಯುಬಲ ಶಾಸ್ತ್ರದ ನಿಯಮ" ಎಂಬುದೊಂದು ಸಹ ಇರುತ್ತದೆ. ಅದು ರೆಕ್ಕೆಗಳ ಅಡಿಯಲ್ಲಿ ಗಾಳಿಯನ್ನು ಹರಿಯುವಂತೆ ಮಾಡಿ ವಿಮಾನವನ್ನು ಮೇಲಕ್ಕೆ ಒತ್ತುವದಕ್ಕೆ ಸಂಬಂಧಿಸಿದ್ದಾಗಿದೆ, ಆಗ ವಿಮಾನವು ಇಂಜಿನ್‌ಗಳಿಂದ ತಳ್ಳಲ್ಪಟ್ಟು ಮುಂದಕ್ಕೆ ಸಾಗುವುದಾಗಿರುತ್ತದೆ. ಈ ನಿಯಮದ ಕುರಿತು ನನಗೆ ಎಲ್ಲವೂ ಅರ್ಥವಾಗುವದಿಲ್ಲ, ಆದರೆ ಆ ನಿಯಮವನ್ನು (ಸೂತ್ರವನ್ನು) ಅನ್ವಯಮಾಡುವ ಮೂಲಕ ಜನರು ಭೂಮಿಯಿಂದ ಮೇಲಕ್ಕೆ ಎತ್ತಲ್ಪಡುವಂತಹ ವಿಮಾನಗಳನ್ನು ವಿನ್ಯಾಶಿಸುವದದಕ್ಕೆ ಮತ್ತು ಆಕಾಶದಲ್ಲಿ ಹಾರಾಡುವದಕ್ಕೆ ಶಕ್ತರಾಗಿರುತ್ತಾರೆಂಬುದನ್ನು ಮಾತ್ರ ಬಲ್ಲೆನು. ಒಂದು ಅರ್ಥದಲ್ಲಿ, ವಾಯುಬಲ ಶಾಸ್ತ್ರದ ನಿಯಮವು ಮಾನವರನ್ನು ಗುರುತ್ವಾಕರ್ಷಣ ಬಲದ ನಿಯಮದ ವಶದಿಂದ ಬಿಡಿಸಿರುತ್ತದೆ.

ರೋಮಾ 7ನೇ ಅಧ್ಯಾಯದ ಕಡೆಯ ಭಾಗದಲ್ಲಿ, ಶರೀರಾಧೀನಸ್ವಭಾವದ ಕೆಳಸೆಳೆತವು ತನ್ನ ಸ್ವಬಲದಿಂದ ಜಯಿಸಲಾಗದಂತಹ ಒಂದು ವಿಚಾರವೆಂಬುದಾಗಿ ಪೌಲನು ಬಣ್ಣಿಸಿದನು. ಇಲ್ಲಿ, ಶರೀರಾಧೀನಸ್ವಭಾವದ ಕೆಳಸೆಳೆತವನ್ನು, ನಾವು ದೀಕ್ಷಾಸ್ನಾನ ಮಾಡಿಸಿಕೊಂಡ ಸಂದರ್ಭದಲ್ಲಿ ನಮಗೆ ಕೊಡಲ್ಪಟ್ಟಿರುವ ಆತ್ಮನಿಂದಾಗುವ ಮೇಲ್ಸೆಳೆತದಿಂದ ಸೋಲಿಸಬಹುದು ಎಂಬ ಭರವಸೆಯನ್ನು ಪೌಲನು ನಮಗೆ ಕೊಡುತ್ತಾನೆ (ಅಪೊಸ್ತಲರ ಕೃತ್ಯಗಳು 2:38; 5:32).

ಹಾಗಾದರೆ ಇದರ ಅರ್ಥವು "ಜೀವವನ್ನುಂಟುಮಾಡುವ ಪವಿತ್ರಾತ್ಮನಿಂದಾದ ನಿಯಮವು" ನಮ್ಮನ್ನು "ಬಿಡಿಸಿತು" ಎಂದಾಕ್ಷಣ ಇನ್ನು ಮೇಲೆ "ಪಾಪಮರಣಗಳಿಗೆ ಕಾರಣವಾದ ನಿಯಮವು" ಅಳಿದುಹೋಗುವದು ಎಂಬುದೋ? ಪುನಃ ಒಂದು ವಿಮಾನದ ದೃಷ್ಟಾಂತದ ಬಗ್ಗೆ ಆಲೋಚಿಸಿರಿ. ವಾಯುಬಲ ಶಾಸ್ತ್ರದ ನಿಯಮವು ವಿಮಾನವೊಂದನ್ನು ಗುರುತ್ವಾಕರ್ಷಣದ ನಿಯಮದಿಂದ ಬಿಡುಗಡೆಗೊಳಿಸಿದಾಕ್ಷಣ ಆ ನಿಯಮವು ಇಲ್ಲದೆ ಹೋಗುವದೋ? ಒಂದು ವೇಳೆ ವಿಮಾನ ಚಾಲಕನು ತನ್ನ ವಿಮಾನದ ಇಂಜಿನ್‌ಗಳ ಚಾಲನೆಯನ್ನು ನಿಲ್ಲಿಸುವದಾದರೆ, ಗುರುತ್ವಾಕರ್ಷಣ ಬಲವು ಈಗಲೂ

ಚಾಲ್ತಿಯಲ್ಲಿರುತ್ತದೆಂಬುದು ಆತನಿಗೆ ಬಹಳ ಶೀಘ್ರದಲ್ಲಿಯೇ ಗೊತ್ತಾಗುವದು! ಅದೇ ರೀತಿಯಲ್ಲಿಯೇ, ಪಾಪ ಮತ್ತು ಮರಣಗಳನ್ನುಂಟು ಮಾಡುವ ನಿಯಮದಿಂದ ಬಿಡುಗಡೆಗೊಳಿಸಲ್ಪಡುವದೆಂದರೆ ಕೆಳಸೆಳೆತವು ನಿಂತುಹೋಗುವದು ಎಂದರ್ಥವಾಗಿರುವದಿಲ್ಲ. ಬದಲಾಗಿ, ಅದರರ್ಥವೇನೆಂದರೆ, ಒಬ್ಬ ಕ್ರೈಸ್ತನಿಗಾದರೋ ಅದು ಇನ್ನು ಮೇಲೆ ಒಂದು ಅಪ್ರತಿರೋಧ್ಯವಾದ ಸೆಳೆತವಾಗಿರುವದಿಲ್ಲ. ಪಾಪಕ್ಕೆ ಇನ್ನು ಮೇಲೆ *ನಮ್ಮ ಚಿತ್ತಕ್ಕೆ ವಿರುದ್ಧವಾಗಿ* ನಮ್ಮ ಮೇಲೆ ಜಯಸಾಧಿಸುವ ಶಕ್ತಿಯು ಇರುವದಿಲ್ಲ. ದೇವರಾತ್ಮನ ಸಹಾಯದೊಂದಿಗೆ, ನಾವು "ದೇಹದ [ಶರೀರಾಧೀನಸ್ವಭಾವ] ದುರಭ್ಯಾಸಗಳನ್ನು ನಾಶ" ಮಾಡಬಲ್ಲೆವು (8:13; ನೋಡಿರಿ 8:26).

**ವಚನ 3.** ಈ ವಚನವು, **ಧರ್ಮಶಾಸ್ತ್ರವು ನಮ್ಮ ಶರೀರಾಧೀನಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು** ಎಂದು ಆರಂಭಗೊಳ್ಳುತ್ತದೆ. 3 ಮತ್ತು 4ನೇ ವಚನಗಳಲ್ಲಿ ಧರ್ಮಶಾಸ್ತ್ರವನ್ನು ("Law") NASB "L" ನಿಂದ ಸೂಚಿಸುತ್ತದೆ, ಹೀಗೆ ಇಲ್ಲಿ ಮುಖ್ಯ ಗಮನವು ಮೋಶೆಯ ಧರ್ಮಶಾಸ್ತ್ರದ ಮೇಲಿರುತ್ತದೆಂಬುದನ್ನು ತೋರಿಸುತ್ತದೆ. ಇಲ್ಲಿ ಪೌಲನು ನೀಡುವ ವ್ಯಾಖ್ಯೆಗಳು ಆತನು 7ನೇ ಅಧ್ಯಾಯದಲ್ಲಿ ಮಾಡಿದ ಚರ್ಚೆಯೊಂದಿಗೆ ನೇರವಾಗಿ ಗಂಟುಹಾಕುತ್ತವೆ.

ಧರ್ಮಶಾಸ್ತ್ರವು ಪೌಲನನ್ನು ಪಾಪಮರಣಗಳಿಗೆ ಕಾರಣವಾದ ನಿಯಮದಿಂದ ಬಿಡಿಸುವದಕ್ಕೆ ಅಶಕ್ತವಾಗಿತ್ತು.[15] ಏಕೆ? ಏಕೆಂದರೆ ಅದು "ಶರೀರಾಧೀನಸ್ವಭಾವದ ನಿಮಿತ್ತ ನಿರ್ಬಲವಾಗಿ" ಇತ್ತು. ಸ್ವತಃ ಧರ್ಮಶಾಸ್ತ್ರವೇ ನಿರ್ಬಲವೆಂದು ಪೌಲನು ಇಲ್ಲಿ ಹೇಳುತ್ತಿಲ್ಲ, ಯಾಕೆಂದರೆ ಅದು ದೇವರಿಂದಲೇ ಕೊಡಲ್ಪಟ್ಟದ್ದಾಗಿತ್ತು. ಬದಲಾಗಿ, ಅದು ಯಾವುದರ ಮೂಲಕ—ಶರೀರಾಧೀನಸ್ವಭಾವ—ಕಾರ್ಯಮಾಡಬೇಕಾಗಿತ್ತೋ ಅದು ನಿರ್ಬಲವಾಗಿತ್ತು. ಶರೀರಾಧೀನಸ್ವಭಾವದ ಮಾನವರಿಗೆ—ಅಂದರೆ, ತಮ್ಮ ಸ್ವಂತ ಮನುಷ್ಯ ಸಂಪನ್ಮೂಲಗಳ ಮೇಲೆ ಅವಲಂಬನೆಗೊಳ್ಳುವ ಜನರಿಗೆ—ಧರ್ಮಶಾಸ್ತ್ರಕ್ಕೆ ಪರಿಪೂರ್ಣವಾಗಿ ವಿಧೇಯರಾಗುವದಕ್ಕೆ ಸಾಧ್ಯವಾಗಲಿಲ್ಲ. ಈ ಬಲಹೀನತೆಯ ಕಾರಣದಿಂದ, ಧರ್ಮಶಾಸ್ತ್ರವು ಮನುಷ್ಯರನ್ನು ವಿಮುಕ್ತಗೊಳಿಸುವದಕ್ಕೆ ಅಶಕ್ತವಾಗಿತ್ತು. ಈ ತತ್ವವನ್ನು ಹಲವಾರು ರೀತಿಗಳಲ್ಲಿ ದೃಷ್ಟಾಂತ ಪಡಿಸಬಹುದು:

- ಒಬ್ಬ ಅನುಭವಿ ತರಬೇತುದಾರನು ನಿರಾಸಕ್ತಿವುಳ್ಳ ಹಾಗೂ ಏಕಾಗ್ರತೆಯಿಲ್ಲದ ಮಕ್ಕಳಿಂದ ಕೂಡಿದ ಗುಂಪನ್ನು ಒಂದು ಗೆಲ್ಲುವ ತಂಡವಾಗಿ ಮಾರ್ಪಡಿಸುವದಕ್ಕೆ ಪ್ರಯತ್ನಿಸುವದು.
- ಒಬ್ಬ ಪ್ರತಿಭಾವಂತ ಸಂಗೀತಗಾರನು ಸಂಗೀತದಲ್ಲಿ ಪ್ರತಿಭೆ ಮತ್ತು ಆಸಕ್ತಿಯೇ ಇಲ್ಲದ ಯುವಜನರೊಂದಿಗೆ ಸೇರಿ ವೃಂದವನ್ನು ರೂಪಿಸಿಕೊಂಡು ಕಾರ್ಯಕ್ರಮವನ್ನು ಕೊಡುವ ಕೆಲಸವನ್ನು ವಹಿಸಿಕೊಳ್ಳುವುದು.
- ಒಬ್ಬ ಕುಶಲಕರ್ಮಿಗೆ ಒಂದು ಕೊಳೆತು ಹೋಗಿರುವ ಮರದಿಂದ ಸುಂದರವಾದ ಪೀಠೋಪಕರಣವೊಂದನ್ನು ನಿರ್ಮಿಸುವಂತೆ ಕೇಳಲ್ಪಡುವುದು.

ಈ ದೃಷ್ಟಾಂತಗಳಲ್ಲಿ, ತರಬೇತುದಾರನಲ್ಲಾಗಲಿ, ಸಂಗೀತಗಾರನಲ್ಲಾಗಲಿ, ಅಥವಾ ಕುಶಲಕರ್ಮಿಯಲ್ಲಾಗಲಿ ಯಾವದೇ ತಪ್ಪಿರುವದಿಲ್ಲ; ಬದಲಾಗಿ, ಅವರೆಲ್ಲರೂ ಸಹ ಒಂದು

ದೋಷಪೂರಿತವಾದ ಸಂಪನ್ಮೂಲಗಳಲ್ಲಿ ಕಾರ್ಯಮಾಡುವದಕ್ಕೆ ಪ್ರಯತ್ನಿಸುತ್ತಿದ್ದಾರೆ. ಅದೇ ರೀತಿಯಲ್ಲಿ, ಧರ್ಮಶಾಸ್ತ್ರವು "ಶರೀರಾಧೀನಸ್ವಭಾವ" ದ ಕಾರಣದಿಂದ ಮಿತಿಗೊಳಪಡಿಸಲ್ಪಟ್ಟಿತ್ತು. ಹಾಗಾದರೆ ಇದರರ್ಥವು ಧರ್ಮಶಾಸ್ತ್ರದಲ್ಲಿ ಏನೋ ದೋಷ ಇತ್ತೆಂಬುದೋ? ಇಲ್ಲ. Dave Miller ಹೀಗೆ ಪ್ರಶ್ನಿಸುತ್ತಾನೆ, "ನೀವು ಹೊರಗೆ ಹೋಗಿ ನಿಮ್ಮ ಕಾರಿಗೆ ಹಾರಾಟ ಮಾಡುವದಕ್ಕೆ ಆಗಲಿಲ್ಲವೆಂಬ ಕಾರಣಕ್ಕೆ ಅದಕ್ಕೆ ಒದೆ ಕೊಡುತ್ತೀರೋ? ಖಂಡಿತವಾಗಿಯೂ ಇಲ್ಲ. ಅದು ಹಾರಾಟ ಮಾಡುವದಕ್ಕಾಗಿ ವಿನ್ಯಾಶಿಸಲ್ಪಟ್ಟಿಲ್ಲ. ಮೋಶೆಯ ಧರ್ಮಶಾಸ್ತ್ರವು ಎಂದಿಗೂ ಪಾಪವನ್ನು ನಿವಾರಿಸುವದಕ್ಕಾಗಿ ವಿನ್ಯಾಶಿಸಲ್ಪಟ್ಟಿರಲಿಲ್ಲ. ಅದು ಪಾಪವನ್ನು ಬಯಲಿಗೆ ತರುವದಕ್ಕೆ ವಿನ್ಯಾಶಿಸಲ್ಪಟ್ಟಿತ್ತೇ ಹೊರತು ಪಾಪವನ್ನು ತೆಗೆದು ಹಾಕುವದಕ್ಕಲ್ಲ."[16]

ಧರ್ಮಶಾಸ್ತ್ರಕ್ಕೆ ಯಾವುದನ್ನು ಮಾಡುವದಕ್ಕೆ ಸಾಧ್ಯ*ವಾಗಲಿಲ್ಲವೋ*, ಅದನ್ನು ದೇವರೇ *ಮಾಡಿದನು*. ಶರೀರಾಧೀನಸ್ವಭಾವದ *ನಿಮಿತ್ತ* ಧರ್ಮಶಾಸ್ತ್ರಕ್ಕೆ ಜನರನ್ನು ಬಿಡಿಸುವದಕ್ಕೆ ಸಾಧ್ಯವಾಗಿರಲಿಲ್ಲ; ದೇವರು ಶರೀರಾಧೀನಸ್ವಭಾವವನ್ನು *ಉಪಯೋಗಿಸಿ* ಜನರನ್ನು ಬಿಡಿಸಿದನು. ಹೇಗಂದರೆ ಆತನು **ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿನು.** ದೇವರು "ಯಾವ ಕ್ಷೇತ್ರದಲ್ಲಿ ಪಾಪವು ಪ್ರಶ್ನಾತೀತವಾಗಿ ಆಳ್ವಿಕೆ ಮಾಡುವಂತೆ ತೋರಿತೋ ಅದೇ ಕ್ಷೇತ್ರದಲ್ಲಿಯೇ ದೇವರು ಪಾಪದ ಮೇಲೆ ಜಯ ಸಾಧಿಸಿದನು: 'ಶರೀರಧೀನಸ್ವಭಾವ.'"[17]

3ನೇ ವಚನದಲ್ಲಿ ಹೊಸ ಒಡಂಬಡಿಕೆಯ ಕೆಲವೊಂದು ಮೂಲಭೂತವಾದ ಸಿದ್ಧಾಂತಗಳು ಹುದುಗಿರುತ್ತವೆ. ಉದಾಹರಣೆಗೆ, ಕ್ರಿಸ್ತನ ನರಾವತಾರದ ಕುರಿತ ಒಂದು ಉಲ್ಲೇಖವಿರುತ್ತದೆ: ದೇವರು "ತನ್ನ ಮಗನನ್ನು" ಕಳುಹಿಸಿಕೊಟ್ಟನು. Morris ಗಮನಕ್ಕೆ ತರುವದೇನೆಂದರೆ, "ದೇವರು ಒಬ್ಬ ದೂರದ ಸಂಬಂಧವಿಲ್ಲದ ಸಂದೇಶಕನನ್ನು ಕಳುಹಿಸಲಿಲ್ಲ, ಬದಲಾಗಿ ಆತನೊಂದಿಗೆ ಒಂದು ಅನನ್ಯವಾದ ಸಂಬಂಧ ಹೊಂದಿದ್ದ ಮಗನನ್ನು ಕಳುಹಿಸಿದ್ದನು."[18] "ಯೇಸುವು ಪಾಪಾಧೀನಸ್ವಭಾವದ ನರಭಾವದ ರೂಪದಲ್ಲಿ" ಬಂದನು. ಅನುವಾದಿಸಲ್ಪಟ್ಟ "ರೂಪದಲ್ಲಿ" (ὁμοίωμα, *homoiōma*) ಎಂಬುದು ಗ್ರೀಕ್‌ನ "ಅಂತೆ" ಅಥವಾ "ಒಂದೇ" (ὁμός, *homos*) ಎಂಬುದಕ್ಕೆ ಉಪಯೋಗಿಸುವ ಪದದಿಂದ ಬಂದದ್ದಾಗಿದೆ. ಗ್ರೀಕ್ ವಾಕ್ಯದಲ್ಲಿ, "ಪಾಪಾಧೀನಸ್ವಭಾವ" ಎಂಬುದು ಅಕ್ಷರಶಃ "ಪಾಪದ ಶರೀರ" ಎಂದಿರುತ್ತದೆ. ಆತ್ಮನ ಮಾರ್ಗದರ್ಶನ ಅಡಿಯಲ್ಲಿ, ಈ ಒಂದೊಂದು ಪದಗಳು ಸಹ ಜಾಗರೂಕತೆಯಿಂದ ಆರಿಸಿಕೊಳ್ಳಲ್ಪಟ್ಟಿವೆ. Bruce ಹೀಗೆ ಬರೆಯುತ್ತಾನೆ,

> "ನರಭಾವದ ರೂಪದಲ್ಲಿ" ಎಂಬುದು ಸ್ವತಃ ಕ್ರಿಸ್ತನ ಶರೀರ ಮನುಷ್ಯ ದೇಹವಲ್ಲ ಎಂಬ ಪಾಷಂಡವಾದ ಆಗುವುದು[19]; ದೇವಕುಮಾರನು "ಶರೀರಧಾರಿಯಾಗಿ" ಬಂದನು ಎಂಬುದು ಸುವಾರ್ತೆಯ ಜೀವಾಳವಾ ಗಿರುತ್ತದೆ, ಹೊರತು ಕೇವಲ "ನರಭಾವದ ರೂಪದಲ್ಲಿ" ಬಂದನು ಎಂಬುದಲ್ಲ. ಪೌಲನು ಕೇವಲ "ನರಭಾವದಲ್ಲಿ" ಬಂದನು ಎಂದು ಹೇಳಿರಬಹುದಿತ್ತು, ಆದರೆ ಮಾನವ ಶರೀರದಲ್ಲಿಯೇ ಪಾಪವು ಹಿಡಿತವನ್ನು ಸಾಧಿಸಿ ದೇವರ ಕೃಪೆಯು ಸಮೀಪಿಸುವ ವರೆಗೂ ಪ್ರಾಬಲ್ಯವನ್ನು ನಡಿಸಿತ್ತೆಂಬುದನ್ನು ಒತ್ತಿ ಹೇಳುವದು ಪೌಲನ ಬಯಕೆಯಾಗಿತ್ತು. ಆದದರಿಂದ ಆತನು ಕೇವಲ "ನರಭಾವ"

> ಎಂದಷ್ಟೇ ಹೇಳದೆ "ಪಾಪಾಧೀನವಾದ ನರಭಾವ" ಅಥವಾ "ಪಾಪದಿಂದ ತುಂಬಿದ ನರಭಾವ" ಎಂದು ಹೇಳುತ್ತಾನೆ. ಆದರೆ ದೇವಕುಮಾರನು "ಪಾಪಧೀನವಾದ ನರಭಾವದಲ್ಲಿ" ಬಂದನು ಎಂದು ಹೇಳಿದರೆ ಆತನಲ್ಲಿ ಪಾಪವಿತ್ತು ಎಂಬ ಅರ್ಥವನ್ನು ಕೊಡುವ ಸಾಧ್ಯತೆಯಿರುತ್ತದೆ, ಯಾಕೆಂದರೆ ಬೇರೊಂದು ಕಡೆಯಲ್ಲಿ ಆತನು "ಪಾಪಜ್ಞಾನವಿಲ್ಲದ" ವನು ಎಂದು ಪೌಲನು ಹೇಳಿರುತ್ತಾನೆ (2 ಕೊರಿಂಥ 5:21). ಈ ಕಾರಣದಿಂದ ಕ್ರಿಸ್ತನು "ಪಾಫಧೀನವಾದ ನರಭಾವದ ರೂಪದಲ್ಲಿ" ಕಳುಹಿಸಲ್ಪಟ್ಟನು ಎಂದು ಬಣ್ಣಿಸಲ್ಪಟ್ಟಿದ್ದಾನೆ.[20]

ನಮಗೆ ಯೇಸುವಿನ ನರಭಾವವನ್ನು ಪರೀಕ್ಷಿಸುವದಕ್ಕೆ ಅವಕಾಶವು ಕೊಡಲ್ಪಟ್ಟಿದ್ದರೆ, ಅದು ಸರಿಯಾಗಿ ನಮ್ಮ ಶರೀರಭಾವ ಅಥವಾ ನರಭಾವದ *ರೂಪದಲ್ಲಿ*ಯೇ[21]–ಕೆಳಸೆಳೆತವುಳ್ಳ ಶರೀರಾಧೀನಸ್ವಭಾವ–ಇರುತ್ತದೆಂಬುದನ್ನು ತಿಳಿದುಕೊಳ್ಳುತ್ತಿದ್ದೆವು. ನಮ್ಮ *ರೀತಿಯಲ್ಲಿ ಅಲ್ಲದೆ* (ದೇವರಿಗೆ ಸ್ತೋತ್ರ!), ಯೇಸು ಆ ಕೆಳಸೆಳೆತಕ್ಕೆ ತುತ್ತಾಗಲಿಲ್ಲ!

ದೇವರು ತಮ್ಮ ಕುಮಾರನನ್ನು ಈ ಲೋಕದೊಳಗೆ ಸುಮ್ಮನೆ ಕಳುಹಿಸಲಿಲ್ಲ; ಆತನನ್ನು "ಪಾಪನಿವಾರಣೆಗಾಗಿ" ಕಳುಹಿಸಿಕೊಟ್ಟನು. NASB ತರ್ಜುಮೆಯಲ್ಲಿ "ಪಾಪನಿವಾರಣೆಗಾಗಿ" ಎಂಬುದು italics ನಲ್ಲಿದೆ, ಆ ಪದಗಳು ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟಿವೆ ಎಂದು ಅದು ಸೂಚಿಸುವದಾಗಿದೆ. ಮೂಲವಾಕ್ಯದಲ್ಲಿ ಕೇವಲ περὶ ἁμαρτίας (*peri hamartias*, "ಪಾಪ ವಿಷಯವಾಗಿ") ಎಂದಷ್ಟೆ ಇರುತ್ತದೆ. ಹೇಗೂ, ಗ್ರೀಕ್ ಹಳೆ ಒಡಂಬಡಿಕೆಯಲ್ಲಿ (the Septuagint, ಅಥವಾ LXX) ಆ ಪದವು ಪಾಪನಿವಾರಣಾ ಅಥವಾ ದೋಷಪರಿಹಾರಕ ಯಜ್ಞಗಳನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿತ್ತು (ನೋಡಿರಿ ಕೀರ್ತನೆ 40:6).

"ಪಾಪನಿವಾರಣೆ" ಎಂಬ ಪದಗುಚ್ಛವು ಹಳೆ ಒಡಂಬಡಿಕೆಯ ಕಾಲದಲ್ಲಿ ದೋಷಪರಿಹಾರಕ್ಕಾಗಿ ಕೊಲ್ಲಲ್ಪಡುತ್ತಿದ್ದ ಪ್ರಾಣಿಗಳನ್ನು ನೆನಪಿಗೆ ತರುವದಾಗಿರುತ್ತದೆ. Bryan Chapellರ ಮಾತುಗಳಲ್ಲಿ ಹೇಳುವದಾದರೆ,

> ದೇವರು ತನ್ನ ಧರ್ಮಶಾಸ್ತ್ರವನ್ನು ಮೀರಿದ್ದಕ್ಕೆ ದಂಡನೆಯನ್ನು ಮತ್ತೊಬ್ಬರ ಮೇಲೆ ಹೊರಿಸುವದಕ್ಕೆ ಮನಸ್ಸುಳ್ಳವನಾಗಿರುವದನ್ನು ಸೂಚಿಸುವದರಿಂದ ಯಜ್ಞಮಾಡಲ್ಪಟ್ಟ ಪ್ರಾಣಿಯ ಮರಣವು ಪಾಪದ ಗಂಭೀರತೆಗೆ ಸಂಕೇತವಾಗಿತ್ತು. . . . ದೇವರು ಒಂದು ನಿರಪರಾಧಿ ಪ್ರಾಣಿಯನ್ನು ಯಾವದಕ್ಕೆ ಸಂಕೇತಗೊಳಿಸಿದನೋ ಅದನ್ನು ತನ್ನ ಕುಮಾರನ ನಿರಪರಾಧದ ರಕ್ತದೊಂದಿಗೆ ನೆರವೇರಿಸಿದನು.[22]

"ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ" (ಇಬ್ರಿಯ 10:4); ಆದರೆ ಪ್ರಾಣಿಗಳ ರಕ್ತಕ್ಕೆ ಯಾವುದನ್ನು ಮಾಡುವದಕ್ಕೆ ಸಾಧ್ಯವಾಗಲಿಲ್ಲವೋ ಅದನ್ನು ಕ್ರಿಸ್ತನ ಒಂದೇ–ಸಾರಿ–ಸರ್ವರಿಗಾಗಿ ಅರ್ಪಿಸಿದ ಯಜ್ಞವು ಸಾಧಿಸಿತ್ತು (ಇಬ್ರಿಯ 10:10).

ಅದರ ಫಲಿತವಾಗಿ, ದೇವರು "ನರಭಾವದಲ್ಲಿಯೇ ಪಾಪಕ್ಕೆ ದಂಡನೆಯನ್ನು" ವಿಧಿಸಿದನು. Charles Spurgeon ಹೀಗೆ ಉದ್ಗರಿಸಿದನು, "ನನ್ನನ್ನು ದಂಡಿಸದೆಯೇ ಪಾಪವನ್ನು ದಂಡಿಸುವ ಮಾರ್ಗವೊಂದನ್ನು ದೇವರು ಕಂಡುಕೊಂಡನು!"[23] ದೇವರು

"ನರಭಾವದಲ್ಲಿಯೇ" ಪಾಪಕ್ಕೆ ದಂಡನೆಯನ್ನು ವಿಧಿಸಿದನು ಎಂಬುದಾಗಿ ಪೌಲನು ಹೇಳಿದನು, ಆದರೆ ಇಲ್ಲಿ "ನರಭಾವ" ಎಂಬುದು ಯೇಸುವಿನ ನರಭಾವವನ್ನು ಸೂಚಿಸುತ್ತದೋ ಅಥವಾ ನಮ್ಮ ನರಭಾವವನ್ನೋ ಎಂಬ ವಿಷಯದಲ್ಲಿ ಸ್ವಲ್ಪ ಗೊಂದಲವಿರುತ್ತದೆ. ಆತನು *ನಮ್ಮ* ನರಭಾವ ಎಂಬರ್ಥದಲ್ಲಿ ಹೇಳಿರುವದಾದಲ್ಲಿ, ನರಭಾವದ ಕೆಳಸೆಳೆತವನ್ನು ಎದುರಿಸಿ ಜಯಿಸುವದಕ್ಕೆ ಯೇಸುವಿಗಿದ್ದ ಶಕ್ತತೆಯನ್ನು ಆತನು ಇಲ್ಲಿ ತೋರಿಸುತ್ತಿದ್ದಾನೆಂದರ್ಥ ಆಗುತ್ತದೆ, ಅದು ನಮ್ಮನ್ನು ದೋಷಿಗಳೆಂದು ನಿರ್ಧರಿಸುತ್ತದೆ, ಯಾಕೆಂದರೆ ನಾವೆಲ್ಲರೂ ಆ ಸೆಳೆತಕ್ಕೆ ತುತ್ತಾಗಿ ಹೋಗಿರುತ್ತೇವೆ. ಇಲ್ಲಿ "ನರಭಾವ" ಎಂಬುದು *ಯೇಸುವಿನ* ನರಭಾವವನ್ನು ಸೂಚಿಸುತ್ತಿರುವ ಸಾಧ್ಯತೆಯು ಅಧಿಕವಾಗಿರುತ್ತದೆ. ಅದು ನಿಜವಾಗಿರುವದಾದರೆ, ಯೇಸು ಶಿಲುಬೆಯ ಮೇಲೆ ನೇತಾಡುವಾಗ ಆತನ ಮೇಲೆ ಬೀಳಲ್ಪಟ್ಟಂತಹ ಪಾಪಕ್ಕೆ ದಂಡನೆ (ನ್ಯಾಯತೀರ್ಪು) ವಿಧಿಸುವದನ್ನು ಅದು ಸೂಚಿಸುವದಾಗಿದೆ (1 ಕೊರಿಂಥ 15:3; 2 ಕೊರಿಂಥ 5:21). ಕ್ರಿಸ್ತನು ನರಭಾವದ ರೂಪವನ್ನು ಧರಿಸಿಕೊಳ್ಳುವುದು ನಮ್ಮ ವಿಮೋಚನಾರ್ಥವಾಗಿ ದೇವರು ಮಾಡಿದ್ದ ಸಂಕಲ್ಪದ ಒಂದು ಅನಿವಾರ್ಯವಾದ ಭಾಗವಾಗಿತ್ತು. ಮಾನವರ "ವಿಮೋಚನಾರ್ಥವಾಗಿ" ತನ್ನನ್ನು ಒಪ್ಪಿಸಿಕೊಡುವದಕ್ಕೆ (1 ತಿಮೊಥೆ 2:6), ಕ್ರಿಸ್ತನು ಮನುಷ್ಯನಾಗಬೇಕಾಯಿತು. ನರಭಾವದಲ್ಲಿ ಪಾಪಕ್ಕೆ ದಂಡನೆಯನ್ನು ವಿಧಿಸುವದಕ್ಕಾಗಿ, ಯೇಸುವು ನರಭಾವವನ್ನು ಧರಿಸಿಕೊಳ್ಳಲೇಬೇಕಾಯಿತು.

ಇದು ದೇವರ ದೈವಿಕ ಒದಗಿಸುವಿಕೆಯಾಗಿರುತ್ತದೆ. ಎಷ್ಟು ಅದ್ಭುತ, ದೇವರು "ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ" (8:32)!

**ವಚನ 4**. ಈ ಗಮನಾರ್ಹವಾದ ಒದಗಿಸುವಿಕೆಯ ಉದ್ದೇಶವು ಖಂಡಿತವಾಗಿಯೂ ನಮ್ಮನ್ನು ಪಾಪದಿಂದ ರಕ್ಷಿಸುವದೇ ಆಗಿತ್ತು, ಆದರೆ ಅದು ಅದಕ್ಕಿಂತಲೂ ಹೆಚ್ಚಿನದ್ದಾಗಿತ್ತು. ಆ ಒದಗಿಸುವಿಕೆಯ ಕುರಿತ ಪೌಲನ ಸಂದೇಶವು ನಮ್ಮ *ಜೀವಿತಗಳ* ಮೇಲೆ ಪರಿಣಾಮ ಬೀರತಕ್ಕದ್ದು. ನಾವು ಪರಿಶುದ್ಧಗೊಳಿಸಲ್ಪಡುವಿಕೆ (ಶುದ್ಧೀಕರಣ) ಬಗ್ಗೆ ಚರ್ಚೆ ಮಾಡುತ್ತಿದ್ದೇವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ: ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟ ಬಳಿಕ ಜೀವಿಸಬೇಕಾದ ಒಂದು ನಿರ್ದಿಷ್ಟ ವಿಧವಾದ ರೀತಿ ಇದಾಗಿರುತ್ತದೆ. ವಚನ 4ರಲ್ಲಿ, ದೇವರು ಏಕೆ ತನ್ನ ಮಗನನ್ನು ಕಳುಹಿಸಿದನೆಂಬುದಕ್ಕೆ ಕಾರಣವನ್ನು ಪೌಲನು ನೀಡುತ್ತಾನೆ: **ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವದಕ್ಕೆ ಮಾರ್ಗವಾಯಿತು.** "ನಿಯಮವು" ಎಂಬುದು δικαίωμα (*dikaiōma*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದು ರೋಮಾಪುರದವರಿಗೆ ಪತ್ರಿಕೆಯಲ್ಲಿ ಸಮೃದ್ಧಿಯಾಗಿ ಕಂಡುಬರುವ ನೀತಿ ಪದದ ಕುಟುಂಬದಲ್ಲಿನ ಪದವಾಗಿದೆ. *Dikaiōma* ಎಂಬುದರ ಮೂಲಭೂತ ಅರ್ಥವು "ನೀತಿಯ ಒಂದು ನಿರ್ದಿಷ್ಟ ಅರ್ಥವಾಗಿರುತ್ತದೆ."[24]

ಪೌಲನು "ಧರ್ಮಶಾಸ್ತ್ರದ ನಿಯಮವು" "ನಮ್ಮಲ್ಲಿ ನೆರವೇರುವ" ಕುರಿತು ಮಾತಾಡಿದಾಗ, ಆತನ ತಾತ್ಪರ್ಯವು ಏನಾಗಿತ್ತು? ನಾವು ಮೋಶೆಯ ಧರ್ಮಶಾಸ್ತ್ರದ ಎಲ್ಲಾ ಕಟ್ಟಳೆಗಳಿಗೆ ವಿಧೇಯರಾಗಬೇಕೆಂಬ ವಿಚಾರವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಇದನ್ನು ಹೇಳಲಿಲ್ಲ; ಆತನು ಇದಕ್ಕೆ ಮುಂಚೆ ನಾವು ಧರ್ಮಶಾಸ್ತ್ರದ ಪಾಲಿಗೆ ಸತ್ತವರು ಮತ್ತು ಅದರಿಂದ ವಿಮುಕ್ತಿಗೊಳಿಸಲ್ಪಟ್ಟವರು ಎಂಬುದಾಗಿ ಹೇಳಿದ್ದನು (7:4, 6). ಬಹುಶಃ,

ಆತನು ಇಲ್ಲಿ, ನಾವು ದೇವರಲ್ಲಿ ನಂಬಿಕೆಯಿಡುವಾಗ ಆತನು ಧರ್ಮಶಾಸ್ತ್ರದ ನಿಮಯವು ನಮ್ಮಲ್ಲಿ ನೆರವೇರಲ್ಪಟ್ಟಿದೆಯೋ *ಎಂಬಂತೆ* ನಮ್ಮ ವಿಷಯವಾಗಿ ನಡೆದುಕೊಳ್ಳುವನು ಎಂಬರ್ಥದಲ್ಲಿ ಹೇಳಿರುವ ಸಾಧ್ಯತೆಯಿರಬಹುದಾಗಿದೆ. ಹೇಗೂ, ಪೌಲನು ಬೇರೆ ಇನ್ನೇನನ್ನೋ ಮನಸ್ಸಿನಲ್ಲಿ ಹೊಂದಿರುವ ಸಂಭವವಿರುತ್ತದೆ.

ಈ ವಾಕ್ಯದ ಕುರಿತಾಗಿ ಎರಡು ವಾಸ್ತವಾಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು. ಮೊದಲನೆಯದಾಗಿ, "ನಿಯಮ" ಎಂಬುದು ಏಕವಚನದಲ್ಲಿದೆ, ಹೊರತು ಬಹುವಚನದಲ್ಲಿ ಇಲ್ಲ. (ಕೆಲವು ತರ್ಜುಮೆಗಳು ಬಹುವಚನದ "ನಿಯಮಗಳು" ಎಂದು ಹೊಂದಿರುತ್ತವೆ, ಆದರೆ ಗ್ರೀಕ್ ಪದವು ಏಕವಚನದಲ್ಲಿರುತ್ತದೆ—NASBಯು ತೋರ್ಪಡಿಸುವ ಪ್ರಕಾರ.) ಎರಡನೆಯದಾಗಿ, ಪೌಲನು ಇಲ್ಲಿ ನಿಯಮವು *ನಮ್ಮಿಂದ* ನೆರವೇರಿಸಲ್ಪಟ್ಟಿತು ಎಂದಲ್ಲ, ಆದರೆ "*ನಮ್ಮಲ್ಲಿ*" (ἐν, *en*) ನೆರವೇರಿಸಲ್ಪಟ್ಟಿತು ಎಂಬದಾಗಿ ಹೇಳುತ್ತಾನೆ. ಪೌಲನು ಬಹಳ ಸಂಭಾವ್ಯಪೂರ್ವಕವಾಗಿ ಹೇಳುತ್ತಿರಬಹುದಾದದ್ದೇನೆಂದರೆ, ಧರ್ಮಶಾಸ್ತ್ರವು ಮೂಲತಃ ಯಾವುದಕ್ಕಾಗಿ ಕೊಡಲ್ಪಟ್ಟಿತ್ತೋ ಆ ಉದ್ದೇಶವನ್ನು ಅದು ನೆರವೇರಿಸುವಂತೆ ದೇವರ ಕೃಪಾಭರಿತ ಒದಗಿಸುವಿಕೆಯು ಸಾಧ್ಯವಾಗಿಸಿತು ಎಂಬದೇ.[25] J. D. Thomas ಅಭಿಪ್ರಾಯ ಪಟ್ಟಿದ್ದೇನಂದರೆ, ಪೌಲನ ಮನಸ್ಸಿನಲ್ಲಿ "ಮೋಶೆಯ ಧರ್ಮಶಾಸ್ತ್ರವು ದಾರಿನಡಿಸಿದ ಗುರಿ ಅಥವಾ ಉದ್ದೇಶವನ್ನಿಟ್ಟುಕೊಂಡು ಹೇಳಿದನು, ಆದರೆ ಆ ಉದ್ದೇಶ ಅಥವಾ ಗುರಿಯು ಆ ವಿಧವಾದ ಕಾರ್ಯಕ್ರಮವೊಂದರಿಂದಲೇ ಸಾಧಿಸುವದಕ್ಕೆ ಎಂದಿಗೂ ಸಾಧ್ಯವಿರಲಿಲ್ಲ."[26]

"ಧರ್ಮಶಾಸ್ತ್ರದ ನಿಯಮವು" *ಯಾವುದಾಗಿತ್ತು*; ಅದು ಏನನ್ನು ಸಾಧಿಸುವ ಉದ್ದೇಶ ಹೊಂದಿತ್ತು? ನಾವು ಪರಿಶುದ್ಧಗೊಳಿಸಲ್ಪಡುವಿಕೆ ಭಾಷೆಯನ್ನು ಉಪಯೋಗಿಸುವದಾದರೆ, ಅದು ಜನರನ್ನು "ಪರಿಶುದ್ಧ" ಮಾಡುವದಕ್ಕಾಗಿ ಇತ್ತು ಎಂದು ನಾವು ಹೇಳಬಹುದು (ನೋಡಿರಿ ಯಾಜಕಕಾಂಡ 11:44, 45). ರೋಮಾ 8ನೇ ಅಧ್ಯಾಯದಲ್ಲಿ ಕಂಡುಬರುವ ಪೌಲನ ಪರಿಭಾಷೆಯನ್ನು ಉಪಯೋಗಿಸುವದಾದರೆ, ಅದು ಆತನ ಆತ್ಮನಿಂದ ನಡಿಸಲ್ಪಟ್ಟವರಾಗಿ ಜೀವಿಸುವ ಮೂಲಕ "ದೇವರಿಗೆ ಮೆಚ್ಚಿಕೆಯಾಗಿ" (8:8) ಇರುವಂತೆ ಮಾಡುವದೇ ಆಗಿತ್ತೆಂದು ನಾವು ಹೇಳಬಹುದು.

"ಧರ್ಮಶಾಸ್ತ್ರದ ನಿಯಮವು" ಹೇಗೆ ನೆರವೇರಿಸಲ್ಪಡುವದಕ್ಕೆ ಸಾಧ್ಯ? ಅದು **ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾದ** ನಮ್ಮಲ್ಲಿ ನೆರವೇರಬಲ್ಲದು ಎಂಬದಾಗಿ ಪೌಲನು ಹೇಳಿದನು. "ನಡೆಯುವವರಾದ" ಎಂಬುದು ಒಬ್ಬನು ಜೀವಿಸುವ ರೀತಿಯನ್ನು ಸೂಚಿಸುತ್ತದೆ (6:4; 2 ಕೊರಿಂಥ 5:7). ಅದೇ ವಿಚಾರವನ್ನು ವ್ಯಕ್ತಪಡಿಸುವ ಒಂದು ಪದಗುಚ್ಛವೆಂದರೆ "ಜೀವನಶೈಲಿ." 7:14-25ರಲ್ಲಿ, ಪೌಲನಿಗೆ "ಶರೀರಭಾವಕ್ಕೆ ಅನುಸಾರವಾಗಿ ನಡೆಯುವದಕ್ಕೆ" ಮನಸ್ಸಿರಲಿಲ್ಲ, ಆದರೆ ಹಾಗೆಯೇ ನಡೆದಿದ್ದನು. ಹೇಗೂ, ಅದು ಬದಲಾಗಿತ್ತು: ಈಗ ಆತನು "ಪವಿತ್ರಾತ್ಮಾನುಸಾರ" ನಡೆಯುವದಕ್ಕೆ ಶಕ್ತನಾಗಿದ್ದನು.

8ನೇ ಅಧ್ಯಾಯದುದ್ದಕ್ಕೂ, "spirit" ("ಆತ್ಮ") ಎಂಬುದಕ್ಕೆ ಯಾವಾಗ ದೊಡ್ಡ "s"ನ್ನು ಸೇರ್ಪಡೆಗೊಳಿಸಬೇಕೆಂಬ ಬಗ್ಗೆ ಸಹಜವಾದ ಅನಿಶ್ಚಿತತೆಯು ಇರುತ್ತದೆ. ಅದು ಯಾವಾಗ ಪವಿತ್ರಾತ್ಮನನ್ನು ಸೂಚಿಸುತ್ತದೆ (ದೊಡ್ಡ "S"), ಮತ್ತು ಯಾವಾಗ ಅದು ಮಾನವ ಆತ್ಮ

(ಚಿಕ್ಕ “s” ಸೂಚಿಸುತ್ತದೆ)? ಈ ಅಧ್ಯಾಯದಲ್ಲಿ ಅನುವಾದಕರು ಹಾಗೂ ವ್ಯಾಖ್ಯಾನಕಾರರು ದೊಡ್ಡ “S” ಮತ್ತು ಚಿಕ್ಕ “s” ಉಪಯೋಗಿಸುವ ವಿಷಯದಲ್ಲಿ ವ್ಯತ್ಯಾಸಗಳನ್ನು ಹೊಂದಿರುತ್ತಾರೆ. 4ನೇ ವಚನದಲ್ಲಿ, “ಆತ್ಮ” ಎಂಬ ಪದದಲ್ಲಿ ಚಿಕ್ಕ “s”ನ್ನು ಉಪಯೋಗಿಸನಹುದು. ವಿಷಯವು ಹಾಗಿರುವದಾದಲ್ಲಿ, ಆ ವಚನದ ಅರ್ಥವು ಒಂದು *ಶರೀರಭಾವದ* ಮಟ್ಟದಲ್ಲಿ ಜೀವಿಸುವದಕ್ಕೆ ಬದಲಾಗಿ ಒಂದು *ಆತ್ಮೀಕವಾದ* ಮಟ್ಟದಲ್ಲಿ ಜೀವಿಸುವ ಕುರಿತಾಗಿ ಮಾತಾಡುವದಾಗಿರುತ್ತದೆ. ಈ ಅಧ್ಯಾಯದಲ್ಲಿ ಪವಿತ್ರಾತ್ಮನ ಕಾರ್ಯದ ಕುರಿತು ನೀಡಲಾಗಿರುವ ಒತ್ತಿನ ಬೆಳಕಿನಲ್ಲಿ, ಇಲ್ಲಿ ಬಹುಶಃ ದೊಡ್ಡ “S”ನ್ನು ಉಪಯೋಗಿಸುವದು ಉತ್ತಮವಾಗಿರುತ್ತದೆ—NASB ತರ್ಜುಮೆಯಲ್ಲಿ ಇರುವ ಪ್ರಕಾರವಾಗಿ.

“ಪವಿತ್ರತ್ಮಾನುಸಾರವಾಗಿ” ನಡೆಯುವದು ಎಂಬುದು ಪವಿತ್ರಾತ್ಮನು ನಮ್ಮಿಂದ ಬಯಸುವಂತದ್ದನ್ನೇ ನಾವು ಮಾಡುವದನ್ನು ಸೂಚಿಸುತ್ತದೆ. ಕೆಲವರು “ಪವಿತ್ರತ್ಮಾನುಸಾರವಾಗಿ ಮಾತಾಡುವದಾಗಿ” ಹೇಳಿಕೊಳ್ಳುತ್ತಾರೆ, ಆದರೆ ಪೌಲನು ಇಲ್ಲಿ “ಪವಿತ್ರತ್ಮಾನುಸಾರವಾಗಿ ನಡೆಯುವ” ಕುರಿತು ಕರೆಕೊಡುತ್ತಿದ್ದಾನೆ (8:14ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). ನಾವೇನು ಮಾಡಬೇಕೆಂದು ಪವಿತ್ರಾತ್ಮನು ಬಯಸುತ್ತಾನೆಂಬುದನ್ನು ತಿಳಿದುಕೊಳ್ಳಬಹುದಾದ ಏಕೈಕ ವಸ್ತುನಿಷ್ಠ ದಾರಿಯೆಂದರೆ ಆತನು ಪ್ರೇರಣೆಗೊಳಿಸಿದ ಪುಸ್ತಕವನ್ನು—ಬೈಬಲ್—ಓದುವದೇ.

ನಾವು ಒಂದು ನಿರ್ದಿಷ್ಟವಾದ ರೀತಿಯಲ್ಲಿ ನಡೆದುಕೊಳ್ಳಬೇಕೆಂದು ದೇವರು ನಮ್ಮಿಂದ ಎದುರುನೋಡುತ್ತಾನೆ. ನಮ್ಮ ಕ್ರೈಸ್ತ ನಡೆಯಲ್ಲಿ, ನಾವು ಪವಿತ್ರಾತ್ಮನ ಮಾರ್ಗದರ್ಶನಕ್ಕೆ ನಮ್ಮನ್ನು ಒಪ್ಪಿಸಿಕೊಡಬೇಕಾಗಿರುತ್ತದೆ. ಒಂದು ಧರ್ಮಶಾಸ್ತ್ರ/ಕ್ರಿಯೆಗಳ ವ್ಯವಸ್ಥೆಯ ಅಡಿಯಲ್ಲಿ, ಅಂತಹ ಕಾರ್ಯವು ಸಾಧ್ಯವಿರಲಿಲ್ಲ (7:14-25); ಆದರೆ ಕೃಪೆ/ನಂಬಿಕೆಯ ವ್ಯವಸ್ಥೆಯೊಂದರ ಅಡಿಯಲ್ಲಿ ಅದು ಸಾಧ್ಯವಿರುತ್ತದೆ. ದೇವರ ಆತ್ಮನ ಸಹಾಯದೊಂದಿಗೆ, ನಾವು ಪರಿಶುದ್ಧಗೊಂಡ ಜೀವಿತಗಳನ್ನು ನಡಿಸಬಲ್ಲೆವು. ತತ್ಪರಿಣಾಮವಾಗಿ, ನಾವು ಮಾಡ*ಬಲ್ಲೆವು*, ನಾವು ಮಾಡ*ತಕ್ಕದ್ದು* ಎಂದು ಪೌಲನು ಒತ್ತಿಹೇಳುತ್ತಾನೆ (8:12, 13).

## ಶರೀರಭಾವ ಮತ್ತು ಆತ್ಮನ ನಡುವಿನ ಭಿನ್ನತೆ (8:5-13)

### ಶರೀರಭಾವದ ಮೂಲಕ ಮರಣ (8:5-8)

**5ಶರೀರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ, ಪವಿತ್ರಾತ್ಮನನ್ನ ನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ. 6ಶರೀರಭಾವದವುಗಳ ಮೇಲೆ ಮನಸ್ಸಿಡುವದು ಮರಣ; ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದು ಜೀವವೂ ಮನಶ್ಶ್ಯಾಂತಿಯೂ ಆಗಿದೆ. 7ಯಾಕಂದರೆ ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು; ಅಂಥ ಮನಸ್ಸು ದೇವರ ನಿಯಮಕ್ಕೆ ಒಳಪಡುವದೂ ಇಲ್ಲ, ಒಳಪಡುವದಕ್ಕಾಗುವದೂ ಇಲ್ಲ. 8ಶರೀರಭಾವಾಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು.**

**ವಚನ 5.** ನಮ್ಮ ಹೃದಯಗಳ, ಅಥವಾ ಮನಸ್ಸುಗಳ ಆಲೋಚನೆಗಳಿಂದಲೇ ಕ್ರಿಯೆಗಳು ಹೊರಹೊಮ್ಮುತ್ತವೆ (ಜ್ಞಾನೋಕ್ತಿ 4:23; 23:7; ಲೂಕ 6:45). ಆದುದರಿಂದ, ಪೌಲನು ಮುಂದುವರೆಸಿ ಹೀಗೆ ಹೇಳುತ್ತಾನೆ, **ಶರೀರಭಾವವನ್ನು ಅನುಸರಿಸುವವರು ಅದಕ್ಕೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ, ಪವಿತ್ರಾತ್ಮನನ್ನನುಸರಿಸುವವರು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುತ್ತಾರೆ.** ಈ ವಾಕ್ಯಭಾಗವು ಕೆಲವು ಜನರ ಬಗ್ಗೆ ಮಾತಾಡುತ್ತದೆ, "ಶರೀರಭಾವವನ್ನು ಅನುಸರಿಸಿ ನಡೆಯುವವರು" ಮತ್ತು "ಪವಿತ್ರಾತ್ಮನನ್ನನುಸರಿಸಿ ನಡೆಯುವವರು." McCordನ ತರ್ಜುಮೆಯು ಮೊದಲ ಗುಂಪನ್ನು "ಶರೀರಭಾವದ ಪ್ರಕಾರ ಜೀವಿಸುವವರು" ಎಂದು ಮತ್ತು ಎರಡನೆಯ ಗುಂಪನ್ನು "ಪವಿತ್ರಾತ್ಮನ ಪ್ರಕಾರವಾಗಿ ಜೀವಿಸುವವರು" ಎಂದು ಹೆಸರಿಸುತ್ತದೆ. NEB ತರ್ಜುಮೆಯು ಶರೀರಭಾವದ "ಮಟ್ಟದಲ್ಲಿ ಜೀವಿಸುವವರು" ಆತ್ಮನ "ಮಟ್ಟದಲ್ಲಿ ಜೀವಿಸುವವರಿಗೆ" ವಿರೋಧವಾಗಿರುತ್ತಾರೆ ಎಂಬದರ ಕುರಿತು ಮಾತಾಡುತ್ತದೆ.

"ಮೇಲೆ ಮನಸ್ಸಿಡುತ್ತಾರೆ" ಎಂಬುದು φρονέω (*phroneō*) ಎಂಬ ಒಂದೇ ಗ್ರೀಕ್ ಪದದಿಂದ ಬಂದದ್ದಾಗಿದೆ, ಅದರರ್ಥವು "ಒಂದು ಸಂಗತಿಯ ಮೇಲೆ ಒಬ್ಬನು ಮನಸ್ಸನ್ನು ಇಡುವದು, ಇಂಗಿತ ಹೊಂದಿರುವದು"[27] ಎಂದಾಗಿರುತ್ತದೆ. McCord ತರ್ಜುಮೆಯಲ್ಲಿ ". . . ಮೇಲೆ ಗಮನ, ದೃಷ್ಟಿಯನ್ನು ಕೇಂದ್ರಿಕರಿಸು" ಎಂದಿರುತ್ತದೆ. *Phroneō* ಎಂಬುದು "ಒಬ್ಬ ವ್ಯಕ್ತಿಯ ಚಿತ್ತ [ಇಚ್ಛೆಯ] ಮೂಲಭೂತ ಲಕ್ಷ್ಯವನ್ನು ಸೂಚಿಸುತ್ತದೆ."[28] "ಇದು ನಡವಳಿಕೆಯನ್ನು ನಿರ್ಧರಿಸುವಂತಹ ಮೂಲಕಾರಣವಾದ ವರ್ತನೆ ಆಗಿರುತ್ತದೆ."[29]

ನಾವು "ಶರೀರಭಾವದವುಗಳು" ಎಂಬ ಪದಗುಚ್ಛವನ್ನು ಕಾಣುವಾಗ, ನಾವು ಅನೈತಿಕವಾದ ಅಥವಾ ಅನುವಂಶಿಕವಾಗಿ ಕೆಟ್ಟದ್ದು ಎಂಬದಾಗಿ ಭಾವಿಸಬಹುದಾಗಿದೆ. "ಶರೀರಭಾವದವುಗಳು" ಅಂತಹ ನಡವಳಿಕೆಗಳನ್ನು ಒಳಗೊಂಡಿರತಕ್ಕದ್ದೇ, ಆದರೆ ಆ ಪದಗುಚ್ಛವು ಅದಕ್ಕಿಂತಲೂ ಅತ್ಯಧಿಕವಾದದ್ದನ್ನು ಒಳಗೊಂಡಿರುತ್ತದೆ. ಉದಾಹರಣೆಗೆ, ಗಲಾತ್ಯ 5:19-21ರಲ್ಲಿನ "ಶರೀರಭಾವದ ಕರ್ಮಗಳು" "ಜಾರತ್ವ" ಮತ್ತು "ಕುಡಿಕತನ"ಗಳನ್ನು ಮಾತ್ರವಲ್ಲದೆ "ಹೊಟ್ಟೇಕಿಚ್ಚು" ಮತ್ತು "ಕಕ್ಷಭೇದ" ಗಳನ್ನು ಸಹ ಒಳಗೊಂಡಿರುತ್ತದೆ.

"ಶರೀರಭಾವದವುಗಳು" ನಶಿಸಿಹೋಗಲಿರುವ ತಾತ್ಕಲಿಕವಾದ ಈ ಲೋಕದ ಕ್ರಿಯೆಗಳು ಹಾಗೂ ವರ್ತನೆಗಳಾಗಿರುತ್ತವೆ. ಶರೀರಭಾವದವುಗಳ "ಮೇಲೆ ಮನಸ್ಸಿಡುವವರು" ಈ ಇಹದ ಜೀವನದಲ್ಲಿ ಮಗ್ನರಾಗಿರುವವರು ಹಾಗೂ ಭೂಮಿಗೆ ಸೇರಿದವರು. ಅವರು ಕೇವಲ ತಮಗೆ ಕಾಣುವದಕ್ಕೆ, ರುಚಿಸುವದಕ್ಕೆ, ಅನುಭವಮಾಡುವದಕ್ಕೆ ಸಾಧ್ಯವಿರುವಂಥವುಗಳ ಮೇಲೆಯೇ ಮುಖ್ಯಗಮನವನ್ನು ಕೊಡುತ್ತಾರೆ. Phillips ತರ್ಜುಮೆಯಲ್ಲಿ "ಪ್ರಾಕೃತಿಕ [ಶಾರೀರಿಕ] ಮನೋಭಾವವು ಸ್ವಾಭಾವಿಕ ಸಂಗತಿಗಳನ್ನು ದಾಟಿ ಬೇರೆ ಇನ್ನೇನನ್ನೂ ನೋಡಲಾರದು"[30] ಎಂದಿರುತ್ತದೆ. ಮತ್ತಾಯ 6:31ನೇ ವಚನವು ಶರೀರಭಾವುಳ್ಳ ಮನುಷ್ಯನ "ತ್ರೈಯೇಕತ್ವ" ದ ಪಟ್ಟಿ ಮಾಡುತ್ತದೆ:[31] "'ಏನು ಊಟ ಮಾಡಬೇಕು?' ಅಥವಾ 'ಏನು ಕುಡಿಯಬೇಕು?' ಅಥವಾ 'ಏನು ಹೊದ್ದುಕೊಳ್ಳಬೇಕು?'" ಪೌಲನು "ಹೊಟ್ಟೆಯೇ ಅವರ ದೇವರು, . . . ಅವರು ಪ್ರಪಂಚದ ಕಾರ್ಯಗಳ ಮೇಲೆ ಮನಸ್ಸಿಡುವವರು" ಎಂಬದಾಗಿ ಬರೆಯುತ್ತಾನೆ (ಫಿಲಿಪ್ಪಿ 3:19). ಒಬ್ಬ ವ್ಯಕ್ತಿಯು ಹಿತಕರವಾಗಿ, ಉಪಕಾರಿ, ಆಕರ್ಷಕ, ಶಿಕ್ಷಿತನಾಗಿ, ಸಭ್ಯತೆ,

ಪ್ರಸಿದ್ಧನಾಗಿ ಇರಬಹುದು, ಶ್ರಮದಿಂದ ದುಡಿಯುವವನಾಗಿ ಮತ್ತು ಉತ್ತಮ ನೆರೆಯವನಾಗಿ ಇರಬಹುದು—ಮತ್ತು ಹೀಗಿದ್ದರೂ "ಶರೀರಭಾವದವುಗಳ ಮೇಲೆ" ದೃಷ್ಟಿನೆಟ್ಟಿರುವ ಮನಸ್ಸನ್ನು ಹೊಂದಿರಬಹುದಾಗಿದೆ.

ಇದಕ್ಕೆ ಭಿನ್ನವಾಗಿ, "ಪವಿತ್ರಾತ್ಮನನ್ನನುಸರಿಸಿ ನಡೆಯುವವರು, ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ [ಮೇಲೆ ಮನಸ್ಸಿಡುತ್ತಾರೆ]."[32] "ಪವಿತ್ರಾತ್ಮನಿಗೆ ಸಂಬಂಧ ಪಟ್ಟವುಗಳು" ದೇವರಿಗೆ ಸಂಬಂಧಿಸಿದ ಆತ್ಮೀಕ ಹಿತಾಸಕ್ತಿಗಳಾಗಿವೆ, ನಿತ್ಯತ್ವಕ್ಕೆ ಸೇರಿದ ಸಂಗತಿಗಳಾಗಿವೆ. ಒಂದು ನಿಯಮದ ಪ್ರಕಾರ, ಇವುಗಳು ಕಣ್ಣಿಗೆ ಕಾಣದವುಗಳು, ಆದರೆ ಅವುಗಳು ಕಣ್ಣಿಗೆ ಕಾಣಿಸುವಂತಹ ಸಂಗತಿಗಳಿಗಿಂತಲೂ ಅಧಿಕ ವಾಸ್ತವವಾಗಿರುತ್ತವೆ. ಇವುಗಳು ನಿರಂತರವಾಗಿ ಉಳಿಯುವವು, ಇಹಲೋಕದ ಸಂಗತಿಗಳಾದರೋ ಶಾಶ್ವತವಾಗಿ ನಶಿಸಿಹೋಗುವವು.

ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುವುದು ಸುಲಭವಾದದ್ದಲ್ಲ. ನಮ್ಮ ಸುತ್ತಲಿನಲ್ಲೆಲ್ಲಾ ಕೇವಲ ಪಂಚೇಂದ್ರಿಗಳಿಂದ ಅನುಭವ ಮಾಡಬಹುದಾದ ಸಂಗತಿಗಳೇ ಅಧಿಕವಾಗಿರುತ್ತವೆ. ನಮಗೆ ಅಗತ್ಯವಿರುವ, ನಮ್ಮ ಸಂತೋಷ ಮತ್ತು ಯೋಗಕ್ಷೇಮಕ್ಕೆ ಪ್ರಾಮುಖ್ಯವಾಗಿರುವಂತಹ ಉತ್ಪನ್ನ ಅಥವಾ ಸೇವೆಗಳ ಕುರಿತಾದ ಸಂದೇಶಗಳು ನಮಗೆ ಎಡೆಬಿಡದೆ ಬರುತ್ತಲೇ ಇರುತ್ತವೆ. ನಾವು ಕ್ರೈಸ್ತರಾಗಿದ್ದರೂ, ಯಾವಾಗಲೂ ನಾವು ಶರೀರದ ಯೋಗಕ್ಷೇಮದ ಬಗ್ಗೆಯೇ ಯೋಚಿಸುವದಾದರೆ, ಒಂದು ಶರೀರಭಾವದ ಮನೋರೂಢಿಯನ್ನು ಹೊಂದಿಲ್ಲದೆ ಇರುವದು ಹೆಚ್ಚುಕಡಿಮೆ ಅಸಾಧ್ಯವೆಂದೇ ಹೇಳಬಹುದು. ಈ ಕಾರಣದಿದಲೇ, ನಮ್ಮ ಜೀವಿತಗಳ ಜೀವಾಳದಲ್ಲಿ, ನಮ್ಮ ಗಮನವನ್ನು ಆತ್ಮೀಕವಾದದ್ದರ ಕಡೆಗೆ ನಡಿಸುವಂತಹ ಸಂಗತಿಯು ಇರತಕ್ಕದ್ದು—ಅದಕ್ಕೆ ಈ ಕೆಳಗೆ ಕೆಲವು ಉದಾಹರಣೆಗಳಿರುತ್ತವೆ:

ಬೈಬಲ್ ಓದುವಿಕೆ ಮತ್ತು ಅಧ್ಯಯನ.
ತೀವ್ರವಾದ ಮತ್ತು ಸತತವಾದ ಪ್ರಾರ್ಥನೆ.
ಸಭೆಯಲ್ಲಿ ನಡೆಯುವ ಆರಾಧನೆಗಳಿಗೆ ನಿಷ್ಠೆಯಿಂದ
ಹಾಜರಾಗುವಿಕೆ.
ಕರ್ತನ ಸೇವೆಯಲ್ಲಿ ತೊಡಗಿಸಿಕೊಳ್ಳುವುದು.
ಆತ್ಮೀಕ—ಮನಸ್ಸಿನ ಕ್ರೈಸ್ತರೊಂದಿಗೆ ಸಹವಾಸವಿಟ್ಟುಕೊಳ್ಳುವುದು.

**ವಚನ 6**. ಒಬ್ಬನು ಶರೀರಭಾವದ ಮನೋರೂಢಿಯ ಬದಲಾಗಿ ಒಂದು ಆತ್ಮೀಕವಾದ ಮನೋರೂಢಿಯನ್ನು ಹೊಂದಿರುವದು ಏಕೆ ಪ್ರಾಮುಖ್ಯವಾದದ್ದು? ಒಂದು ಕಡೆಯಲ್ಲಿ, **ಶರೀರಭಾವದವುಗಳ ಮೇಲೆ ಮನಸ್ಸಿಡುವದು** [φρόνημα, *phronēma*] **ಮರಣ.** ಪ್ರತಿಯೊಬ್ಬರೂ ಶಾರೀರಕವಾಗಿ ಮರಣಿಸುತ್ತಾರಾದ್ದರಿಂದ (ಆತ್ಮೀಕ ಮನೋರೂಢಿಯನ್ನು ಹೊಂದಿರುವವರು ಸಹ), ಇಲ್ಲಿ "ಮರಣ" ಎಂಬುದು ಆತ್ಮೀಕ ಮರಣವನ್ನು ಸೂಚಿಸುತಕ್ಕದ್ದು. ಈ ಮರಣವು ದೇವರಿಂದ ಈಗಲೂ (ಯೆಶಾಯ 59:1, 2) ಮತ್ತು ನಿತ್ಯವಾಗಿಯೂ (ಪ್ರಕಟಣೆ 20:14, 15; 21:7, 8) ಅಗಲಿ ಹೋಗುವದೇ ಆಗಿದೆ.

ಇನ್ನೊಂದಡೆಯಲ್ಲಿ, **ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವದು ಜೀವವೂ ಮನಶ್ಶಾಂತಿಯೂ ಆಗಿದೆ.** "ಜೀವವೂ" ಎಂಬುದು ಆತ್ಮೀಕ ಜೀವವನ್ನು ಸೂಚಿಸುತ್ತದೆ: "ದೇವರ ಸಂಗಡದ ಆತ್ಮೀಕ ಐಕ್ಯತೆ ಹಾಗೂ ಅನ್ಯೋನ್ಯತೆ ಮತ್ತು ಅದರ ಫಲಿತವಾಗಿ ದೊರಕುವ ಆಶೀರ್ವಾದಗಳು."[33] ಆ "ಜೀವ" ದೊಂದಿಗೆ ಜೊತೆಗೂಡಿರುವಂತದ್ದು "ಮನಶ್ಶಾಂತಿ." ಪೌಲನು, 5:1ರಲ್ಲಿ, "ಹೀಗಿರಲಾಗಿ ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ" ಎಂದು ಹೇಳಿದನು. ಕ್ರೈಸ್ತರಾಗಿ, ನಾವು ನಮ್ಮ ಮನಸ್ಸುಗಳನ್ನು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಇಡುವಾಗ, ಆ ಪರಲೋಕದ ಶಾಂತಿಯು ಮುಂದುವರೆಯುತ್ತದೆ ಮತ್ತು ಆಳವಾಗುತ್ತಾ ಸಹ ಸಾಗುತ್ತದೆ.

**ವಚನ 7.** ಪೌಲನು ಶರೀರಭಾವದವುಗಳ ಮೇಲೆ ಮನಸ್ಸಿಡುವದರ ಅಂತಿಮ ಫಲಿತದ (ಅಂದರೆ, ಮರಣ) ಬಗ್ಗೆ ವಿವರಿಸುತ್ತಾನೆ, ಆದರೆ ಆ ರೀತಿಯ ಮನೋರೂಢಿಯ ವಿಕೃತತೆ ಹಾಗೂ ದುರಂತತೆಯ ಬಗ್ಗೆ ಸ್ಪಷ್ಟಗೊಳಿಸುವದು ಆತನ ಇಚ್ಛೆಯಾಗಿತ್ತು. ಆತನು ಹೇಳಿದ್ದೇನಂದರೆ, **ಶರೀರಭಾವದವುಗಳ ಮೇಲೆ ಮನಸ್ಸಿಡುವದು ದೇವರಿಗೆ ಶತ್ರುತ್ವವು.** "ಶತ್ರುತ್ವ" ಎಂಬುದು ἔχθρα (*echthra*) ಎಂಬ ಪದದ ಅನುವಾದವಾಗಿದೆ. ಈ ಪದವು ἐχθρός (*echthros*) ಎಂಬುದರೊಂದಿಗೆ ಸಂಬಂಧ ಹೊಂದಿರುತ್ತದೆ, ಅದರರ್ಥವು "ಮತ್ತೊಬ್ಬನನ್ನು ದ್ವೇಷಿಸುವದು ಮತ್ತು ವಿರೋಧಿಸುವದು" ಎಂದಾಗಿರುತ್ತದೆ.[34] Morris ಹೀಗೆ ಬರೆಯುತ್ತಾನೆ, ಏನೆಂದರೆ *echthra* ಅರ್ಥವು "ಸುಮ್ಮನೆ ಸ್ವಲ್ಪ ಮಟ್ಟಿಗೆ ಅಸಹಕಾರ ತೋರುವದು" ಎಂದಾಗಿರುವದಿಲ್ಲ; ಬದಲಾಗಿ, "ಅದು ಖಡಾಖಂಡಿತವಾದ ಶತ್ರುತ್ವವಾಗಿರುತ್ತದೆ." ಆತನು ಇನ್ನಷ್ಟು ಸೇರಿಸಿ "ಅದು ನಿರ್ಲಕ್ಷಿಸಕೂಡದಂತಹ ಒಂದು ಬಲಿಷ್ಠ ಪದವಾಗಿದೆ" ಎಂದು ಹೇಳುತ್ತಾನೆ.[35]

ಈ ಲೋಕದ ಕಡೆಗೆ ಅಭಿಮುಖನಾಗಿರುವ ವ್ಯಕ್ತಿಯಿಂದ ಒಬ್ಬನು ಇಲ್ಲಿ ಪ್ರತಿರೋಧವನ್ನು ಕಲ್ಪಿಸಿಕೊಳ್ಳಬಹುದಾಗಿದೆ: "ಆದರೆ ನನಗೆ ಧರ್ಮದ ಬಗ್ಗೆ ವಿರೋಧವಿಲ್ಲ. ನಾನು ಘೋರವಾದ ಸಂಗತಿಗಳನ್ನು ಮಾಡುವವನಲ್ಲ. ದೇವರ ವಿಷಯವಾಗಿ ನಾನು ಭಯಂಕರ ಆಲೋಚನೆಗಳನ್ನು ಹೊಂದಿದವನಲ್ಲ." ಅದೆಲ್ಲವೂ ಸತ್ಯವೇ ಆಗಿರಬಹುದು— ಆದರೆ ಇಹಲೋಕದ ಮೇಲೆ ಮಾತ್ರವೇ ದೃಷ್ಟಿನೆಟ್ಟಿರುವವನು ತನ್ನ ಜೀವಿತಕ್ಕಾಗಿ ದೇವರು ಹೊಂದಿರುವ ಉದ್ದೇಶವನ್ನು ನಿರ್ಲಕ್ಷಿಸುವವನಾಗಿರುತ್ತಾನೆ. ಈ ರೀತಿಯ ವ್ಯಕ್ತಿಯು ದೇವರನ್ನು ಎದುರಿಸುವವನು ಮತ್ತು ವಿರೋಧಿಸುವವನು ಆಗಿರುತ್ತಾನೆ. ಅದೇ ಆತನನ್ನು ದೇವರಿಗೆ *ಶತ್ರುತ್ವ* ಉಳ್ಳವನಾಗಿರುವಂತೆ ಮಾಡುತ್ತದೆ.

ಅಂಥ ಮನಸ್ಸು **ದೇವರ ನಿಯಮಕ್ಕೆ ಒಳಪಡುವದೂ ಇಲ್ಲ, ಒಳಪಡುವದಕ್ಕಾಗುವದೂ ಇಲ್ಲ** ಎಂದು ಪೌಲನು ಹೇಳುತ್ತಾನೆ. ಈ ಸನ್ನಿವೇಶದಲ್ಲಿ "ದೇವರ ನಿಯಮ" ಎಂಬುದು ಮೋಶೆಯ ಧರ್ಮಶಾಸ್ತ್ರವಾಗಿದೆ,[36] ಆದರೆ ದೇವರಿಂದ ಕೊಡಲ್ಪಟ್ಟಿರುವ ಯಾವದೇ ಕಟ್ಟಳೆ ಅಥವಾ ಧರ್ಮಶಾಸ್ತ್ರಕ್ಕೆ ಈ ಸಾಮಾನ್ಯಸೂತ್ರ ಅನ್ವಯವಾಗುತ್ತದೆ. 7:14-25ರಲ್ಲಿ, ಶರೀರಭಾವವು ತನ್ನ ಮೇಲೆ ಮೇಲುಗೈ ಸಾಧಿಸಿದ್ದರಿಂದ ತಾನು ಮೋಶೆಯ ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಕ್ಕೆ ಅಶಕ್ತನಾದೆನೆಂದು ಪೌಲನು ಗಮನಕ್ಕೆ ತಂದನು. ಇಂದು, ಒಂದು ಶರೀರಭಾವದ ಮನಸ್ಸುಳ್ಳವರು ಈಗಲೂ ಸಹ ದೇವರ

ಧರ್ಮಶಾಸ್ತ್ರವನ್ನು ಕೈಕೊಂಡು ನಡೆಯುವದಕ್ಕೆ ಸಾಧ್ಯವಿಲ್ಲದವರಾಗಿರುತ್ತಾರೆ.

ಇಲ್ಲಿ ಕೆಲವರು "ಒಳಪಡುವದಕ್ಕಾಗುವದೂ ಇಲ್ಲ" ಎಂಬುದನ್ನು "ಸಂಪೂರ್ಣ ಅನುವಂಶಿಕ ಭ್ರಷ್ಟತೆಯ" ಸಿದ್ಧಾಂತಕ್ಕೆ ಒಂದು ಪುರಾವೆಯಾಗಿ ಕಾಣುತ್ತಾರೆ, ಆದರೆ ಪೌಲನು ಇಲ್ಲೊಂದು ಹೊಸ ಆಲೋಚನೆಯನ್ನು ಪರಿಚಯಿಸುವವನಾಗಿರಲಿಲ್ಲ. ಆತನು 7:14-25ರಲ್ಲಿನ ತಿಳಿಸಲಾದ ವಿಚಾರವನ್ನು ಪುನಃ ಒತ್ತಿ ಹೇಳುತ್ತಿದ್ದಾನಷ್ಟೆ. ಶರೀರಭಾವದವುಗಳ ಮೇಲೆ ಮನಸ್ಸಿಟ್ಟಿರುವ ಒಬ್ಬಳು ಅಥವಾ ಒಬ್ಬನು ತನ್ನನ್ನು ದೇವರ ನಿಯಮಕ್ಕೆ ಒಳಪಡಿಸಿಕೊಳ್ಳಲು ಏಕೆ ಅಸಾಧ್ಯವಾಗಿರುತ್ತದೆ? ಸಾಮಾನ್ಯಸೂತ್ರವು ಸರಳವಾಗಿರುತ್ತದೆ. ನೀನು ಪಶ್ಚಿಮಕ್ಕೆ ಹೋಗಬೇಕೆಂದು ಹಠಹಿಡಿದರೆ ನೀನು ಪೂರ್ವದಿಕ್ಕಿಗೆ ಹೋಗುವದು ಅಸಾಧ್ಯವಾದದ್ದಾಗಿರುತ್ತದೆ. ನೀನು ನೀರಿನೊಳಗೆ ಜಿಗಿಯಲೇಬೇಕೆಂದು ಪಟ್ಟುಹಿಡಿಯುವದಾದರೆ ನೀನು ಒದ್ದೆಯಾಗದಂತೆ ಉಳಿಯುವದು ಅಸಾಧ್ಯವಾದದ್ದು. ನೀನು ಊಟ ಅಥವಾ ನೀರು ಸೇವಿಸುವದಕ್ಕೆ ನಿರಾಕರಿಸುವಾದದರೆ ನಿನ್ನ ಹೊಟ್ಟೆಯು ತುಂಬುವುದು ಅಸಾಧ್ಯವಾದ ಮಾತಾಗಿರುತ್ತದೆ.

**ವಚನ 8.** ಪೌಲನು ಮುಕ್ತಾಯಕ್ಕೆ ಬಂದದ್ದೇನಂದರೆ **ಶರೀರಭಾವಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು.** "ಶರೀರಭಾವಧೀನರು" ಎಂದರೆ "ಮಾಂಸದಿಂದ ನಿರ್ಮಿಸಲ್ಪಟ್ಟ ದೇಹದಲ್ಲಿ ನೆಲೆಸುವವರು" ಎಂಬ ಅರ್ಥವಲ್ಲ, ಯಾಕೆಂದರೆ ಹಾಗಿರುವದಾದರೆ ನಮ್ಮಲ್ಲಿ *ಯಾರೊಬ್ಬರೂ* ದೇವರಿಗೆ ಮೆಚ್ಚಿಕೆಯಾಗಿರಲಾರೆವು ಎಂದರ್ಥವಾಗುವುದು. ಬದಲಾಗಿ, "ಶರೀರಭಾವಧೀನರು" ಎಂದರೆ ದೇವರ ಸಹಾಯವಿಲ್ಲದೆಯೇ ಒಬ್ಬನ ಮನುಷ (ಶಾರೀರಿಕ) ಸಂಪನ್ಮೂಲಗಳ ಮೇಲೆ ಮಾತ್ರವೇ ಅವಲಂಬಿಸಿದವರಾಗಿ ಜೀವಿಸುವದಕ್ಕೆ ಪ್ರಯತ್ನಿಸುವದಾಗಿರುತ್ತದೆ. ಅದು ದೇವರಾತ್ಮನ ಬದಲಾಗಿ ಶರೀರಭಾವದ ಪ್ರಾಬಲ್ಯಕ್ಕೊಳಗಾಗಿ ಜೀವಿಸುವದಾಗಿದೆ (ನೋಡಿರಿ 8:9).

8ನೇ ವಚನವು ಕೆಲವರಿಗೆ ಪ್ರತಿಕಾಷ್ಠೆಯಂತೆ ತೋರಬಹುದು. ದೇವರಿಗೆ ಮೆಚ್ಚಿಕೆಯಾಗಿಲ್ಲದಿರುವಿಕೆಗಿಂತಲೂ ಆತ್ಮೀಕವಾಗಿ ಮರಣಿಸುವದು (8:6) ಹೆಚ್ಚು ಕೆಟ್ಟದ್ದಲ್ಲವೇ? ಖಂಡಿತವಾಗಿ ಅಲ್ಲ. ನಾವು ದೇವರಿಗೆ ಮೆಚ್ಚಿಕೆಯಾಗಿಲ್ಲವಾದಲ್ಲಿ, ನಮ್ಮ ಜೀವಿಸುವದಕ್ಕಾಗಿರುವ ಉದ್ದೇಶವನ್ನು ನೆರವೇರಿಸದವರಾಗಿರುತ್ತೇವೆ (8:4ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). ಒಬ್ಬನ ಈ ಭೂಮಿಯ ಮೇಲೆ ಬೇರೆ ಏನೆಲ್ಲವನ್ನು ಸಾಧಿಸಿದಾಗ್ಯೂ, ಆತನು ದೇವರ ಇಂಗಿತದ ಪ್ರಕಾರವಾಗಿರುವ ವ್ಯಕ್ತಿಯಾಗಿಲ್ಲವಾದರೆ ಸಂಪೂರ್ಣ ವಿಫಲನಾದವನಾಗಿರುತ್ತಾನೆ!

## ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ ಮುಖಾಂತರದ ಜೀವನ (8:9-11)

**[9]ನೀವಾದರೋ, ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ ಶರೀರಭಾವಾಧೀನರಲ್ಲ, ದೇವರಾತ್ಮನಿಗೆ ಅಧೀನರಾಗಿದ್ದೀರಿ. ಯಾವಾನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ. [10]ಆದರೆ ಕ್ರಿಸ್ತನು ನಿಮ್ಮಲ್ಲಿದ್ದರೆ ದೇಹವು ಪಾಪದ ದೆಸೆಯಿಂದ ಸತ್ತದ್ದಾಗಿದ್ದರೂ ಆತ್ಮವು ನೀತಿಯ ದೆಸೆಯಿಂದ ಜೀವಸ್ವರೂಪವಾಗಿದೆ. [11]ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ**

**ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯದೇಹಗಳನ್ನು ಸಹ ಬದುಕಿಸುವನು.**

ಪೌಲನು ಇದುವರೆಗೆ ಪವಿತ್ರಾತ್ಮನಿಗೆ ಅಧೀನರಾಗಿರುವದರ ಮತ್ತು ಶರೀರಭಾವಧೀನರಾಗಿ ಇರುವದರ ನಡುವಿನ ತದ್ವಿರುದ್ಧತೆಯ ವಿಷಯವಾಗಿ ಮಾತಾಡುತ್ತಿದ್ದನು. 9ನೇ ವಚನ ಮೊದಲ್ಗೊಂಡು, ಆತನು ವೈಯಕ್ತಿಕ ಅನ್ವಯಿಸುವಿಕೆಯನ್ನು ಮಾಡುತ್ತಾನೆ. ಆತನು ಮಧ್ಯಮ ಪುರುಷ ("ಅವರು"; 8:8) ದಿಂದ ಪ್ರಥಮ ಪುರುಷ ("ನೀನು"; 8:9)ಕ್ಕೆ ಬದಲಾಯಿಸುತ್ತಾನೆ.

ರೋಮಾ 8:9-11ರಲ್ಲಿರುವ ಒಂದು ಪ್ರಮುಖ ಪದ ಯಾವದೆಂದರೆ "ವಾಸವಾಗಿರುವ (ದಾದರೆ)." 7:17, 20ರಲ್ಲಿ, ಪೌಲನು ತನ್ನಲ್ಲಿ *ಪಾಪ*ವು ನೆಲೆಗೊಂಡಿರುವ ಕುರಿತಾಗಿ ಮಾತಾಡಿದ್ದನು. "ವಾಸವಾಗಿರುವದಾದರೆ" (οἰκέω, *oikeō*) ಎಂಬುದರ ಅರ್ಥವು ಒಂದು ಕ್ಲುಪ್ತ ಭೇಟಿ ಎಂದಲ್ಲ, ಆದರೆ ಅಲ್ಲಿಯೇ "ನಿವಾಸಿಸುವದು" ಎಂದಾಗಿರುತ್ತದೆ. 8:9-11 ರಲ್ಲಿ, ತತ್ಪರಿಣಾಮವಾಗಿ, ಪೌಲನು ಹಳೆಯ ಶರೀರಭಾವಧೀನ ನಿವಾಸಿಯನ್ನು ಒಬ್ಬ ನೂತನ ದೈವಿಕ ನಿವಾಸಿಯೊಂದಿಗೆ ತದ್ವಿರುದ್ಧ ಹೋಲಿಕೆ ಮಾಡುತ್ತಾನೆ.

9ನೇ ವಚನವು ದೇವರು *ಮಾಡಿರುವ* ಕಾರ್ಯವನ್ನು ನೆನಪಿಗೆ ತರುತ್ತದೆ: ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ, ಆತನು ನಮಗೆ ಪವಿತ್ರಾತ್ಮನನ್ನು ವರವಾಗಿ ಕೊಟ್ಟನು. 10ನೇ ವಚನವು ದೇವರು *ಮಾಡುತ್ತಿರುವ* ಕಾರ್ಯಯೊಂದನ್ನು ಪ್ರಸ್ತಾವಿಸುತ್ತದೆ: ಆತನು ನಮಗೆ ಕೊಟ್ಟ ಪವಿತ್ರಾತ್ಮನ ಮೂಲಕವಾಗಿ ಈಗ ನಮಗೆ ಜೀವವನ್ನು ಅನುಗ್ರಹಿಸುತ್ತಿದ್ದಾನೆ. 11ನೇ ವಚನವು ದೇವರು ಮುಂದೆ ಮಾಡುವ*ದಕ್ಕಿರುವ* ಸಂಗತಿಯೊಂದನ್ನು ತಿಳಿಸುತ್ತದೆ: ಒಂದು ದಿನ ಆತನು ನಮ್ಮನ್ನು ಪವಿತ್ರಾತ್ಮನ ಮುಖಾಂತರ ಸತ್ತವರೊಳಗಿಂದ ಎಬ್ಬಿಸುವನು.

**ವಚನ 9.** ಪೌಲನು ಈ ಮುಂಚೆ "ಶರೀರಭಾವಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು" ಎಂದು ಹೇಳಿದ್ದನು (8:8). ಆತನು ಮುಂದುವರೆದು ಹೇಳಿದ್ದೇನಂದರೆ **ನೀವಾದರೋ, ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ ಶರೀರ ಭಾವಾಧೀನರಲ್ಲ, ದೇವರಾತ್ಮನಿಗೆ ಅಧೀನರಾಗಿದ್ದೀರಿ.** ಈ ವ್ಯಾಖ್ಯೆಯೊಳಗೆ ಇರುವ "ನೀವಾದರೋ" ಎಂಬುದು ಒತ್ತಿ ಹೇಳಲ್ಪಟ್ಟದ್ದಾಗಿದೆ.[37] ಅಪೊಸ್ತಲನು ಇಲ್ಲಿ ಹೇಳುತ್ತಿದ್ದದ್ದೇನೆಂದರೆ, "ಶರೀರಭಾವಧೀನರು ದೇವರಿಗೆ ಮೆಚ್ಚಿಕೆಯಾಗಿರಲಾರರು (8:8), ನೀವಾದರೋ, ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ ಶರೀರ ಭಾವಾಧೀನರಲ್ಲ, ದೇವರಾತ್ಮನಿಗೆ ಅಧೀನರಾಗಿದ್ದೀರಿ."

ಇಲ್ಲಿ "ದಾದರೆ" ಎಂದು ಸೇರಿಸಲ್ಪಟ್ಟಿದೆ: ". . . ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ." ಪಂಚಾಶತ್ತಮ ದಿನದಂದು, ಪೇತ್ರನು ತನ್ನ ಶ್ರೋತೃಗಳಿಗೆ, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, *ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ"* (ಅಪೊಸ್ತಲರ ಕೃತ್ಯಗಳು 2:38; ಒತ್ತಿ ಹೇಳಿದ್ದು ನನ್ನದು). ಈ ವಾಕ್ಯಭಾಗದಲ್ಲಿ "ಪವಿತ್ರಾತ್ಮದಾನ" ಎಂಬುದು "ತಂದೆಯ ಅಧಿಕಾರದಡಿಯಲ್ಲಿ ಉನ್ನತಕ್ಕೇರಿಸಲ್ಪಟ್ಟ ಕರ್ತನಿಂದ ಸುರಿಸಲ್ಪಟ್ಟ ಅದೇ ದೇವರಾತ್ಮನನ್ನು" ಸೂಚಿಸುತ್ತದೆ.[38] ಅಪೊಸ್ತಲರ ಕೃತ್ಯಗಳು 5:32 ರಲ್ಲಿ, ಅಪೊಸ್ತಲರು "ದೇವರು ತನಗೆ

ವಿಧೇಯರಾಗಿರುವವರಿಗೆ ದಯಪಾಲಿಸಿರುವ ಪವಿತ್ರಾತ್ಮನ" ಬಗ್ಗೆ ಮಾತಾಡಿದರು. ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವೇಳೆ ಸ್ವೀಕರಿಸಿಕೊಳ್ಳಲ್ಪಡುವ ಈ ಅದ್ಭುತಕಾರ್ಯಗಳಿಲ್ಲದ ವರವು, "ದೇವರ ಆತ್ಮನು ವಾಸವಾಗಿರುವಿಕೆ" ಎಂದು ಕರೆಯಲ್ಪಡುತ್ತದೆ (8:9, 13, 16, 26; 2 ತಿಮೊಥೆ 1:14; ನೋಡಿರಿ 1 ಕೊರಿಂಥ 6:19; ಗಲಾತ್ಯ 4:6, 7; ಎಫೆಸ 1:13, 14).

ಪವಿತ್ರಾತ್ಮನು ಕ್ರೈಸ್ತರೊಳಗೆ *ಹೇಗೆ* "ವಾಸಿಸುವನು"? ಈ ಪ್ರಶ್ನೆಯ ಕುರಿತು ಅನಂತರದಲ್ಲಿ ಹೆಚ್ಚು ವಿವರವಾಗಿ ಚರ್ಚಿಸಲಾಗುವುದು (ನೋಡಿರಿ *ಅನ್ವಯಿಸುವಿಕೆ: ಪವಿತ್ರಾತ್ಮನ ವಾಸಿಸುವಿಕೆ*, ಪುಟಗಳು 93-107). ಹೇಗಿದ್ದರೂ, ಇಲ್ಲಿ ಎರಡು ಅಂಶಗಳನ್ನು ತಿಳಿಸಲೇಬೇಕಾಗಿರುತ್ತದೆ. ಮೊದಲನೆಯದಾಗಿ, ಈಗಾಗಲೇ ತಿಳಿಸಿರುವ ಹಾಗೆ, 8ನೇ ಅಧ್ಯಾಯದಲ್ಲಿನ ಪವಿತ್ರಾತ್ಮನ ನಿವಾಸಿಸುವಿಕೆಯು 7ನೇ ಅಧ್ಯಾಯದಲ್ಲಿನ ಪಾಪದ ನಿವಾಸಿಸುವಿಕೆಗೆ ತದ್ವಿರುದ್ಧವಾದದ್ದು. ಪಾಪವು ಹೇಗೆ ಒಬ್ಬನ ಹೃದಯದಲ್ಲಿ ನಿವಾಸಿಸಬಹುದೋ, ಹಾಗೆಯೇ ದೇವರಾತ್ಮನು ಒಬ್ಬನ ಹೃದಯದಲ್ಲಿ ತನ್ನ ನಿವಾಸವನ್ನು ಮಾಡಿಕೊಳ್ಳಲು ಇಚ್ಛಿಸುತ್ತಾನೆ. ಒಬ್ಬನ ಹೃದಯದಲ್ಲಿ ಪಾಪವು ನೆಲೆಸುವಾಗ, ಅವನ ಜೀವಿತವನ್ನು ಪಾಪವು ನಿಯಂತ್ರಿಸುತ್ತದೆ. ಆದುದರಿಂದ, ಆತನಲ್ಲಿ ಪವಿತ್ರಾತ್ಮನು "ವಾಸಿಸುವಾಗ," ಪವಿತ್ರಾತ್ಮನು ಆತನ ಜೀವಿತವನ್ನು ನಿಯಂತ್ರಿಸತಕ್ಕದ್ದು. ಎರಡನೆಯದಾಗಿ, ರೋಮಾ 8ನೇ ಅಧ್ಯಾಯದಲ್ಲಿ ಪೌಲನ ಮುಖ್ಯ ಒತ್ತು ನಿವಾಸಿಸುವದು *ಹೇಗೆ* ಎಂಬುದರ ಕುರಿತಾಗಿ ಅಲ್ಲ, ಆದರೆ ಒಳಗೆ ನಿವಾಸಿಸುವದರ *ವಾಸ್ತವಾಂಶ*ದ ಬಗ್ಗೆ ಆಗಿರುತ್ತದೆ. ಕ್ರೈಸ್ತನಾಗಿರುವ ಪ್ರತಿಯೊಬ್ಬರಲ್ಲಿಯೂ ಪವಿತ್ರಾತ್ಮನು ವಾಸ ಮಾಡುತ್ತಾನೆ, ಮತ್ತು ಇದು ಆತನ ಜೀವಿತದಲ್ಲಿ ಒಂದು ವ್ಯತ್ಯಾಸವನ್ನುಂಟು ಮಾಡತಕ್ಕದ್ದು!

ಅನೇಕ ಪಂಥೀಯ ಲೇಖಕರು ಮತ್ತು ಬೋಧಕರು ರಕ್ಷಣೆ ಹೊಂದುವದು ಹಾಗೂ ಪವಿತ್ರಾತ್ಮನನ್ನು ಸ್ವೀಕರಿಸಿಕೊಳ್ಳುವದು ಬೇರೆ ಸಂದರ್ಭಗಳಲ್ಲಿ ಸಂಭವಿಸುತ್ತದೆಂದು ಕಲಿಸುತ್ತಾರೆ. (ಗತಕಾಲದಲ್ಲಿ, ಪವಿತ್ರಾತ್ಮನನ್ನು ಸ್ವೀಕರಿಸಿಕೊಳ್ಳುವದನ್ನು "ಕೃಪೆಯ ಎರಡನೆಯ ಕ್ರಿಯೆ" ಎಂದು ಕರೆಯುತ್ತಿದ್ದರು.) ಹೇಗೂ, ಒಬ್ಬನು ತನ್ನ ಗತಕಾಲದ ಪಾಪಗಳಿಂದ ರಕ್ಷಿಸಲ್ಪಡುವ ಅದೇ ಗಳಿಗೆಯಲ್ಲಿ—ಅಂದರೆ, ಒಬ್ಬನು ಬೈಬಲ್‌ನುಸಾರವಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ವೇಳೆಯಲ್ಲಿ—ಪ್ರತಿಯೊಬ್ಬನು ಪವಿತ್ರಾತ್ಮನನ್ನು ಸ್ವೀಕರಿಸಿಕೊಳ್ಳುವನು ಎಂಬದಾಗಿ ಬೈಬಲ್ ಕಲಿಸುತ್ತದೆ (ಅಪೊಸ್ತಲರ ಕೃತ್ಯಗಳು 2:38). Morris ಗಮನಕ್ಕೆ ತರುವದೇನೆಂದರೆ ಪವಿತ್ರಾತ್ಮನನ್ನು ಪಡೆದುಕೊಳ್ಳುವದು ಕೇಲವೇ ಕೆಲವು ಭಾಗ್ಯವಂತರಿಗೋಸ್ಕರ ಮಾತ್ರವೇ ಇರುವಂತದ್ದಲ್ಲ, ಆದರೆ "ಅದು ಒಬ್ಬ ಕ್ರೈಸ್ತನಾಗಿರುವದರ ಒಂದು ಸಹಜವಾದ ಮತ್ತು ಅವಶ್ಯಕವಾದ ವಿಶಿಷ್ಟ ಲಕ್ಷಣವಾಗಿರುತ್ತದೆ."[39] Handley C. G. Moule ಹೀಗೆ ಬರೆದನು, "ನಾವು ಕರ್ತನಾದ ಯೇಸು ಕ್ರಿಸ್ತನಿಂದ ಮುಂದಕ್ಕೆ ಪವಿತ್ರ [ಆತ್ಮ] ನಿಂದ ಆಳಲ್ಪಡುವ ಒಂದು ಎತ್ತರದ ಅಥವಾ ಆಳವಾದ ಪ್ರಾಂತ್ಯಕ್ಕೆ ಸಾಗಿದ್ದೇವೋ" ಎಂಬಂತೆ "ಒಂದು ಕ್ಷಣವೂ" ಯೋಚಿಸಬಾರದು.[40]

ಪೌಲನು ಮುಂದುವರೆದು, **ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ** ಎಂದು ಹೇಳುತ್ತಾನೆ. ನೀವು ಪವಿತ್ರಾತ್ಮನನ್ನು ಹೊಂದಿಲ್ಲವಾದರೆ, ನೀವು ಬೈಬಲ್‌ನುಸಾರವಾಗಿ ದೀಕ್ಷಾಸ್ನಾನ ಮಾಡಿಸಿಕೊಂಡಿಲ್ಲವೆಂದು ಅದರ ಅರ್ಥವಾಗುತ್ತದೆ

(ಅಪೊಸ್ತಲರ ಕೃತ್ಯಗಳು 2:38). ನೀವು ಬೈಬಲ್‌ನುಸಾರವಾಗಿ ದೀಕ್ಷಾಸ್ನಾನ ಮಾಡಿಸಿಕೊಂಡಿಲ್ಲವಾದರೆ, ನೀವು "ಕ್ರಿಸ್ತನಲ್ಲಿ" ಇಲ್ಲದವರಾಗಿದ್ದೀರಿ (ನೋಡಿರಿ 6:3-5). ನೀವು "ಕ್ರಿಸ್ತನಲ್ಲಿ" ಇಲ್ಲವಾದರೆ, ನೀವು "ಕ್ರಿಸ್ತನವನಲ್ಲ." NEB ಯು ಈ ವಿಚಾರವನ್ನು ಹೀಗೆ ವ್ಯಕ್ತಪಡಿಸುತ್ತದೆ: "ಒಬ್ಬ ಮನುಷ್ಯನು ಕ್ರಿಸ್ತನ ಆತ್ಮನನ್ನು ಹೊಂದಿಕೊಂಡಿಲ್ಲವಾದರೆ, ಆತನು ಕ್ರೈಸ್ತನೇ ಅಲ್ಲ." ಇದೊಂದು ಅಕ್ಷರಶಃ ಆನುವಾದವಲ್ಲ, ಆದರೆ "ಕ್ರೈಸ್ತನು" (Χριστιανός, Christianos) ಎಂದರೆ "ಕ್ರಿಸ್ತನಿಗೆ ಸೇರಿದವನು"[41] ಎಂಬ ಅರ್ಥವಾಗುತ್ತದಾದ್ದರಿಂದ ಇದು ವಾಕ್ಯಭಾಗದ ಆಲೋಚನೆಯನ್ನು ವ್ಯಕ್ತಪಡಿಸುತ್ತದೆ. ಪೌಲನ ತೀಕ್ಷ್ಣವಾದ ಪದಗಳನ್ನು ಅಪಾರ್ಥಮಾಡಿಕೊಳ್ಳಕೂಡದು: ನಿಮ್ಮಲ್ಲಿ ಪವಿತ್ರಾತ್ಮನು ಇಲ್ಲವಾದಲ್ಲಿ ನೀವು ಕ್ರಿಸ್ತನಿಗೆ ಸೇರಿದವರಲ್ಲ. Thomas ಹೀಗೆ ಬರೆಯುತ್ತಾನೆ, "ಪವಿತ್ರಾತ್ಮನು ಕ್ರೈಸ್ತನೊಳಗೆ ಯಾವದೇ ಅರ್ಥದಲ್ಲಿ ವಾಸಮಾಡಿದಾಗ್ಯೂ, ಆತನು ಆ ಅರ್ಥದಲ್ಲಿ ಉಪಸ್ಥಿತನಿಲ್ಲದಿದ್ದರೆ, ಆ ವ್ಯಕ್ತಿಯು ನಿಜವಾಗಿಯೂ ಒಬ್ಬ ಕ್ರೈಸ್ತನಲ್ಲ."[42]

ಇದು ರಕ್ಷಣೆ ಹೊಂದುವದು ಹಾಗೂ ಪವಿತ್ರಾತ್ಮನನ್ನು ಸ್ವೀಕರಿಸಿಕೊಳ್ಳುವಿಕೆ ಬೇರೆ ಬೇರೆ ಸಂದರ್ಭಗಳಲ್ಲಿ ಸಂಭವಿಸುತ್ತದೆಂದು ಕಲಿಸುವವರಿಗೆ ಚಿಂತೆಯ ಮೂಲವಾಗಿರುತ್ತದೆ. ಅವರು ಮಿಥ್ಯ ಸಿದ್ಧಾಂತದ ಫಲಿತವಾಗಿ, ಅವರು ತತ್ಪರಿಣಾಮವಾಗಿ ಕಲಿಸುತ್ತಿರುವದೇನೆಂದರೆ, ಒಬ್ಬನು ರಕ್ಷಣೆ ಹೊಂದಿದರೂ ಒಬ್ಬ ಕ್ರೈಸ್ತನಾಗಿ (ಕ್ರಿಸ್ತನಿಗೆ ಸೇರಿದವನು) ಇಲ್ಲದಿರಬಹುದು ಎಂಬದೆ. ಪವಿತ್ರಾತ್ಮನ ವರಕ್ಕಾಗಿ ದೇವರಿಗೆ ಗೋಗರೆಯುವಂತೆ, "ಪವಿತ್ರಾತ್ಮನಿಗೆ ಒಳಗೆ ಬರುವದಕ್ಕಾಗಿ ತಮ್ಮ ಹೃದಯಗಳನ್ನು ತೆರೆಯುವಂತೆ" ಅವರು ತಮ್ಮ ಸದಸ್ಯರನ್ನು ಬೇಡಿಕೊಳ್ಳುತ್ತಾರೆ. ಅವರ ಬರಹಗಳಲ್ಲೆಲ್ಲಾ ಬರಹಗಾರರು ಅಂತಿಮವಾಗಿ "ಪವಿತ್ರಾತ್ಮನನ್ನು ಸ್ವೀಕರಿಸಿಕೊಂಡಾಗ" ತಮಗೆ ಇಂಥಿಂಥ "ಅನುಭವವಾಯಿತೆಂದು" ಅವರು ನಂಬುವ ವಿವರಗಳೇ ತುಂಬಿರುತ್ತವೆ.

ಪವಿತ್ರಾತ್ಮನನ್ನು ಸ್ವೀಕರಿಸುವದರಲ್ಲಿ "ಅನ್ಯಭಾಷೆಗಳನ್ನಾಡುವ" ರೀತಿಯ ಕೆಲವೊಂದು "charismatic" ಕ್ರಿಯೆಗಳನ್ನು ಮಾಡಬೇಕಾಗುತ್ತದೆಂದು ನಂಬುವಂತವರಿಗೆ ಸಹ ರೋಮಾ 8:9ನೇ ವಚನವು ಚಿಂತೆಗೆ ಕಾರಣವಾಗಿರುತ್ತದೆ. ಈ ಮುಂಚೆ ನೀಡಿದ ಉದಾಹರಣೆಯ ಪ್ರಕಾರವೇ, ಅಂತಹ ಉಪದೇಶವು ಮೂಲಭೂತವಾಗಿ ಹೇಳಿಕೊಳ್ಳುವದೇನೆಂದರೆ ಅವರ ಗುಂಪಿನ ಒಬ್ಬ ಸದಸ್ಯನಿಗೆ ಒಂದು "charismatic" ಅನುಭವವಾಗಿಲ್ಲವಾದರೆ, ಅವನು ನಿಜವಾಗಿಯೂ ಯೇಸುವಿಗೆ ಸೇರಿದವನೇ ಅಲ್ಲ ಮತ್ತು ಅವನು ನಿಜವಾಗಿಯೂ ಒಬ್ಬ ಕ್ರೈಸ್ತನೇ ಅಲ್ಲ ಎಂಬದೇ. ಈ fellowship ಗಳಲ್ಲಿ, "ಪ್ರದರ್ಶನ ಮಾಡುವಂತೆ" ("ಅನ್ಯಭಾಷೆಗಳಲ್ಲಿ ಮಾತಾಡುವಂತೆ" ಅಥವಾ ಏನೇ ಇರಬಹುದು) ನಿರಂತರವಾದ, ಪಟ್ಟುಬಿಡದ ಒತ್ತಡವನ್ನು ಹಾಕಲಾಗುತ್ತಿರುತ್ತದೆ.

ರೋಮಾ 8ನೇ ಅಧ್ಯಾಯದಲ್ಲಿ, ಪೌಲನು ಪವಿತ್ರಾತ್ಮನನ್ನು "ದೊರಕಿಸಿಕೊಳ್ಳಿರಿ" ಎಂಬದಾಗಿ ಕ್ರೈಸ್ತರನ್ನು ಬೇಡಿಕೊಳ್ಳುತ್ತಿಲ್ಲ. ಅವರಲ್ಲಿ ಈಗಾಗಲೆ ಪವಿತ್ರಾತ್ಮನು ಇದ್ದಾನೆಂಬುದನ್ನು—ಮತ್ತು ಈ ವಾಸ್ತವಾಂಶವು ಅವರ ಜೀವಿತಗಳ ಮೇಲೆ ಪ್ರಭಾವ ಬೀರತಕ್ಕದ್ದು—ಎಂದು ಆತನು ಅವರಿಗೆ ಜ್ಞಾಪಿಸುತ್ತಿದ್ದಾನೆ.

10ನೇ ವಚನಕ್ಕೆ ಮುಂದುವರೆಯುವ ಮುಂಚೆ, ಪವಿತ್ರಾತ್ಮನ ವಿಷಯವಾಗಿ 9ನೇ ವಚನವು ಹೇಳುವ ಕೆಲವು ಸಂಗತಿಗಳನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

ಮೊದಲನೆಯದಾಗಿ, ಪವಿತ್ರಾತ್ಮನು "ದೇವರ ಆತ್ಮನು" ಎಂಬದಾಗಿ ಮತ್ತು "ಕ್ರಿಸ್ತನ ಆತ್ಮನು" ಎಂಬದಾಗಿ ಸೂಚಿಸಲ್ಪಟ್ಟಿದ್ದಾನೆ. "ದೇವತ್ವ" ದಲ್ಲಿರುವ ವ್ಯಕ್ತಿಗಳ ನಡುವೆ ಸ್ವಲ್ಪಮಟ್ಟಿಗೆ ಭಿನ್ನತೆಯನ್ನು ತೋರಿಸಬೇಕಾಗಿರುತ್ತದೆ (1:20; ಕೊಲೊಸ್ಸೆ 2:9; KJV). ಹೇಗೂ, ಮೂವರು ಸಂಪೂರ್ಣವಾಗಿ ಪ್ರತ್ಯೇಕಿಸಲ್ಪಡಲಾಗದಷ್ಟರ ಮಟ್ಟಿಗೆ ನಿಕಟವಾದ ಸಂಬಂಧ ಹೊಂದಿರುತ್ತಾರೆ. ದೇವತ್ವದ ಒಬ್ಬ ಸದಸ್ಯನು ಏನು ಮಾಡುತ್ತಾನೋ ಅದನ್ನು ಮಿಕ್ಕವರು ಸಹ ಮಾಡುವದಾಗಿ ಹೇಳಲಾಗುತ್ತದೆ. ಅದರ ಫಲಿತವಾಗಿ, ಪವಿತ್ರಾತ್ಮನು ದೇವರಾತ್ಮನು ಮತ್ತು ಅದೇ ವೇಳೆಯಲ್ಲಿ ಕ್ರಿಸ್ತನ ಆತ್ಮನು ಸಹ. ಅಷ್ಟುಮಾತ್ರವಲ್ಲದೆ, ರೋಮಾ 8ರಲ್ಲಿ ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ (8:9) ಮತ್ತು ನಮ್ಮಲ್ಲಿ ಕ್ರಿಸ್ತನನ್ನು ಹೊಂದಿರುವದರ (8:10) ನಡುವೆ ಯಾವದೇ ಭಿನ್ನತೆಯನ್ನು ತೋರಿಸಲಾಗಿರುವದಿಲ್ಲ.

ಎರಡನೆಯದಾಗಿ, 9ನೇ ವಚನವು ನಾವು "ಪವಿತ್ರಾತ್ಮನಲ್ಲಿ" ಇರುವದು ಹಾಗೂ ಪವಿತ್ರಾತ್ಮನು ನಮ್ಮ "ಒಳಗೆ" ವಾಸವಾಗಿರುವದರೆಡರ ಬಗ್ಗೆಯೂ ಮಾತಾಡುತ್ತದೆ. ಈ ಎರಡು ಉಪಮೆಗಳ ಸಂಯೋಗವು ಕ್ರೈಸ್ತನ ಹಾಗೂ ಪವಿತ್ರಾತ್ಮನ ನಡುವೆ ಇರಬೇಕಾದ ಆಪ್ತ ಸಂಬಂಧದ ಬಗ್ಗೆ ಒತ್ತಿಹೇಳುತ್ತದೆ.

**ವಚನ 10.** ಪವಿತ್ರಾತ್ಮನನ್ನು ನಮ್ಮೊಳಗೆ ವಾಸಿಸುವಂತೆ ಮಾಡಿಕೊಳ್ಳುವ ಮೂಲಕ ನಾವು ಏನು ಪ್ರಯೋಜನವನ್ನು ಪಡೆದುಕೊಳ್ಳುತ್ತೇವೆ? 10ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, **ಆದರೆ ಕ್ರಿಸ್ತನು ನಿಮ್ಮಲ್ಲಿದ್ದರೆ.** ಈ ಸಂದರ್ಭದಲ್ಲಿ, "ಲಿದ್ದರೆ" ಎಂಬದರರ್ಥವು "ಆದ್ದರಿಂದ" ಎಂದಾಗುತ್ತದೆ ಮತ್ತು "ಕ್ರಿಸ್ತನು ನಿಮ್ಮಲ್ಲಿ . . ." ಎಂಬುದು "ನಿಮ್ಮಲ್ಲಿ ದೇವರ ಆತ್ಮನು [ಪವಿತ್ರಾತ್ಮನು] ವಾಸವಾಗಿರುವದಾದರೆ" (8:9) ಎಂಬುದನ್ನು ಸೂಚಿಸುತ್ತದೆ. ಕ್ರಿಸ್ತನ ಆತ್ಮನು ನಿಮ್ಮಲ್ಲಿ ಇರುವದ*ರಿಂದ*, **ದೇಹವು ಪಾಪದ ದೆಸೆಯಿಂದ ಸತ್ತದ್ದಾಗಿದ್ದರೂ ಆತ್ಮವು ನೀತಿಯ ದೆಸೆಯಿಂದ ಜೀವಸ್ವರೂಪವಾಗಿದೆ**[43] ಎಂದು ಪೌಲನು ಘೋಷಿಸುತ್ತಾನೆ.

ಇಲ್ಲಿ ಪ್ರಸ್ತಾವಿಸಲಾಗಿರುವ "ದೇಹವು" ಎಂಬುದು 11ನೇ ವಚನದಲ್ಲಿನ "ಮರ್ತ್ಯ" ದೇಹವಾಗಿರುತ್ತದೆ.[44] ನೀವು ಕ್ರೈಸ್ತರಾಗಿದ್ದು ನಿಮ್ಮೊಳಗೆ ಪವಿತ್ರಾತ್ಮನು ವಾಸವಾಗಿದ್ದಾಗ್ಯೂ, ನಿಮ್ಮ ದೇಹವು ಆಗಲೂ ಶಾರೀರಿಕ ಮರಣಕ್ಕೆ ಅಧೀನವಾಗಿರುತ್ತದೆ. ಅದು "[ಆದಾಮನ] ಪಾಪದ ದೆಸೆಯಿಂದ ಸತ್ತದ್ದಾಗಿದ್ದೆ" (ನೋಡಿರಿ 5:15-21; 1 ಕೊರಿಂಥ 15:22). ಅದು ಸತ್ಯವಾದದ್ದಾದರೂ, ನಿಮ್ಮ "ಆತ್ಮವು ನೀತಿಯ ದೆಸೆಯಿಂದ ಜೀವಸ್ವರೂಪವಾಗಿದೆ" (ನೋಡಿರಿ 2 ಕೊರಿಂಥ 4:16)—ಯಾಕೆಂದರೆ ನೀವು ಯೇಸುವಿನ ರಕ್ತದ ಮೂಲಕವಾಗಿ ನೀತಿವಂತರೆಂದು ನಿರ್ಣಯಿಸಲ್ಪಟ್ಟಿರುವಿರಿ.[45] 10ನೇ ವಚನದ ಬಗ್ಗೆ ಯೋಚಿಸುವದಕ್ಕೆ ಒಂದು ಸರಳವಾದ ದಾರಿ ಇಲ್ಲಿದೆ: ಆದಾಮನ ಕಾರಣದಿಂದ ನಿಮ್ಮ ದೇಹವು ಸತ್ತದ್ದಾಗಿದೆ, ಆದರೆ ಕ್ರಿಸ್ತನ ಕಾರಣದಿಂದ ನಿಮ್ಮ ಆತ್ಮವು ಜೀವಂತವಾಗಿರುತ್ತದೆ!

**ವಚನ 11.** ಹಾಗಾದರೆ ಇದರರ್ಥವು ಪವಿತ್ರಾತ್ಮನ ಸೇವೆ ಕೇವಲ ಆತ್ಮಕ್ಕೆ ಮಾತ್ರವೇ ಸಿಮೀತವಾಗಿದ್ದು ನಮ್ಮ ದೇಹಗಳ ಮೇಲೆ ಯಾವದೇ ಪರಿಣಾಮವನ್ನು ಹೊಂದಿರುವದಿಲ್ಲ ಎಂದಾಗುತ್ತದೋ? 11ನೇ ವಚನವು ಇದಕ್ಕೆ "ಇಲ್ಲ" ಎಂದು ಉತ್ತರಿಸುತ್ತದೆ. ಈ ವಚನವು ಈ ವಿಭಾಗದ ಮೂಲಭೂತ ಆಧಾರವಾಕ್ಯದೊಂದಿಗೆ ಆರಂಭಗೊಳ್ಳುತ್ತದೆ: **ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ**

[ದರಿಂದ]. “ದೇವರ ಆತ್ಮನು” ಎಂಬುದನ್ನೇ ಇಲ್ಲಿ ದೀರ್ಘವಾದ ಮಾತುಗಳಲ್ಲಿ “ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು” ಎಂದು ಹೇಳಲಾಗಿರುತ್ತದೆ. ಇಲ್ಲಿ ಯೇಸುವನ್ನು ಜೀವಿತನಾಗಿ ಎಬ್ಬಿಸಿದ ದೇವರು ಆತನೇ ಎಂಬ ವಾಸ್ತವಾಂಶದ ಮೇಲೆ ಒತ್ತು ಕೊಡಲಾಗಿರುತ್ತದೆ. ಆ ದೇವರ ಆತ್ಮನು ನಿಮ್ಮಲ್ಲಿ ವಾಸಿಸುತ್ತಾನಾದ್ದ*ರಿಂದ*, **ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು . . . ನಿಮ್ಮ ಮರ್ತ್ಯದೇಹಗಳನ್ನು ಸಹ ಬದುಕಿಸುವನು.**

ದೇಹದ ಪುನರುತ್ಥಾನದ ವಿಷಯವಾಗಿ ಹೊಸ ಒಡಂಬಡಿಕೆಯು ಬಹಳಷ್ಟನ್ನು ಹೇಳುವದಾಗಿರುತ್ತದೆ, ಮತ್ತು ಸಾಮಾನ್ಯವಾಗಿ ನಮ್ಮ ಪುನರುತ್ಥಾನವು ಯೇಸುವಿನ ಪುನರುತ್ಥಾನದೊಂದಿಗೆ ಜೋಡಿಲ್ಪಟ್ಟಿರುತ್ತದೆ. ಉದಾಹರಣೆಗೆ, ಪೌಲನು ಫಿಲಿಪ್ಪಿ 3:20, 21ರಲ್ಲಿ, “ಕರ್ತನಾದ ಯೇಸು ಕ್ರಿಸ್ತನು . . . ರಕ್ಷಕನಾಗಿ ಬರುವದನ್ನು ಎದುರುನೋಡುತ್ತಾ ಇದ್ದೇವೆ . . . ದೀನಾವಸ್ಥೆಯುಳ್ಳ ನಮ್ಮ ದೇಹವನ್ನು ರೂಪಾಂತರಪಡಿಸಿ ಪ್ರಭಾವವುಳ್ಳ ತನ್ನ ದೇಹದ ಸಾರೂಪ್ಯವಾಗುವಂತೆ ಮಾಡುವನು” ಎಂದು ಹೇಳುತ್ತಾನೆ. ದೇಹದ ಪುನರುತ್ಥಾನ ಕುರಿತಾದ ಅತ್ಯಂಥ ದೀರ್ಘವಾದ ಚರ್ಚೆಯು 1 ಕೊರಿಂಥ 15ನೇ ಅಧ್ಯಾಯದಲ್ಲಿರುತ್ತದೆ. ಈ ಅಧ್ಯಾಯದಲ್ಲಿನ ಕೆಲವೊಂದು ಪ್ರಮುಖ ವಚನಗಳು ಈ ಕೆಳಗಿನಂತಿವೆ:

> ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆಹೋದವರಲ್ಲಿ ಪ್ರಥಮಫಲವಾದನು (1 ಕೊರಿಂಥ 15:20).

> ಸತ್ತವರು ಹೇಗೆ ಎಬ್ಬಿಸಲ್ಪಡುತ್ತಾರೆ, ಎಂಥ ದೇಹದಿಂದ ಬರುತ್ತಾರೆ ಎಂದು ಒಬ್ಬನು ಕೇಳಾನು. ಮೂಢನು ನೀನು; ನೀನು ಬಿತ್ತುವ ಬೀಜವು ಸಾಯದಿದ್ದರೆ, ಜೀವಿತವಾಗುವದಿಲ್ಲ, ನೋಡು; ಒಂದು ವೇಳೆ ಗೋದಿಯನ್ನಾಗಲಿ ಬೇರೆ ಯಾವದೋ ಬೀಜವನ್ನಾಗಲಿ ಬಿತ್ತುವಾಗ ಬರೀ ಕಾಳನ್ನೇ ಹೊರತು ಮುಂದೆ ಆಗಬೇಕಾದ ದೇಹವನ್ನು ಬಿತ್ತುವದಿಲ್ಲ. ಆದರೆ ದೇವರು ತನ್ನ ಇಷ್ಟದಂತೆ ಅದಕ್ಕೆ ದೇಹವನ್ನು ಕೊಡುತ್ತಾನೆ. ಒಂದೊಂದು ಬೀಜಕ್ಕೆ ಅದರದರ ದೇಹವನ್ನು ಕೊಡುತ್ತಾನೆ (1 ಕೊರಿಂಥ 15:35-38).

> ಸತ್ತವರಿಗಾಗುವ ಪುನರುತ್ಥಾನವು ಅದೇ ಪ್ರಕಾರವಾಗಿರುವದು. ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾವಸ್ಥೆಯಲ್ಲಿ ಎದ್ದುಬರುವದು; ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದುಬರುವದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಬಲಾವಸ್ಥೆಯಲ್ಲಿ ಎದ್ದುಬರುವದು; ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮೀಕದೇಹವಾಗಿ ಎದ್ದುಬರುವದು. ಪ್ರಾಕೃತದೇಹವಿರುವದಾದರೆ ಆತ್ಮೀಕ ದೇಹವೂ ಇರುವದು (1 ಕೊರಿಂಥ 15:42-44).

ಈಗ ನಾವು ಪುನಃ ರೋಮಾ 8:11 ರಲ್ಲಿನ ಅದ್ಭುತವಾದ ವಾಗ್ದಾನಕ್ಕೆ ಬರೋಣ: “ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು . . . ನಿಮ್ಮ ಮರ್ತ್ಯದೇಹಗಳನ್ನು ಸಹ ಬದುಕಿಸುವನು”! John R. W. Stott ವ್ಯಾಖ್ಯೆ ನೀಡುತ್ತಾ “ಪುನರುತ್ಥಾನದಲ್ಲಿ ರೂಪಾಂತರಗೊಳ್ಳುವಿಕೆ, ಎಬ್ಬಿಸಲ್ಪಡುವಿಕೆ ಮತ್ತು ನಮ್ಮ ದೇಹವನ್ನು ನಮ್ಮ ವ್ಯಕ್ತಿತ್ವದ ಒಂದು ನೂತನ ಹಾಗೂ ಪ್ರಭಾವವುಳ್ಳ ವಾಹನವಾಗಿ ಮಾರ್ಪಡಿಸುವದು, ಮತ್ತು ಅದು ಎಲ್ಲಾ ದೌರ್ಬಲ್ಯ, ರೋಗ, ನೋವು, ನಶಿಸುವಿಕೆ ಹಾಗೂ ಮರಣಗಳಿಂದ ವಿಮೋಚನೆಗೊಳ್ಳುವುದು ಸಹ ಸೇರಿರುತ್ತದೆ”[46] ಎಂದು ಹೇಳುತ್ತಾನೆ.

ಈ ಸಂದರ್ಭದಲ್ಲಿ ಎರಡು ವ್ಯಾಖ್ಯೆಗಳು ಕ್ರಮದಲ್ಲಿರುತ್ತವೆ. ಮೊದಲನೆಯದು, ಪುನರುತ್ಥಾನದ ವೇಳೆಯಲ್ಲಿ, ದೇವರು ಕೇವಲ ನಮ್ಮ ಆತ್ಮಗಳಿಗೆ ನಿವಾಸವಾಗುವಂತೆ *ಯಾವದೋ* ದೇಹಗಳನ್ನು ಉಂಟುಮಾಡುವದಿಲ್ಲ. ಬದಲಾಗಿ, ಆತನು ನಮ್ಮ ಮರ್ತ್ಯ ದೇಹಗಳನ್ನು "ಬದುಕಿಸುವನು." ಮಣ್ಣಿಗೆ ಸೇರೆ ಮಣ್ಣಾಗುವ ಮರ್ತ್ಯ ದೇಹ ಮತ್ತು ಜೀವಿತವಾಗಿ ಎಬ್ಬಿಸಲ್ಪಡುವ ಅಮರ್ತ್ಯ (ಅಮರ) ದೇಹಗಳ ನಡುವೆ ಭಿನ್ನವಾದ ಸಂಬಂಧವಿರುತ್ತದೆ. ಒಂದು *ನಿರಂತರತೆಯು* ಇಲ್ಲಿ ಸೂಚಿಸಲ್ಪಟ್ಟಿರುತ್ತದೆ. ನಮ್ಮ ಪುನರುತ್ಥಾನದ ದೇಹಗಳಲ್ಲಿ, ನಾವು ಆಗಲೂ ನಾವೇ ಆಗಿರುತ್ತೇವೆ.

ಎರಡನೆಯದಾಗಿ, ದೇವರು ನಮ್ಮ ಮರ್ತ್ಯದೇಹಗಳನ್ನು ಬದುಕಿಸುವನು ಎಂಬದಾಗಿ ಪೌಲನು ಹೇಳಿದಾಗ, "ಬದುಕಿಸುವನು" ಎಂಬುದು ಕೇವಲ ಸತ್ತವರೊಳಗಿಂದ ಎಬ್ಬಿಸಲ್ಪಡುವದಕ್ಕಿಂತಲೂ ಹೆಚ್ಚಿನ ಅರ್ಥವನ್ನು ಹೊಂದಿರುತ್ತದೆ. ಕ್ರಿಸ್ತನ ಎರಡನೆಯ ಬರೋಣದ ವೇಳೆಯಲ್ಲಿ ಒಳ್ಳೆಯವರ ಹಾಗೂ ಕೆಟ್ಟವರ ದೇಹಗಳೆರಡೂ ಸಮಾಧಿಗಳೊಳಗಿಂದ ಎದ್ದುಬರುವವು (ಯೋಹಾನ 5:28, 29). ರೋಮಾ 8:11ರಲ್ಲಿ, "ಬದುಕಿಸುವನು" ಎಂಬುದು ಸಮೃದ್ಧಿಯಾದ "ಜೀವ"ವನ್ನು ಸೂಚಿಸುತ್ತದೆ: ದೇವರ ಸನ್ನಿಧಿಯಲ್ಲಿ ಇರುವದು. ನಂಬಿಗಸ್ತರಿಗೆ ದೇವರ ಸನ್ನಿಧಿಯಲ್ಲಿ ಇರುವದಕ್ಕೆ ಯೋಗ್ಯವಾದ ದೇಹಗಳು—ಆತನ ಪ್ರಭಾವವುಳ್ಳ ಸನ್ನಿಧಿಯಲ್ಲಿ ಶಾಶ್ವತವಾಗಿ ಜೀವಿಸಬಲ್ಲ, ಮತ್ತು ಜೀವಿಸುವಂತಹ ದೇಹಗಳು—ಕೊಡಲ್ಪಡುವವು. ನಮ್ಮ "ಮರ್ತ್ಯದೇಹಗಳು" ಹೀಗೆ "ಅಮರ್ತ್ಯಗೊಳಿಸಲ್ಪಡುವವು."[47]

ಇದೆಲ್ಲವೂ ಹೇಗೆ ಸಂಭವಿಸುವದು? ಈ ರೂಪಾಂರಗೊಳ್ಳುವಿಕೆಯು **ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ** ಇದು ಸಂಭವಿಸುವದು ಎಂದು ಪೌಲನು ಹೇಳುತ್ತಾನೆ. ಯಾವದೋ ರೀತಿಯಲ್ಲಿ, ದೇಹದ ಪುನರುತ್ಥಾನವು ನಮ್ಮೊಳಗೆ ವಾಸಿಸುವಂಥ ಪವಿತ್ರಾತ್ಮನೊಂದಿಗೆ ಸಂಬಂಧ ಹೊಂದಿರುತ್ತದೆ. ಅನೇಕ ಸಂದರ್ಭಗಳಲ್ಲಿ ಇರುವ ಪ್ರಕಾರವೇ, ಇಲ್ಲಿಯೂ ಪೌಲನು ನಮ್ಮ ಆಸಕ್ತಿಯನ್ನು ಕೆರಳಿಸುವದಕ್ಕೆ ಸಾಕಾಗುವಷ್ಟನ್ನೇ ನಮಗೆ ತಿಳಿಸಿರುತ್ತಾನೆ ಹೊರತು ನಮ್ಮ ಕೌತುಕವನ್ನು ತೃಪ್ತಿಪಡಿಸುವಷ್ಟರ ಮಟ್ಟಿಗೆ ತಿಳಿಯಪಡಿಸಿರುವದಿಲ್ಲ.

"ಮೂಲಕ" ಎಂಬುದು διά (*dia*) ಎಂಬ ಉಪಸರ್ಗದಿಂದ ಬಂದದ್ದಾಗಿದೆ. ದ್ವಿತಿಯಾ ವಿಭಕ್ತಿ ಬರುತ್ತದೆ ನಂತರದಲ್ಲಿ ಬರುವಾಗ,[48] *dia*ದ ಅರ್ಥವು "ನಿಮಿತ್ತದಿಂದ" ಅಥವಾ "ಪರಿಗಣನೆಯ ಮೇಲೆ" ಎಂದಾಗುತ್ತದೆ. ಕೆಲವು ಪ್ರಾಚೀನ ಹಸ್ತಪ್ರತಿಗಳಲ್ಲಿ, "ನಿಮ್ಮಲ್ಲಿ ವಾಸಿಸುವ ಆತನ ಆತ್ಮನು" ಎಂಬುದು ದ್ವಿತಿಯಾ ವಿಭಕ್ತಿ ರೂಪದಲ್ಲಿ ಇರುತ್ತದಾದ್ದರಿಂದ, 2 ಕೊರಿಂಥ 5 ರಲ್ಲಿ ಪೌಲನು ಹೇಳಿದ ಸಂಗತಿಯನ್ನೇ ರೋಮಾ 8:11 ಅಂತ್ಯಭಾಗವು ಸಹ ಹೇಳುತ್ತಿರಬಹುದಾಗಿದೆ. ಅಲ್ಲಿ, ಪೌಲನು "ಪರಲೋಕದಿಂದ ದೊರಕುವ ನಮ್ಮ ನಿವಾಸವನ್ನು . . . ಧರಿಸಿಕೊಳ್ಳಬೇಕೆಂದು" ತನಗಿರುವ ತೀವ್ರ ಬಯಕೆಯನ್ನು (2 ಕೊರಿಂಥ 5:2) ಕುರಿತು ಚರ್ಚಿಸುತ್ತಾ, ಆತನು ಹೀಗೆ ಹೇಳಿದನು "ಆ ಸ್ಥಿತಿಗಾಗಿ ನಮ್ಮನ್ನು ಸಿದ್ಧಮಾಡಿರುವವನು ದೇವರೇ; ಆತನು ಪವಿತ್ರಾತ್ಮನನ್ನು ಸಂಚಕಾರವಾಗಿ ಅನುಗ್ರಹಿಸಿದ್ದಾನೆ" (2 ಕೊರಿಂಥ 5:5). ನಮ್ಮೊಳಗೆ ವಾಸವಾಗಿರುವ ಪವಿತ್ರಾತ್ಮನು ನಮ್ಮ ಪುನರುತ್ಥಾನಕ್ಕೆ ಒಂದು *ಖಾತರಿ* (ಗ್ಯಾರಂಟಿ) ಆಗಿದ್ದಾನೆಂಬದಾಗಿ ರೋಮಾ 8:11ನೇ

ವಚನವು ಹೇಳುತ್ತಿರ*ಬಹುದಾಗಿದೆ.*

ಇತರ ಪ್ರಾಚೀನ ಹಸ್ತಪ್ರತಿಗಳಲ್ಲಿ, *dia*ದ ಬಳಿಕ ಸಂಬಂಧಸೂಚಕ ವಿಭಕ್ತಿ ಬರುವ ಮೂಲಕ, ಅದರರ್ಥವು "ಮೂಲಕ" ಅಥವಾ "ಅದರ ಮುಖಾಂತರವಾಗಿ" ಎಂದಾಗುವಂತೆ ಮಾಡುತ್ತದೆ. ಈ ವಿಧವಾದ ವಾಚನವನ್ನು ಬಹುಪಾಲು ಅನುವಾದಕರು ಇಷ್ಟಪಡುತ್ತಾರೆ ಮತ್ತು ನಮ್ಮ ದೇಹದ ಪುನರುತ್ಥಾನದಲ್ಲಿ ಪವಿತ್ರಾತ್ಮನು ಸಕ್ರಿಯನಾಗಿ ಭಾಗಿಯಾಗುವವನು ಎಂಬುದನ್ನು ಸೂಚಿಸುವವರಾಗಿರುವರು. J. W. McGarvey ಹೀಗೆ ವಿವರಿಸುತ್ತಾನೆ, "ದೇವರು ಅದೇ ಮಧ್ಯವರ್ತಿಯನ್ನು [ಯೇಸುವನ್ನು ಸತ್ತವರೊಳಗಿಂದ ಎಬ್ಬಿಸುವದರಲ್ಲಿ ಉಪಯೋಗಿಸಿದಂತಹ] ಕೆಲಸಕ್ಕೆ ನೇಮಿಸುವದಾದರೆ, ನಾವು ಅದೇ ಫಲಿತವನ್ನು ಎದುರುನೋಡಬಹುದು."[49]

ಪುನರುತ್ಥಾನದಲ್ಲಿ ಪವಿತ್ರಾತ್ಮನಿಗೆ ಇರುವ ಕರಾರುವಾಕ್ಕ ಪಾತ್ರದ ವಿಷಯವಾಗಿ ಹೀಗೆಯೇ ಎಂದು ಹಠಹಿಡಿಯುವದಕ್ಕೆ ಸಾಧ್ಯವಿಲ್ಲ.[50] ನಮ್ಮೊಳಗೆ ವಾಸವಾಗಿರುವ ಆತನ ಪ್ರಸನ್ನತೆಯು ಮುಂದೆ ನಾವು ಜೀವಿತರಾಗಿ ಎಬ್ಬಿಸಲ್ಪಡುವೆವು ಎಂಬುದಕ್ಕೆ ಭರವಸೆಯನ್ನು ಒದಗಿಸುತ್ತದೆ ಎಂದಬದನ್ನು ತಿಳಿದರೆ ಸಾಕಾಗಿರುತ್ತದೆ!

## ಪವಿತ್ರಾತ್ಮಾನುಸಾರ ನಡೆಯುವ ಹಂಗಿನಲ್ಲಿದ್ದೇವೆ (8:12, 13)

**[12]ಹೀಗಿರಲಾಗಿ ಸಹೋದರರೇ, ನಾವು ಹಂಗಿನಲ್ಲಿದ್ದೇವೆ; ಆದರೆ [ಪವಿತ್ರಾತ್ಮಾನುಸಾರ ನಡೆಯುವ ಹಂಗಿನಲ್ಲಿದ್ದೇವೆಯೇ ಹೊರತು] ಶರೀರಭಾವವನ್ನು ಅನುಸರಿಸಿ ಬದುಕಬೇಕೆಂಬ ಹಂಗಿನಲ್ಲಿಲ್ಲ. [13]ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ; ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ.**

**ವಚನ 12.** ಪೌಲನು ಶರೀರಭಾವ ಹಾಗೂ ಪವಿತ್ರಾತ್ಮನ ನಡುವೆ ಭಿನ್ನತೆಯನ್ನು ತೋರಿಸುವದು 12 ಮತ್ತು 13 ವಚನಗಳಲ್ಲಿ ಮುಕ್ತಾಯಗೊಳ್ಳುತ್ತದೆ. ಈ ವಚನಗಳು ಹಂಗುಗಳ ಬಗ್ಗೆ—ಒಂದು ಹೇಳಲ್ಪಟ್ಟಿದೆ ಮತ್ತು ಇನ್ನೊಂದರ ಭಾವಾರ್ಥವು ಇರುತ್ತದೆ—ಮತ್ತು ಪವಿತ್ರಾತ್ಮನಿಗೆ ನಮಗಿರುವ ಹಂಗನ್ನು ತೀರಿಸುವ ಬಗ್ಗೆ ಮಾತಾಡುತ್ತವೆ.

ವಚನ 12 ಹೀಗೆ ಆರಂಭಗೊಳ್ಳುತ್ತದೆ **ಹೀಗಿರಲಾಗಿ ಸಹೋದರರೇ**. ತಾನು ಮುಂದಿಟ್ಟ ಸತ್ಯಗಳ ವಿಷಯವಾಗಿ ಅತ್ಯಂಥ ನಿರ್ದಿಷ್ಟವಾದ ಅನ್ವಯಿಸುವಿಕೆಯನ್ನು ಮಾಡುವದಕ್ಕೆ ಪೌಲನು ಈಗ ಸಿದ್ಧನಾಗಿದ್ದನು. ಆತನು ತನ್ನ ವಾಚಕರನ್ನು "ಸಹೋದರರೇ" ಎಂದು ಸಂಬೋಧಿಸುತ್ತಾನೆ, ಅದೊಂದು ಮಮತೆ ಮತ್ತು ಕಾಳಜಿಯಿಂದ ಕೂಡಿದ ಪದವಾಗಿರುತ್ತದೆ. ಅದಾದ ಬಳಿಕ, ಆತನು **ನಾವು ಹಂಗಿನಲ್ಲಿದ್ದೇವೆ** ಎಂದು ಹೇಳಿದನು. "ಹಂಗಿನಲ್ಲಿದ್ದೇವೆ" ಎಂಬುದು ὀφειλέτης (*opheiletēs*) ಎಂಬ ಪದದಿಂದ ಬಂದಿರುತ್ತದೆ, ಅದು ಸುವಾರ್ತೆಯನ್ನು ಸಾರುವದಕ್ಕೆ ತನಗಿರುವ ಜವಾಬ್ದಾರಿಯ ಕುರಿತು ಮಾತಾಡುತ್ತಾ 1:14ರಲ್ಲಿ ಪೌಲನು ಉಪಯೋಗಿಸಿದ ಪದವಾಗಿರುತ್ತದೆ. ಈ ಪದವನ್ನು "ಸಾಲಗಾರನು"[51] ಎಂಬದಾಗಿ ಸಹ ಅನುವಾದಿಸಬಹುದು. 12ನೇ ವಚನದಲ್ಲಿ, ಹಲವಾರು ತರ್ಜುಮೆಗಳಲ್ಲಿ "ನಾವು ಸಾಲಗಾರರು" ಎಂದಿರುತ್ತದೆ (KJV; NKJV; ASV; RSV; NRSV; ESV; ನೋಡಿರಿ McCord). "ಹಂಗಿನಲ್ಲಿದ್ದೇವೆ" ಎಂಬುದಕ್ಕಿಂತಲೂ "ಸಾಲಗಾರರು" ಎಂಬುದು

ಹೆಚ್ಚು ಪ್ರಭಾವಯುಕ್ತವಾಗಿರುತ್ತದೆ.

ನಾವು ಯಾರಿಗೆ (ಅಥವಾ ಏನು) ಸಾಲದಲ್ಲಿದ್ದೇವೆ? ಪೌಲನು ಮೊದಲು ನಮಗೆ ಯಾವ ಸಾಲ ಇಲ್ಲವೆಂಬುದರ ಬಗ್ಗೆ ಉಲ್ಲೇಖಿಸುತ್ತಾನೆ: **ಶರೀರಭಾವವನ್ನು ಅನುಸರಿಸಿ ಬದುಕಬೇಕೆಂಬ ಹಂಗಿನಲ್ಲಿಲ್ಲ.** "ನಾವು ಕ್ರೈಸ್ತರಾಗುವದಕ್ಕೆ ಮುಂಚೆ, ನಾವು ಪಾಪದ ಸ್ವಾಧೀನದಲ್ಲಿರುವದಕ್ಕೆ" ಮಾರಲ್ಪಟ್ಟಿದ್ದೆವು (7:14) ಮತ್ತು ಅದು ಹೇಳಿದಂತೆ ನಡೆಯುವ ಹಂಗಿನಲ್ಲಿದ್ದೆವು. ಹೇಗೂ, ನಾವು ದೀಕ್ಷಾಸ್ನಾನ ಮಾಡಿಸಿಕೊಂಡು ದೇವರ ಕುಟುಂಬದ ಅಂಗವಾದೆವೋ, ಆಗ ದೇವರು ನಮ್ಮೊಳಗೆ ವಾಸಿಸುವದಕ್ಕಾಗಿ ತನ್ನ ಆತ್ಮನನ್ನು ಕಳುಹಿಸಿದನು. ಆದುದರಿಂದ, ಇನ್ನು ಮೇಲೆ ಪಾಪವು ನಿರ್ದೇಶಿಸುವ ಪ್ರಕಾರ ನಡೆಯುವ ನಿರ್ಬಂಧದಲ್ಲಿರುವದಿಲ್ಲ! Richard Rogers ಇದನ್ನು ಈ ವಿಧದಲ್ಲಿ ಹೇಳುತ್ತಾನೆ:

> . . . ಶರೀರಭಾವವು ನಮ್ಮ ಮೇಲೆ ಹಕ್ಕೊತ್ತಾಯಿಸುವದಕ್ಕೆ ಬರುವಾಗ, ನಾವು ಶರೀರಭಾವಕ್ಕೆ ಹೀಗೆ ಹೇಳಬಹುದು, "ನಾನು ನಿನಗೆ ತೀರಿಸಬೇಕಾದ ಯಾವ ಋಣವೂ ನನ್ನ ಮೇಲಿಲ್ಲ. ನಾನು ನಿನಗೆ ಸಾಲಗಾರನಲ್ಲ. ನಿನ್ನಿಂದ ನಾನು ಯಾವ ಪ್ರಯೋಜನವನ್ನೂ ಪಡೆದುಕೊಳ್ಳುವವನಲ್ಲ. ನೀನು ನನಗೆ ಒಳ್ಳೆಯದ್ದೇನನ್ನೂ ಮಾಡಿಲ್ಲ. ನೀನು ನನ್ನ ಜೀವಿತದೊಳಗೆ ಯಾವದೇ ಹಿತವನ್ನು ಉಂಟುಮಾಡಿಲ್ಲ. ನಾನು ನಿನಗೆ ಒಂದು ವಿಷಯದಲ್ಲಿಯೂ ಋಣಸ್ಥನಲ್ಲ."[52]

12ನೇ ವಚನವನ್ನು ವ್ಯಾಖ್ಯಾನಿಸುವ ವೇಳೆಯಲ್ಲಿ Eugene Peterson ಅದಕ್ಕೊಂದು ಹಾಸ್ಯದ ಸ್ಪರ್ಶವನ್ನು ಕೊಡುತ್ತಾನೆ: "ಈ ಹಳೆಯ ಸ್ವತಃ ನೀವೇ ಮಾಡಿರಿ ಜೀವಿತದಲ್ಲಿ ನಿನಗೆ ನಾವು ಪಡಿಗಾಸಿನಷ್ಟು ಸಹ ಸಾಲಗಾರರಲ್ಲವೆಂದು ನಿನಗೆ ಕಾಣಿಸದೋ. ಅದರಲ್ಲಿ ನಮಗೋಸ್ಕರ ಏನೂ ಇಲ್ಲ, ಏನೇನೂ ಇಲ್ಲ. ಅದಕ್ಕೊಂದು ಗೌರವಯುತವಾದ ಸಮಾಧಿ ಮಾಡಿ ನಿಮ್ಮ ಹೊಸ ಜೀವತದಲ್ಲಿ ಮುಂದುವರೆಯುವದೇ ಅತ್ಯುತ್ತಮವಾಗಿರುತ್ತದೆ" (MSG).

ಸಭೆಯ ಕೆಲವು ಸದಸ್ಯರು ತಾವು ಶರೀರಭಾವಕ್ಕೆ ಸಾಲಗಾರರು ಎಂದು, ಅವರ ಶಾರೀರಿಕ ಅಭಿಲಾಷೆಗಳ ನಿರ್ಬಂಧದಲ್ಲಿದ್ದಾರೆ ಎಂಬದಾಗಿ ಯೋಚಿಸುತ್ತಾರೆ. ಅವರು ಪಾಪ ಮಾಡುವಾಗ, ಕೆಲವು ಸಾರಿ ಅವರು ಹೀಗೆ ಹೇಳುತ್ತಾರೆ, "ಅದು ನನ್ನ ನಿಯಂತ್ರಣವನ್ನು ಮೀರಿಹೋಗಿತ್ತು." ವಿಷಯವು ಆ ರೀತಿಯಲ್ಲಿರುವದಿಲ್ಲ; ನಮಗೆ ದೇವರ ಆತ್ಮನು ಕೊಡಲ್ಪಟ್ಟಾಗ ಆ ಸ್ಥಿತಿಯು ಬದಲಾಗಿರುತ್ತದೆಂದು ಪೌಲನು ಹೇಳುತ್ತಾನೆ.

ನಾವು ಶರೀರಭಾವದ ಹಂಗಿನಲ್ಲಿಲ್ಲ ಎಂದಾದರೆ, ಯಾವುದಕ್ಕೆ (ಅಥವಾ ಯಾರಿಗೆ) ನಾವು ಹಂಗಿನಲ್ಲಿದ್ದೇವೆ? ಪೌಲನು ಈ ವಾಕ್ಯವನ್ನು ಪೂರ್ತಿಗೊಳಿಸಲಿಲ್ಲ; ಆತನು ಮುಂದಿನ ಆಲೋಚನೆಗೆ ವೇಗವಾಗಿ ಸಾಗುತ್ತಾನೆ. ಹೇಗೂ, ಈ ವಾಕ್ಯವು ಈ ವಿಧವಾಗಿ ಪೂರ್ತಿಗೊಳಿಸಲ್ಪಡತಕ್ಕದ್ದೆಂಬುದು ಸ್ಪಷ್ಟವಾಗಿ ತೋರುತ್ತದೆ: "ಆದರೆ ನಾವು ಪವಿತ್ರಾತ್ಮನ, ಪವಿತ್ರಾತ್ಮನುಸಾರ [ನಡೆಯುವ ಹಂಗಿನಲ್ಲಿದ್ದೇವೆ]." ನಾವು ಪವಿತ್ರಾತ್ಮನಿಗೆ ಸಾಲಗಾರರಾಗಿದ್ದೇವೆ.

**ವಚನ 13.** ನಾವು ಪವಿತ್ರಾತ್ಮಾನುಸಾರ ಬದುಕಬೇಕೆಂಬ ನಮ್ಮ ಸಾಲವನ್ನು ತೀರಿಸುವದಕ್ಕಾಗಿ ಶ್ರಮಿಸುತ್ತೇವೋ ಅಥವಾ ಇಲ್ಲವೋ ಎಂಬುದರಿಂದ ಏನಾದರೂ

ವ್ಯತ್ಯಾಸವುಂಟಾಗುತ್ತದೋ? ಖಂಡಿತವಾಗಿಯೂ ಉಂಟಾಗುತ್ತದೆ! ಪೌಲನು ಮೊದಲು ಉತ್ತರದ ಋಣಾತ್ಮಕ ಬದಿಯ ಬಗ್ಗೆ ಮಾತಾಡಿದನು: **ನೀವು ಶರೀರಭಾವವನ್ನು ಅನುಸರಿಸಿ ಬದುಕಿದರೆ ಸಾಯುವದು ನಿಶ್ಚಯ.** "ಶರೀರಭಾವವನ್ನು ಅನುಸರಿಸಿ ಬದುಕಿದರೆ" ಎಂಬುದರ ಅರ್ಥವೇನು? ಅದರರ್ಥವು "ಒಬ್ಬನು ಶರೀರಭಾವದಿಂದ ಕಟ್ಟಲ್ಪಟ್ಟಂಥ ದಿಗಂತದಲ್ಲಿಯೇ, ಅಂದರೆ ಕೇವಲ ಈ ಇಹದ ಜೀವಿತದ ಚಿಂತೆಗಳಲ್ಲಿಯೇ ಜೀವಿಸುವದು."[53] ಬಿತ್ತುವವನ ಸಾಮ್ಯದಲ್ಲಿ, ಯೇಸು "ಪ್ರಪಂಚದ ಚಿಂತೆಗಳೂ ಐಶ್ವರ್ಯದಿಂದುಂಟಾಗುವ ಮೋಸವೂ ಇತರ ವಿಷಯಗಳ ಮೇಲಣ ಆಶೆಗಳೂ ಒಳಗೆ ಸೇರಿ" ವಾಕ್ಯವನ್ನು ಅಡಗಿಸಿಬಿಡುವಂತೆ ಅನುಮತಿಸುವವರ ಬಗ್ಗೆ ಮಾತಾಡಿದನು (ಮಾರ್ಕ 4:19). ನಾವು "ಶರೀರಭಾವದ ಅನುಸಾರ" ಜೀವಿಸುವದಾದರೆ, ನಾವು "ಆತ್ಮೀಕವಾಗಿ ಸಾಯುವೆವು." R. C. H. Lenski ಹೀಗೆ ಬರೆದನು, "ಮನುಷ್ಯರು ಶರೀರಭಾವಕ್ಕೆ ದಾರಿ ಮಾಡಿಕೊಡುವವರಾಗಿ ತಾವು ನಿಜವಾಗಿಯೂ ಬದುಕುತ್ತಿದ್ದೇವೆ ಎಂದು ಭಾವಿಸುತ್ತಾರೆ, ಆದರೆ ವಾಸ್ತವದಲ್ಲಿ ಅವರು ನೇರವಾಗಿ ನಿತ್ಯಮರಣಕ್ಕೆ ಸಾಗುವವರಾಗಿದ್ದಾರೆ."[54]

ಪೌಲನು "ಸಹೋದರರನ್ನು," ದೇವರ ಕುಟುಂಬದ ಸದಸ್ಯರನ್ನು ಸಂಬೋಧಿಸುತ್ತಿದ್ದಾನೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ತಮ್ಮೊಳಗೆ ಪವಿತ್ರಾತ್ಮನು ವಾಸಿಸುತ್ತಿದ್ದರೂ, ಪವಿತ್ರಾತ್ಮನನ್ನು ನಿರ್ಲಕ್ಷಿಸಿ "ಶರೀರಭಾವದ ಅನುಸಾರವಾಗಿ" ಬದುಕುವದು ಮತ್ತು ಆ ಕಾರಣದಿಂದ ಆತ್ಮೀಕವಾಗಿ ಸಾಯುವದು ಸಾಧ್ಯವಿರುತ್ತದೋ? ದುಃಖಕರವಾಗಿ, ಹೌದು. ಅಂತಹದ್ದು ಅಸಾಧ್ಯವಾಗಿದ್ದಿದ್ದರೆ ಪೌಲನು ಈ ರೀತಿಯಾಗಿ ಬುದ್ಧಿವಾದ ಹೇಳುವದರಲ್ಲಿ ಯಾವ ಅರ್ಥವೂ ಇರುತ್ತಿರಲಿಲ್ಲ.

ಖಂಡಿತವಾಗಿಯೂ, ಆ ರೀತಿಯಾಗಿ ಒಬ್ಬ ಕ್ರೈಸ್ತನು *ಜೀವಿಸತಕ್ಕದ್ದಲ್ಲ*. ಪೌಲನು ಚರ್ಚೆಯ ಧನಾತ್ಮಕ ಬದಿಗೆ ತಿರುಗಿಕೊಳ್ಳುತ್ತಾನೆ: **ನೀವು ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ ಜೀವಿಸುವಿರಿ.** "ನೀವು . . . ನಾಶ ಮಾಡುವದಾದರೆ" ಎಂಬುದು θανατόω (*thanatoō*) ಎಂಬ ಗ್ರೀಕ್‌ನ ಒಂದೇ ಪದದಿಂದ ಬಂದದ್ದಾಗಿದೆ. ಅದಕ್ಕೆ ಸಂಬಂಧಪಟ್ಟ ನಾಮಪದವು θάνατος (*thanatos*), ಅದು "ಮರಣ" ಎಂಬುದಕ್ಕಿರುವ ಪದವಾಗಿದೆ. *Thanatoō* ಎಂಬುದು ಬಲಿಷ್ಠ ಪದವಾಗಿದ್ದು "ಒಬ್ಬರನ್ನು ಕೊಲ್ಲು" ಅಥವಾ "ಕೊಲ್ಲಲ್ಪಡುವದಕ್ಕಾಗಿ ಒಬ್ಬನನ್ನು ಒಪ್ಪಿಸಿಕೊಡು" ಎಂಬರ್ಥವಾಗುತ್ತದೆ. ಇದು "ಮರಣದಂಡನೆ ಮತ್ತು ಅದನ್ನು ಜಾರಿಗೊಳಿಸುವದನ್ನು" ಸೂಚಿಸುವದಕ್ಕಾಗಿ ಉಪಯೋಗಿಲ್ಪಡುತ್ತಿತ್ತು.[55] ಯಾವುದನ್ನು "ಮರಣದಂಡನೆ ವಿಧಿಸಬೇಕೆಂದು" ಪೌಲನು ಕ್ರೈಸ್ತರಿಗೆ ಸೂಚನೆ ನೀಡುತ್ತಿದ್ದಾನೆ? "ದೇಹದ ದುರಭ್ಯಾಸಗಳನ್ನು." ಈ ಸನ್ನಿವೇಶದಲ್ಲಿ, ಪದಗುಚ್ಛವನ್ನು "ದೇಹದ *ದುಷ್ಕಾರ್ಯ*ಗಳು" ಎಂದು ಅನುವಾದಿಸಬಹುದು (ನೋಡಿರಿ NIV; JB). Stott "ದೇಹದ ದುಷ್ಕಾರ್ಯಗಳನ್ನು" ಹೀಗೆ ಅರ್ಥನಿರೂಪಣೆ ಮಾಡುತ್ತಾರೆ, "ನಮ್ಮ ದೇಹವನ್ನು (ನಮ್ಮ ಕಣ್ಣುಗಳು, ಕಿವಿಗಳು, ಬಾಯಿ ಕೈಗಳು ಅಥವಾ ಕಾಲುಗಳನ್ನು) ದೇವರ ಹಾಗೂ ಇತರರ ಸೇವೆಗೋಸ್ಕರ ಉಪಯೋಗ ಮಾಡದೆ ಕೇವಲ ನಮಗೋಸ್ಕರ ಉಪಯೋಗಿಸುವದು."[56]

ಕೆಲವರು ಈ ವಿಧವಾದ ವಾಕ್ಯಭಾಗಗಳನ್ನು ತಪ್ಪಾಗಿ ಅನ್ವಯಿಸಿಕೊಂಡು ನಮ್ಮ ದೇಹವನ್ನು ದಂಡಿಸಿಕೊಳ್ಳತಕ್ಕದ್ದು, ಚಾಟಿಯಿಂದ ಹೊಡೆದುಕೊಳ್ಳಬೇಕು, ಅಥವಾ

ಯಾವದೋ ರೀತಿಯಲ್ಲಿ ನೋವುಂಟುಮಾಡಿಕೊಳ್ಳಬೇಕು ಎಂದು ಉಪದೇಶಿಸುತ್ತಾರೆ;[57] ಆದರೆ ಪೌಲನು ಕಲಿಸಿದ್ದು ಇದನ್ನಲ್ಲ. ದೇಹದ *ದುರಭ್ಯಾಸಗಳನ್ನೇ* ನಾಶ ಮಾಡಬೇಕೆಂದು ಆತನು ಹೇಳಿದನು.

ನಾವು ಇದನ್ನು ಸ್ವಬಲದಿಂದ ಮಾಡಬಲ್ಲೆವೋ? ಇಲ್ಲ—ಆದರೆ ನಾವು ಇದನ್ನು "ಪವಿತ್ರಾತ್ಮನಿಂದ"; ಅಂದರೆ ನಮ್ಮೊಳಗೆ ವಾಸಿಸುವ ಪವಿತ್ರಾತ್ಮನ ಸಹಾಯದೊಂದಿಗೆ ಮಾಡಬಲ್ಲೆವು ಎಂದು ಪೌಲನು ಹೇಳಿದನು. ಪುನಃ, ಪೌಲನು ಇಲ್ಲಿ ಅದು *ಹೇಗೆ* ಸಂಭವಿಸುತ್ತದೆಂಬುದನ್ನು ವಿವರಿಸಲಿಲ್ಲ; ಅದು ಹೀಗೆಯೇ ಇರುತ್ತದೆಂಬುದನ್ನು ಆತನು ಒತ್ತಿಹೇಳಿದನಷ್ಟೇ. ಕ್ರೈಸ್ತರಾಗಿ, ನಮ್ಮ ಬಳಿಯಲ್ಲಿ ಇರುವಂತಹ ಸಂಪನ್ಮೂಲಗಳು ಕ್ರೈಸ್ತೇತರರ ಬಳಿಯಲ್ಲಿ ಇಲ್ಲದವುಗಳಾಗಿವೆ. ಜೀವನದ ಸವಾಲನ್ನು ಎದುರಿಸುವದಕ್ಕೆ ಸಹಾಯ ಮಾಡುವದಕ್ಕೋಸ್ಕರ ಸ್ವತಃ ದೇವರ ಆತ್ಮನು ನಮಗಿದ್ದಾನೆ. ಎಫೆಸದವರಿಗೆ 3:16, 20ರಲ್ಲಿ, ನಾವು "ದೇವರಾತ್ಮನ ಮೂಲಕ ಅಂತರ್ಯದಲ್ಲಿ ವಿಶೇಷಬಲ ಹೊಂದಿದವರಾಗುವ ಹಾಗೆಯೂ," ಮತ್ತು ದೇವರು "ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರವಾಗಿ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತ" ಎಂದು ಪೌಲನು ಹೇಳಿದನು.

ಪೌಲನು ಹೇಗೆ ಜಾಗರೂಕತೆಯಿಂದ ಸಮತೋಲನವನ್ನು ಕಾಯ್ದುಕೊಳ್ಳುತ್ತಾನೆಂಬುದನ್ನು ಪರಿಗಣಿಸಿರಿ. "ದೇಹದ ದುರಭ್ಯಾಸಗಳನ್ನು ನಾಶ ಮಾಡುವದು" ಕೇವಲ ಪವಿತ್ರಾತ್ಮನಿಂದ ಮಾತ್ರವಾಗಿರುವದಿಲ್ಲ, ಮತ್ತು ಅದು ನಮ್ಮೊಬ್ಬರಿಂದ ಮಾತ್ರವೇ ಸಾಧಿಸತಕ್ಕದ್ದು ಸಹ ಆಗಿರುವದಿಲ್ಲ. "*ನೀವು* ಪವಿತ್ರಾತ್ಮ*ನಿಂದ* ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ" ಎಂದು ಪೌಲನು ಹೇಳಿದನು. ನಾವು ಭಕ್ತಿಯ ಜೀವನವನ್ನು ನಡಿಸುವದಕ್ಕೆ ನಮಗೆ ಸಾಧ್ಯವಾದಷ್ಟು ಉತ್ತಮವಾಗಿ ಪ್ರಯತ್ನಿಸುತ್ತೇವೆ; ಮತ್ತು ಅದೇ ಸಮಯದಲ್ಲಿ, ನಮಗೆ ಅಗತ್ಯವಾದ ಬಲವನ್ನು ಅನುಗ್ರಹಿಸುವಂತೆ ನಾವು ಕರ್ತನನ್ನು ಅವಲಂಬಿಸುತ್ತೇವೆ. ಸ್ವಾವಲಂಭಿಯಾಗಿರುವದರ ಬದಲಾಗಿ, ನಾವು ದೇವರಾವಲಂಬಿ ಆಗಿರುವದನ್ನು ಕಲಿತುಕೊಳ್ಳಬೇಕು. ಸ್ವಾವಲಂಬನೆಯ ದಾರಿಯು ಹತಾಶೆ, ನಿರಾಶೆ, ಮತ್ತು ವಿಫಲತೆಗೆ ನಡಿಸುತ್ತದೆ; ದೇವರಾವಲಂಬನೆಯ ದಾರಿಯು ಮನಶ್ಶಾಂತಿ ಮತ್ತು ವಿಜಯಕ್ಕೆ ನಡಿಸುತ್ತದೆ (8:6, 37).

ಹಾಗಾದರೆ ಇದರರ್ಥವು, ನಾವು ದೇವರ ಸಹಾಯದೊಂದಿಗೆ ಈ ಜೀವಿತದಲ್ಲಿ ಪಾಪರಹಿತವಾದ ಪರಿಪೂರ್ಣ ಸ್ಥಿತಿಯನ್ನು ತಲುಪಬಲ್ಲೆವು ಎಂದಾಗುತ್ತದೋ? ಎಂದಿಗೂ ಇಲ್ಲ. ಪೌಲನು ವರ್ತಮಾನಕಾಲ ರೂಪವನ್ನು ಉಪಯೋಗಿಸುವದನ್ನು ಗಮನಿಸಿರಿ: "ನೀವು ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ." ಗ್ರೀಕ್‌ನಲ್ಲಿ ವರ್ತಮಾನಕಾಲ ರೂಪವು ನಿರಂತರವಾದ ಕ್ರಿಯೆಯನ್ನು ಸೂಚಿಸುತ್ತದೆ. ಶರೀರಭಾವದೊಂದಿಗಿನ ನಮ್ಮ ಕದನವು ನಾವು ಕೊನೆಯುಸಿರು ಬಿಡುವ ವರೆಗೂ ಮುಂದುವರೆಯುತ್ತದೆ. ಹೇಗೂ, ಇದೊಂದು ನಿರೀಕ್ಷೆರಹಿತವಾದ ಕದನವಲ್ಲ; ಇದು ದೇವರನ್ನು ನಮ್ಮ ಪಕ್ಷದಲ್ಲಿಟ್ಟುಕೊಂಡು ಮಾಡುವಂತಹ ಕದನವಾಗಿರುತ್ತದೆ ಎಂಬ ದೃಢನಿಶ್ಚಯವನ್ನು ಪೌಲನು ನಮಗೆ ನೀಡುತ್ತಾನೆ (ನೋಡಿರಿ 8:31-39)!

ದೇವರ ಆತ್ಮನ ಸಹಾಯದೊಂದಿಗೆ, ಫಲಿತವು ಏನಾಗಿರಬಲ್ಲದು? "ನೀವು

ಪವಿತ್ರಾತ್ಮನಿಂದ ದೇಹದ ದುರಭ್ಯಾಸಗಳನ್ನು ನಾಶ ಮಾಡುವದಾದರೆ *ಜೀವಿಸುವಿರಿ.*" ಈಗ ನಾವು ನಿಜಕ್ಕೂ ಜೀವಿಸುವದಕ್ಕೆ ಯೋಗ್ಯವಾದ ಜೀವನವನ್ನು ನಡಿಸಬಹುದು (ನೋಡಿರಿ ಯೋಹಾನ 10:10); ಇಲ್ಲಿಂದ ಮುಂದೆ, ನಾವು ಕರ್ತನ ಸಂಗಡ ನಿರಂತರವಾದ ಜೀವನವನ್ನು ಜೀವಿಸಬಹುದು.

## "ದೇವರ ಮಕ್ಕಳು" (8:14-17)

**[14]ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ ಅವರು ದೇವರ ಮಕ್ಕಳು. [15]ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ, ಎಂದು ಕೂಗುತ್ತೇವೆ. [16]ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ. [17]ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು. ಹೇಗಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು.**

**ವಚನ 14.** ಮುಂದಕ್ಕೆ, ಪೌಲನು ಹೀಗೆ ಬರೆಯುತ್ತಾನೆ, **ಯಾರಾರು ದೇವರ ಆತ್ಮನಿಂದ ನಡಿಸಿಕೊಳ್ಳುತ್ತಾರೋ** [ἄγω, *agō*] **ಅವರು ದೇವರ ಮಕ್ಕಳು.** "For" (γάρ, *gar*) ಎಂಬುದು ಮುಂಚಿನ ವಚನಗಳನ್ನು 14ನೇ ವಚನದೊಂದಿಗೆ ಜೋಡಿಸುವದಾಗಿರುತ್ತದೆ. ಪೌಲನು ಇದುವರೆಗೆ "ಪವಿತ್ರಾತ್ಮಾನುಸಾರವಾಗಿ" ನಡೆಯುವದರ ಕುರಿತು (8:4), ಮತ್ತು "ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲೆ ಮನಸ್ಸಿಡುವದರ" ಕುರಿತು (8:5), ಮತ್ತು ಆತ್ಮನಿಂದ "ದೇಹದ ದುರಭ್ಯಾಸಗಳನ್ನು ನಾಶ ಮಾಡುವ" ಕುರಿತು (8:13) ಮಾತಾಡುತ್ತಾ ಬಂದನು. ಈಗ, ಆತನು ಆ ವಿಧವಾಗಿ ಜೀವಿಸುವವರು ದೇವರ ಮಕ್ಕಳು ಎಂದು ಸೂಚಿಸುತ್ತಿದ್ದಾನೆ.

ವಚನ 14ನ್ನು ಅನೇಕ ಸಾರಿ ಸನ್ನಿವೇಶದಿಂದ ಹೊರಕ್ಕೆ ತೆಗೆದು ಅಪಾರ್ಥಕಲ್ಪಿಸಿ, ಪವಿತ್ರಾತ್ಮನ ನಡಿಸುವಿಕೆಯ ಮೇಲೆ ಅತ್ಯಂಥ ಹೆಚ್ಚು ಒತ್ತು ಕೊಡಲಾಗುತ್ತದೆ. ಪೌಲನು ಆ ವಿಷಯವನ್ನು ಒತ್ತಿ ಹೇಳಿರುವದಿಲ್ಲ. ನಾವು *ನಮ್ಮನ್ನು ನಡಿಸುವಂತೆ ಪವಿತ್ರಾತ್ಮನಿಗೆ ಅವಕಾಶ ಕೊಡುವ* ಅಗತ್ಯತೆ ನಮಗಿರುತ್ತದೆಂಬುದರ ಮೇಲೆ ಪೌಲನು ಮುಖ್ಯ ಗಮನವನ್ನು ಹರಿಸುತ್ತಿದ್ದಾನೆ. NCV ಯು ಹೀಗೆ ಹೇಳುತ್ತದೆ, "ತಮ್ಮನ್ನು ನಡಿಸುವಂತೆ ದೇವರ ಆತ್ಮನಿಗೆ ಅವಕಾಶ ಕೊಡುವವರೇ ನಿಜವಾಗಿಯೂ ದೇವರ ಮಕ್ಕಳಾಗಿರುತ್ತಾರೆ." 14ನೇ ವಚನವು ಮುಖ್ಯವಾಗಿ ಪವಿತ್ರಾತ್ಮನ ನಾಯಕತ್ವಕ್ಕಿಂತಲೂ ಅಧಿಕವಾಗಿ ನಮ್ಮ "ಅನ್ಯೋನ್ಯತೆ" ಯ ಕುರಿತಾಗಿರುತ್ತದೆ. "'ಪವಿತ್ರಾತ್ಮನಿಂದ ನಡಿಸಲ್ಪಡುವದು' ಎಂದರೆ 'ನಿಮ್ಮ ಜೀವಿತದ ಮೂಲಭೂತ ಪ್ರವೃತ್ತಿಯನ್ನು ಪವಿತ್ರಾತ್ಮನಿಂದ ನಿರ್ಧರಿಸಲ್ಪಡುವಂತೆ ಬಿಟ್ಟಿರುವದೇ ಎಂದರ್ಥವಾಗಿದೆ'" ಎಂದು Moo ಬರೆಯುತ್ತಾನೆ.[58]

ಹೇಗಿದ್ದರೂ, "ನಾವು *ಹೇಗೆ* ಪವಿತ್ರಾತ್ಮನಿಂದ ನಡಿಸಲ್ಪಡುತ್ತೇವೆ?" ಎಂಬ ಪ್ರಶ್ನೆಗೆ ಉತ್ತರಿಸಬೇಕೆಂದು ಅನೇಕ ವೇಳೆ ವಿದ್ಯಾರ್ಥಿಗಳು ಪಟ್ಟು ಹಿಡಿಯುತ್ತಾರೆ. ದೈವಿಕ ನಾಯಕತ್ವವು ಪೌಲನಿಂದ ಪರಿಚಯಿಸಲ್ಪಟ್ಟಂತಹ ಒಂದು ಹೊಸ ಭಾವನೆ (ಕಲ್ಪನೆ) ಅಲ್ಲ.

ಕೀರ್ತನೆ 23:3ರ ಈ ಪರಿಚಿತವಾದ ಮಾತುಗಳನ್ನು ಪರಿಗಣಿಸಿರಿ: "ತನ್ನ ಹೆಸರಿಗೆ ತಕ್ಕಂತೆ ನೀತಿಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ" (KJV). ನಾವು ಈ ವಿಧವಾಗಿ ಹಾಡನ್ನು ಹಾಡುತ್ತೇವೆ:

> He leadeth me: O blessed tho't!
> O words with heav'nly comfort fraught!
> Whate'er I do, where'er I be,
> Still 'tis God's hand that leadeth me.[59]

ಹೇಗೂ, ಯಾವದೋ ಕಾರಣಕ್ಕಾಗಿ, *ಪವಿತ್ರಾತ್ಮನಿಂದ* ನಡಿಸಲ್ಪಡುವದಕ್ಕೆ ಒಂದು ಬೇರೆಯಾದ ಒಳಾರ್ಥವನ್ನು ಜೋಡಿಸುತ್ತಾರೆ. ಅವರು ನಿಗೂಢವಾದ ಪಿಸುಗುಟ್ಟುವಿಕೆ, ಕನಸುಗಳನ್ನು ಪ್ರಕಟಿಸುವದು, ಬುದ್ಧಿಯನ್ನು ದಿಗ್ಭ್ರಮೆಗೊಳಿಸುವ ದರ್ಶನಗಳು, ಸಮ್ಮೋಹಕವಾದ ಅಂತಃಪ್ರೇರಣೆಗಳು, ಮತ್ತು ತಡೆಯಲಾರದ ಸಂವೇದನೆಗಳು ಇತ್ಯಾದಿಗಳ ಕುರಿತಾಗಿ ಮಾತಾಡುತ್ತಾರೆ. ನಾವು ಪವಿತ್ರಾತ್ಮನ ನಡಿಸುವಿಕೆಯನ್ನು ಗ್ರಹಿಸಿಕೊಳ್ಳುವದಕ್ಕಾಗಿ ನಮ್ಮ ಸಂವೇದನೆಗಳನ್ನು ಅವಲಂಬಿಸಬೇಕಾದಲ್ಲಿ, ನಾವೆಲ್ಲರೂ ಕುಸಿದುಬೀಳುವೆವು, ಯಾಕೆಂದರೆ ಇನ್ಯಾವದಕ್ಕಿಂತಲೂ ನಮ್ಮ ಸಂವೇದನೆಗಳು ಅಧಿಕವಾಗಿ ಚಂಚಲಗೊಳ್ಳುತ್ತವೆ ಅಥವಾ ಅಧಿಕ ವಿಶ್ವಾಸರ್ಹತೆಯಿಲ್ಲದವುಗಳಾಗಿವೆ. J. D. Thomasನು ಸೇನೆಯಲ್ಲಿದ್ದ ತನ್ನ ಮಗನು ಯುದ್ಧದ ವೇಳೆಯಲ್ಲಿ ಕೊಲ್ಲಲ್ಪಟ್ಟನು ಎಂಬ ಸುದ್ಧಿಯನ್ನು ಸ್ವೀಕರಿಸಿದ ಒಬ್ಬ ಸ್ತ್ರೀಯ ಕುರಿತು ಹೇಳುತ್ತಾನೆ.[60] ಆಕೆಯು ಬಹಳವಾಗಿ ಹೃದಯ ವೇದನೆಗೊಂಡಿದ್ದಳು. ಅನಂತರದಲ್ಲಿ ಮೊದಲ ಸುದ್ಧಿಯು ತಪ್ಪಾಗಿ ಆಕೆಗೆ ಕಳುಹಿಸಲ್ಪಟ್ಟಿದೆಯೆಂದೂ ಆಕೆಯ ಮಗನು ಜೀವಂತವಾಗಿದ್ದಾನೆಂದೂ ಆಕೆಗೆ ಸುದ್ಧಿ ಬಂದಿತು. ಆಕೆಗಾದ ಸಂತೋಷಕ್ಕೆ ಮೀತಿಯೇ ಇರಲಿಲ್ಲ. ಅಂತಿಮವಾಗಿ, ಆಕೆಗೆ ಕಳುಹಿಸಲ್ಪಟ್ಟ ಎರಡನೆಯ ಸುದ್ಧಿಯು ತಪ್ಪಾದದ್ದು ಮತ್ತು ಮೊದಲ ಸುದ್ಧಿಯನ್ನು ಸರಿಪಡಿಸಲಾಗಿದೆ ಎಂದು ಆಕೆಗೆ ಹೇಳಲ್ಪಟ್ಟಿತು—ಆಕೆ ಪುನಃ ಹತಾಶೆಯಲ್ಲಿ ಮುಳುಗಿ ಬಿಟ್ಟಳು. ಒಂದು ವೇಳೆ ನಮ್ಮ ನಡೆ ಮತ್ತು ನುಡಿಗಳನ್ನು ನಮ್ಮ ಸಂವೇದನೆಗಳ ಮೇಲೆ ಅವಲಂಭಿತಗೊಳಿಸುವದಾದರೆ, ನಾವು ನಮ್ಮ ಜೀವಿತಗಳನ್ನು ಪಲ್ಲಟಗೊಳ್ಳುತ್ತಿರುವ ಮರಳಿನ (ಉಸುಕಿನ) ಮೇಲೆ ಕಟ್ಟುವವರಾಗಿದ್ದೇವೆ.

ತಾನು ಪವಿತ್ರಾತ್ಮನಿಂದ ನಡಿಸಲ್ಪಡುತ್ತಿದ್ದೇನೆಂಬ ಆತನ ಸಂವೇದನೆಗಳು ಪವಿತ್ರಾತ್ಮನಿಂದಲೇ ಪ್ರಚೋದಿಸಲ್ಪಟ್ಟವುಗಳೋ, ಆತನ ಸ್ವಂತ ಬುದ್ಧಿಯ ಪ್ರಕ್ರಿಯೆಯಿಂದ ಪ್ರಚೋದಿಸಲ್ಪಟ್ಟವುಗಳೋ, ಅಥವಾ ಬಹುಶಃ ಅವುಗಳು ದುಷ್ಟನಿಂದ (ಸೈತಾನನಿಂದ) ಪ್ರಚೋದಿಸಲ್ಪಡುತ್ತೀವೆಯೋ ಎಂಬುದನ್ನು ಒಬ್ಬನು ಹೇಗೆ *ತಿಳಿಯಲು* ಸಾಧ್ಯ? ಕೆಲವು ಸಾರಿ ಈ ಉತ್ತರವು ಕೊಡಲ್ಪಡುತ್ತದೆ: "ಪವಿತ್ರಾತ್ಮನು ಯಾರನ್ನೂ ಬೈಬಲ್‌ಗೆ ತದ್ವಿರುದ್ಧವಾದದ್ದನ್ನು ಮಾಡುವಂತೆ ಎಂದಿಗೂ ನಡಿಸಲಾರನು." ಈ ರೀತಿಯ ತರ್ಕವು ಸಮಸ್ಯೆಯ ಒಂದೇ ಭಾಗದ ಬಗ್ಗೆ ಮಾತ್ರವೇ ಉತ್ತರಿಸುತ್ತದೆ. ಖಂಡಿತವಾಗಿಯೂ, "ನಡಿಸುವಿಕೆ"ಯು ಬೈಬಲ್‌ಗೆ ವಿರುದ್ಧವಾಗಿರುವದಾದರೆ, ಅದು ಪವಿತ್ರಾತ್ಮನಿಂದಾದ "ನಡಿಸುವಿಕೆ" ಆಗಿರುವದಿಲ್ಲ—ಆದರೆ ಆ "ನಡಿಸುವಿಕೆ" ಅನ್ನುವಂತಹದ್ದು ನಂಬಿಕೆಯ ವಿಷಯದಲ್ಲಿ ಅಲ್ಲದೆ, ಒಂದು ಅಭಿಪ್ರಾಯದ ವಿಷಯದಲ್ಲಿಯಾಗಿದ್ದರೆ ಏನಾಗುವದು? ನಾನು

ಸಾಕಷ್ಟು ಸಾಮಗ್ರಿಗಳನ್ನು ಓದಿ ತಿಳುಕೊಂಡಿರುವದೇನೆಂದರೆ ತಮ್ಮ ಒಬ್ಬ ಸದಸ್ಯನು ತಾನು "ಪವಿತ್ರಾತ್ಮನಿಂದ ನಡಿಸಲ್ಪಟ್ಟಿದ್ದೇನೆ" ಎಂದು ಹೇಳುತ್ತಿದ್ದಾನೆಂಬ ಕಾರಣದಿಂದ ಮಾತ್ರವೇ ಅವನು (ಅಥವಾ ಅವಳು) "ಪವಿತ್ರಾತ್ಮನಿಂದ ನಡಿಸಲ್ಪಟ್ಟವರು" ಎಂಬುದನ್ನು charismatic (ದೈವಶಕ್ತಿಯ ವರಗಳಾಧಾರಿತ) ಗುಂಪಿನವರು ಸ್ವಯಂಚಾಲಿತವಾಗಿ ನಂಬಿಬಿಡುವದಿಲ್ಲ. ಒಬ್ಬ charismatic (ದೈವಶಕ್ತಿಯ ವರಗಳಾಧಾರಿತ) ಬೋಧಕನು ಸದಸ್ಯ ನೊಬ್ಬಳ ಬಗ್ಗೆ ಬರೆದನು, ಆ ಸದಸ್ಯಳು ಈತನಿಗೆ ತಾನು "ಪವಿತ್ರಾತ್ಮನಿಂದ ನಡಿಸಲ್ಪಟ್ಟು" ಇಂಥಿಂಥ ಪುಸ್ತಕವೊಂದನ್ನು ನೀನು ಖರೀದಿಸುವ ಅಗತ್ಯವಿದೆಯೆಂದು ತಿಳಿಸುವಂತೆ ಪ್ರೇರೆಪಿಸಿಲ್ಪಟ್ಟೆನೆಂಬದಾಗಿ ಹೇಳಿದಳೆಂದು ಆ ಬೋಧಕನು ಬರೆಯುತ್ತಾನೆ. ಆತನ ಬಳಿಯಲ್ಲಿ ಈಗಾಗಲೇ ಆ ಪುಸ್ತಕವು ಆತನ ಗ್ರಂಥಾಲಯದಲ್ಲಿದ್ದದರಿಂದ, ಈ ಸ್ತ್ರೀಯು ಆ ಸಂದೇಶವನ್ನು ತನಗೆ ಕೊಡುವಂತೆ ನಿಜವಾಗಿಯೂ "ಪವಿತ್ರಾತ್ಮನಿಂದ ನಡಿಸಲ್ಪಟ್ಟವಳೋ" ಎಂಬ ಸಂಶಯ ತನಗುಂಟಾಯಿತೆಂದು ಆ ಬೋಧಕನು ಹೇಳಿಕೊಳ್ಳುತ್ತಾನೆ.

ಸಂವೇದನೆಗಳು ವಿಶ್ವಾಸರ್ಹವಾದ ಮಾರ್ಗದರ್ಶಿ*ಯಲ್ಲ* ಎಂಬುದಂತೂ ಸ್ಪಷ್ಟವಾಗಿರುತ್ತದೆ. ಪವಿತ್ರಾತ್ಮನಿಂದ ನಡಿಸಲ್ಪಡುವದಕ್ಕಾಗಿ ನಾವು ನಮ್ಮ ಸಂವೇದನೆಗಳ ಮೇಲೆ ಅವಲಂಭನೆಗೊಳ್ಳಬೇಕಾದ ಸ್ಥಿತಿ ಬಂದಲ್ಲಿ, ನಾವು ಏನು ಮಾಡಬೇಕೆಂಬುದು ಆತನ ಇಚ್ಛೆಯೆಂಬುದನ್ನು ನಾವು ಎಂದಿಗೂ *ಖಚಿತವಾಗಿ* ತಿಳಿದುಕೊಳ್ಳಲಾರೆವು.

ನಾವು ಹೇಗೆ *ಖಚಿತವಾಗಿ* ತಿಳಿದುಕೊಳ್ಳಬಲ್ಲೆವು? ವಾಕ್ಯಕ್ಕೆ, ಆತನು ಪ್ರೇರೆಪಿಸಿದ ಲಿಖಿತ ವಾಕ್ಯಕ್ಕೆ ಹೋಗುವದರ ಮೂಲಕ. ನಾವು ಹೇಗೆ ಜೀವಿಸಬೇಕೆಂದು ಪವಿತ್ರಾತ್ಮನು ಇಚ್ಛಿಸುತ್ತಾನೆಂಬುದನ್ನು ತಿಳಿಯುದಕ್ಕಿರುವ ಏಕೈಕ ವಸ್ತುನಿಷ್ಠವಾದ ದಾರಿಯೆಂದರೆ ಬೈಬಲ್‌ನ್ನು ಓದುವದು ಮತ್ತು ಅಧ್ಯಯನ ಮಾಡುವದೇ. ನಾವು ಹೆಚ್ಚೆಚ್ಚಾಗಿ ಬೈಬಲ್‌ನ್ನು ಓದಿ ಅದರ ವಿಧಿಗಳನ್ನು ನಮ್ಮ ಚಿಂತನೆಯಲ್ಲಿ ಭಾಗವಾಗಿ ಮಾಡಿಕೊಂಡ ಹಾಗೆ, ನಾವು ದೇವರ ಹೃದಯಕ್ಕೆ ಹೆಚ್ಚು ಸಮೀಪಕ್ಕೆ ಬರುತ್ತೇವೆ. ವಾಕ್ಯವು ಕಲಿಸುವದನ್ನು ಮಾಡುವದಕ್ಕೆ ನಾವು ಹೆಚ್ಚೆಚ್ಚಾಗಿ ಶ್ರಮಿಸಿದಂತೆ, ನಾವು ದೇವರ ಆತ್ಮನಿಂದ ನಡಿಸಲ್ಪಡುತ್ತಿದ್ದೇವೆಂಬ ಹೆಚ್ಚು ದೃಢವಿಶ್ವಾಸವನ್ನು ಹೊಂದಿರಬಹುದಾಗಿದೆ.

ಪವಿತ್ರಾತ್ಮನು ಅಲ್ಪ ಸ್ಪಷ್ಟತೆಯ ದಾರಿಗಳಲ್ಲಿ ನಡಿಸಬಲ್ಲನೋ? ದೇವರು ತನಗೆ ಅನೇಕ ವೇಳೆಗಳಲ್ಲಿ "ಅನುಕೂಲವಾದ ಮಹಾಸಂದರ್ಭ" ಅಥವಾ "ಸಂದರ್ಭ"ಗಳನ್ನು ತೆರೆದುಕೊಟ್ಟದ್ದರ ಬಗ್ಗೆ ಪೌಲನು ಆಗಾಗ ಮಾತಾಡಿರುತ್ತಾನೆ (1 ಕೊರಿಂಥ 16:9; 2 ಕೊರಿಂಥ 2:12; ಕೊಲೊಸ್ಸೆ 4:3). ನನ್ನ ಜೀವಿತದಲ್ಲಿ ಅನುಕೂಲವಾದ "ಸಂದರ್ಭಗಳ"— ನನಗಿರುವ ತಲಾಂತು ಹಾಗೂ ಸಮಯವನ್ನು ಉಪಯೋಗಿಸ ಬೇಕೆಂದು ದೇವರು ಬಯಸುತ್ತಾನೆಂಬುದನ್ನು ಸೂಚಿಸುವ ಸದಾವಕಾಶಗಳು—ವಿಷಯವಾಗಿ ಅರಿವು ಉಳ್ಳವನಾಗಿರಲು ಪ್ರಯತ್ನಿಸಿದ್ದೇನೆ. ಅಷ್ಟುಮಾತ್ರವಲ್ಲದೆ, ಪವಿತ್ರಾತ್ಮನು ನಮ್ಮ ಜೀವಿತಗಳನ್ನು ಪ್ರಭಾವಿತಗೊಳಿಸುವ ದಾರಿಗಳನ್ನು ಪರಿಗಣಿಸುವ ವೇಳೆ, ನಾವು ದೇವಭಕ್ತಿಯುಳ್ಳ ಸ್ನೇಹಿತರ (ನೋಡಿರಿ ಜ್ಞಾನೋಕ್ತಿ 1:5; 12:15; 13:10), ದೇವರ ಚಿತ್ತದ ವಿಷಯದಲ್ಲಿ ನಮಗಿಂತಲೂ ಅಧಿಕವಾದ ಮತ್ತು ಆಳವಾದ ತಿಳುವಳಿಕೆಯುಳ್ಳವರ ಸಮಾಲೋಚನೆಯನ್ನು ಸಹ ಸೇರ್ಪಡೆಗೊಳಿಸಿಕೊಳ್ಳಬೇಕು.

ಬಹುಶಃ ದೈವಿಕ ಪ್ರಭಾವವನ್ನು ಉಂಟುಮಾಡುವ ಇತರ ಸಾಧ್ಯತೆಗಳ ಪಟ್ಟಿಯನ್ನು ಮಾಡಬಹುದಾಗಿದೆ, ಆದರೆ ವಾಕ್ಯವನ್ನು ಹೊರತುಪಡಿಸಿ ಬೇರೆ ಯಾವದೇ ಮೂಲದಿಂದ ದೊರಕುವ ನಡಿಸುವಿಕೆಯು *ವ್ಯಕ್ತಿನಿಷ್ಠವಾದದ್ದು* ಎಂಬುದನ್ನು ಅರ್ಥಮಾಡಿಕೊಳ್ಳಿರಿ. ಜೀವನದಲ್ಲಾಗುವ ನಮ್ಮ ಅನುಭವಗಳು ವ್ಯಾಖ್ಯಾನಕ್ಕೆ ಒಳಪಟ್ಟವುಗಳು ಮತ್ತು ಅವುಗಳು ನಮ್ಮ ಸ್ವಂತ ಕಟ್ಟಾಸೆಗಳು ಹಾಗೂ ಬಯಕೆಗಳಿಂದ ಬಣ್ಣ ಹಚ್ಚಲ್ಪಟ್ಟಿರುತ್ತವೆ. ನಾನು ಎರಡು ದಾರಿಗಳಲ್ಲಿ ನಿಮ್ಮನ್ನು ಬಲವಾಗಿ ಎಚ್ಚರಿಸುತ್ತೇನೆ. ಮೊದಲನೆಯದಾಗಿ, ದೇವರ ವಾಕ್ಯದ ಬೆಳಕಿನಲ್ಲಿ "ಎಲ್ಲವನ್ನೂ ಪರಿಶೋಧಿಸಿ" (1 ಥೆಸಲೋನಿಕ 5:21). ಎರಡನೆಯದಾಗಿ, ನೀವು ಹೇಳುವ ಹಾಗೂ ಮಾಡುವ ಎಲ್ಲದರಲ್ಲಿಯೂ ದೈವಿಕ ಸಹಾಯ ಅಥವಾ ಮಾರ್ಗದರ್ಶನವಿರುತ್ತದೆಂದು ಹೇಳಿಕೊಳ್ಳುವದಕ್ಕೆ ಬಹಳ, ಬಹಳವಾಗಿ ಸಂಕೋಚಪಡಿರಿ. ದೇವರು ಒಂದು ಕಾರ್ಯವನ್ನು ಮಾಡುವಂತೆ "ನನಗೆ ಹೇಳಿದನು" ಅಥವಾ ಇಂಥದೊಂದು ಸಂಗತಿಯನ್ನು ಮಾಡುವ ಹಾಗೆ ದೇವರು "ಅದನ್ನು ನನ್ನ ಹೃದಯದಲ್ಲಿಟ್ಟನು" ಎಂದು ಒತ್ತಿಹೇಳುವದರಲ್ಲಿ ಒಂದು ಗರ್ವದಿಂದ ಕೂಡಿದ ಹುಚ್ಚುಧೈರ್ಯವಿರುತ್ತದೆ. ದೇವರು ನಿನ್ನ ಜೀವಿತದಲ್ಲಿ ಕಾರ್ಯಮಾಡುತ್ತಿಲ್ಲ ಎಂಬದಾಗಿ ನಾನು ಹೇಳುತ್ತಿಲ್ಲ; ಆತನು ಮಾಡಿರುವದನ್ನು ಮಬ್ಬಾಗಿ ಕಾಣುವಂತಾಗಲು ಸಹ ಕಾಲವು ಕಳೆದಂತೆ ಮಾತ್ರ ನಿನಗೊಂದು ದೃಷ್ಟಿಕೋನವು ಸಿಕ್ಕುತ್ತದೆಂದಷ್ಟೆ ನಾನು ಹೇಳುತ್ತಿದ್ದೇನೆ. ಇಂದಿನಿಂದ ಇಪ್ಪತ್ತು ಅಥವಾ ಮೂವತ್ತು ವರ್ಷಗಳಾದ ಮೇಲೆ, ನೀವು ಹಿಂದಕ್ಕೆ ದೃಷ್ಟಿಸಿ ನಿಮಗೆ ಸಂಭವಿಸಿದ ನಿರ್ದಿಷ್ಟವಾದ ಘಟನೆಗಳಲ್ಲಿ ದೇವರ ಹಸ್ತವಿದ್ದದನ್ನು ಕಾಣುವುದಕ್ಕೆ ಶಕ್ತರಾಗಬಹುದು. ಈ ಕ್ಷಣದಲ್ಲಾದರೋ, ವಾಕ್ಯದಲ್ಲಿ ಪವಿತ್ರಾತ್ಮನು ನೀಡುವ ನಡಿಸುವಿಕೆಯನ್ನು *ಅನುಸರಿಸುವದಕ್ಕೆ* ಸಾಧ್ಯವಾದಷ್ಟು ಪ್ರಯತ್ನಿಸಿರಿ. ನೀವು ಅದನ್ನು ಮಾಡುವದಾದರೆ, ದೇವರು "ಎಲ್ಲಾ ಕಾರ್ಯಗಳು ಅನುಕೂಲವಾಗುವಂತೆ" ಕಾರ್ಯಮಾಡುತ್ತಿದ್ದಾನೆಂಬ ಭರವಸೆಯು ನಿಮಗೆ ಸಿಕ್ಕಬಲ್ಲದು (8:28).

ಹೇಗೂ, ರೋಮಾ 8:14 ರಲ್ಲಿ ಪೌಲನು ಪ್ರಮುಖ ಗಮನವು ಪವಿತ್ರಾತ್ಮನನ್ನು *ಅನುಸರಿಸುವಿಕೆಯ* ಮೇಲೆಯೇ ಇತ್ತು ಹೊರತು ಪವಿತ್ರಾತ್ಮನ *ನಡಿಸುವಿಕೆಯ* ಮೇಲಲ್ಲ ಎಂಬುದನ್ನು ಮತ್ತೊಮ್ಮೆ ಹೇಳುತ್ತೇನೆ. ನಾವು ಪವಿತ್ರಾತ್ಮನನ್ನು ಅನುಸರಿಸುತ್ತಾರೋ ಅವರು ನಿಜವಾಗಿಯೂ "ದೇವರ ಮಕ್ಕಳು" ಎಂಬ ನಿಶ್ಚಯತೆಯನ್ನು ಪೌಲನು ನಮಗೆ ನೀಡುತ್ತಾನೆ! ಕೆಲವರಿಗೆ ಒಬ್ಬ ಪ್ರಖ್ಯಾತ ವ್ಯಕ್ತಿಯೊಬ್ಬನ ಮಕ್ಕಳಾಗಿರುವದು ರೋಮಾಂಚಕಾರಿಯಾಗಿರುತ್ತದೆ. ಅನೇಕರು ಒಬ್ಬ ಶ್ರೀಮಂತ ವ್ಯಕ್ತಿಯ ಮಗನಾಗಿರುವದರಲ್ಲಿ ಆನಂದಿಸುತ್ತಾರೆ. ದೇವರ ಮಗನಾಗಿರುವದು ಅದೆಲ್ಲಕ್ಕಿಂತಲೂ ಎಷ್ಟೋ ಹೆಚ್ಚು ರೋಮಾಂಚಕಾರಿ ಆಗಿರುತ್ತದೆ!

"ಮಕ್ಕಳು" ಎಂಬುದಕ್ಕಾಗಿರುವ ಗ್ರೀಕ್ ಪದವು (υἱός, *huios ಎಂಬುದರ ಬಹುವಚನ*) 14ನೇ ವಚನದಲ್ಲಿ ಜಾತಿವಿಶಿಷ್ಟ ರೂಪದಲ್ಲಿ ಉಪಯೋಗಿಸಲ್ಪಟ್ಟಿದ್ದು, ಅದು ಪುರುಷ ಮತ್ತು ಸ್ತ್ರೀಯರಿಬ್ಬರನ್ನೂ ಸೂಚಿಸುತ್ತದೆ. 16ನೇ ವಚನದಲ್ಲಿ, "ದೇವರ ಪುತ್ರರು" ಎಂಬುದರ ಬದಲಾಗಿ, "ದೇವರ ಮಕ್ಕಳು [τέκνον, *teknon ಎಂ*ಬುದರ ಬಹುವಚನ]" ಎಂಬ ಪದಗುಚ್ಛವು ಉಪಯೋಗಿಸಲ್ಪಟ್ಟಿದೆ. "ದೇವರ ಪುತ್ರರು" ಎಂಬುದರಲ್ಲಿ ತಂದೆಯ ಪುತ್ರರು ಹಾಗೂ ಪುತ್ರಿಯರು ಇಬ್ಬರೂ ಸೇರಿಸುತ್ತಾರೆ. ಪೌಲನು ಇಲ್ಲಿ "ಪುತ್ರರು" ಎಂದು

ಉಪಯೋಗಿಸುವದಕ್ಕೆ ಇರುವ ಹಲವಾರು ಕಾರಣಗಳಲ್ಲಿ ಯಾವದೇ ಕಾರಣಕ್ಕಾಗಿಯಾದರೂ ಅದನ್ನು ಉಪಯೋಗಿಸಿರಬಹುದಾಗಿದೆ. ಬಹುಶಃ ಅದಕ್ಕೆ ಕಾರಣವೇನೆಂದರೆ, ಆತನ ಕಾಲದಲ್ಲಿ, ಪುತ್ರಿಗಿಂತಲೂ ಪುತ್ರನು ಬಾಧ್ಯನಾಗುವ ಸಾಧ್ಯತೆಯು ಅಧಿಕವಾಗಿತ್ತು. ಬಹುಶಃ ಪುತ್ರನಾದ ಯೇಸು ಕ್ರಿಸ್ತನ ಸಂಗಡ ಗುರುತಿಸಿಕೊಳ್ಳುವಂತೆ ನಮಗೆ ಸಹಾಯ ಮಾಡುವದಕ್ಕಾಗಿ ಈ ಪದವನ್ನು ಪೌಲನು ಉಪಯೋಗಿಸಿರಬಹುದಾಗಿದೆ (ನೋಡಿರಿ 8:17).

**ವಚನ 15.** ದೇವರ ಮಗುವಾಗಿರುವದು ಎಷ್ಟೊಂದು ವಿಶೇಷವಾದದ್ದು ಎಂಬದನ್ನು ಒತ್ತಿಹೇಳುವದನ್ನು ಪೌಲನು ಮುಂದುವರೆಸುತ್ತಾನೆ: **ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಾಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ, ಎಂದು ಕೂಗುತ್ತೇವೆ.** "ತಿರಿಗಿ" ಎಂಬ ಪದವು ಸೂಚಿಸುವದೇನೆಂದರೆ, ಗತಕಾಲದಲ್ಲಿ ಅವರು ಪಾಪದ ಕಾರಣದಿಂದ ಮತ್ತು ಅವರು ದೇವರ ಧರ್ಮಶಾಸ್ತ್ರಕ್ಕೆ ಪರಿಪೂರ್ಣವಾಗಿ ವಿಧೇಯರಾಗದ ಕಾರಣದಿಂದ ಭಯಕ್ಕೆ ದಾಸರಾಗಿದ್ದರು. ಪವಿತ್ರಾತ್ಮನು ಅವರನ್ನು ಪುನಃ ಭಯವು ಪ್ರಬಲವಾಗಿದ್ದ ಹಳೆಯ ಧರ್ಮಶಾಸ್ತ್ರದ ವ್ಯವಸ್ಥೆಗೆ ಕರೆದೊಯ್ಯುವವನಾಗಿರಲಿಲ್ಲ; ಬದಲಾಗಿ, ಅವರು ಕೃಪೆ/ನಂಬಿಕೆಯ ವ್ಯವಸ್ಥೆಯಲ್ಲಿ ಮುಂದುವರೆಯಲಿದ್ದರು.

15ನೇ ವಚನದ ವಿಷಯವಾಗಿ, ಸಹಜವಾದ "Spirit/spirit" (ಪವಿತ್ರಾತ್ಮನೋ/ಮನುಷ್ಯ ಆತ್ಮನೋ) ಎಂಬ ಪ್ರಶ್ನೆಯು ಇರುತ್ತದೆ. ಅನೇಕ ತರ್ಜುಮೆಗಳು ಈ ವಚನದಲ್ಲಿ ಮಗನ ಭಾವ (ಆತ್ಮ) ಎಂಬುದಕ್ಕೆ ದೊಡ್ಡ "S" ನ್ನು ಉಪಯೋಗಿಸಿರುತ್ತವೆ (ನೋಡಿರಿ KJV; NIV), ಮತ್ತು ಇನ್ನು ಕೆಲವು ತರ್ಜುಮೆಗಳು ದಾಸನ ಭಾವ (ಆತ್ಮ) ಮತ್ತು ಮಗನ ಭಾವ (ಆತ್ಮ) ಎಂಬ ಎರಡೂ ಪದಗಳಿಗೆ ದೊಡ್ಡ "S" ನ್ನು ಉಪಯೋಗಿಸಿರುತ್ತವೆ (ನೋಡಿರಿ NEB; REB). ಎರಡು ಸಾರಿ ದೊಡ್ಡ "S" ಉಪಯೋಗಿಸಲ್ಪಟ್ಟಿದ್ದರೆ, ಈ ಅರ್ಥವು ಬರುವದು "ನೀವು ಪಡೆದುಕೊಂಡ ಪವಿತ್ರಾತ್ಮನು ನಿಮ್ಮನ್ನು ದಾಸರನ್ನಾಗಿ ಮಾಡದೆ ಪುತ್ರರನ್ನಾಗಿ ಮಾಡಿದನು." ಎರಡು ಸಂದರ್ಭಗಳಲ್ಲಿಯೂ ಚಿಕ್ಕ "s" ಉಪಯೋಗಿಸಿರುವದಾದರೆ (NASB ಯಲ್ಲಿರುವ ಪ್ರಕಾರ), "spirit" (ಭಾವ) (πνεῦμα, *pneuma*) ಎಂಬ ಪದವು ಒಂದು ದ್ವಿತಿಯಾರ್ಥದಲ್ಲಿ ಉಪಯೋಗಿಸಲ್ಪಟ್ಟಿದ್ದು ಅದು "ಶಿಕ್ಷಣಗಳ ಆತ್ಮ" (ನೋಡಿರಿ 2 ತಿಮೊಥೆ 1:7) ಎಂಬುದರಲ್ಲಿ ಉಪಯೋಗಿಸಲ್ಪಟ್ಟಿರುವಂತೆಯೇ "ಒಂದು ಸ್ವಭಾವ, ಭಾವಸ್ಥಿತಿ ಅಥವಾ ಅವಸ್ಥೆ"[61] ಯನ್ನು ಸೂಚಿಸುತ್ತದೆ. ದೊಡ್ಡ "S" ಉಪಯೋಗಿಸಿರಲಿ ಅಥವಾ ಚಿಕ್ಕ "s" ಉಪಯೋಗಿಸಿರಲಿ, ಸಂದೇಶವಂತೂ ಒಂದೇ ಆಗಿದೆ: ನಾವು ರಕ್ಷಣೆ ಹೊಂದಿದಾಗ, ದೇವರು ನಮ್ಮನ್ನು *ದಾಸರನ್ನಾಗಿ* ಮಾಡಲಿಲ್ಲ, ಆದರೆ *ಮಕ್ಕಳನ್ನಾಗಿ* (ಪುತ್ರರನ್ನಾಗಿ) ಮಾಡಿದನು![62] ಪೌಲನು ಇದನ್ನು ಗಲಾತ್ಯ 4:7ರಲ್ಲಿ ಹೀಗೆ ವ್ಯಕ್ತಪಡಿಸುತ್ತಾನೆ: "ಹೀಗಿರಲು ಇನ್ನು ನೀನು ದಾಸನಲ್ಲ, ಮಗನಾಗಿದ್ದೀ. ಮಗನೆಂದ ಮೇಲೆ ದೇವರ ಮೂಲಕ ಬಾಧ್ಯನೂ ಆಗಿದ್ದೀ."

ದಾಸತ್ವ ಮತ್ತು ಪುತ್ರತ್ವಗಳ ನಡುವಿನ ವ್ಯತ್ಯಾಸವನ್ನು ಪೌಲನ ಮೂಲ ವಾಚಕರು ನಮಗಿಂತಲೂ ಚೆನ್ನಾಗಿ ಅರ್ಥಮಾಡಿಕೊಂಡಿದ್ದರು. ಅದು ಗುಲಾಮಗಿರಿ ಮತ್ತು ಧೈರ್ಯದ ನಡುವಿನ, ಅಂಗಲಾಚಿಸುವಿಕೆ ಹಾಗೂ ದೃಢವಿಶ್ವಾಸ, ದೇವರನ್ನು ದಂಡಿಸುವವನಂತೆ

ಕಾಣುವಿಕೆ ಹಾಗೂ ಆತನನ್ನು ಒಬ್ಬ ಪೋಷಕನಂತೆ ಕಾಣುವಿಕೆ ನಡುವಿನ ವ್ಯತ್ಯಾಸವಾಗಿತ್ತು.[63] ಒಬ್ಬ ಯಜಮನಾ ಹಾಗೂ ದಾಸನ ನಡುವಿನ ಸಂಬಂಧದ ಅರ್ಥನಿರೂಪಿಸುವ ಒಂದು ಸಂಗತಿಯೆಂದರೆ ಅದು ಭಯ ಆಗಿತ್ತು; ಆದರೆ ನಾವು "ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲಿ," ಆದರೆ "ಮಗನ ಭಾವವನ್ನು ಹೊಂದಿದವರಾಗಿದ್ದೀರಿ" ಎಂಬುದಾಗಿ ಪೌಲನು ಹೇಳಿದನು! ನಾವು ನಮ್ಮ ಯಜಮಾನನ ಬಳಿಗೆ ಬಂದ ಕೂಡಲೆ ಭಯದಿಂದ ನಡುಗುವ ದಾಸರಲ್ಲ; ತಂದೆಯ ಸಮ್ಮುಖದಲ್ಲಿ ಆದರಣೆಯನ್ನು ಹೊಂದುವ ಮಕ್ಕಳಾಗಿದ್ದೇವೆ!

ನಾವು ಈ ವಿಧದಲ್ಲಿ ಆಶೀರ್ವದಿಸಲ್ಪಟ್ಟಿರುವ ಕಾರಣದಿಂದ, "ನಾವು 'ಅಪ್ಪಾ, ತಂದೆಯೇ,' ಎಂದು ಕೂಗುತ್ತೇವೆ." "ತಂದೆಯೇ" ಎಂಬುದು πατήρ (*patēr*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದು ಒಬ್ಬ ತಂದೆಯನ್ನು ಸೂಚಿಸುವದಕ್ಕೆ ಉಪಯೋಗಿಸುವ ಸಾಮಾನ್ಯವಾದ ಗ್ರೀಕ್ ಪದವಾಗಿದೆ. "ಅಪ್ಪಾ" (ಅಬ್ಬಾ) ಎಂಬುದು ಒಂದು ಅರಾಮಿಕ್ ಪದವಾಗಿದ್ದು "ತಂದೆ" ಎಂದು ಅರ್ಥವಾಗಿರುತ್ತದೆ, ಆದರೆ ಅದು ಅದಕ್ಕಿಂತಲೂ ಹೆಚ್ಚಿನದ್ದಾಗಿದೆ. ಅದು "ತಂದೆ" ಯನ್ನು ಕರೆಯುವದಕ್ಕೆ ಚಿಕ್ಕ *ಮಗುವು* ಉಪಯೋಗಿಸುವ ಪದವಾಗಿದೆ, "ಪಪ್ಪಾ" ಅಥವಾ "ಡ್ಯಾಡಿ" ಎಂಬ ಪದದ ರೀತಿಯಲ್ಲಿಯೇ. ಬಹುತೇಕ ಯೆಹೂದ್ಯರು ದೇವರನ್ನು ಸಂಬೋಧಿಸುವದಕ್ಕೆ ಈ ಆಪ್ತವಾದ ಪದವನ್ನು ಉಪಯೋಗಿಸುತ್ತಿರಲಿಲ್ಲ, ಆದರೆ ಯೇಸು ಅದನ್ನು ಉಪಯೋಗಿಸಿದನು. ಗೆತ್ಸೇಮನೆ ತೋಟದಲ್ಲಿ ಆತನು "ಅಪ್ಪಾ, ತಂದೆಯೇ, ನಿನಗೆ ಎಲ್ಲವೂ ಸಾಧ್ಯ; ಈ ಪಾತ್ರೆಯನ್ನು ನನ್ನಿಂದ ತೊಲಗಿಸು; ಆದರೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ" ಎಂದು ಕೂಗಿದನು (ಮಾರ್ಕ 14:36).

Chris Bullard ಒಮ್ಮೆ ತಾನು ಹಳೆ ಯೆರೂಸಲೇಮಿನ ಬೀದಿಗಳಲ್ಲಿ ನಡೆದುಸಾಗಿದ್ದಾಗ ಮಕ್ಕಳು ಬಾಹುಗಳನ್ನು ಅಗಲವಾಗಿ ತೆರೆದು ತಮ್ಮ ತಂದೆಯರನ್ನು ನೋಡಿ "ಅಪ್ಪಾ! ಅಪ್ಪಾ!" ಎಂದು ಕೂಗುತ್ತಿರುದನ್ನು ಕೇಳಿಸಿಕೊಂಡ ಬಗ್ಗೆ ಹೇಳುತ್ತಾನೆ.[64] ಆ ರೀತಿಯ ಕೂಗುವಿಕೆಯಲ್ಲಿ ಬಹಳಷ್ಟನ್ನು ಸೇರ್ಪಡೆಗೊಳಿಸಬಹುದಾಗಿದೆ: "ನನಗೆ ಬಳಲಿಕೆಯಾಗಿದೆ ಅಪ್ಪಾ; ನನ್ನನ್ನು ಎತ್ತಿಕೋ!"; "ನನಗೆ ಜೋರು ಶಬ್ಧ ಮಾಡುತ್ತಿರುವ ಜನರ ಗುಂಪನ್ನು ಕಂಡ ಭಯವಾಗುತ್ತದೆ; ನನ್ನನ್ನು ಹಿಡಿದುಕೋ, ಪಪ್ಪಾ!"; "ನನಗೆ ಸಹಾಯ ಮಾಡು ಅಪ್ಪಾ, ನನಗೆ ಸಹಾಯ ಮಾಡು!" ದೇವರು ಮತ್ತು ನಮ್ಮ ನಡುವಿನ ತಂದೆ/ಮಗುವಿನ ಸಂಬಂಧವನ್ನು ವ್ಯಕ್ತಪಡಿಸುವದಕ್ಕೆ "ಅಪ್ಪಾ" ಎಂಬುದು ಸುಂದರವಾದ ಪದವಾಗಿದೆ.

ನಾವು ಯಾವದರ ಮೂಲಕವಾಗಿ ದೇವರ ಮಕ್ಕಳಾದೆವು? ನೀವು "ಮಗನ ಭಾವವನ್ನು ಹೊಂದಿದವರಾಗಿದ್ದೀರಿ"[65] ಎಂದು ಪೌಲನು ಹೇಳಿದನು. ಬೇರೊಂದು ಕಡೆಯಲ್ಲಿ ಬೈಬಲ್ ನಮಗೆ ಕಲಿಸುವದೇನೆಂದರೆ ನಾವು ಆತ್ಮೀಕ ಹುಟ್ಟಿನಿಂದ ದೇವರ ಮಕ್ಕಳಾದೆವು ಎಂಬದೇ (ಯೋಹಾನ 3:3, 5; 1 ಪೇತ್ರ 1:22, 23; ನೋಡಿರಿ 1 ಯೋಹಾನ 2:29; 3:9; 4:7; 5:1, 4, 18), ಆದರೆ ಪೌಲನು ಪುತ್ರಸ್ವೀಕಾರದ ಸಾದೃಶ್ಯವನ್ನು ಉಪಯೋಗಿಸಲು ಇಷ್ಟಪಟ್ಟನು (ಗಲಾತ್ಯ 4:5; ಎಫೆಸ 1:5). ಎರಡು ಸಾದೃಶ್ಯಗಳು ಒಂದೇ ಕಾರ್ಯವನ್ನು ಸ್ವಲ್ಪ ಬೇರೆ ಬೇರೆ ರೀತಿಯಲ್ಲಿ ಕಾಣುವದಾಗಿರುತ್ತವೆ: ದೇವರ ಮಕ್ಕಳಾಗುವ ಪ್ರಕ್ರಿಯೆ.

ಅವೆರಡೂ ಸಹ ಆ ಪ್ರಕ್ರಿಯೆಯ ಬೇರೆ ಬೇರೆ ರೂಪಕ್ಕೆ ಒತ್ತು ಕೊಡುತ್ತವೆ.

"ಮಗನ ಭಾವ" ಅಥವಾ ಪುತ್ರಸ್ವೀಕಾರ ಎಂಬುದು υἱοθεσία (*huiothesia*) ಎಂಬ ಪದದಿಂದ ಬಂದದ್ದಾಗಿದೆ, ಅದೊಂದು ಸಂಯುಕ್ತ ಪದವಾಗಿದ್ದು υἱός (*huios,* "ಮಗ") ಎಂಬುದನ್ನು θέσις (*thesis*, "ಸ್ಥಾನ") ದೊಂದಿಗೆ ಜೋಡಿಸುತ್ತದೆ. ಅದು ಒಬ್ಬ ವ್ಯಕ್ತಿಯು ಹುಟ್ಟಿನಿಂದ ತನ್ನ ತಂದೆತಾಯಿಗೆ ಸಂಬಂಧಪಟ್ಟಿಲ್ಲವಾದಾಗ್ಯೂ ಅವನಿಗೆ ಒಬ್ಬ ಮಗನ (ಮಗುವಿನ) ಸ್ಥಾನ, ಪದವಿ ಮತ್ತು ಹಕ್ಕನ್ನು ಕೊಡುವದನ್ನು ಸೂಚಿಸುತ್ತದೆ.[66] ನಮಗೆ ತಿಳಿದಿರುವ ಪ್ರಕಾರವಾಗಿ, ಪುತ್ರಸ್ವೀಕಾರವು ಯೆಹೂದ್ಯರೊಳಗೆ ವ್ಯಾಪಕವಾಗಿ ಬಳಕೆಯಲ್ಲಿರಲಿಲ್ಲ,[67] ಆದರೆ ಇತರ ಸಮಾಜಗಳಲ್ಲಿ ಅದು ಸರ್ವಸಾಧಾರಣವಾಗಿತ್ತು. "ಮೊದಲ ಶತಮಾನದ ರೋಮನ್ ಜಗತ್ತಿನಲ್ಲಿ ತಂದೆಯ ಹೆಸರನ್ನು ಚಿರಸ್ಮರಣಿಯಗೊಳಿಸಲು ಮತ್ತು ಆತನ ಸ್ಥಿರಾಸ್ತಿಗೆ ಬಾಧ್ಯಸ್ಥನಾಗಬೇಕೆಂಬುದಕ್ಕಾಗಿ ಒಬ್ಬ ದತ್ತು ಪುತ್ರನು ತನ್ನ ದತ್ತು ತಂದೆಯಿಂದ ಇಚ್ಛಾಪೂರ್ವಕವಾಗಿಯೇ ಆರಿಸಿಕೊಳ್ಳಲ್ಪಡುತ್ತಿದ್ದನು"[68] ಎಂದು Bruce ಬರೆಯುತ್ತಾನೆ. ದೇವರಿಗೆ ಒಬ್ಬನೇ "ಸ್ವಾಭಾವಿಕ" ಮಗನಿದ್ದಾನೆ, ಮತ್ತು ಮಿಕ್ಕ ನಾವೆಲ್ಲರೂ ಪುತ್ರಸ್ವೀಕಾರದಿಂದ ಮಕ್ಕಳಾಗಿರುತ್ತೇವೆಂದು ಹೇಳಲಾಗುತ್ತದೆ.[69] ನಮ್ಮ ಪುತ್ರ ಸ್ವೀಕಾರವು ನಮ್ಮ ಜೀವಿಸುವ ರೀತಿ ಹಾಗೂ ನಡೆಯ ಮೇಲೆ ಪರಿಣಾಮ ಬೀರತಕ್ಕದ್ದು. ಆದ್ದರಿಂದ NLT ತರ್ಜುಮೆಯಲ್ಲಿ "ನೀವು ದೇವರ ಕುಟುಂಬದೊಂದಿಗೆ ಪುತ್ರರಾಗಿ ಸ್ವೀಕರಿಸಿಕೊಳ್ಳಲ್ಪಟ್ಟಿರುವ, ಆತನ ಸ್ವಂತ ಮಕ್ಕಳಂತೆಯೇ ವರ್ತಿಸುವವರಾಗಿರಬೇಕು" ಎಂದು ಇರುತ್ತದೆ.

**ವಚನ 16.** ಇದು ಚಿಂತನೆ ಮಾಡುವದಕ್ಕೆ ರೋಮಾಂಚಕಾರಿಯಾಗಿರುತ್ತದೆ, ಆದರೆ ನಾವು ದೇವರ ಮಕ್ಕಳು ಎಂಬುದನ್ನು ನಿಜವಾಗಿಯೂ ಹೇಗೆ *ತಿಳಿದು*ಕೊಳ್ಳಬಲ್ಲೆವು? ಪೌಲನು ಪುರಾವೆಯನ್ನು ಕೊಡುವದಕ್ಕೆ ಮುಂದೆ ಸಾಗುತ್ತಾನೆ, ರೋಮಾಪುರದವರಿಗೆ ಪತ್ರಿಕೆಯಲ್ಲಿ ಆಗಾಗ್ಗೆ ಉಪಯೋಗಿಸಲಾಗಿರುವ ರೀತಿಯಲ್ಲಿ ಪುನಃ ನ್ಯಾಯಾಲಯದ ಭಾಷೆಗೆ ತಿರಿಗಿಕೊಳ್ಳುತ್ತಾನೆ: **ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ**[70] **ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ.** ಇದನ್ನು "ನಮ್ಮ ಆತ್ಮ*ಕ್ಕೆ*" ಎಂದು ಅನುವಾದಿಸಬೇಕೋ ಅಥವಾ "ನಮ್ಮ ಆತ್ಮ*ದೊಂದಿಗೆ*" ಎಂದೋ ಎಂಬ ವಿಷಯದಲ್ಲಿ ವೇದಪಂಡಿತರೊಳಗೆ ಒಂದು ಚರ್ಚೆಯು ಇರುತ್ತದೆ, ಆದರೆ "ನಮ್ಮ ಆತ್ಮದೊಂದಿಗೆ" ಎಂಬುದು ಈ ವಾಕ್ಯಭಾಗವನ್ನು ಓದುವದಕ್ಕಿರುವ ಅತ್ಯಂಥ ಸ್ವಾಭಾವಿಕ ರೀತಿಯಾಗಿರುತ್ತದೆ. "ಸಾಕ್ಷಿಹೇಳುತ್ತಾನೆ" ಎಂಬುದು συμμαρτυρέω (*summartureō*) ಪದದಿಂದ ಬಂದದ್ದಾಗಿದ್ದು, ಅದು ಎಂಬ μαρτυρέω (*martureō*) ಪದವನ್ನು "ಸಾಕ್ಷಿಹೇಳು" ಎಂಬುದಕ್ಕಾಗಿರುವ "ದೊಂದಿಗೆ" ಎಂಬ ಉಪಸರ್ಗವಾದ σύν (*sun*) ದೊಂದಿಗೆ ಜೋಡಿಸುತ್ತದೆ.

"ಎರಡು ಮೂರು ಸಾಕ್ಷಿಗಳ ಬಾಯಿಂದ" ಸತ್ಯವನ್ನು ಸ್ಥಾಪಿಸಬಹುದು ಎಂಬದಾಗಿ ಬೈಬಲ್ ಹೇಳುತ್ತದೆ (ಮತ್ತಾಯ 18:16; ನೋಡಿರಿ ಧರ್ಮೋಪದೇಶ ಕಾಂಡ 17:6; 19:15; ಯೋಹಾನ 8:17). ತತ್ಪರಿಣಾಮವಾಗಿ, ನೀವು ನಿಜವಾಗಿಯೂ ದೇವರ ಮಕ್ಕಳು ಎಂಬುದನ್ನು ದೃಢಪಡಿಸುವದಕ್ಕೆ ಎರಡು ಸಾಕ್ಷಿಗಳಿರುತ್ತಾರೆಂದು ಪೌಲನು ಹೇಳುತ್ತಾನೆ: ಪವಿತ್ರಾತ್ಮನು ಮತ್ತು ನಿಮ್ಮ ಆತ್ಮನು. NCV ತರ್ಜುಮೆಯಲ್ಲಿ, "ನಾವು ದೇವರ ಮಕ್ಕಳು

ಎಂದು ಸ್ವತಃ ಪವಿತ್ರಾತ್ಮನು ನಮ್ಮ ಆತ್ಮಗಳೊಂದಿಗೆ ಕೂಡಿಕೊಂಡು ಹೇಳುತ್ತಾನೆ" ಎಂದಿರುತ್ತದೆ. JB ತರ್ಜುಮೆಯು "ನಾವು ದೇವರ ಮಕ್ಕಳು ಎಂಬದಾಗಿ ಸ್ವತಃ ಪವಿತ್ರಾತ್ಮನು ಹಾಗೂ ನಮ್ಮ ಆತ್ಮ ಸಾಕ್ಷಿಯನ್ನು ಹೇಳುತ್ತವೆ" ಎಂದು ಹೇಳುತ್ತದೆ.

ಕೆಲವು ಲೇಖಕರು ಪವಿತ್ರಾತ್ಮನ ಸಾಕ್ಷಿಯ ಕುರಿತಾಗಿ ವ್ಯಾಖ್ಯಾನ ಮಾಡುವಾಗ, "ಪವಿತ್ರಾತ್ಮನು ನಿಮ್ಮ ಹೃದಯಕ್ಕೆ ನೀಡುವಂತಹ ಭರವಸೆಯ ಭಾವನೆ" ಕುರಿತಾಗಿ ಮಾತಾಡುತ್ತಾರೆ. ಅಂತಹ ಅರ್ಥನಿರೂಪನೆಯು ಕನಿಷ್ಠ ನಾಲ್ಕು ದೋಷಗಳನ್ನು ಹೊಂದಿರುತ್ತದೆ. ಮೊದಲನೆಯದಾಗಿ, ಅದು ನಮ್ಮ ಆತ್ಮಕ್ಕೆ ಸಾಕ್ಷಿಯಾಗುತ್ತದೆ, ಹೊರತು ನಮ್ಮ ಆತ್ಮಗಳ*ೊಂದಿಗೆ* ಅಲ್ಲ. ಎರಡನೆಯದಾಗಿ, ಸಂವೇದನೆಗಳು (ಈ ಮುಂಚೆ ತಿಳಿಸಿರುವ ಪ್ರಕಾರ) ಚಂಚಲವಾಗಿರುತ್ತವಾದ್ದರಿಂದ ಮತ್ತು ಸ್ವಭಾವದಲ್ಲಿ ಅವಿಶ್ವಾರ್ಹವಾದವುಗಳಾದ್ದರಿಂದ, ಅದು ಪವಿತ್ರಾತ್ಮನ ಸಾಕ್ಷಿಯ ವಿಶ್ವಸನೀಯವನ್ನು ಕಡಿಮೆಗೊಳಿಸುತ್ತದೆ. ಮೂರನೆಯದಾಗಿ, "ಸಂವೇದನೆ ಸಾಕ್ಷಿಯಲ್ಲಿ" ನಂಬಿಕೆಯಿಡುವವರು ಸಹ ದೇವರ ಪ್ರತಿಯೊಬ್ಬ ನಂಬಿಗಸ್ತ ಮಗುವು ಈ ರೀತಿಯಾದ "ಸಂವೇದನೆ" ಯನ್ನು ಹೊಂದಿರುತ್ತಾನೆಂದು ಹೇಳಿಕೊಳ್ಳುವದಿಲ್ಲ. ಹೇಗೂ, ಪವಿತ್ರಾತ್ಮನ ಸಾಕ್ಷಿಯು ದೇವರ *ಪ್ರತಿಯೊಬ್ಬ* ಮಕ್ಕಳಿಗಾಗಿಯೂ ಇರುತ್ತದೆ. ಆದ್ದರಿಂದ, ಸಾಕ್ಷಿಯು ಏನೇ ಇದ್ದರೂ, ಅದು ಕೇಲವ ಒಂದು ಅಂತರಿಕ ಸಂವೇದನೆಯಷ್ಟೇ ಆಗಿರಕೂಡದು. ನಾಲ್ಕನೆಯದಾಗಿ, ಪೌಲನು ಮನಸ್ಸಿನಲ್ಲಿ ಅಂತಹ ಒಂದು ಅರ್ಥನಿರೂಪನೆಯನ್ನು ಹೊಂದಿದ್ದನೆಂಬುದಕ್ಕೆ ವಾಕ್ಯಭಾಗದಲ್ಲಾಗಲಿ ಅಥವಾ ಸನ್ನಿವೇಶದಲ್ಲಾಗಲಿ ಯಾವ ಸೂಚನೆಯೂ ಇರುವದಿಲ್ಲ. ಪವಿತ್ರಾತ್ಮನ ಸಾಕ್ಷಿಯ ಕುರಿತಾಗಿ ಈ ರೀತಿಯ ಅರ್ಥೈಸುವಿಕೆಯು ವ್ಯಾಖ್ಯಾನಕಾರನ ಸಿದ್ಧಾಂತಿಕ ಒಲವಿನ ಪ್ರತಿಫಲನವಾಗಿರುತ್ತದೆಯೇ ಹೊರತು ವಾಕ್ಯಭಾಗದ ಒಂದು ಜಾಗರೂಕವಾದ ವ್ಯಾಖ್ಯಾನ ಆಗಿರುವದಿಲ್ಲ.

16ನೇ ವಚನವು ಅದರ ಮುಂದಿನ ವಚನಗಳಿಂದ ಬೇರ್ಪಡಿಸಲ್ಪಡಕೂಡದು. ಪೌಲನು ಈಗಷ್ಟೆ ನಾವು ಒಂದು "ಭಾವವನ್ನು" (ಪವಿತ್ರಾತ್ಮನು?) ಹೊಂದಿದವರಾಗಿದ್ದೇವೆ, "ಆ ಭಾವದಿಂದ ನಾವು ದೇವರನ್ನು ಅಪ್ಪಾ, ತಂದೆಯೇ ಎಂದು ಕೂಗುತ್ತೇವೆ" ಎಂಬದಾಗಿ ಹೇಳಿದ್ದನು (8:15). 15 ಮತ್ತು 16ನೇ ವಚನಗಳ ನಡುವಿನ ನಿಕಟ ಸಂಬಂಧವು NEB ತರ್ಜುಮೆಯಲ್ಲಿ ಒತ್ತಿಹೇಳಲ್ಪಟ್ಟಿದೆ, ಅದು ಹೀಗೆ ಹೇಳುತ್ತದೆ, "ಆತ್ಮವು . . . ನಮ್ಮನ್ನು ಮಕ್ಕಳನ್ನಾಗಿ ಮಾಡುತ್ತದೆ, ಅಪ್ಪಾ, ತಂದೆಯೇ, ಎಂದು ಕೂಗುವಂತೆ ಶಕ್ತಗೊಳಿಸುತ್ತದೆ. *ಆ ಕೂಗುವಿಕೆಯಲ್ಲಿ* ದೇವರ ಆತ್ಮನು ನಮ್ಮೊಂದಿಗೆ ಕೂಡಿಕೊಂಡು ನಾವು ದೇವರ ಮಕ್ಕಳು ಎಂಬುದಕ್ಕೆ ಸಾಕ್ಷಿ ಹೇಳುತ್ತಾನೆ" (8:15, 16; ಒತ್ತಿ ಹೇಳಿದ್ದು ನನ್ನದು; ನೋಡಿರಿ RSV). ರೋಮಾ 8:15, 16ಕ್ಕಿರುವ ಒಂದು ಅಡ್ಡ ಉಲ್ಲೇಖವೆಂದರೆ (cross-reference) ಗಲಾತ್ಯ 4:6: "ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು." ಗಲಾತ್ಯ 4:6ರಲ್ಲಿ ಪವಿತ್ರಾತ್ಮನು "ಅಪ್ಪಾ, ತಂದೆಯೇ," ಎಂದು ಕೂಗುತ್ತಾನೆಂದು ಇರುತ್ತದೆಂಬುದನ್ನು, ಅದೇ ವೇಳೆಯಲ್ಲಿ ರೋಮಾ 8:15ರಲ್ಲಿ "ಅಪ್ಪಾ, ತಂದೆಯೇ," ಎಂದು ಕೂಗುವಂತದ್ದು ನಮ್ಮ ಆತ್ಮ ಎಂಬುದನ್ನು ಗಮನಿಸಿರಿ. ಇದು ಇಮ್ಮಡಿ ಸಾಕ್ಷಿಹೇಳುವಿಕೆಯಾಗಿದೆ. ನಮ್ಮ ಆತ್ಮಗಳು, "ದೇವರು ನಮ್ಮ ಅಪ್ಪಾ, ನಮ್ಮ ತಂದೆ" ಎಂದು ಸಾಕ್ಷಿ ಹೇಳುತ್ತಿವೆ ಮತ್ತು ಆಗ ಪವಿತ್ರಾತ್ಮನು

ನಮ್ಮೊಂದಿಗೆ ಧ್ವನಿಗೂಡಿಸಿ, "ಹೌದು, ಅದು ಸರಿಯೇ! ದೇವರು ನಿಜವಾಗಿಯೂ ಅವರ ತಂದೆ!" ಎಂದು ಹೇಳುವನು.

ಈ ಸತ್ಯದ ವಿಷಯವಾಗಿ ಪವಿತ್ರಾತ್ಮನು ಯಾವಾಗ ಸಾಕ್ಷಿಹೇಳಿದನು? ಆತನು ವಾಕ್ಯವನ್ನು ಪ್ರೇರೆಪಿಸಿದ ವೇಳೆಯಲ್ಲಿಯೇ. ಕೊರಿಂಥದವರಿಗೆ ಬರೆಯುವಾಗ, ಪೌಲನು ತಾನು ನುಡಿದ ಮಾತುಗಳು "ದೇವರಾತ್ಮನೇ ಕಲಿಸಿಕೊಟ್ಟ" ಮಾತುಗಳು ಎಂದು ಒತ್ತಿಹೇಳಿದನು (1 ಕೊರಿಂಥ 2:13). ನಾವು ವಿಶ್ವಾಸದಿಂದ ವಿಧೇಯರಾಗುವ ಮೂಲಕ ದೇವರ ಕೃಪೆಯನ್ನು ಸ್ವಂತವಾಗಿಸಿಕೊಂಡಾಗ ದೇವರ ಕುಟುಂಬದ ಅಂಗವಾದೆವು ಎಂದು ಪವಿತ್ರಾತ್ಮನು ಹೊಸ ಒಡಂಬಡಿಕೆಯಲ್ಲಿ ಸಾಕ್ಷಿಹೇಳಿದನು. ಪವಿತ್ರಾತ್ಮನು ನುಡಿಯುವ ಸಾಕ್ಷಿಯನ್ನು ಕಿವಿಗೊಟ್ಟು ಆಲಿಸಿರಿ: "ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿಟ್ಟಿರುವ ನಂಬಿಕೆಯ ಮೂಲಕ *ದೇವರ ಪುತ್ರರಾ*ಗಿದ್ದೀರಿ. ಹೇಗಂದರೆ ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನಮಾಡಿಸಿಕೊಂಡಿರುವ ನೀವೆಲ್ಲರು ಕ್ರಿಸ್ತನನ್ನು ಧರಿಸಿಕೊಂಡಿರಿ" (ಗಲಾತ್ಯ 3:26, 27; ಒತ್ತಿ ಹೇಳಿದ್ದು ನನ್ನದು).

ಒಬ್ಬರು ಹೀಗೆ ಕೇಳಬಹುದು, "ವಾಕ್ಯವನ್ನು ಪವಿತ್ರಾತ್ಮನ 'ಸಾಕ್ಷಿ' ಎಂದು ಕರೆಯಲ್ಪಡಬಹುದೆಂದು ನೀನು ಖಚಿತವಾಗಿ ಬಲ್ಲೆಯೋ?" ನಾವು ಇಬ್ರಿಯ 10:15a ನ್ನು ಪರಿಗಣಿಸೋಣ, ಅಲ್ಲಿ ಲೇಖಕನು "ಪವಿತ್ರಾತ್ಮನು ಸಹ ನಮ*ಗೆ* ಸಾಕ್ಷಿಕೊಡುವವನಾಗಿ" ಎಂದು ಹೇಳುತ್ತಾನೆ (ಒತ್ತಿ ಹೇಳಿದ್ದು ನನ್ನದು). ಪವಿತ್ರಾತ್ಮನು ಅದನ್ನು ಹೇಗೆ ಸಾಧಿಸಿದನು? ಲೇಖಕನು ಮುಂದುವರೆದು ಹೇಳುವದೇನೆಂದರೆ,

> ಆ ದಿನಗಳು ಬಂದ ಮೇಲೆ ನಾನು ಅವರ ಸಂಗಡ ಮಾಡಿಕೊಳ್ಳುವ
> ಒಡಂಬಡಿಕೆಯು ಹೀಗಿರುವದು —
> ನನ್ನ ಆಜ್ಞೆಗಳನ್ನು ಅವರ ಹೃದಯದಲ್ಲಿ ಇಡು ವೆನು,
> ಅವರ ಮನಸ್ಸಿನ ಮೇಲೆ ಅವುಗಳನ್ನು ಬರೆ
> ಯುವೆನು
> ಎಂದು ಕರ್ತನು ನುಡಿಯುತ್ತಾನೆ
> ಎಂಬದಾಗಿ ಹೇಳಿದ ಮೇಲೆ ಇನ್ನು—
> ಅವರ ಪಾಪಗಳನ್ನೂ ಅವರ ದುಷ್ಕೃತ್ಯ
> ಗಳನ್ನೂ ನನ್ನ ನೆನಪಿಗೆ ಎಂದಿಗೂ ತರುವದಿಲ್ಲ ಎಂದು [ಪವಿತ್ರಾತ್ಮನು] *ಹೇಳುತ್ತಾನೆ* (ಇಬ್ರಿಯ 10:15b-17; ಒತ್ತಿ ಹೇಳಿದ್ದು ನ್ನನದು).

ಉಲ್ಲೇಖನವು (ಯಥೋಕ್ತವು) ಯೆರೆಮೀಯ 31:33, 34ರಿಂದ ತೆಗೆದುಕೊಳ್ಳಲ್ಪಟ್ಟಿ ರುತ್ತದೆ, ಅದು ಪವಿತ್ರಾತ್ಮನಿಂದ ಪ್ರೇರೆಪಿಸಲ್ಪಟ್ಟದ್ದಾಗಿತ್ತು (ನೋಡಿರಿ 2 ಪೇತ್ರ 1:21). Jim McGuiggan ಹೀಗೆ ಬರೆದನು,

> ಜನರು ತಮ್ಮ ನಿಶ್ಚಯತೆಯನ್ನು ವಾಕ್ಯದ ಮೇಲೆ ಆಧಾರಮಾಡಿಕೊಳ್ಳುವುದು ನಿರ್ಣಾಯಕವಾಗಿರುತ್ತದೆ, ಅದು ಅನುಭವಗಳಿಗೆ ಅರ್ಥವನ್ನು ಒದಗಿಸುತ್ತದೆ. ನಾವು ಅನುಭವಗಳನ್ನು ರಕ್ಷಣೆಗೆ ಆಧಾರ ಮತ್ತು ತಳಪಾಯವಾಗಿ ಮಾಡುವದಾದರೆ ಅದೊಂದು ರೀತಿಯಲ್ಲಿ ಕುದುರೆಯ ಮುಂದೆ ಚಕ್ಕಡಿಯನ್ನು ಕಟ್ಟಿದ ಹಾಗಿರುತ್ತದೆ.

. . . ಬೈಬಲ್‌ನಲ್ಲಿ ಪವಿತ್ರಾತ್ಮನು ಸಾಕ್ಷಿಯನ್ನು ಹೇಳಿದ್ದಾನೆ, ಪಕ್ವತೆಗೊಳ್ಳೋಣ. ನಮ್ಮ ಅನುಭವಗಳನ್ನು ಬೈಬಲ್‌ನಿಂದ ಅರ್ಥನಿರೂಪನೆ ಮಾಡೋಣ, ಹೊರತು ಬೈಬಲ್‌ನ್ನು ನಮ್ಮ ಅನುಭವಗಳಿಂದ ಅರ್ಥನಿರೂಪನೆ ಮಾಡದಿರೋಣ.[71]

ಪ್ರವರ್ತಕ (ಮೊದಲಿಗ) ಬೋಧಕರುಗಳು ರೋಮಾ 8:16ನ್ನು ಕಲಿಸುವ ವೇಳೆ, ಅವರು ಅನೇಕ ಸಾರಿ ನ್ಯಾಯಾಲಯದ ದೃಶ್ಯವನ್ನು ಮುಂದಿಡುತ್ತಿದ್ದರು. ಅವರ ದೃಷ್ಟಾಂತದಲ್ಲಿ, ಅವರು ಮೊದಲು ಪವಿತ್ರಾತ್ಮನನ್ನು ಸಾಕ್ಷಿಯಾಗಿ ಕರೆಯುತ್ತಿದ್ದರು ಮತ್ತು ಪವಿತ್ರಾತ್ಮನು, "ನೀವು ಯೇಸುವಿನಲ್ಲಿ ವಿಶ್ವಾಸವಿಡುವದಾದರೆ ಮತ್ತು ಆತನ ಚಿತ್ತವನ್ನು ಮಾಡುವದಾದರೆ, ನೀವು ದೇವರ ಮಕ್ಕಳು" ಎಂಬದಾಗಿ ಹೇಳುತ್ತಿರುವಂತೆ ಊಹಿಸಿಕೊಳ್ಳುತ್ತಿದ್ದರು. ಅದನ್ನು ಸ್ಥಾಪಿಸುವದಕ್ಕಾಗಿ ಅವರು ಹೊಸ ಒಡಂಬಡಿಕೆಯ ವಾಕ್ಯಭಾಗಗಳನ್ನು ಉಲ್ಲೇಖನ ಮಾಡುತ್ತಿದ್ದರು. ನಂತರ, ಅವರು ತಮ್ಮ ದೃಷ್ಟಾಂತದಲ್ಲಿ, ಒಬ್ಬ ಕಾಲ್ಪನಿಕ ಕ್ರೈಸ್ತನನ್ನು ನಿಲ್ಲುವಂತೆ ಕರೆದು ಆತನಿಂದ ಸಾಕ್ಷಿ ಹೇಳಿಸುತ್ತಿದ್ದರು: "ಪವಿತ್ರಾತ್ಮನು ಹೇಳುವದನ್ನು ನಾನು *ಮಾಡಿದ್ದೇನೆ*, ಆದಕಾರಣ *ನಾನು* ದೇವರ ಒಬ್ಬ ಮಗನು!" ಕೆಲವರು ಈ ರೀತಿಯ ದಾರಿಯನ್ನನುಸರಿಸುವದನ್ನು ಬಹಳ ಸರಳವಾದದ್ದೆಂದು ಕರೆಯಬಹುದು, ಆದರೆ ಪವಿತ್ರಾತ್ಮನು ಹೇಗೆ ಮಾನವ ಆತ್ಮ*ದೊಂದಿಗೆ* ಸಾಕ್ಷಿಹೇಳುತ್ತಾನೆಂಬುದಕ್ಕೆ ಇದು ದೃಷ್ಟಾಂತಪಡಿಸುತ್ತದೆ.

ನಾವು ದೇವರ ಮಕ್ಕಳು ಎಂಬುದನ್ನು ತಿಳಿದುಕೊಳ್ಳಬಲ್ಲೆವೋ? ಸಾಧ್ಯವಿರುತ್ತಾದರೂ, ನಮಗೆ ತಿಳಿದಿರುವಂತೆ ಬೆಂಕಿಯು ಸುಡುತ್ತದೆ ಮತ್ತು ಮಂಜುಗಡ್ಡೆಯು ತಣ್ಣಗಿರುತ್ತದೆಂಬ ಅರ್ಥದಲ್ಲಿ ಅಲ್ಲ.[72] "ನಾವು ನೋಡುವವರಾಗಿ ನಡೆಯದೆ ನಂಬುವವರಾಗಿ ನಡೆಯುತ್ತೇವಾದರಿಂದ" ಎಂದು ಪೌಲನು ಹೇಳಿದನು (2 ಕೊರಿಂಥ 5:7)—ಆದರೆ ನಾವು ಅದಕ್ಕೆ ಹೀಗೆ ಸೇರಿಸಬಹುದು, "ರುಚಿಸಿ ನೋಡುವವರಾಗಿ, ವಾಸನೆ ನೋಡುವವರಾಗಿ, ಅಥವಾ ಅನುಭವಿಸಿ ನೋಡುವವರಾಗಿ ನಡೆಯದೆ." ಹೇಗಿದ್ದರೂ, ನಾವು ನಿಜವಾಗಿಯೂ ದೇವರ ಪ್ರಿಯ ಮಕ್ಕಳು ಎಂಬುದನ್ನು ತಿಳಿಯಬಹುದಾದ ಒಂದು ದಾರಿಯಿರುತ್ತದೆ. ಯೋಹಾನನು ಹೀಗೆ ಹೇಳಿದನು, ". . . ನಿಮ್ಮಲ್ಲಿ ನಿತ್ಯಜೀವವುಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು *ಬರೆದಿದ್ದೇನೆ*" (1 ಯೋಹಾನ 5:13; ಒತ್ತಿ ಹೇಳಿದ್ದು ನನ್ನದು). Thomasನು, "ನಾವು ದೇವರ ಮಕ್ಕಳು ಎಂಬುದು ನಮಗೆ ಬರವಣಿಗೆಯಲ್ಲಿದರುವುದು ಅದ್ಭುತವಲ್ಲವೇ?"[73] ಎಂದು ಬರೆದನು.

**ವಚನ 17.** ನಾವು ನಿಜವಾಗಿಯೂ ದೇವರ ಮಕ್ಕಳೇ ಎಂಬುದಕ್ಕೆ ಪುರಾವೆಯನ್ನು (ಸಾಕ್ಷಿಯನ್ನು) ಕೊಟ್ಟ ಬಳಿಕ, ಪೌಲನು ಹೀಗೆ ಹೇಳಿದನು, **ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು**. "ದೇವರಿಗೆ ಬಾಧ್ಯರು"? ಈ ವಿಚಾರವು ನಮ್ಮ ಕಲ್ಪನಾಶಕ್ತಿಯನ್ನು ದಿಗ್ಭ್ರಮೆಗೊಳಿಸುತ್ತದೆ. ದೇವರ ನಂಬಿಗಸ್ತ ಮಕ್ಕಳಿಗಾಗಿ ಮುಂದೆ ಸಿದ್ಧವಾಗಿರುವ ಬಾಧ್ಯತೆಯ ಬಗ್ಗೆ ಪೇತ್ರನು ಮಾತಾಡಿದನು. ಆತನು ಅದನ್ನು "ಲಯ ಕಳಂಕ ಕ್ಷಯವಿಲ್ಲದ ಬಾಧ್ಯತೆಯನ್ನು ಎದುರುನೋಡುವವರನ್ನಾಗಿ ಮಾಡಿದನು. ಆ ಬಾಧ್ಯತೆಯು ನಿಮಗೋಸ್ಕರ ಪರಲೋಕದಲ್ಲಿ ಇಟ್ಟಿರುವದು" ಎಂದು ಕರೆದನು (1 ಪೇತ್ರ 1:4). R. C. Bell ಅಭಿಪ್ರಾಯ ಪಡುವದೇನೆಂದರೆ, ದೇವದೂತರು ಎಂದಿಗೂ "ದೇವರಿಗೆ ಬಾಧ್ಯರು" ಎಂದು ಕರೆಯಲ್ಪಟ್ಟಿಲ್ಲ, ಕೇವಲ ಮಾನವರು ಮಾತ್ರವೇ ಹಾಗೆ ಕರೆಯಲ್ಪಟ್ಟಿದ್ದಾರೆ. ಹೀಗಿದ್ದರೂ,

“ನಾವು ನಮ್ಮ ಬಾಧ್ಯತೆಯ ಕುರಿತು ಅಷ್ಟಾಗಿ ರೋಮಾಂಚನಗೊಂಡಿಲ್ಲವೇಕೆ ಎಂದು ಆತನು ಅಚ್ಚರಿ ವ್ಯಕ್ತಪಡಿಸುತ್ತಾನೆ.”[74]

“ಬಾಧ್ಯರು” ಎಂಬ ಪದವು ನಮ್ಮ ರಕ್ಷಣೆಯನ್ನು ನಾವು ಸಂದಾದಿಸಿಕೊಳ್ಳುವದಿಲ್ಲ, ಆದರೆ ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ[75] ಎಂಬುದನ್ನು ಮತ್ತೊಂದು ಸಾರಿ ಒತ್ತಿಹೇಳುವದಾಗಿದೆ. ನೀವು ಒಬ್ಬರಿಗಾಗಿ ದುಡಿಯುವದಾದರೆ, ನಿಮ್ಮ ಸಂಬಳವನ್ನು “ಬಾಧ್ಯತೆ” ಎಂದು ಕರೆಯುವದಿಲ್ಲ. ದುಡಿಮೆ ಅಥವಾ ವ್ಯಾಪಾರ ಅಥವಾ ಒಂದು ಸೇವೆಯನ್ನು ಒದಗಿಸುವ ಮೂಲಕ ಸಂಪಾದಿಸಿದ ಹಣವು ಒಂದು ಬಾಧ್ಯತೆ ಆಗಿರುವದಿಲ್ಲ. ಒಂದು ಬಾಧ್ಯತೆ ಎಂದರೆ ಮತ್ತೊಬ್ಬರು ಪರಿಶ್ರಮದಿಂದ ಸಂಪಾದಿಸಿ, ನಂತರ ತಮ್ಮ ಬಾಧ್ಯಸ್ಥನಿಗೆ ಕೊಡುವದಾಗಿರುತ್ತದೆ. ಅದೇ ರೀತಿಯಲ್ಲಿಯೇ, ನಮ್ಮ ನಿತ್ಯವಾದ ಬಾಧ್ಯತೆಯು ಯೇಸುವಿನಿಂದ ಸಂಪಾದಿಸಿಕೊಂಡದ್ದಾಗಿದೆ ಮತ್ತು ಅದು ನಮಗೆ “ಕೊಡಲ್ಪಡುವದು!” ಆಶ್ಚರ್ಯವಾದ ಕೃಪೆ!

ಪೌಲನು ಪುತ್ರತ್ವದ ಕುರಿತಾಗಿ ಹೇಳಬೇಕಾಗಿದ್ದ ಆಶ್ಚರ್ಯಚಕಿತ ಸಂಗತಿಗಳು ಇನ್ನೂ ಮುಗಿದಿರಲಿಲ್ಲ. ಆತನು ಮುಂದುವರೆದು, **ಕ್ರಿಸ್ತನೊಂದಿಗೆ ಬಾಧ್ಯರು** ಎಂದು ಹೇಳುತ್ತಾನೆ. 8:29ರಲ್ಲಿ, ಕ್ರಿಸ್ತನು “ಅನೇಕ ಮಂದಿ ಸಹೋದರರಲ್ಲಿ . . . ಆತನೇ ಹಿರಿಯವನಾಗಬೇಕೆಂದು” ಕರೆದನು. ದೇವರ ಕುಟುಂಬವೆಂದು ಕರೆಯುವದರಲ್ಲಿ, ನಾವು ಕ್ರಿಸ್ತನನ್ನು ನಮ್ಮ ಆತ್ಮೀಕ “ಹಿರಿಯ ಸಹೋದರ”[76] ಎಂದು ತಿಳಿಯಬಹುದು. 17ನೇ ವಚನದಲ್ಲಿ, ನಾವು ನಮ್ಮ ಹಿರಿಯ ಸಹೋದರ “ನೊಂದಿಗೆ ಬಾಧ್ಯರು” ಎಂದು ಪೌಲನು ಹೇಳಿದನು! “ನೊಂದಿಗೆ ಬಾಧ್ಯರು” ಎಂಬುದು συγκληρονόμος (*sunklēronomos*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದು “ಬಾಧ್ಯನು” ಎಂಬದ ಕ್ಕಾಗಿರುವ κληρονόμος (*klēronomos*) ಎಂಬ ಪದವನ್ನು, ಉಪಸರ್ಗವಾದ “ಯೊಂದಿಗೆ” σύν (*sun*) ಎಂಬದರೊಂದಿಗೆ ಒಂದುಗೂಡಿಸುತ್ತದೆ.

ಯೇಸು ತನ್ನ ಬಾಧ್ಯವನ್ನು ಹಕ್ಕಿನಿಂದ ಪಡೆದುಕೊಳ್ಳುತ್ತಾನೆ, ನಾವಾದರೋ ನಮ್ಮ ಬಾಧ್ಯವನ್ನು ಕೃಪೆಯಿಂದ ಪಡೆದುಕೊಳ್ಳುತ್ತೇವೆ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಿರಿ. ಆತನು ಅದಕ್ಕೆ ಯೋಗ್ಯನಾಗಿರುತ್ತಾನೆ, ನಾವು ಯೋಗ್ಯರಲ್ಲ. ನಾನು ಬೆಳೆದ ಮಕ್ಕಳು ತಮ್ಮ ಬಾಧ್ಯತೆಗಾಗಿ ಜಗಳವಾಡುವದನ್ನು ಕಂಡಿದ್ದೇನೆ, ಪ್ರತಿಯೊಬ್ಬನು ತನ್ನ ತನ್ನ ಪಾಲನ್ನು . . . ಮತ್ತು ಅಧಿಕವಾದದ್ದನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾನೆ. ಅದೊಂದು ನಾಚಿಕೆಗೇಡಿನ ದೃಶ್ಯವಾಗಿರುತ್ತದೆ. ಯೇಸುವು ಆ ರೀತಿಯಾಗಿರುವದಿಲ್ಲ. ಬಾಧ್ಯತೆಯ ಮೇಲೆ ನಿಜವಾಗಿಯೂ ಒಂದು ಹಕ್ಕು ಇರುವದಾದರೆ ಆತನೊಬ್ಬನಿಗೇ ಆಗಿರುತ್ತದೆ, ಆದರೆ ಆತನು ಸಂತೋಷವಾಗಿ ತನ್ನ ಸಹೋದರರು ಹಾಗೂ ಸಹೋರಿಯರ ಸಂಗಡ ಹಂಚಿಕೊಳ್ಳುವವನಾಗಿದ್ದಾನೆ! “ಕ್ರಿಸ್ತನೊಂದಿಗೆ ಬಾಧ್ಯರು” ಎಂಬುದರ ನಿರ್ದಿಷ್ಟವಾದ ಅರ್ಥವೇನೆಂದು ನಮಗೆ ಸರಿಯಾಗಿ ತಿಳಿಯದಾದರೂ, ಇದಂತೂ ಸಂಭವಿಸುವದು ಎಂದು ನಂಬಿಕೆಯಿಂದ ಅಂಗೀಕರಿಸಿಕೊಳ್ಳಬಲ್ಲೆವು—ಮತ್ತು ಈ ಆಶ್ಚರ್ಯಚಕಿತವಾದ ಸವಲತ್ತಿಗಾಗಿ ದೇವರಿಗೆ ಸ್ತೋತ್ರ!

ಹೇಗೂ, ಸವಲತ್ತಿಗೆ ಒಂದು ಒದಗಿಸುವಕೆಯಿರುತ್ತದೆ, ಒಂದು ಶರತ್ತನ್ನು ನೆರವೇರಿಸಬೇಕಿರುತ್ತದೆ. ಪೌಲನು 17ನೇ ವಚನವನ್ನು **ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ**

**ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು** ಎಂದು ಮುಕ್ತಾಯಗೊಳಿಸುತ್ತಾನೆ. ನಾವು ಕ್ರಿಸ್ತನೊಂದಿಗೆ ಬಾಧ್ಯರಾಗುವವರಾದಲ್ಲಿ, ನಾವು ಆತನೊಂದಿಗೆ ಬಾಧೆಗಳಲ್ಲಿ ಸಹ ಅನುಭವಿಸಬೇಕು. Bruce ಗಮನಕ್ಕೆ ತಂದದ್ದೇನೆಂದರೆ "'ಈಗ ಬಾಧೆ, ನಂತರದಿಂದ ಮಹಿಮೆ' ಎಂಬುದು ಹೊಸ ಒಡಂಬಡಿಕೆಯಲ್ಲಿ ಪುನಃ ಪುನಃ ಪ್ರಸ್ತಾಪಿಸಲ್ಪಡುವ ಪ್ರಬಂಧ ವಿಷಯ"[77] (ನೋಡಿರಿ ಯೋಹಾನ 15:20; 2 ತಿಮೊಥೆ 2:12). ನಾವು ಕಿರೀಟವನ್ನು ಧರಿಸಿಕೊಳ್ಳಬೇಕೆಂದರೆ ಮೊದಲು ಕ್ರೂಜೆಯನ್ನು ಹೊತ್ತುಕೊಳ್ಳಬೇಕು ಎಂದು ಹೇಳಲಾಗುತ್ತದೆ (ನೋಡಿರಿ ಮತ್ತಾಯ 16:24, 25; ಪ್ರಕಟಣೆ 2:10).

ಕ್ರಿಸ್ತನೊಂದಿಗೆ ಬಾಧೆಗಳನ್ನು ಅನುಭವಿಸುವವರು "ಆತನೊಂದಿಗೆ ಮಹಿಮೆಯನ್ನು ಸಹ ಹೊಂದುವರು." Thomas ಹೀಗೆ ಬರೆದನು, "ಈ ವಚನವು ಕರ್ತನೊಂದಿಗೆ ನಮಗಿರುವ ಸಂಬಂಧದ ಎತ್ತರಗಳಿಗೆ ನಮ್ಮನ್ನು ಕರೆದೊಯ್ಯುತ್ತದೆ."[78] ಒಂದು ಕ್ಷಣಕ್ಕಾಗಿ, ಕ್ರಿಸ್ತನು ತನ್ನ ತಂದೆಯ ಬಳಿಗೆ ಹಿಂದಿರುಗಿ ಹೋದಾಗ ಆತನಿಗೆ ಸಿಕ್ಕ ಮಹಿಮೆ ಮತ್ತು ಗೌರವದ ಕುರಿತು ಕಲ್ಪಿಸಿಕೊಳ್ಳುವದಕ್ಕೆ ಪ್ರಯತ್ನಿಸಿರಿ. ಇಲ್ಲ, ನಾವು ಅದನ್ನು ಗ್ರಹಿಸಿಕೊಳ್ಳಲಾರಂಭಿಸುವದಕ್ಕೆ ಸಾಧ್ಯವಿಲ್ಲ—ಆದರೆ ಪ್ರಯತ್ನಿಸುತ್ತೇವೆ. ಇಬ್ರಿಯ ಪುಸ್ತಕದ ಲೇಖಕನು "ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ" ಯೇಸು ಕ್ರೂಜೆಯನ್ನು ಬಾಧೆಯನ್ನು ಸಹಿಸಿಕೊಳ್ಳಲು ಶಕ್ತನಾದನು ಎಂಬುದಾಗಿ ಬರೆಯುತ್ತಾನೆ (ಇಬ್ರಿಯ 12:2). ಕ್ರಿಸ್ತನು "ಪ್ರಭಾವಸ್ಥಾನದಲ್ಲಿ ಸೇರಿಸಲ್ಪಟ್ಟನು" ಎಂದು ಪೌಲನು ಹೇಳಿದನು (1 ತಿಮೊಥೆ 3:16). ನಾವು ಕ್ರಿಸ್ತನಿಗೆ ನಂಬಿಗಸ್ತರಾಗಿದ್ದರೆ, ನಾವು ಆ ಮಹಿಮೆಯಲ್ಲಿ (ಪ್ರಭಾವದಲ್ಲಿ) ಪಾಲುಗಾರರಾಗುವೆವು! ರೋಮಾ 8:17ರ ಅಂತ್ಯದಲ್ಲಿ, ನಾವು "ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು" ಎಂಬ ಬಗ್ಗೆ ಪೌಲನು ತಿಳಿಸಿದನು. 18ನೇ ವಚನದಲ್ಲಿ, ಆತನು "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು" ಕುರಿತು ಮಾತಾಡಿದನು. 30ನೇ ವಚನದಲ್ಲಿ, ಮುಂದಿನ ಕಾಲವನ್ನು ಎದುರುನೋಡುವವನಾಗಿ, ದೇವರು ಯಾರನ್ನು ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು "ಮಹಿಮಪದವಿಗೆ ಸೇರಿಸಿದನು" ಎಂದು ಪೌಲನು ಹೇಳುತ್ತಾನೆ.

## ಕ್ರೈಸ್ತನ ಮಹಿಮಪದವಿಯ ನಿರೀಕ್ಷೆ (8:18-25)

**18ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ. 19ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹು ಲವಲವಿಕೆಯಿಂದ ಎದುರು ನೋಡುತ್ತಿರುವದು. 20ಜಗತ್ತು ವ್ಯರ್ಥತ್ವಕ್ಕೆ ಒಳಗಾಯಿತು; ಹೀಗೆ ಒಳಗಾದದ್ದು ಸ್ವೇಚ್ಛೆಯಿಂದಲ್ಲ, ಅದನ್ನು ಒಳಪಡಿಸಿದವನ ಸಂಕಲ್ಪದಿಂದಲೇ. 21ಆದರೂ ಅದಕ್ಕೊಂದು ನಿರೀಕ್ಷೆಯುಂಟು; ಏನಂದರೆ ಆ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲುಹೊಂದುವದೇ.**

**22ಜಗತ್ತೆಲ್ಲಾ ಇಂದಿನ ವರೆಗೂ ನರಳುತ್ತಾ ಪ್ರಸವವೇದನೆಪಡುತ್ತಾ ಇರುತ್ತದೆಂದು ನಾವು ಬಲ್ಲೆವು. 23ಇದು ಮಾತ್ರವಲ್ಲದೆ ಪ್ರಥಮ ಫಲವಾಗಿರುವ ಪವಿತ್ರಾತ್ಮವರವನ್ನು ಹೊಂದಿದ ನಾವಾದರೋ ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ**

**ವಿಮೋಚನೆಯನ್ನು ಎದುರುನೋಡುತ್ತಾ ನಮ್ಮೊಳಗೆ ನರಳುತ್ತೇವೆ. [24]ನಾವು ರಕ್ಷಣೆಯನ್ನು ಹೊಂದಿದವರಾದರೂ ಇನ್ನು ಎದುರುನೋಡುವವರಾಗಿದ್ದೇವೆ. ಎದುರುನೋಡುವ ಪದವಿ ಪ್ರತ್ಯಕ್ಷವಾಗಿದ್ದರೆ ಎದುರುನೋಡುವದೇಕೆ? ಪ್ರತ್ಯಕ್ಷವಾದದ್ದನ್ನು ಎದುರುನೋಡುವ ದುಂಟೇ? [25]ಆದರೆ ಕಾಣದಿರುವದನ್ನು ನಾವು ಎದುರುನೋಡುವವರಾಗಿದ್ದರೆ ತಾಳ್ಮೆಯಿಂದ ಕಾದುಕೊಂಡಿರುವೆವು.**

**ವಚನ 18.** ಈ ಹಂತದಲ್ಲಿ, ಪೌಲನು ವಾಕ್ಯದಲ್ಲಿಯೇ ಅತ್ಯಂಥ ಪ್ರಾಮುಖ್ಯವಾದ ಪರಿಜ್ಞಾನಗಳನ್ನು (ಒಳದೃಷ್ಟಿಗಳನ್ನು) ಹಂಚಿಕೊಳ್ಳುತ್ತಾನೆ: **ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ.** ಕೆಲವು ವರ್ಷಗಳ ಹಿಂದೆ, ಆತನು ಕೊರಿಂಥದಲ್ಲಿರುವ ತನ್ನ ಜೊತೆಕ್ರೈಸ್ತರಿಗೆ ಇದೇ ರೀತಿಯ ಹೇಳಿಕೆಯನ್ನು ನೀಡಿದ್ದನು: “ಆದದರಿಂದ ನಾವು ಧೈರ್ಯಗೆಡುವದಿಲ್ಲ. ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಅಂತರ್ಯವು ದಿನೇದಿನೇ ಹೊಸದಾಗುತ್ತಾ ಬರುತ್ತದೆ. ಹೇಗಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟು ಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸಿಸುತ್ತದೆ” (2 ಕೊರಿಂಥ 4:16, 17). ಪೌಲನು ಏನೆಲ್ಲಾ ಅನುಭವಿಸಿದನೆಂಬುದನ್ನು ಆಲೋಚಿಸಿರಿ (ನೋಡಿರಿ 2 ಕೊರಿಂಥ 11:23-29)! ಆತನ ದೃಷ್ಟಿಯಲ್ಲಾದರೋ, ಅದು ಆತನಿಗೋಸ್ಕರ “ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯ” ಭಾರದೊಂದಿಗೆ ಹೋಲಿಸಿದರೆ ಕೇವಲ “ಹಗುರವಾದ ಸಂಕಟ” ಆಗಿತ್ತು.

ರೋಮಾ 8:18ನ್ನು Charles Spurgeon ಒಂದು ಪರಿಮಾಣಾತ್ಮಕ ದೃಷ್ಟಾಂತರೂಪದಲ್ಲಿ ಮುಂದಿಡುತ್ತಾನೆ:

> ಪೌಲನು ನಮ್ಮ ಈಗಿನ ಕಾಲದ ಸಂಕಟಗಳನ್ನು ಒಂದು ಸರಳವಾದ ಅಂಕಗಣಿತದ ವಿಷಯವಾಗಿಸಿದನು. ಆತನು ಅವುಗಳನ್ನೆಲ್ಲಾ ಕೂಡಿಸಿದನು ಮತ್ತು ಒಟ್ಟು ಮೊತ್ತವನ್ನು ಗಮನಿಸಿದನು. ಆತನು ಇನ್ನೇನು ನಮ್ಮ ಸಮಾನ ಮೊತ್ತದ ಮಹಿಮೆ ಎಷ್ಟೆಂಬುದನ್ನು ಹೇಳುವದಕ್ಕಿದ್ದನು, ಆದರೆ ಅದನ್ನು ಕೈಬಿಟ್ಟನು ಮತ್ತು ಇಷ್ಟನ್ನು ಮಾತ್ರ ಹೇಳಿದನು, ಏನೆಂದರೆ “ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮೆಯೊಂದಿಗೆ ಈಗಿನ ಕಾಲದ ನಮ್ಮ ಸಂಕಟಗಳು ಹೋಲಿಕೆಗೂ ಯೋಗ್ಯವಲ್ಲ” ಎಂಬುದೆ. ಅವುಗಳು ಸಾವಿರಕ್ಕೆ ಎದುರಾಗಿ ಒಂದು ಎಂಬಂತೆ ಇದ್ದವೋ? ಇಲ್ಲ, ಹಾಗಿದ್ದರೆ ಅವುಗಳು ಹೋಲಿಕೆಮಾಡಿ ನೋಡುವದಕ್ಕೆ ಯೋಗ್ಯವಾಗಿದ್ದಿರುತ್ತಿದ್ದವು. ನಮ್ಮ ಸಂಕಟಗಳು ನಮ್ಮ ಮುಂದಿನ ಕಾಲದ ಮಹಿಮೆಯ ಹತ್ತುಲಕ್ಷದಲ್ಲಿ ಒಂದು ಭಾಗವಾಗಿದ್ದರೂ, ಅವುಗಳು ಹೋಲಿಕೆಮಾಡುವದಕ್ಕೆ ಯೋಗ್ಯವಾಗಿರುತ್ತಿದ್ದವು. ಆದರೆ ಅವುಗಳಿಗೆ ಯಾವುದೇ ಅನುಪಾತವಿಲ್ಲ ಎಂಬುದಾಗಿ ಪೌಲನು ಹೇಳಿದನು. ಸಂಕಟಗಳು ಒಂದೇ ಒಂದು ಸಣ್ಣ ಹನಿಯಾಗಿದ್ದರೆ, ಮಹಿಮೆಯು ಮೀತಿಯಿಲ್ಲದ ಸಮುದ್ರದಂತಿರುತ್ತದೆ.[79]

NASB ತರ್ಜುಮೆಯಲ್ಲಿ “ನಮಗೆ ಪ್ರತ್ಯಕ್ಷವಾಗಲಿರುವ ಮಹಿಮೆ” ಎಂದಿರುತ್ತದೆ. KJV, NIV ಮತ್ತು ಇತರ ತರ್ಜುಮೆಗಳಲ್ಲಿ “ನಮ್ಮ*ಲ್ಲಿ*” ಎಂದಿರುತ್ತವೆ. ಗ್ರೀಕ್ ವಾಕ್ಯವನ್ನು ವ್ಯಕ್ತಗೊಳಿಸುವದಕ್ಕೆ ನಮ “ಗೆ” ಅಥವಾ ನಮ್ಮ “ಲ್ಲಿ” ಎಂಬವುಗಲ್ಲಿ ಯಾವದೂ ಸಾಕಾಗು ವದಿಲ್ಲ. ಇಲ್ಲಿ ಉಪಯೋಗಿಸಲ್ಪಟ್ಟಿರುವ ಉಪಸರ್ಗವು εἰς (*eis*), ಅದು ಪ್ರಾಥಮಿಕವಾಗಿ

"ಒಳಗೆ" ಎಂಬ ಅರ್ಥವಾಗಿರುತ್ತದೆ. AB ತರ್ಜುಮೆಯು *eis* ನಲ್ಲಿರುವ ಎಲ್ಲಾ ಭಾವಾರ್ಥವನ್ನು ಒಂದುಗೂಡಿಸುತ್ತದೆ ಮತ್ತು "ನಮ*ಗೆ* ಮತ್ತು ನಮ್ಮ*ಲ್ಲಿ* ಮತ್ತು ನಮ*ಗೋಸ್ಕರ* ಪ್ರತ್ಯಕ್ಷವಾಗುವ ಮತ್ತು ನಮಗೆ ದಯಪಾಲಿಸಲ್ಪಡುವ ಮಹಿಮೆ!" (ಒತ್ತಿ ಹೇಳಿದ್ದು ನನ್ನದು).

ನಮಗೆ ಮತ್ತು ನಮ್ಮಲ್ಲಿ ಪ್ರತ್ಯಕ್ಷವಾಗಲಿರುವ ಮಹಿಮೆ ಯಾವುದು? ನಮ್ಮ ವಾಕ್ಯಭಾಗವು "ದೇವರ ಮಕ್ಕಳ ಮಹಿಮೆ" ಎಂದು ತಿಳಿಸುತ್ತದೆ (8:21) ಮತ್ತು "ದೇಹಕ್ಕೆ ಬರಬೇಕಾದ ವಿಮೋಚನೆಯನ್ನು" ಎಂದು ನಿರ್ದಿಷ್ಟವಾಗಿ ಪ್ರಸ್ತಾವಿಸುತ್ತದೆ (8:23). ಕರ್ತನು ತಿರಿಗಿ ಬರುವಾಗ, ನಮಗೆ ಮಹಿಮೆಯ ದೇಹಗಳು ಕೊಡಲ್ಪಡುವವು (1 ಕೊರಿಂಥ 15:43; 1 ಯೋಹಾನ 3:2) ಮತ್ತು ನಾವು ಆತನ ಮಹಿಮೆಯಲ್ಲಿ ಸುಖವಾಗಿರುವಂತೆ ಅನುಮತಿಸಲ್ಪಡುವೆವು (ಪ್ರಕಟಣೆ 21:23). ಅದನ್ನು ದಾಟಿ ನಾವು ಇನ್ನಾವುದೇ ಊಹಾಪೋಹಗಳನ್ನು ಮಾಡಿಕೊಳ್ಳಲು ಸಾಧ್ಯವಿಲ್ಲ, ಆದರೆ ಇದರ ಬಗ್ಗೆ ನಾವು ದೃಢವಿಶ್ವಾಸದಿಂದಿರಬಲ್ಲೆವು: "ಮಹಿಮೆ" ಎಂಬ ಪದದಲ್ಲಿ ಏನೆಲ್ಲಾ ಸೇರ್ಪಡೆಗೊಂಡಿದೆಯೋ, ಅದನ್ನು ದೇವರೇ ನಮಗೋಸ್ಕರ ಸಿದ್ಧಪಡಿಸಿರುತ್ತಾನೆ. ಅನುವಾದಿಸಲ್ಪಟ್ಟ "ಎಣಿಸುತ್ತೇನೆ" (λογίζομαι, *logizomai*) ಎಂಬ ಗ್ರೀಕ್ ಪದವು "ಬಲವಾದ ನಿಶ್ಚಯತೆಯನ್ನು ವ್ಯಕ್ತಪಡಿಸುತ್ತದೆಯೇ ಹೊರತು ಸಂಶಯವನ್ನಲ್ಲ."[80]

18ನೇ ವಚನವನ್ನು ಬಿಟ್ಟು ಮುಂದೆ ಹೋಗುವ ಮುನ್ನ, "ಪ್ರತ್ಯಕ್ಷವಾಗುವ" ಎಂಬ ಪದದ ಕಡೆಗೆ ಸ್ವಲ್ಪ ಗಮನವನ್ನು ಹರಿಸೋಣ. ಇದು ἀποκαλύπτω (*apokaluptō*) ಎಂಬ ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿದ್ದು, ಅದು ἀπό (*apo*, "ದಿಂದ") ಮತ್ತು καλύπτω (*kaluptō,* "ಮುಚ್ಚು") ಎಂಬ ಪದಗಳ ಸಂಯೋಜನವಾಗಿರುತ್ತದೆ. *Apokaluptō* ಎಂದರೆ "ಪ್ರಕಟಗೊಳಿಸು" ಎಂದರ್ಥವಾಗಿದೆ. ನಮ್ಮ ಮಹಿಮೆಯು ಈಗಿನ ಕಾಲದಲ್ಲಿ "ಮುಸುಕು ಹಾಕಲ್ಪಟ್ಟು" ಇರುವದಾದರೆ, ಅಂದರೆ ಅದು ಕಾಣದಿರುವದಾಗಿದೆ—ಅದು *ಎದುರುನೋಡುವಿಕೆಯ* ಅಗತ್ಯತೆಯನ್ನು ವ್ಯಕ್ತಪಡಿಸುತ್ತದೆ. "ನಾವು ಕಾಣದಿರುವದನ್ನು ಎದುರುನೋಡುವವರಾಗಿದ್ದರೆ" ಎಂದು 25ನೇ ವಚನವು ಹೇಳುತ್ತದೆ.

**ವಚನ 19.** ಪೌಲನು ನಮ್ಮ ಮಹಿಮೆಯ ನಿರೀಕ್ಷೆಯ ಬಗ್ಗೆ ಚರ್ಚಿಸಿದ ಹಾಗೆ, ನಾವು ಎದುರುನೋಡಿರದ ಒಂದು ಸಂಗತಿಯನ್ನು ಮಾಡಿದನು: ಆತನು ನಮ್ಮ ಎದುರುನೋಡುವಿಕೆಯನ್ನು (ನಿರೀಕ್ಷೆಯನ್ನು) 19ರಿಂದ 23 ವಚನಗಳಲ್ಲಿ ಹೇಳಲಾಗಿರುವ ಜಗತ್ತಿನ ಎದುರುನೋಡುವಿಕೆಯೊಂದಿಗೆ ಜೋಡಿಸುತ್ತಾನೆ. ಈ ವಚನಗಳು ಹೊಸ ಒಡಂಬಡಿಕೆಯಲ್ಲಿನ ಇತರ ಯಾವದೇ ವಾಕ್ಯಭಾಗಗಳಿಗಿಂತ ಭಿನ್ನವಾಗಿರುತ್ತವೆ.

19ನೇ ವಚನದಲ್ಲಿ, ಪೌಲನು ಹೀಗೆ ಹೇಳಿದನು, **ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಲವಲವಿಕೆಯಿಂದ ಎದುರುನೋಡುತ್ತಿರುವದು.** ಮತ್ತೊಂದು ಸಾರಿ, "ದೇವಪುತ್ರರು" ಎಂಬುದು "ದೇವರ ಮಕ್ಕಳ"ನ್ನು, ಅದರೆ ಪುತ್ರರಾಗಿರಲಿ ಅಥವಾ ಪುತ್ರಿಯರಾಗಿರಲಿ ಇಬ್ಬರನ್ನೂ ಸೂಚಿಸುವದಕ್ಕಾಗಿ ಜಾತಿವಿಶಿಷ್ಟ ರೂಪದಲ್ಲಿ ಉಪಯೋಗಿಸಲ್ಪಟ್ಟಿದೆ (8:14ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). "ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು" ಎಂಬುದು "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗಲಿರುವ ಮಹಿಮಪದವಿಯನ್ನು" ಮತ್ತು ನಮ್ಮಲ್ಲಿ ಹಾಗೂ ನಮಗಾಗಿ

ಹಾಗೂ ನಮ್ಮ ಮೇಲೆ ಪ್ರತ್ಯಕ್ಷವಾಗುವ ಮಹಿಮೆಯನ್ನು ಸೂಚಿಸುತ್ತದೆ (8:18). ಕ್ರಿಸ್ತನ ತಿರಿಗಿ ಬರುವಾಗ, ನಾವು ನಮ್ಮ ಮಹಿಮೆಯ ದೇಹಗಳನ್ನು ಪಡೆದುಕೊಳ್ಳುವೆವು, ಮತ್ತು ಕರ್ತನು ನಮ್ಮನ್ನು ತನ್ನ ಸಂಗಡ ಇರುವದಕ್ಕಾಗಿ ಕರೆದೊಯ್ಯುವನು. "ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು" ಎಂಬುದು, ಕ್ರಿಸ್ತನು ತಿರಿಗಿ ಬರುವಾಗ, ನಾವು ನಿಜವಾಗಿಯೂ ದೇವರ ಮಕ್ಕಳು ಎಂಬುದು ಪ್ರತ್ಯಕ್ಷವಾಗುವದು ಎಂಬ ವಾಸ್ತವಾಂಶವನ್ನು ಸಹ ಸೂಚಿಸಬಹುದಾಗಿದೆ ಎಂದು ಅಭಿಪ್ರಾಯ ಪಡಲಾಗಿದೆ. ಆ ಸಂದರ್ಭದಲ್ಲಿ ವಿಶ್ವಾಸವಿಡದ ಹಾಗೂ ಹಗೆತನವುಳ್ಳ ಲೋಕವು ಆ ಸತ್ಯವನ್ನು ಒಪ್ಪಿಕೊಳ್ಳುವದು.

ಆ ಮಹಿಮೆಯ ಗಳಿಗೆಗಾಗಿ ಜಗತ್ತು ಹೇಗೆ ಲವಲವಿಕೆಯಿಂದ ಎದುರುನೋಡುತ್ತಿದೆ ಎಂಬುದನ್ನು ತೋರಿಸುವದಕ್ಕಾಗಿ ಪೌಲನು ವರ್ಣಚಿತ್ರದ ಪದಗಳನ್ನು ಉಪಯೋಗಿಸುತ್ತಾನೆ. "ಬಹು ಲವಲವಿಕೆಯಿಂದ" ಎಂಬುದು ἀποκαραδοκία (*apokaradokia*) ಪದದಿಂದ ಬಂದದ್ದಾಗಿದ್ದು ಅದೊಂದು ಸಂಕೀರಣವಾದ ಗ್ರೀಕ್ ಪದವಾಗಿದ್ದು ಮೂರು ಶಬ್ದಗಳನ್ನೊಳಗೊಂಡಿರುತ್ತದೆ: ἀπό (*apo*, "ದಿಂದ"), κάρα (*kara*, "ತಲೆ"), ಮತ್ತು δοκέω (*dokeō*, "ನೋಡು, ವಿಕ್ಷಿಸು").[81] ಅದರರ್ಥವು "ತಲೆಯನ್ನು ಮೇಲಕ್ಕೆತ್ತಿಕೊಂಡು ಕಾಯುತ್ತಾ, ಯಾವ ದಿಕ್ಕಿನಿಂದ ಎದುರುನೋಡುವ ವಸ್ತು ಬರುತ್ತದೋ ಆ ಕಡೆಗೆ ದೃಷ್ಟಿಯನ್ನು ನೆಟ್ಟು ನೋಡುತ್ತಲಿರುವದು."[82] ಒಬ್ಬನು ತನ್ನ ಪ್ರಿಯರನ್ನು ತನ್ನ ಬಳಿಗೆ ತಂದು ಸೇರಿಸುವ ರೈಲಿಗಾಗಿ ಕಾತರದಿಂದ ಎದುರುನೋಡುತ್ತಾ ಹಳಿಗಳನ್ನೇ ದೃಷ್ಟಿಸುತ್ತಿರುವದನ್ನು ಊಹಿಸಿಕೊಳ್ಳಿರಿ.[83] "ಲವಲವಿಕೆಯಿಂದ ಎದುರು ನೋಡು ತ್ತಿರುವದು" ಎಂಬುದು ἀπεκδέχομαι (*apekdechomai*) ಎಂಬ ಪದದ ಅನುವಾದವಾಗಿ ರುತ್ತದೆ.ಇದು "ನಿರೀಕ್ಷಿಸುವದು", ἐκδέχομαι (*ekdechomai*),[84] ಎಂಬುದಕ್ಕಾಗಿರುವ ಪದಕ್ಕೆ ಸೇರಿದ್ದಾಗಿದೆಕ್ಕಾಗಿದೆ, ಅದು ἀπό (*apo*) ಎಂಬುದರಿಂದ ಬಲಗೊಂಡಿದ್ದಾಗಿದೆ. ಅದು ಕಾತರದಿಂದ ಎದುರುನೋಡುವಿಕೆ ಎಂಬ ಅರ್ಥವನ್ನು ನೀಡುತ್ತದೆ.[85] Phillips ತರ್ಜುಮೆಯ ಸರಳಾನುವಾದವು ಹೀಗಿರುತ್ತದೆ "ದೇವಪುತ್ರರು ತಮ್ಮವರ ಬಳಿಗೆ ಬರುವ ಆ ಅದ್ಭುತಕರವಾದ ದೃಶ್ಯವನ್ನು ನೋಡುವದಕ್ಕೆ ಇಡೀ ಜಗತ್ತು ತುದಿಗಾಲಲ್ಲಿ ನಿಂತಿರುತ್ತದೆ." ಒಬ್ಬ ಮಗುವು ತುದಿಗಾಲಿನಲ್ಲಿ ನಿಂತು ಕಿಟಕಿಯಿಂದ ಹೊರಗೆ ನೋಡುತ್ತಾ, ತನ್ನ ತಂದೆ ಮನೆಗೆ ಬರುವದನ್ನು ಕಾಣುವದಕ್ಕೆ ಒದ್ದಾಡುತ್ತಿರುವ ದೃಶ್ಯವು ನನ್ನ ನೆನಪಿಗೆ ಬರುತ್ತದೆ.

ಈ ಹಂತದಲ್ಲಿ ಜನರಿಂದ ಕೇಳಲ್ಪಡುವ ಪ್ರಶ್ನೆಯೆಂದರೆ, "ಬಹು ಲವಲವಿಕೆಯಿಂದ ಎದುರುನೋಡುತ್ತಿರುವ ಈ 'ಜಗತ್ತು' ಯಾವುದು?" "ಜಗತ್ತು" (κτίσις, *ktisis*)[86] ಎಂಬುದು ಸೃಷ್ಟಿಯ ಕಾರ್ಯ ಎಂದಾಗಬಹುದು ಅಥವಾ ಸೃಷ್ಟಿಸಲ್ಪಟ್ಟ ಜಗತ್ತು ಎಂದಾಗಬಹುದು—ಆದರೆ ಪೌಲನು ಮನಸ್ಸಿನಲ್ಲಿ ಯಾವ ಸೃಷ್ಟಿಸಲ್ಪಟ್ಟ ಜಗತ್ತನ್ನು ಇಟ್ಟುಕೊಂಡು ಹೇಳುತ್ತಿದ್ದಾನೆ? ಈ ಪ್ರಶ್ನೆಯ ವಿಷಯವಾಗಿ ವಿವಿಧ ಅಭಿಪ್ರಾಯಗಳಿರುತ್ತವೆ.[88] ಉದಾಹರಣೆಗೆ, ಪೌಲನು ದೇವರ ಜನರ ಬಗ್ಗೆ ಚರ್ಚಿಸುವದನ್ನು ಮುಂದುವರೆಸಲಿದ್ದನಷ್ಟೆ ಎಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಹಾಗಿರುವದು ಅಷ್ಟಾಗಿ ಸಂಭವವಿರುವದಿಲ್ಲ, ಯಾಕೆಂದರೆ ಈ "ಜಗತ್ತು" ಎಂಬುದು 23ನೇ ವಚನದ ಆರಂಭದಲ್ಲಿಯೇ ದೇವಜನರಿಗಿಂತ ಭಿನ್ನವಾದದ್ದೆಂದು ಹೇಳಲ್ಪಟ್ಟಿದೆ: "ಇದು ಮಾತ್ರವಲ್ಲದೆ [ಜಗತ್ತೆಲ್ಲಾ ಇಂದಿನ ವರೆಗೂ ನರಳುತ್ತಾ ಇರುವದು ಮಾತ್ರವಲ್ಲದೆ], . . . ನಾವಾದರೂ [ದೇವರ ಮಕ್ಕಳಾದ ನಾವು]

ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರುನೋಡುತ್ತಾ ನಮ್ಮೊಳಗೆ ನರಳುತ್ತೇವೆ."

ಇನ್ನು ಕೆಲವರು "ಜಗತ್ತು" ಎಂಬುದು ಕ್ರೈಸ್ತೇತರರನ್ನು ಸೂಚಿಸತಕ್ಕದ್ದು ಎಂದು ಸಮರ್ಥಿಸಿಕೊಳ್ಳುತ್ತಾರೆ. ಅವರು ಎಲ್ಲೆಡೆಯಲ್ಲಿಯೂ ಇರುವ ಜನರು, ಅನ್ಯದೇವರನ್ನು ಪೂಜಿಸುವವರು ಸಹ ಈ ಜೀವಿತದಾಚೆ ಒಂದು ಉತ್ತಮವಾದದ್ದು ಸಿಕ್ಕುತ್ತದೆಂದು ಹಂಬಲಿಸುತ್ತಾರೆ ಎಂಬುದಕ್ಕೆ ಇರುವ ಪುರಾವೆಗಳ ಪೂರ್ಣಪಟ್ಟಿ ಮಾಡುತ್ತಾರೆ. ಒಂದು ಅರ್ಥದಲ್ಲಿ, ಕ್ರೈಸ್ತೇತರ ಜಗತ್ತು ಒಂದು ಉತ್ತಮ ನಾಳೆಗೋಸ್ಕರ "ನರಳುತ್ತಿದೆಯೆಂಬುದು" ಸತ್ಯವೇ, ಆದರೆ ಈ ವಿಧವಾದ ಅರ್ಥನಿರೂಪನೆಯು ಸನ್ನಿವೇಶಕ್ಕೆ ಸರಿಹೊಂದುವಂತೆ ಕಾಣಿಸುವದಿಲ್ಲ. 21ನೇ ವಚನವು "ಆ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲುಹೊಂದುವದು" ಎಂದು ಹೇಳುತ್ತದೆ. ಸರ್ವಸಾಮಾನ್ಯವಾದ ರಕ್ಷಣೆ ಹೊಂದಿಲ್ಲದ ಮಾನವರನ್ನು ಕುರಿತಾಗಿ ಈ ಹೇಳಿಕೆಯನ್ನು ನೀಡಲಾಗಿರುತ್ತದೆಂಬುದು ಸಂಶಯಕರವಾದದ್ದು.

ಬಹುಶಃ, "ಜಗತ್ತು" ಎಂಬುದನ್ನು ಮಾನವ ಆತ್ಮವನ್ನು ಹೊರತುಪಡಿಸಿ ಮಿಕ್ಕ ಎಲ್ಲಾ ಭೌತಿಕ ವಸ್ತುವಿನ ಜಗತ್ತು ಎಂದು ಯೋಚಿಸುವದು ಉತ್ತಮವಾಗಿರುತ್ತದೆ.[89] McGarveyಯು ಈ ಅಭಿಪ್ರಾಯವನ್ನು ಮುಂದಿಡುತ್ತಾನೆ: "'ಜಗತ್ತು' ಎಂದು ಹೇಳಿದಾಗ ಪೌಲನ ತಾತ್ಪರ್ಯವೇನಾಗಿತ್ತೆಂಬ ವಿಷಯದಲ್ಲಿ ಬಹಳ ತರ್ಕವಿರುತ್ತದೆ. ಸನ್ನಿವೇಶದ ಪ್ರಕಾರವಾಗಿ, ಆತನ ತಾತ್ಪರ್ಯವು ಭೂಮಿ ಮತ್ತು ಮಾನವರನ್ನು ಹೊರತುಪಡಿಸಿ ಅದರ ಮೇಲಿರುವ ಸಕಲ ಜೀವರಾಶಿ ಎಂದಾಗಿರುತ್ತದೆಂದು ನಾವು ತೆಗೆದುಕೊಳ್ಳುತ್ತೇವೆ."[90]

ಈ ಅಭಿಪ್ರಾಯದ ಕುರಿತು ಹಲವಾರು ಆಕ್ಷೇಪಣೆಗಳು ಎತ್ತಲ್ಪಡುತ್ತವೆ. ಅದರಲ್ಲೊಂದು ಎಂದರೆ ಜಗತ್ತು ಹಂಬಲಿಸುತ್ತದೆ, ಎದುರುನೋಡುತ್ತದೆ, ನರಳುತ್ತದೆ, ಮತ್ತು ವೇದನೆಪಡುತ್ತದೆಂದು ಹೇಳಲಾಗುತ್ತದೆ—ಅದೆಲ್ಲವೂ ಒಬ್ಬ ವ್ಯಕ್ತಿಯು ಚಟುವಟಿಕೆಗಳಾಗಿರುತ್ತವೆ, ಹೊರತು ಒಂದು ವಸ್ತುವಿನದ್ದಲ್ಲ. ಹೇಗೂ, ಶಾಸ್ತ್ರವು ಅನೇಕ ಸಾರಿ ವಸ್ತುಗಳು ಹಾಡುವ, ಕೂಗುವ, ಅಥವಾ ಮಾನವರ ಕೆಲವು ಇತರ ಚಟುವಟಿಕೆಗಳನ್ನು ಮಾಡುತ್ತಿರುವದಾಗಿ ಮಾತಾಡುತ್ತದೆ (ನೋಡಿರಿ ಕೀರ್ತನೆ 96:12; 98:8; ಯೆಶಾಯ 35:1; 55:12). ಇದನ್ನು "ವ್ಯಕ್ತೀಕರಣ" ಎನ್ನಲಾಗುತ್ತದೆ: ಒಂದು *ವಸ್ತುವನ್ನು* ಕುರಿತು ಅದು ಒಬ್ಬ *ವ್ಯಕ್ತಿಯೋ* ಎಂಬಂತೆ ಮಾತಾಡುವದು. ನಾನು ನಿಷ್ಪ್ರಾಣ ವಸ್ತುವೊಂದು "ಲವಲವಿಕೆಯಿಂದ" ಇರುವದನ್ನು ಮತ್ತು "ಎದುರುನೋಡುತ್ತಿರುವದನ್ನು" ಕುರಿತು ಯೋಚಿಸುವಾಗ, ನನ್ನ ಮನಸ್ಸಿನಲ್ಲಿ ನಾನು ಅರ್ಧ—ನಿರ್ಮಿತ ಮನೆಯು ಅಂತಿಮ ಕಟ್ಟುವಿಕೆಗಾಗಿ "ಎದುರುನೋಡುತ್ತಿರುವದನ್ನು," ಪೂರ್ತಿಗೊಳ್ಳದ ಒಂದು ಚಿತ್ರವು ಚಿತ್ರಕಲಾಕಾರನಿಂದ ಕೊನೆಯ ಸ್ಪರ್ಶಗಳಿಗಾಗಿ "ಲವಲವಿಕೆಯಿಂದ" ಕಾಯುತ್ತಿರುವದನ್ನು, ಮತ್ತು ಅರ್ಧ ಬರೆಯಲ್ಪಟ್ಟ ಹಸ್ತಪ್ರತಿಯು ಇಡೀ ಕಥೆಯನ್ನು ಹೇಳುವಂತೆ "ಕೂಗುತ್ತಿರುವದನ್ನು" ಕಾಣುವವನಾಗಿರುತ್ತೇನೆ.

"ಜಗತ್ತು" ಎಂಬುದು ಸರ್ವಸಾಮಾನ್ಯವಾದ ಸೃಷ್ಟಿಯ ಜಗತ್ತನ್ನು ಸೂಚಿಸುತ್ತದೆಂಬ ವಿಚಾರಕ್ಕೆ ವ್ಯಕ್ತವಾಗುವ ಇನ್ನೊಂದು ಆಕ್ಷೇಪಣೆಯೆಂದರೆ ಮಾರ್ಕ 16:15 ಹಾಗೂ ಕೊಲೊ 1:23ರಲ್ಲಿ ವಾಕ್ಯವು ಕೇವಲ ಜನರನ್ನು ಸೂಚಿಸಿ ಹೇಳುತ್ತದೆಂಬದೆ. Moo ಈ ಉತ್ತರವನ್ನು

ನೀಡುತ್ತಾನೆ:

> ಪೌಲನು ಈ ಪದವನ್ನು ಮಾನವ "ಜೀವಿಗಳನ್ನು" ಸೂಚಿಸುವದಕ್ಕಾಗಿ ಉಪಯೋಗಿಸಬಲ್ಲನು (ಗಲಾತ್ಯ 6:15; ಕೊಲೊ 1:23), ಆದರೆ ಆತನು ಸಾಮಾನ್ಯವಾಗಿ ಅದನ್ನು ದೇವರ ಇಡೀ ಸೃಷ್ಟಿಗೆ ಅನ್ವಯಿಸುತ್ತಾನೆ (ರೋಮಾ 1:20, 25; . . . ಕೊಲೊ 1:15). ಇಲ್ಲಿ ಅದರ ಅರ್ಥವನ್ನು ಗ್ರಹಿಸಿಕೊಳ್ಳುವದಕ್ಕೆ ಮುಖ್ಯವಾದದ್ದೆಂದರೆ "ಜಗತ್ತು" ಅನುಭವಿಸುತ್ತಿರುವ ವೇದನೆಯು ಅದರ ಸ್ವಂತ ತಪ್ಪಿನಿಂದಲ್ಲ ಎಂದು ಪೌಲನು ಒತ್ತಿಹೇಳುತ್ತಿದ್ದಾನೆಂಬ ವಾಸ್ತವಾಂಶವೇ. ಆದುದರಿಂದ, ನಾವು ಕೆಲವನ್ನು ಹೊರಗಿಡಬೇಕು . . . ಮಾನವ ಜೀವಿಗಳು . . .[91]

ಪೌಲನು ಮನಸ್ಸಿನಲ್ಲಿ ಸಾಮಾನ್ಯ ಸೃಷ್ಟಿಯನ್ನಿಟ್ಟುಕೊಂಡು ಈ ಮಾತುಗಳನ್ನಾಡಿದನೆಂಬದನ್ನು ಹಲವಾರು ತರ್ಜುಮೆಗಳು ಪ್ರತಿಫಲಿಸುತ್ತವೆ: NEB ತರ್ಜುಮೆಯಲ್ಲಿ "ಸೃಷ್ಟಿಸಲ್ಪಟ್ಟ ವಿಶ್ವ" ಎಂದಿರುತ್ತದೆ; NIRVಯಲ್ಲಿ, "ಸೃಷ್ಟಿಸಲ್ಪಟ್ಟ ಲೋಕ"; ಮತ್ತು NCVಯಲ್ಲಿ, "ದೇವರ ಮಾಡಿದ ಸಮಸ್ತವು" ಎಂದಿರುತ್ತದೆ. ನಾವು 2 ಪೇತ್ರ 3:7 ಮತ್ತು ಪ್ರಕಟಣೆ 21:1ರ ಪದಗುಚ್ಛಗಳನ್ನು ಅಳವಡಿಸಿಕೊಂಡು ನಾವು ಅದನ್ನು "ಈಗಿರುವ ಭೂಮ್ಯಾಕಾಶಗಳು" ಅಥವಾ "ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ" ಎಂದು ಕರೆಯಬಹುದು. ನಾವು ಅದನ್ನು "ಹಳೆಯ ಆಕಾಶಮಂಡಲ ಮತ್ತು ಭೂಮಂಡಲ" ಎಂದು ಸಹ ಯೋಚಿಸಬಹುದು (ನೋಡಿರಿ 2 ಪೇತ್ರ 3:13; ಪ್ರಕಟಣೆ 21:1). ನಮ್ಮ ವಾಕ್ಯಭಾಗದಲ್ಲಿ ಜಗತ್ತಿನ ಕುರಿತು ಹೇಳಿರುವದೆಲ್ಲವೂ ಈ ಅರ್ಥನಿರೂಪನೆಯೊಂದಿಗೆ ಹೊಂದಾಣಿಕೆಯಾಗಬಲ್ಲದು.

ಪೌಲನು ಸೃಷ್ಟಿಸಲ್ಪಟ್ಟ (ಮಾನವರನ್ನು ಹೊರತಾಗಿಸಿ) ಜಗತ್ತು ಕ್ರಿಸ್ತನ ಪುನರಾಗಮನಕ್ಕಾಗಿ ಎದುರುನೋಡುತ್ತಾ ಹಂಬಲಿಸುವದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದ್ದರೆ, ಮುಂದಿನ ಪ್ರಶ್ನೆಯು ಹೀಗಿರತಕ್ಕದ್ದು: "ಜಗತ್ತು ಏಕೆ ಬಹು ಲವಲವಿಕೆಯಿಂದ ಎದುರುನೋಡುತ್ತಿದೆ?" ಇದಕ್ಕೆ ಉತ್ತರವು ಎರಡು ರೀತಿಯಲ್ಲಿರುತ್ತದೆ: ಆದಾಮನ ಪಾಪದ ವಿಶ್ವವ್ಯಾಪಿ ಬಾಧಿತದ ಕಾರಣದಿಂದ; ಮಾನವರು ಹಾಗೂ ಸರ್ವಸಾಮಾನ್ಯ ಜಗತ್ತಿನ ನಡುವೆ ಇರುವ ನಿಕಟ ಸಂಬಂಧದ ಕಾರಣದಿಂದ. ಆದಾಮನು ಪಾಪ ಮಾಡಿದಾಗ, ಮಾನವರು ಮಾತ್ರವಲ್ಲದೆ, ಸೃಷ್ಟಿಸಲ್ಪಟ್ಟ ಇಡೀ ಜಗತ್ತು ಸಹ ಬಾಧಿತಗೊಂಡಿತು. ಆದಾಮನಿಗೆ ಹೀಗೆ ಹೇಳಲ್ಪಟ್ಟಿತು, "ನಿನ್ನ ನಿಮಿತ್ತ ಭೂಮಿಗೆ ಶಾಪ ಬಂತು. ನಿನ್ನ ಜೀವಮಾನವೆಲ್ಲಾ ದುಡಿದು ದುಡಿದು ಭೂಮಿಯ ಹುಟ್ಟುವಳಿಯನ್ನು ತಿನ್ನಬೇಕು. ಆ ಭೂಮಿಯಲ್ಲಿ ಮುಳ್ಳುಗಿಡಗಳೂ ಕಳೆಗಳೂ ಬಹಳವಾಗಿ ಹುಟ್ಟುವವು" (ಆದಿ. 3:17, 18).

ಪಾಪವು ಎಷ್ಟು ಕೆಟ್ಟದ್ದು? ಇಡೀ ಲೋಕಕ್ಕೇ ಹಾನಿಯನ್ನುಂಟು ಮಾಡುವಷ್ಟು ಕೆಟ್ಟದ್ದು! ಲೋಕದಲ್ಲಿ ಈಗಲೂ ಒಳ್ಳೇದು ಹಾಗೂ ಸೌಂದರ್ಯವು ಇರುತ್ತದೆ, ಆದರೆ ಅಲ್ಲಿ ದುಷ್ಟತನ ಹಾಗೂ ಕುರುಪಿತನ ಸಹ ಇರುತ್ತದೆ—ಪಾಪದ ಫಲಿತಗಳು. ಆದಾಮ ಹಾಗೂ ಹವ್ವಳರು ಏದೆನ್ ತೋಟದಿಂದ ಹೊರಕ್ಕೆ ಓಡಿಸಲ್ಪಟ್ಟ ದಿನದಿಂದಲೂ ಲೋಕದಲ್ಲಿ ಕ್ಷೋಬೆಯು ಇರುತ್ತದೆ. Larry Deason ವಾದಿಸುವದೇನೆಂದರೆ "ಮಾನವನು ಬಾಧೆಯನ್ನನುಭವಿಸುವದು ನ್ಯಾಯವಾದದ್ದು," ಆದರೆ "ಜಗತ್ತು ಅನುಭವಿಸುವ ಬಾಧೆಯು ಫಲಿತದಿಂದಾದ್ದು"[92]—

ಅಂದರೆ, ಆದಾಮನ ಪಾಪದಿಂದಾದ ಒಂದು ಫಲಿತವಾಗಿ.

**ವಚನಗಳು 20, 21.** ಆದಾಮನ ಪಾಪದಿಂದ ಸೃಷ್ಟಿಸಲ್ಪಟ್ಟ ಜಗತ್ತಿಗಾದ ಫಲಿತವೇನಾಗಿತ್ತು? ಪೌಲನು ಮುಂದುವರೆದು ಹೇಳುತ್ತಾನೆ, **ಜಗತ್ತು ವ್ಯರ್ಥತ್ವಕ್ಕೆ ಒಳಗಾಯಿತು.**[93] "ವ್ಯರ್ಥತ್ವ" ಎಂಬುದು ματαιότης (*mataiotēs*) ಎಂಬ ಪದದಿಂದ ಬಂದ್ದಾಗಿದೆ, ಅದರರ್ಥವು "ತರ್ಕ ಶೂನ್ಯವಾದದ್ದು." *Mataiotēs* ಅಂದರೆ "ಯಾವದೇ ಗೊತ್ತುಗುರಿಯಿಲ್ಲದ . . . ಉಪಯುಕ್ತವಾದ ಗುರಿ ಅಥವಾ ಫಲ ಇಲ್ಲದಿರುವಿಕೆ."[94] ಇದೇ ಪದವು ಪ್ರಸಂಗಿ 1:2ರ ಗ್ರೀಕ್ ಅನುವಾದದಲ್ಲಿ ಉಪಯೋಗಿಸಲ್ಪಟ್ಟಿದೆ: "ಪ್ರಸಂಗಿಯು ಹೀಗೆ ಹೇಳುತ್ತಾನೆ ವ್ಯರ್ಥವೇ ವ್ಯರ್ಥ, ವ್ಯರ್ಥವೇ ವ್ಯರ್ಥ, ಸಮಸ್ತವೂ ವ್ಯರ್ಥ." NIVಯು ಪ್ರಸಂಗಿ 1:2ನ್ನು ಹೀಗೆ ಅನುವಾದಿಸಿರುತ್ತದೆ, "ಪ್ರಸಂಗಿಯು ಹೇಳುತ್ತಾನೆ—'ಅರ್ಥಹೀನ! ಅರ್ಥಹೀನ! ಸಂಪೂರ್ಣ ಅರ್ಥಹೀನ! ಸಮಸ್ತವೂ ಅರ್ಥಹೀನ.'" *Mataiotēs* ಎಂಬ ಪದವು ಸೂಚಿಸುವದೇನೆಂದರೆ, ಪಾಪದ ಕಾರಣದಿಂದಾಗಿ, ಭೂಮಿಯು ಇರುವಿಕೆಗಿದ್ದ ಕಾರಣವನ್ನು ನೆರವೇರಿಸುವದಕ್ಕೆ ಸಾಧ್ಯವಾಗಲಿಲ್ಲ. JB ತರ್ಜುಮೆಯಲ್ಲಿ ಹೀಗಿರುತ್ತದೆ, "ಅದು ತನ್ನ ಉದ್ದೇಶವನ್ನು ಸಾಧಿಸುವದಕ್ಕೆ ಅಸಮರ್ಥಗೊಳಿಸಲ್ಪಟ್ಟಿತು."

ಖಂಡಿತವಾಗಿಯೂ ಇದು ಸೃಷ್ಟಿಸಲ್ಪಟ್ಟ ಜಗತ್ತು ಮಾಡಿದ ಒಂದು ಕೆಟ್ಟ ತೀರ್ಮಾನದ ಫಲಿತವಾಗಿರಲಿಲ್ಲ. ಪೌಲನು ವ್ಯಕ್ತೀಕರಣವನ್ನು ಮುಂದುವರೆಸುತ್ತಾ ಹೀಗೆ ಕೂಡಿಸಿ ಹೇಳುತ್ತಾನೆ, **ಹೀಗೆ ಒಳಗಾಗಿದ್ದು ಸ್ವೇಚ್ಛೆಯಿಂದಲ್ಲ, ಅದನ್ನು ಒಳಪಡಿಸಿದವನ ಸಂಕಲ್ಪದಿಂದಲೇ**. ಭೂಮಿಗೆ ಒಂದು ಚಿತ್ತವಿದ್ದಿದ್ದರೆ, ಅದು ತನ್ನ ಉದ್ದೇಶವನ್ನು ನೆರವೇರಿಸಲು ಅಸಮರ್ಥವಾಗುವದನ್ನು ಆರಿಸಿಕೊಳ್ಳುತ್ತಿರಲಿಲ್ಲ. ಮಾನವನ ಪಾಪದ ಕಾರಣದಿಂದ ಭೂಮಿಯನ್ನು ವ್ಯರ್ಥತ್ವಕ್ಕೊಳಪಡಿಸಿದ್ದು ಸ್ವತಃ ದೇವರೇ ಆಗಿದ್ದನು.

ಹೇಗಿದ್ದರೂ, ಕರ್ತನು ಸೃಷ್ಟಿಸಲ್ಪಟ್ಟ ಜಗತ್ತನ್ನು ನಿರೀಕ್ಷೆಯಿಲ್ಲದ್ದಾಗಿ ಬಿಡಲಿಲ್ಲ. **ಆದರೂ ಅದಕ್ಕೊಂದು ನಿರೀಕ್ಷೆಯುಂಟು** ಎಂದು ವಾಕ್ಯಭಾಗವು ಹೇಳುತ್ತದೆ. ನಿರೀಕ್ಷೆ ಎಂಬುದು ವಾಕ್ಯಭಾಗದಲ್ಲಿ ಹಲವಾರು ಸಾರಿ ಪರೀಕ್ಷವಾಗಿ ಸೂಚಿಸಲ್ಪಟ್ಟಿರುತ್ತದೆ, ಆದರೆ ಇದೇ ಮೊದಲ ಬಾರಿಗೆ ಈ ಪದವು ಉಪಯೋಗಿಸಲ್ಪಟ್ಟಿದೆ. ಯಾವುದರ ನಿರೀಕ್ಷೆಯುಂಟು? "ನಿರೀಕ್ಷೆಯುಂಟು" **ಏನೆಂದರೆ ಆ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲುಹೊಂದುವೇ**.

"ದೇವರ ಮಕ್ಕಳ ಮಹಿಮೆಯುಳ್ಳ" ಎಂಬುದು 17 ಮತ್ತು 18ನೇ ವಚನವನ್ನು ಸೂಚಿಸುತ್ತದೆ, ಆ ವಚನಗಳು ಕ್ರಿಸ್ತನ "ಮಹಿಮೆಯಲ್ಲಿ ಪಾಲುಗಾರರಾಗುವೆವು" ಮತ್ತು "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿ" ಎಂಬದಾಗಿ ಹೇಳುತ್ತವೆ. ಈ ಸನ್ನಿವೇಶದಲ್ಲಿ, "ನಮ್ಮ ದೇಹಗಳ ವಿಮೋಚನೆ" ಬಗ್ಗೆ ವಿಶೇಷವಾದ ಒತ್ತು ಕೊಡಲ್ಪಟ್ಟಿದೆ. ಪುನರುತ್ಥಾನ ಸಂಭವಿಸುವಾಗ, ನಮ್ಮ ಮಹಿಮೆಯುಳ್ಳ ದೇಹಗಳನ್ನು ಪಡೆದುಕೊಳ್ಳುವಾಗ (1 ಕೊರಿಂಥ 15:43), ಪ್ರಪ್ರಥಮ ಬಾರಿಗೆ, ನಾವು ನೋವು ಮತ್ತು ಕ್ಷಯ ಮತ್ತು ಮರಣಗಳಿಂದ *ಮುಕ್ತ*ರಾಗುವೆವು. ಆದಕಾರಣದಿಂದ ಪೌಲನು "ದೇವರ ಮಕ್ಕಳ ಮಹಿಮೆಯುಳ್ಳ *ವಿಮೋಚನೆ*ಯಲ್ಲಿ" ಬಗ್ಗೆ ಮಾತಾಡಿದನು. ಈ ನಮ್ಮ ನಿರೀಕ್ಷೆಯು ಜಗತ್ತಿನ ನಿರೀಕ್ಷೆಯೊಂದಿಗೆ ಜೋಡಿಸಲ್ಪಟ್ಟಿರುತ್ತದೆ, ಏನೆಂದರೆ ಅದು "ಕೂಡ ನಾಶದ ವಶದಿಂದ ಬಿಡುಗಡೆಯಾಗಿ"ಸಲ್ಪಡುವದು" ಮತ್ತು ನಶಿಸುವದರಿಂದ ಬಿಡುಗಡೆಗೊಳ್ಳುವದು.

ಮಾನವರು ಹಾಗೂ ಭೂಮಿ ಶಾಪದಲ್ಲಿ ಪಾಲುಗಾರರು (ಆದಿ. 3:16-19); ಇಬ್ಬರೂ ಶಾಪವನ್ನು ತೆಗೆದುಹಾಕುವದರಲ್ಲಿ ಸಹ ಪಾಲುಗಾರರಾಗುವರು (ನೋಡಿರಿ ಪ್ರಕಟ. 22:3).

ಒಂದು ದಿನ, ಕ್ರಿಸ್ತನು ಹಿಂದಿರುಗಿ ಬರುವನು (1 ಥೆಸಲೋನಿಕ 4:16, 17). ಆಗ ಏನು ಸಂಭವಿಸುತ್ತದೆಂಬುದನ್ನು ಪೌಲನು ವರ್ಣಿಸುತ್ತಾನೆ:

> . . . ಆದರೆ ಕಡೇ ತುತೂರಿಯ ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗೆ ಮಾರ್ಪಡುವೆವು. ತುತೂರಿಯು ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು, ನಾವು ಮಾರ್ಪಡುವೆವು. ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವದೂ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವದೂ ಅವಶ್ಯ (1 ಕೊರಿಂಥ 15:51-53).

ನಾವು ಮಾರ್ಪಡುವಾಗ, ನಾವು ಆತ್ಮೀಕ ದೇಹಗಳಲ್ಲಿ ನೆಲೆಸುವೆವು (1 ಕೊರಿಂಥ 15:44). ಒಂದು ರೀತಿಯಲ್ಲಿ ನಮಗೆ ಇದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿರುವದಿಲ್ಲ, ಈ *ಆತ್ಮೀಕ* ದೇಹಗಳು ನಮ್ಮ ಹಳೇ ಭೌತಿಕ ದೇಹಗಳೊಂದಿಗೆ ಸಂಬಂಧ ಹೊಂದಿರುತ್ತವೆ (1 ಕೊರಿಂಥ 15:35-38);[96] ಆದರೆ ನಮ್ಮ *ಆತ್ಮೀಕ* ದೇಹಗಳು ನಿರ್ಲಯವಾಗಿರುವವು, ಮಹಿಮೆಯಿಂದ ಕೂಡಿಸುವವು, ಹಾಗೂ ಶಕ್ತಿಯುತವಾಗಿರುವವು (1 ಕೊರಿಂಥ 15:42-44). ಆ *ಆತ್ಮೀಕ* ದೇಹಗಳಿಗೆ ಜೀವಿಸುವದಕ್ಕೆ ಒಂದು *ಆತ್ಮೀಕ* ಸ್ಥಳದ ಅಗತ್ಯವಿರುತ್ತದೆ. ಯೇಸುವಿನ ಪ್ರಕಾರವಾಗಿ, ಈ "ಹಳೇ" ಭೌತಿಕ ಆಕಾಶ ಮತ್ತು ಭೂಮಿ "ಅಳಿದು ಹೋಗುವವು" (ಮತ್ತಾಯ 24:35). ಅವು "ಸುಟ್ಟುಹೋಗುವವು" ಎಂದು ಪೇತ್ರನು ಹೇಳಿದನು (2 ಪೇತ್ರ 3:10; ನೋಡಿರಿ 3:7)—ಆದರೆ (ನಾನು ಒಂದು ವೇಳೆ ಈ ಚಿತ್ರವನ್ನು ಉಪಯೋಗಿಸುವದಾದರೆ) "ಬೂದಿಯೊಳಗಿಂದ" "ಒಂದು ನೂತನ ಆಕಾಶ ಮತ್ತು ಭೂಮಿ" ಹೊರಹೊಮ್ಮುವುದು (ನೋಡಿರಿ 2 ಪೇತ್ರ 3:13; ಪ್ರಕಟ. 21:1), ಅದೊಂದು *ಆತ್ಮೀಕ*ವಾದ ಆಕಾಶ ಮತ್ತು ಭೂಮಿಯಾಗಿರುವದು. ಪುನಃ, ಒಂದು ರೀತಿಯಲ್ಲಿ ಇದನ್ನು ಗ್ರಹಿಸಿಕೊಳ್ಳಲು ನಮಗೆ ಅಸಾಧ್ಯವಾಗಿರುತ್ತದೆ, "ಹಳೇ" ಭೌತಿಕ ಆಕಾಶ ಮತ್ತು ಭೂಮಿ ಹಾಗೂ "ನೂತನ" ಆಕಾಶ ಮತ್ತು ಭೂಮಿಯ ನಡುವೆ ಒಂದು ಸಂಬಂಧವಿರುತ್ತದೆ.

ನಾವು ತಿಳಿಯಬೇಕಾದದ್ದಿಷ್ಟೆ, ಏನೆಂದರೆ ದೇವರು ಭೌತಿಕ ದೇಹಗಳಿಗೆ ಜೀವಿಸಲು ಪರಿಪೂರ್ಣವಾಗಿದ್ದ ಸ್ಥಳವಾಗಿ ಏದೆನ್ ತೋಟವನ್ನು ಒದಗಿಸಿದ್ದನು, ಅದೇ ರೀತಿಯಾಗಿ ಆತನು ಆತ್ಮೀಕ ದೇಹಗಳಿಗೆ ಪರಿಪೂರ್ಣವಾದ ನಿವಾಸ ಸ್ಥಳವನ್ನು ಒದಗಿಸುವನು (ನೋಡಿರಿ ಯೋಹಾನ 14:2; ಪ್ರಕಟಣ. 21; 22). ನಾವು ಇದನ್ನು ಹೇಗೆ ಅರ್ಥಮಾಡಿಕೊಳ್ಳಬಲ್ಲೆವು? ಒಂದು ಆತ್ಮೀಕ ದೇಹವು ಹೇಗಿರುತ್ತದೆಂಬದನ್ನು ನಾವು ಗ್ರಹಿಸಿಕೊಳ್ಳದಿದ್ದಲ್ಲಿ, ಆತ್ಮೀಕ ದೇಹದ ನಿವಾಸ ಸ್ಥಳವು ಹೇಗಿರುವದೆಂಬುದನ್ನು ನಾವು ಕಲ್ಪಿಸಿಕೊಳ್ಳುವದಕ್ಕಾದರೂ ಹೇಗೆ ಸಾಧ್ಯ? ಇದು ನಮಗೆ ತಿಳಿದಿದ್ದರೆ ಸಾಕಾಗಿರುತ್ತದೆ, ಏನೆಂದರೆ ದೇವರ ಕೃಪೆಯಿಂದ, ನಾವು ಆತನಿರುವಲ್ಲಿಯೇ ನಿತ್ಯತ್ವವನ್ನು ಕಳೆಯಬಲ್ಲೆವು ಎಂಬುದೇ (ನೋಡಿರಿ ಮತ್ತಾಯ 6:9; ಪ್ರಕಟ. 21:1, 22, 23; 22:1, 3)—ಅದು "ಪರಲೋಕ" ಎಂದು ಕರೆಯಲ್ಪಡುವ "ಸ್ಥಳ" (ನೋಡಿರಿ ಫಿಲಿಪ್ಪ. 3:20, 21; ಕೊಲೊಸ್ಸೆ 1:5; 1 ಥೆಸಲೋನಿಕ 4:16, 17; 1 ಪೇತ್ರ 1:3, 4).[97]

**ವಚನ 22.** ಈಗ ನಾವು ಪುನಃ ಈಗಿನ ಜಗತ್ತು ಅನುಭವಿಸುತ್ತಿರುವ ಆಶಾಭಂಗದ ಕಡೆಗೆ ತಿರುಗಿ ಬರೋಣ. ನಾವು ಮಾರ್ಪಡುವಂತಹ ಆ ಮಹಿಮೆಯ ದಿನಕ್ಕಾಗಿ ಹಂಬಲಿಸುವ ಪ್ರಕಾರವೇ, ಅದೇ ರೀತಿಯಲ್ಲಿ (ಫಲಿತವಾಗಿ) ಸೃಷ್ಟಿಸಲ್ಪಟ್ಟ ಜಗತ್ತು ಸಹ ಆ ದಿನಕ್ಕಾಗಿ ಹಂಬಲಿಸುತ್ತದೆ. **ಜಗತ್ತೆಲ್ಲಾ ಇಂದಿನ ವರೆಗೂ ನರಳುತ್ತಾ . . . ಇರುತ್ತದೆಂದು ನಾವು ಬಲ್ಲೆವು** ಎಂದು ಪೌಲನು ಹೇಳುತ್ತಾನೆ. ಆತನು "ಬಲ್ಲೆವು" ಎಂದು ಹೇಳಿದನು, ಯಾಕೆಂದರೆ ನಾವು ಸಂಕಷ್ಟಕ್ಕೊಳಗಾದ ಲೋಕದಲ್ಲಿ ಜೀವಿಸುತ್ತೇವೆಂಬುದು ಎಲ್ಲರಿಗೂ ತಿಳಿದಿರುವ ವಿಚಾರವೇ. "ನರಳುತ್ತಾ . . ." ಎಂಬುದು συστενάζω (*sustenazō*) ಎಂಬದರ ಅನುವಾದವಾಗಿದೆ, ಅದೊಂದು ಗ್ರೀಕ್‌ನ ಸಂಯುಕ್ತ ಪದವಾಗಿದ್ದು στενάζω (*stenazō,* "ನರಳು") ಮತ್ತು σύν (*sun,* "ದೊಂದಿಗೆ") ಎಂಬ ಪದಗಳನ್ನೊಳಗೊಂಡಿರುತ್ತದೆ.[98] ಪೌಲನು ಸಂಕೇತಿಕ ಭಾಷೆಯನ್ನು ಉಪಯೋಗಿಸುತ್ತಿದ್ದಾನೆ; ಆದರೆ ಭೂಮಿಯು "ನರಳುತ್ತಾ" ಇರುವ ವರ್ಣನೆಯು ಒಂದು ಭೂಕಂಪದ ನಡುಕವನ್ನು, ಒಂದು ಸುಂಟರಗಾಳಿ ಅಥವಾ ಚಂಡಮಾರುತದ ಗರ್ಜನೆಯನ್ನು, ಕಾಡ್ಗಿಚ್ಚಿನ ಚಿಟಿಲುಗುಟ್ಟನ್ನು, ದಡವನ್ನು ಅಪ್ಪಳಿಸುತ್ತಿರುವ ಅಲೆಗಳ ಗುಡುಗನ್ನು ನೆನಪಿಗೆ ತರುತ್ತದೆ. ಈ ನರಳುವಿಕೆಯು **ಇದುವರೆಗೂ** ಮುಂದುವರೆದಿರುತ್ತದೆ ಎಂದು ಅಪೊಸ್ತಲನು ಹೇಳುತ್ತಾನೆ. ಇದು ನಮ್ಮ "ಇದುವರೆಗೂ" ಮಾತ್ರವಲ್ಲದೆ, ಪೌಲನ "ಇದುವರೆಗೂ" ಸಹ ಆಗಿರುತ್ತದೆ; ನರಳುವಿಕೆಯು ಇಂದಿನ ದಿನದ ತನಕ ಇರುತ್ತದೆ ಮತ್ತು ಕರ್ತನ ಪುನರಾಗಮನದ ವರೆಗೂ ಮುಂದುವರೆಯುವದು.

ಹೇಗೂ, ಭೂಮಿಯ ನೋವು ಮತ್ತು ವೇದನೆಗಳು ಅರ್ಥಹೀನವಲ್ಲ. ಪೌಲನು ಇದನ್ನು ಸಹ ಹೇಳಿದನು, ಏನೆಂದರೆ "ಜಗತ್ತೆಲ್ಲಾ" **ಪ್ರಸವ ವೇದನೆಪಡುತ್ತಾ ಇರುತ್ತದೆ** ಎಂಬದೆ. "ಪ್ರಸವ ವೇದನೆಪಡುತ್ತಾ" ಎಂಬುದು ಗ್ರೀಕ್‌ನ ಒಂದೇ ಪದದಿಂದ ಬಂದಿರುತ್ತದೆ: συνωδίνω (*sunōdinō*). ಅದು ὠδίνω (*ōdinō*, "ಪ್ರಸವ ವೇದನೆ"[99]) ಎಂಬದರೊಂದಿಗೆ σύν (*sun*, "ಯೊಂದಿಗೆ") ಎಂಬ ಉಪಸರ್ಗದ ಸಂಯೋಜನೆಯಾಗಿದೆ. ಜಗತ್ತು *ಮರಣ* ವೇದನೆಯನ್ನಲ್ಲ, ಆದರೆ *ಪ್ರಸವ* ವೇದನೆ ಪಡುತ್ತದೆಂದು ಹೇಳಲ್ಪಟ್ಟಿರುತ್ತದೆ.[100] ಪೌಲನು ನೋಡುವ ಈ ಸಾದೃಶ್ಯವನ್ನು ಪುರುಷರಿಗಿಂತಲೂ ಪ್ರಸವ ವೇದನೆಯನ್ನು ಅನುಭವಿಸಿರುವ ಸ್ತ್ರೀಯರು ಉತ್ತಮವಾಗಿ ಅರ್ಥಮಾಡಿಕೊಳ್ಳುವರು. ವೇದನೆಯು ಭಯಂಕರವಾಗಿರಬೇಕು, ಆದರೆ ಅದು ಅರ್ಥವಿಲ್ಲದ ವೇದನೆಯಾಗಿರುವದಿಲ್ಲ; ಅದೊಂದು ಗುರಿ ಇರುತ್ತದೆ: ಹೊಸ ಜೀವನ. ಪೌಲನ ಸಂಕೇತದಲ್ಲಿ, ಹಳೆ ಆಕಾಶ ಹಾಗೂ ಭೂಮಿಯ ನರಳುವಿಕೆ ಮತ್ತು ವೇದನೆಗಳು ಮುಂದೆ ಒಂದು ಉತ್ತಮ ದಿನವಿರುತ್ತದೆಂಬುದಕ್ಕೆ ಪುರಾವೆಯನ್ನು ಒದಗಿಸುತ್ತವೆ: ಅದು *ನೂತನ* ಆಕಾಶ ಮತ್ತು ಭೂಮಿಯ ದಿನ.

**ವಚನ 23.** ಪೌಲನು ಸೃಷ್ಟಿಸಲ್ಪಟ್ಟ ಜಗತ್ತಿನ ಕಡೆಯಿಂದ ಕ್ರೈಸ್ತರೆಡೆಗೆ ಸಾಗುತ್ತಾನೆ: **ಇದು ಮಾತ್ರವಲ್ಲದೆ** [ಜಗತ್ತು ನರಳುತ್ತಾ ಇರುವದು ಮಾತ್ರವಲ್ಲದೆ] **. . . ನಾವಾದರೋ.** ದೇವರ ಮಕ್ಕಳಾಗಿರುವ ನಮಗೆ, ಈಗಾಗಲೇ ಶ್ರೇಷ್ಠ ಆತ್ಮೀಕ ಆಶೀರ್ವಾದಗಳು ಕೊಡಲ್ಪಟ್ಟಿವೆ. ಉದಾಹರಣೆಗೆ, ನಾವು **ಪ್ರಥಮ ಫಲಿತವಾಗಿರುವ ಪವಿತ್ರಾತ್ಮವರವನ್ನು** ಹೊಂದಿದ್ದೇವೆ. "ಪ್ರಥಮ ಫಲ" ಎಂಬುದು "ಪ್ರಥಮ ಗೋಧಿಯ ತೆನೆಯ ಕಟ್ಟನ್ನು ಕಾಣಿಕೆಯಾಗಿ ಅರ್ಪಿಸುವ ಹಳೇ ಒಡಂಬಡಿಕೆಯ ಸಾಮಾನ್ಯಸೂತ್ರದಿಂದ ಬಂದದ್ದು . . . ,

ಅದು ಕೃತಜ್ಞತಾಸ್ತುತಿ ಹಾಗೂ ಎದುರುನೋಡುವಿಕೆ ಸಂಕೇತಗಳೆರಡೂ ಆಗಿತ್ತು"[101] (ನೋಡಿರಿ ವಿಮೋ. 23:19; ಯಾಜ. 23:10, 11). "ಪಕ್ವಗೊಂಡಿರುವ ಪ್ರಥಮ ತೆನೆಯನ್ನು ತೂಗಾಡಿಸಿ ತೋರಿಸುವದು ಎರಚುವ ಒಂದು ವಿಧವಾಗಿತ್ತು: ಇನ್ನು ಬಹಳಷ್ಟು ಬರುವದಿದೆ. ಮುಂದೆ ಇನ್ನಷ್ಟು ಉತ್ತಮ ಸಂಗತಿಗಳು ನಡೆಯಲಿವೆ!"[102] NCV ತರ್ಜುಮೆಯಲ್ಲಿ "ನಾವು ದೇವರ ವಾಗ್ದಾನದ ಮೊದಲ ಭಾಗವಾಗಿ ಪವಿತ್ರಾತ್ಮನನ್ನು ಹೊಂದಿದ್ದೇವೆ."[103]

ಹೇಗಿದ್ದರೂ, ಬರಲಿರುವದಕ್ಕೋಸ್ಕರವಾಗಿ ನಾವು ಈಗಲೂ **ನಮ್ಮೊಳಗೆ ನರಳುತ್ತೇವೆ.** ಈ ಮುಂಚೆ, ಪೌಲನು ಕೊರಿಂಥದವರಿಗೆ ಹೀಗೆ ಬರೆದಿದ್ದನು, "ನಾವು ಈಗಿನ ದೇಹದಲ್ಲಿರುವವರೆಗೂ [ಭೌತಿಕ ದೇಹ] ನರಳುತ್ತೇವೆ. ಪರಲೋಕದಿಂದ ದೊರಕುವ ನಮ್ಮ ನಿವಾಸವನ್ನು [ಆತ್ಮೀಕ ದೇಹ] ನಾವು ದೇಹದ ಮೇಲೆ ಧರಿಸಿಕೊಳ್ಳಬೇಕೆಂದು ಅಪೇಕ್ಷಿಸುತ್ತೇವೆ" (2 ಕೊರಿಂಥ 5:2). ನಾನು ಹೆಚ್ಚು ಕಾಲ ಜೀವಿಸಿದ ಹಾಗೆ, ಈ ಕೆಡುತ್ತಿರುವ ದೇಹದಲ್ಲಿ ನರುಳು ಕುರಿತಾದ ಪೌಲನ ಹೇಳಿಕೆಯನ್ನು ಹೆಚ್ಚು ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳುವೆನು; ಅದು ಒಂದು ರೀತಿಯಲ್ಲಿ ಬಿದ್ದು ಹೋಗುತ್ತಲಿರುವ ಮನೆಯಂತಿರುತ್ತದೆ!

ಆದ್ದರಿಂದ ಪೌಲನು, ನಾವು ಈ ಹಳೇ ದೇಹದೊಳಗಿಂದ ಬಿಡಿಸಲ್ಪಟ್ಟು ನಮ್ಮ ನೂತನ ದೇಹವನ್ನು ಪಡೆದುಕೊಳ್ಳಲು **ಎದುರುನೋಡುತ್ತಾ** ಇದ್ದೇವೆ ಎಂದು ಹೇಳಿದನು. "ಎದುರುನೋಡುತ್ತಾ" ಎಂಬುದು 19ನೇ ವಚನದಲ್ಲಿ "ಲವಲವಿಕೆಯಿಂದ ಎದುರುನೋಡುತ್ತಿರುವದು" ಎಂದು ಅನುವಾದಿಸಲ್ಪಟ್ಟಿರುವ ಅದೇ ಪದದಿಂದ ಬಂದದ್ದಾಗಿದೆ: ಸೃಷ್ಟಿಸಲ್ಪಟ್ಟಿರುವ ಜಗತ್ತು "ತುದಿಗಾಲಿನಲ್ಲಿ ನಿಂತಿರುವ" ಪ್ರಕಾರವೇ, ನಾವು ಸಹ ಉತ್ಸುಕತೆಯಿಂದಲೂ ಲವಲವಿಕೆಯಿಂದಲೂ ಎದುರುನೋಡುತ್ತಿದ್ದೇವೆ!

ನಮ್ಮ ನರಳುವಿಕೆ ಮತ್ತು ಲವಲವಿಕೆಯಿಂದ ಎದುರುನೋಡುವಿಕೆಯು ಪ್ರಥಮ ಫಲವಾಗಿರುವ ಪವಿತ್ರಾತ್ಮನನ್ನು ಹೊಂದಿಕೊಂಡದ್ದರ *ಹೊರತಾಗಿಯೂ* ಅಲ್ಲ, ಆದರೆ ನಮಗೆ ಪ್ರಥಮ ಫಲವಾಗಿರುವ ಪವಿತ್ರಾತ್ಮನು ಕೊಡಲ್ಪಟ್ಟಿದ್ದಾನೆ ಎಂಬ *ಕಾರಣಕ್ಕಾಗಿಯೇ* ಆಗಿದೆ. ನಾವು ಪರಲೋಕದ "ಪ್ರಥಮ ಫಲ" ದ ರುಚಿಯನ್ನು ನೋಡಿದ್ದೇವಾದ್ದರಿಂದ, ನಾವು ಮಿಕ್ಕ ಆತ್ಮೀಕ ಫಸಲನ್ನು ಪಡೆದುಕೊಳ್ಳುವದಕ್ಕೆ ಅಷ್ಟೊಂದು ಅಧಿಕ ಅಭಿಲಾಷೆಯುಳ್ಳವರಾಗಿದ್ದೇವೆ. (ಇದನ್ನು ಒಬ್ಬ ಮಗುವಿಗೆ ಕೇಕ್‌ನ ಒಂದು ಚಿಕ್ಕ ತುಂಡನ್ನು ತಿನ್ನಲು ಕೊಟ್ಟು ಆತನು ಅದನ್ನು ತಿಂದು ಮುಗಿಸಿದ ಕೂಡಲೆ ರಾತ್ರಿ ಊಟದ ವೇಳೆ ಇನ್ನಷ್ಟು ದೊಡ್ಡ ತುಂಡನ್ನು ಕೊಡುವದಾಗಿ ವಾಗ್ದಾನ ಮಾಡುವದಕ್ಕೆ ಹೋಲಿಸಬಹುದು.)

ನಾವು ಯಾವುದಕ್ಕಾಗಿ "ಎದುರುನೋಡುತ್ತಾ" ಇದ್ದೇವೆ? **ದೇವಪುತ್ರರ ಪದವಿಯನ್ನು** ಎದುರುನೋಡುತ್ತಿದ್ದೇವೆ. ಮೊದಮೊದಲು ನೋಡಿದಾಗ, ಇದು ಸಂಬಂಧವೇ ಇಲ್ಲದ್ದಾಗಿ ತೋರುತ್ತದೆ. ಯಾಕೆಂದರೆ, ನಾವು "ಮಗನ ಭಾವವನ್ನು *ಹೊಂದಿದವರು"* ಎಂಬದಾಗಿ ವಾಕ್ಯಭಾಗವು ಈಗಾಗಲೇ ಘೋಷಿಸಿರುತ್ತದಷ್ಟೆ (8:15; ಒತ್ತಿ ಹೇಳಿದ್ದು ನನ್ನದು). ಹಾಗಾದರೆ ಏಕೆ ಪೌಲನು ಇಲ್ಲಿ ನಾವು "ದೇವಪುತ್ರರ ಪದವಿಯನ್ನು . . . *ಎದುರುನೋಡುತ್ತಾ"* ಇದ್ದೇವೆಂದು ಹೇಳುತ್ತಾನೆ? ಯಾಕೆಂದರೆ ಆತನು ಅಂಶವೊಂದನ್ನು ಮನದಟ್ಟು ಮಾಡುವದಕ್ಕಾಗಿ ಸಾದೃಶ್ಯಗಳನ್ನು ಬದಲಾಯಿಸುವದಕ್ಕೆ ಹಿಂಜರಿಯಲಿಲ್ಲ. ಉದಾಹರಣೆಗೆ, ಕೆಲವು ಸಾರಿ ಆತನು ಕರ್ತನು ಹಾಗೂ ಸಭೆಯ ನಡುವಿನ ಸಂಬಂಧವನ್ನು

ದೃಷ್ಟಾಂತಪಡಿಸುವದಕ್ಕೆ ವಿವಾಹದ ಸಾದೃಶ್ಯವನ್ನು ಉಪಯೋಗಿಸಿದನು (ರೋಮಾ 7:4; ಎಫೆಸ 5:22-33); ಆದರೆ ಬೇರೊಂದು ಸನ್ನಿವೇಶದಲ್ಲಿ, ಆತನು ಸಭೆಯನ್ನು ಇನ್ನೂ ಆತನ ಮದಲಗಿತ್ತಿಯಲ್ಲ, ಆದರೆ ವಿವಾಹ ನಿಶ್ಚಯಮಾಡಲ್ಪಟ್ಟಿರುವ ಕನ್ಯಯಾಗಿ ಸೂಚಿಸುವವನಾಗಿದ್ದನು (2 ಕೊರಿಂಥ 11:2).

ಪುತ್ರಪದವಿಯ ಕುರಿತು ಪೌಲನ ಮಾತುಗಳನ್ನು ಸಾಮರಸ್ಯಗೊಳಿಸುವ ಅಗತ್ಯವಿದೆಯೆಂದು ನಮಗೆ ಅನ್ನಿಸುವದಾದರೆ, ನಾವು ಇದನ್ನು ಈ ರೀತಿಯಲ್ಲಿ ಮಾಡಬಹುದು: ಒಂದು ಅರ್ಥದಲ್ಲಿ ನಾವು ಈಗಾಗಲೇ ದೇವರ ಮಕ್ಕಳಾಗಿ ಸ್ವೀಕರಿಸಲ್ಪಟ್ಟವರು ಮತ್ತು ಇನ್ನೊಂದು ಅರ್ಥದಲ್ಲಿ ಆ ಪುತ್ರಸ್ವೀಕಾರ ಪ್ರಕ್ರಿಯೆಯು ಇನ್ನೂ ಪೂರ್ತಿಗೊಂಡಿರುವದಿಲ್ಲ. ನಮಗೆ ಈಗಾಗಲೇ ಪುತ್ರಪದವಿಯ ಸವಲತ್ತುಗಳಿರುತ್ತವೆ ಎಂಬುದನ್ನು ಸನ್ನಿವೇಶವು ಸ್ಪಷ್ಟಗೊಳಿಸುತ್ತದೆ, ಆದರೆ ಕ್ರಿಸ್ತನ ಪುನರಾಗಮನದ ವೇಳೆಯಲ್ಲಿ ದೇಹದ ಪುನರುತ್ಥಾನ ಸಂಭವಿಸುವ ವರೆಗೂ ಆ ಪ್ರಕ್ರಿಯೆಯು ಪೂರ್ತಿಗೊಳ್ಳುವದಿಲ್ಲ ಎಂಬುದನ್ನು ಸಹ ಅದು ಸೂಚಿಸುತ್ತದೆ.

ತತ್ಪರಿಣಾಮವಾಗಿ, ಪೌಲನು ಹೇಳಿದ್ದೇನೆಂದರೆ, ನಾವು **ನಮ್ಮ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು**[104] ಪಡೆದುಕೊಂಡಾಗ ನಮ್ಮ ಆತ್ಮೀಕ ಪುತ್ರಸ್ವೀಕಾರತ್ವ ಪ್ರಕ್ರಿಯೆಯು ಪೂರ್ತಿಗೊಳ್ಳುವದು. CJB ಹೀಗೆ ಹೇಳುತ್ತದೆ, "ನಾವು ಪುತ್ರರಾಗಿ ಮಾಡಲ್ಪಡುವದ ಕ್ಕೋಸ್ಕರ—ಅಂದರೆ, ನಮ್ಮ ಇಡೀ ದೇಹಗಳು ವಿಮೋಚಿಸಲ್ಪಟ್ಟು ಸ್ವತಂತ್ರಗೊಳಿಸಲ್ಪಡು ವದನ್ನು—ಕಾತರದಿಂದ ಎದುರುನೋಡುತ್ತಲಿರುತ್ತೇವೆ." ದೇಹದ ವಿಮೋಚನೆಯು (ಪುನರುತ್ಥಾನದ ವೇಳೆಯಲ್ಲಿ) ಪೌಲನ ಚರ್ಚೆಯ ಪರಾಕಾಷ್ಠೆಯ ಅಂಶವಾಗಿರು ತ್ತದೆಂಬುದು ಕೆಲವರನ್ನು ಆಶ್ಚರ್ಯಚಕಿತಗೊಳಿಸಬಹುದು. ಪೌಲನು ಇಲ್ಲಿ ಜಗತ್ತಿನ ಎದುರುನೋಡುವಿಕೆಯನ್ನು ಮತ್ತು ನಮ್ಮ ಎದುರುನೋಡುವಿಕೆಯನ್ನು ಒಟ್ಟಾಗಿ ಜೋಡಿಸುವದಕ್ಕೆ ಪ್ರಯತ್ನಿಸುತ್ತಿದ್ದಾನೆ ಎಂಬುದನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳತಕ್ಕದ್ದು. ಆದಾಮನ ಪಾಪವು ಸೃಷ್ಟಿಸಲ್ಪಟ್ಟ ಜಗತ್ತಿಗೆ ಮರಣ ಮತ್ತು ಕ್ಷಯವನ್ನು ತಂದಿತು ಮತ್ತು, ಅದೇ ವೇಳೆಯಲ್ಲಿ, ಭೌತಿಕ ದೇಹಕ್ಕೆ ಮರಣ ಮತ್ತು ಕ್ಷಯವನ್ನು ತಂದಿತು (ನೋಡಿರಿ 1 ಕೊರಿಂಥ 15:22; ಇಬ್ರಿಯ 9:27). ದೇವರ ಪುತ್ರರು ಮತ್ತು ಪುತ್ರಿಯರಾಗಿ, ನಮಗೆ ಅದ್ಭುತವಾದ ಆಶೀರ್ವಾದಗಳಿರುತ್ತವೆ. ಹೇಗಿದ್ದರೂ, ನಮ್ಮ ಮಾಂಸಿಕ ದೇಹಗಳಲ್ಲಿರುವ ವರೆಗೂ, ನಾವು ಯಾವಾಗಲೂ ನೋವು ಮತ್ತು ಶೋಧನೆಗೆ ಒಳಪಡುವೆವು (ನೋಡಿರಿ 1 ಯೋಹಾನ 2:16), ಇನ್ನೂ ಪರಲೋಕದಲ್ಲಿ ದೇವರ ಸಂಗಡ ಇರುವದಕ್ಕೆ ಶಕ್ತರಾಗಿರುವದಿಲ್ಲ (ನೋಡಿರಿ 1 ಕೊರಿಂಥ 15:50). ದೇವರಿಗೆ ಸ್ತೋತ್ರ, ನಾವು ನಮ್ಮ ದೇಹಗಳ "ವಿಮೋಚನೆಯನ್ನು" ಎದುರುನೋಡಬಹುದಾಗಿದೆ!

**ವಚನ 24.** ಸೃಷ್ಟಿಯ ಜಗತ್ತು ವ್ಯರ್ಥತ್ವಕ್ಕೆ ಒಳಪಡಿಸಲ್ಪಟ್ಟಾಗ, ಒಂದು ದಿನ "ಬಿಡುಗಡೆಯಾಗಿ" ವಿಮೋಚಿಸಲ್ಪಡುವ "ನಿರೀಕ್ಷೆ" ಯೊಂದಿಗೆ ಆಗಿತ್ತು (8:20, 21). ನಾವು, ಸಹ ನಿರೀಕ್ಷೆಯಿಂದ ಪುಷ್ಟಿ ಹೊಂದುತ್ತೇವೆ: **ರಕ್ಷಣೆಯನ್ನು ಹೊಂದಿದವರಾದರೂ ಇನ್ನು ಎದುರುನೋಡುವವರಾಗಿದ್ದೇವೆ.** NASBಯಲ್ಲಿ "ನಿರೀಕ್ಷೆಯಲ್ಲಿ" ಎಂದಿದ್ದರೆ, ಕೆಲವು ತರ್ಜುಮೆಗಳಲ್ಲಿ "ನಿರೀಕ್ಷೆಯಿಂದ" ಎಂದಿರುತ್ತದೆ (KJV; McCord; ನೋಡಿರಿ Phillips). "ಎದುರುನೋಡುತ್ತಾ" ಎಂಬುದಕ್ಕಿರುವ ಗ್ರೀಕ್ ಪದವು ἐλπίς (*elpis*). ಇದು ಪ್ರಥಮ

ಬಾರಿಗೆ 24ನೇ ವಚನದಲ್ಲಿ ಚತುರ್ಥೀ ವಿಭಕ್ತಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ. "ಎದುರುನೋಡುತ್ತಾ" ಎಂಬುದರ ಮುಂಚೆ ಯಾವದೇ ಉಪಸರ್ಗವು ಇರುವದಿಲ್ಲ, ಆದ್ದರಿಂದ ಒಂದು ಉಪಸರ್ಗವನ್ನು ಒದಗಿಸಬೇಕು. ಕೆಲವು ತರ್ಜುಮೆಗಳು "ಲ್ಲಿ" ಉಪಸರ್ಗವನ್ನು ಒದಗಿಸಿದರೆ, ಇನ್ನು ಕೆಲವು ತರ್ಜುಮೆಗಳೂ "ಯಿಂದ" ಎಂಬುದನ್ನು ಸೇರ್ಪಡೆಗೊಳಿಸುತ್ತವೆ. ಯಾವ ಉಪಸರ್ಗವು ಉಪಯೋಗಿಸಲ್ಪಟ್ಟಿದ್ದರೂ ಸರಿಯೇ, *ಎದುರುನೋಡುವಿಕೆ*ಯು ನಮಗೆ ಪುಷ್ಟಿ ಕೊಡುತ್ತದೆ ಮತ್ತು ನಮ್ಮನ್ನು ಮುನ್ನಡೆಯುತ್ತಲಿರುವಂತೆ ಮಾಡುತ್ತದೆಂಬುದನ್ನು ಪೌಲನು ಒತ್ತಿ ಹೇಳುವವನಾಗಿದ್ದನು. William Barclay ಹೀಗೆ ಬರೆದನು, "ಪೌಲನಿಗೆ ಜೀವವನ್ನು ಹೊತ್ತಿಸಿದ ದಹಿಸುವ ಸತ್ಯವು ಯಾವದೆಂದರೆ ಮಾನವನ ಸ್ಥಿತಿಯು ನಿರೀಕ್ಷೆಯಿಲ್ಲದ್ದಲ್ಲ ಎಂಬುದೇ."[105]

ಕೆಲವರು 24ನೇ ವಚನದಲ್ಲಿ "ಯಿಂದ" ಉಪಸರ್ಗ ಉಪಯೋಗಿಸುವದಕ್ಕಿರುವ ಸಾಧ್ಯತೆಯನ್ನು ಆಕ್ಷೇಪಿಸಿ, "ನಾವು ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಟ್ಟಿದ್ದೇವೆ" ಎಂದು ಹೇಳುತ್ತಾರೆ (3:28; 5:1). ಹೇಗಿದ್ದರೂ, ಅವುಗಳು ಪ್ರತ್ಯೇಕವಾದ ಗುಣಲಕ್ಷಣಗಳನ್ನು ಹೊಂದಿದ್ದರೂ, ನಂಬಿಕೆ ಮತ್ತು ನೀರಿಕ್ಷೆ (ಎದುರುನೋಡುವಿಕೆ) ಗಳು ನಿಕಟ ಸಂಬಂಧ ಹೊಂದಿವೆ. ಇಬ್ರಿಯ ಪುಸ್ತಕದ ಲೇಖಕನು "ನಂಬಿಕೆ"ಯ ಅರ್ಥನಿರೂಪಣೆ ಮಾಡುವಾಗ, "ನಂಬಿಕೆಯೋ ನಾವು *ನಿರೀಕ್ಷಿಸುವವುಗಳ* ವಿಷಯವಾಗಿ ಭರವಸದಿಂದಿರುವದೂ" ಎಂದು ಹೇಳುತ್ತಾನೆ (ಇಬ್ರಿಯ 11:1; ಒತ್ತಿ ಹೇಳಿದ್ದು ನನ್ನದು). ನಿರೀಕ್ಷೆಯಿಲ್ಲದಿರುವಂತಹ ನಂಬಿಕೆಯು ರಕ್ಷಣೆಯನ್ನುಂಟು ಮಾಡುವ ನಂಬಿಕೆಯಲ್ಲ.

ನಮ್ಮ ವಾಕ್ಯಭಾಗದ ಈ ಹಂತದಲ್ಲಿ, ಪೌಲನು ಸ್ವಲ್ಪ ತಡೆದು "ಎದುರುನೋಡುವಿಕೆ" ಎಂಬ ತನ್ನ ಮಾತಿನ ಅರ್ಥವೇನೆಂಬುದನ್ನು ವಿವರಿಸುವದಕ್ಕೆ ಮುಂದಾಗುತ್ತಾನೆ: **ಎದುರುನೋಡುವ ಪದವಿ ಪ್ರತ್ಯಕ್ಷವಾಗಿದ್ದರೆ ಎದುರುನೋಡುವದೇಕೆ? ಪ್ರತ್ಯಕ್ಷವಾದದ್ದನ್ನು ಎದುರುನೋಡುವದುಂಟೇ?** ವಿವರಣೆಯಲ್ಲಿನ ಕೆಲವು ಪದಗಳು ಕ್ರಮಬದ್ಧವಾಗಿವೆ. ಒಬ್ಬನು ಪ್ರಶ್ನೆಯನ್ನು "ತಾನು ಈಗಾಗಲೆ ನೋಡಿರುವದಕ್ಕಾಗಿ ಯಾವನು ಎದುರುನೋಡುತ್ತಾನೆ?" ಎಂಬದಾಗಿ ಓದಬಹುದು ಮತ್ತು ಉತ್ತರವು, "ನಾನು. ನಾನು ಮುಂದೊಂದು ದಿನ ಸ್ವಂತವಾಗಿಸಿಕೊಳ್ಳಲು ಎದುರುನೋಡುವ ಒಂದನ್ನು ದಿನಾಲೂ ನೋಡುತ್ತೇನೆ." ಪೌಲನು ಏಕೆ "ಪ್ರತ್ಯಕ್ಷವಾಗಿದ್ದರೆ" ಮತ್ತು "ಪ್ರತ್ಯಕ್ಷವಾಗಿದದ್ದನ್ನು" (ಎರಡೂ ಸಹ βλέπω, *blepō* ಎಂಬ ಪದದಿಂದ ಬಂದವುಗಳು) ಎಂಬ ಪದಗಳನ್ನು ಉಪಯೋಗಿಸುತ್ತಾನೆಂಬುದನ್ನು ಅರ್ಥಮಾಡಿಕೊಳ್ಳಲು, ಈಗ ಶಾರೀರಿಕ ಕಣ್ಣುಗಳಿಂದ ನೋಡುವದಕ್ಕೆ *ಸಾಧ್ಯವಿಲ್ಲದ* ಒಂದನ್ನು ಕುರಿತು ಆತನು ಮಾತಾಡುತ್ತಿದ್ದಾನೆಂಬುದನ್ನು ನಾವು ಮನಗಾಣಬೇಕು (ನೋಡಿರಿ 2 ಕೊರಿಂಥ 4:18): ಕ್ರಿಸ್ತನು ತಿರಿಗಿ ಬರುವಾಗ ಸಂಭವಿಸುವ ದೇಹದ ವಿಮೋಚನೆ. ನಾವು ಕನಿಷ್ಠ ಈ ಸಂಭವವು "ಪ್ರತ್ಯಕ್ಷ" ವಾಗುವಾಗ, ಅದು ವಾಸ್ತವಗೊಳ್ಳುವದು. 24ನೇ ವಚನದಲ್ಲಿನ "ಪ್ರತ್ಯಕ್ಷವಾಗಿದ್ದರೆ" ಎಂಬ ವಿಷಯದಲ್ಲಿಯಾದರೋ, "ಕೊನೆಗೂ ಹೊಂದಿರುವ ಅಥವಾ ಪಡೆದುಕೊಂಡಿರುವ" ಎಂಬ ಅರ್ಥದಲ್ಲಿ ಅದನ್ನು ನೋಡುವದಾದರೆ ಸಹಾಯಕವಾಗುತ್ತದೆ. NIV ತರ್ಜುಮೆಯು ಹೀಗೆ ಪ್ರಶ್ನಿಸುತ್ತದೆ, "ಈಗಾಗಲೆ ಹೊಂದಿರುವದನ್ನು ಯಾರು ಎದುರುನೋಡುತ್ತಾರೆ?"

"ಎದುರುನೋಡುವುದರ ಅರ್ಥವು ಯಾವಾಗಲೂ ನಾವು ಇನ್ನೂ ಪಡೆದುಕೊಳ್ಳದೆ ಇರುವ ಒಂದಕ್ಕೋಸ್ಕರ ಕಾಯುವದು ಎಂದಾಗುತ್ತದೆ" ಎಂದು Phillips ತರ್ಜುಮೆಯು ಹೇಳುತ್ತದೆ.

**ವಚನ 25.** ಹೇಗೂ, ದೇವರ ಮಕ್ಕಳಾಗಿ ನಾವು ಇನ್ನೂ ನಮ್ಮ ಪೂರ್ಣ ಸವಲತ್ತುಗಳನ್ನು ಪಡೆದುಕೊಂಡಿಲ್ಲ ಎಂಬ ವಾಸ್ತವಾಂಶದ ಮೇಲೆ ಪೌಲನ ಒತ್ತು ಇರಲಿಲ್ಲ; ಬದಲಾಗಿ, ಆ ಸವಲತ್ತುಗಳು ನಮ್ಮದಾಗುವವು ಎಂಬ ಭರವಸದಿಂದಿರುವದಕ್ಕೆ ನಮಗೊಂದು ಕಾರಣವಿರುತ್ತದೆಂಬದನ್ನು ಆತನು ತೋರ್ಪಡಿಸುತ್ತಿದ್ದಾನೆ. ನಮಗೆ ಮುನ್ನಡೆಯಲು ಪುಷ್ಟಿಕೊಡುವಂತಹ ಒಂದು *ಎದುರುನೋಡುವಿಕೆ* ನಮಗಿರುತ್ತದೆ: **ಆದರೆ ಕಾಣದಿರುವದನ್ನು** [ಇನ್ನೂ ನಾವು ಹೊಂದದಿರುವ] **ನಾವು ಎದುರುನೋಡುವವರಾಗಿದ್ದರೆ ತಾಳ್ಮೆಯಿಂದ ಕಾದುಕೊಂಡಿರುವೆವು.** "ಲವಲವಿಕೆಯಿಂದ ಎದುರುನೋಡುವಿಕೆ"ಯ ಬದಲಿಗೆ "ನಿರೀಕ್ಷೆ" ಎಂಬ ಪದವನ್ನು ಉಪಯೋಗಿಸಿದರೆ ಸಹಾಯವಾಗಬಹುದು. ತತ್ಪರಿಣಾಮವಾಗಿ, ಪೌಲನು "ನಾವು ಇನ್ನು ಪಡೆದುಕೊಳ್ಳದಿರುವ ಆಶೀರ್ವಾದವನ್ನು ನಿಜನಿಜವಾಗಿಯೂ ಎದುರುನೋಡುವದಾದರೆ, ಅದು ನಮ್ಮನ್ನು ಆ ಆಶೀರ್ವಾದಕ್ಕಾಗಿ ತಾಳ್ಮೆಯಿಂದ ಕಾದುಕೊಳ್ಳುವಂತೆ ಶಕ್ತಗೊಳಿಸುವದು" ಎಂದು ಹೇಳುತ್ತಿದ್ದಾನೆ. ದೇವರು ಒಂದು ವಾಗ್ದಾನವನ್ನು ಮಾಡುವಾಗ, ನಂಬಿಕೆಯು ಅದನ್ನು ವಿಶ್ವಾಸಿಸುತ್ತದೆ, ನಿರೀಕ್ಷೆಯು ಅದನ್ನು ಎದುರುನೋಡುತ್ತದೆ, ಮತ್ತು ತಾಳ್ಮೆಯು ಅದಕ್ಕಾಗಿ ಕಾದುಕೊಳ್ಳುತ್ತದೆ ಎಂದು ಹೇಳಲಾಗಿರುತ್ತದೆ.[106]

"ತಾಳ್ಮೆ" ಎಂಬುದಕ್ಕಿರುವ ಗ್ರೀಕ್ ಪದವು, ὑπομονή (*hupomonē*), ಇದು ತಾಳ್ಮೆಯಿಂದಿದ್ದು, ಸೈರಿಸಿಕೊಂಡು, ಏನೇ ನಡೆದರೂ ಹಿಂಜರಿಯದೆ ಮುನ್ನಡೆಯುತ್ತಲೇ ಇರುವದಕ್ಕಿರುವ ಸಾಮರ್ಥ್ಯವನ್ನು ಸೂಚಿಸುತ್ತದೆ (5:3ರ ಮೇಲಿನ ವ್ಯಾಖ್ಯಾನಗಳನ್ನು ನೋಡಿರಿ). ಇಬ್ರಿಯ ಪುಸ್ತಕದ ಲೇಖಕನು "ನಮ್ಮ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ" ಎಂದು ಬರೆದನು (ಇಬ್ರಿಯ 12:1). ಯೇಸು ಹೇಳಿದ್ದೇನೆಂದರೆ "ಆದರೆ ಕಡೇ ವರೆಗೂ ತಾಳುವವನು ರಕ್ಷಣೆಹೊಂದುವನು" (ಮತ್ತಾಯ 10:22).

ಪೌಲನ ವಾಚಕರಲ್ಲಿ ಕೆಲವರಿಗೆ ಹಿಂಸೆಯ ಕಾರಣದಿಂದ ತಾಳ್ಮೆಯಿಂದ ಸಹಿಸಿಕೊಳ್ಳುವದು ವಿಶೇಷವಾಗಿ ಕಠಿಣವಾಗಿದ್ದಿರಬಹುದಾಗಿದೆ-ಕೆಲವು ಸ್ಥಳಗಳಲ್ಲಿರುವ ಕ್ರೈಸ್ತರಿಗೆ ಈ ದಿನ ಕಠಿಣಸ್ಥಿತಿಗಳಿರುವ ಪ್ರಕಾರ. ಕೆಲವು ಸಮಯಗಳಲ್ಲಿ, ಇನ್ನಷ್ಟು ಕಷ್ಟಗಳನ್ನು ಮತ್ತು ಸಮಸ್ಯೆಗಳನ್ನು ತಪ್ಪಿಸಿಕೊಳ್ಳುವದಕ್ಕಾಗಿ ಯೇಸುವನ್ನು ಅಲ್ಲಗಳೆದು ಬಿಡಬೇಕೆಂದು ಅನ್ನಿಸಿದ್ದಿರಬಹುದಾಗಿದೆ. ರೋಮಾ 8:25ನೇ ವಚನವು ನಾವು ತಾಳ್ಮೆಯಿಂದ ಕಾದುಕೊಳ್ಳ*ಬೇಕು* ಎಂಬರ್ಥದಲ್ಲಿ ಹೇಳುತ್ತದೆ, ಆದರೆ ನಾವು ನಮಗಿರುವ ನಿರೀಕ್ಷೆಯ ಕಾರಣದಿಂದ ನಾವು ತಾಳ್ಮೆಯಿಂದ ಕಾದುಕೊಳ್ಳ*ಬಲ್ಲೆವು* ಎಂಬುದನ್ನು ಸಹ ಸೂಚಿಸುತ್ತದೆ. ನಾವು ದೈವಿಕ ಇಚ್ಛಾಶಕ್ತಿಯ ಮೂಲಕ ತಾಳ್ಮೆಯಿಂದ ಕಾದುಕೊಳ್ಳುತ್ತೇವೆ—ಆತನನ್ನು ಮೆಚ್ಚಿಸುವದಕ್ಕೆ ಆತನ ಶಕ್ತಿಯು ನಮ್ಮ ಚಿತ್ತೊಂದಿಗೆ ಸಂಯೋಜನೆಗೊಂಡಿರುತ್ತದೆ.

## ಪವಿತ್ರಾತ್ಮನಿಂದ ಕ್ರೈಸ್ತನಿಗೆ ಸಿಕ್ಕುವ ಸಹಾಯ (8:26, 27)

**26ಹಾಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನುನೋಡಿ ಸಹಾಯಮಾಡುತ್ತಾನೆ.**

**ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ. [27]ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ; ಆ ಆತ್ಮನು ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು.**

**ವಚನ 26.** ಈ ವಚನವು, **ಹಾಗೆ ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ** ಎಂದು ಆರಂಭಗೊಳ್ಳುತ್ತದೆ. "ಹಾಗೆ" ಮತ್ತು "ಸಹ" ಎಂಬ ಪದಗಳು ಈ ಮುಂಚೆ ಹೇಳಿದ್ದ ಒಂದಕ್ಕೆ ಜೋಡನೆ ಮಾಡುತ್ತವೆ. ಅವುಗಳು ಪವಿತ್ರಾತ್ಮನ ಕುರಿತಾದ ಈ ಮುಂಚಿನ ಹೇಳಿಕೆಯನ್ನು ಸೂಚಿಸಬಹುದಾಗಿದೆ. ಉದಾಹರಣೆಗೆ, 26ನೇ ವಚನದ ಮೊದಲ ಭಾಗವು ಈ ರೀತಿ ಅರ್ಥವನ್ನು ಕೊಡಬಹುದಾಗಿದೆ, "ಪವಿತ್ರಾತ್ಮನು ನಮ್ಮ ಆತ್ಮಗಳೊಂದಿಗೆ ಸಾಕ್ಷಿ ಹೇಳುವ ಹಾಗೆಯೇ [8:16], ಆತನು ನಮ್ಮ ಅಶಕ್ತಿಯಲ್ಲಿ ಸಹ ಸಹಾಯ ಮಾಡುವನು." ಬಹುಶಃ, ಇದು ಈಗಷ್ಟೆ ಮುಕ್ತಾಯಗೊಂಡ ನಿರೀಕ್ಷೆಯ (ಎದುರುನೋಡುವಿಕೆ) ಕುರಿತ ಚರ್ಚೆಯನ್ನು ಸೂಚಿಸುತ್ತಿರಬಹುದಾಗಿದೆ ಮತ್ತು ತಪ್ಪಲವಾಗಿ, ಈ ಅರ್ಥವನ್ನು ಕೊಡಬಹುದಾಗಿದೆ, "ಎದುರುನೋಡುವಿಕೆಯು ತಾಳ್ಮೆಯನ್ನು ಉಂಟುಮಾಡುವ ಹಾಗೆಯೇ [8:24, 25], ಪವಿತ್ರಾತ್ಮನು ನಮ್ಮ ಅಶಕ್ತಿಯಲ್ಲಿ ಸಹಾಯವನ್ನು ಮಾಡುತ್ತಾನೆ."

ಇಲ್ಲಿ ನಿರ್ದಿಷ್ಟವಾದ ಅಂಶವೇನೆಂಬುದಕ್ಕಿಂತಲೂ ಈ ರೋಮಾಂಚಕಾರಿ ಸತ್ಯವು ಪ್ರಾಮುಖ್ಯವಾದದ್ದು: "ಪವಿತ್ರಾತ್ಮನು . . . ನಮ್ಮ ಅಶಕ್ತಿಯಲ್ಲಿ ಸಹಾಯ ಮಾಡುತ್ತಾನೆ"! "ನಮ್ಮ" ಎಂಬ ಸರ್ವನಾಮ ಪದವು ಈ ಹೇಳಿಕೆಯಲ್ಲಿ ಪೌಲನು ತನ್ನನ್ನು ಸೇರ್ಪಡೆಗೊಳಿಸಿಕೊಂಡನು ಎಂಬದನ್ನು ಸೂಚಿಸುವತ್ತದೆ. ಆತನು ತನ್ನನ್ನು "ಒಬ್ಬ ಅತ್ಯುತ್ಕೃಷ್ಟ ದೇವಮನುಷ್ಯ" (super saint) ಎಂದು ಭಾವಿಸಿಕೊಳ್ಳಲಿಲ್ಲ. ಅಪೊಸ್ತಲನು ಯಾವ ಅಶಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದನು? *ಯಾವದೇ* ಅಶಕ್ತಿ: ಶಾರೀರಿಕ, ಭಾವಾತ್ಮಕ, ಅಥವಾ ಆತ್ಮೀಕ. Moo ಅಭಿಪ್ರಾಯ ಪಟ್ಟದ್ದೇನೆಂದರೆ "ಅಶಕ್ತಿ" ಎಂಬುದು "ಮಾನವ ಸ್ಥಿತಿಗಿರುವ ಮೀತಿಗಳನ್ನು ಸೂಚಿಸುತ್ತದೆ."[107] ನಮ್ಮಲ್ಲಿ ಅನೇಕರು ನಮ್ಮನ್ನು "ಅಶಕ್ತರು" ಎಂದು ಭಾವಿಸಿಕೊಳ್ಳುವದಕ್ಕೆ ಸಂಕೋಚ ಪಡುತ್ತೇವೆ—ಆದರೆ ನಾವು ಪ್ರಾಮಾಣಿಕವಾಗಿರುವದಾದರೆ, ನಮ್ಮೊಳಗೆ ಅಶಕ್ತಿಯಿರುವದರ ಬಗ್ಗೆ ಒಪ್ಪಿಕೊಳ್ಳತಕ್ಕದ್ದು: ನಿರಂತರವಾದ, ಎಡೆಬಿಡದ ಮತ್ತು ಕೆಲವು ಸಾರಿ ಕುಗ್ಗಿಹೋಗುವಷ್ಟು ಅಶಕ್ತಿಗಳು. ನಮಗೆ ಒಂದು ದೈವಿಕ ಸಹಾಯ ಲಭ್ಯವಿರುತ್ತದೆಂಬುದನ್ನು ತಿಳಿಯುವದು ಅದ್ಭುತವೇನಿಸುವದಿಲ್ಲವೇ? "ಪವಿತ್ರಾತ್ಮನು . . . ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ."

"ಸಹಾಯಮಾಡುತ್ತಾನೆ" ಎಂದು ಅನುವಾದಿಸಲ್ಪಟ್ಟಿರುವ ಗ್ರೀಕ್ ಪದವು ಸಂಕೀರ್ಣವಾದದ್ದು ಆದರೆ ಬೋಧಪ್ರದವಾಗಿರುತ್ತದೆ: συναντιλαμβάνομαι (*sunantilambanomai*).[108] ಅದು ಗ್ರೀಕ್‌ನ ಮೂರು ಪದಗಳ ಸಂಯೋಜನೆಯಾಗಿರುತ್ತದೆ: σύν (*sun*, "ಯೊಂದಿಗೆ"), ἀντί (*anti*, "ವಿರುದ್ಧ, ಎದುರು ಕಡೆಯಲ್ಲಿ"), ಮತ್ತು λαμβάνω (*lambanō*, "ತೆಗೆದುಕೋ, ಪಡೆದುಕೋ").

A. T. Robertson ತನ್ನ ಗ್ರೀಕ್ ವ್ಯಾಕರಣ ಪುಸ್ತಕದಲ್ಲಿ ಬರೆದದ್ದೇನೆಂದರೆ, "ಪವಿತ್ರಾತ್ಮನು ನಮ್ಮೊಂದಿಗೆ [*sun*] ನಮ್ಮ ಅಶಕ್ತಿಯನ್ನು ಹಿಡಿದುಕೊಳ್ಳುತ್ತಾನೆ ಮತ್ತು ನಮ್ಮನ್ನು ಎದುರಿಸುತ್ತಿರುವ [*anti*] ಭಾರದ ತನ್ನ ಭಾಗವನ್ನು ಹೊತ್ತುಸಾಗುತ್ತಾನೆ, ಅದು ಇಬ್ಬರು ವ್ಯಕ್ತಿಗಳು ಒಂದು ದಿಮ್ಮಿಯನ್ನು ಒಂದೊಂದು ಬದಿಯಲ್ಲಿ ಹಿಡಿದುಕೊಂಡು ಸಾಗುತ್ತಿರುವಂತಿರುತ್ತದೆ."[109]

ಪವಿತ್ರಾತ್ಮನ ಈ ಸಹಾಯವು ಪೌಲನು ತನ್ನ ಶರೀರದಲ್ಲಿನ ಅಶಕ್ತಿಯ ಬಗ್ಗೆ ಚರ್ಚಿಸುತ್ತಾ ಕೊರಿಂಥದವರಿಗೆ ಹೇಳಿದ ಒಂದು ಮಾತನ್ನು ನೆನಪಿಗೆ ತರುತ್ತದೆ:

> "ಅದಕ್ಕಾತನು [ದೇವರು]—ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ ಎಂದು ನನಗೆ ಹೇಳಿದ್ದಾನೆ." ಹೀಗಿರಲಾಗಿ ಕ್ರಿಸ್ತನ ಬಲವು ನನ್ನಲ್ಲಿ ನೆಲೆಸಿಕೊಂಡಿರಬೇಕೆಂದು ನನಗುಂಟಾಗುವ ನಿರ್ಬಲಾವಸ್ಥೆಗಳ ವಿಷಯದಲ್ಲಿಯೇ ಬಹುಸಂತೋಷವಾಗಿ ಹೆಚ್ಚಳಪಡುವೆನು. ಆದದರಿಂದ . . . ನನಗೆ ನಿರ್ಬಲಾವಸ್ಥೆಯೂ . . . ಸಂಭವಿಸಿದಾಗ ಸಂತುಷ್ಟನಾಗಿದ್ದೇನೆ. ನಾನು ಯಾವಾಗ ನಿರ್ಬಲನಾಗಿದ್ದೇನೋ ಆವಾಗಲೇ ಬಲವುಳ್ಳವನಾಗಿದ್ದೇನೆ (2 ಕೊರಿಂಥ 12:9, 10).

ಪೌಲನು ತನ್ನ ಬಲಕ್ಕಿಂತಲೂ ದೇವರ ಬಲದ ಮೇಲೆ ಅವಲಂಭನೆಗೊಳ್ಳುವದನ್ನು ಕಲಿತುಕೊಂಡಿದ್ದನು. ಇದು ನಾವೆಲ್ಲರೂ ಕಲಿತುಕೊಳ್ಳಬೇಕಾಗಿರುವ ಒಂದು ಪಾಠವಾಗಿರುತ್ತದೆ.

ಪೌಲನು "ಪವಿತ್ರಾತ್ಮನು . . . ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ" ಎಂದು ಘೋಷಿಸಿದ ಬಳಿಕ, ನಾವೆಲ್ಲರೂ ಹೊಂದಿರುವ ಒಂದು ನಿರ್ದಿಷ್ಟವಾದ ಬಲಹೀನತೆಯನ್ನು ಹೆಸರಿಸುವ ಮೂಲಕ ಆ ಸತ್ಯವನ್ನು ದೃಷ್ಟಾಂತಪಡಿಸುತ್ತಾನೆ, ಆ ನಿರ್ದಿಷ್ಟವಾದ ಬಲಹೀನತೆಯಲ್ಲಿ ಪವಿತ್ರಾತ್ಮನು ನಮಗೆ ಸಹಾಯ ಮಾಡುತ್ತಾನೆಂಬುದನ್ನು ನಮಗೆ ತಿಳಿಯಪಡಿಸುತ್ತಾನೆ. ನೀವು ಬಹಳ ಸೂಕ್ಷ್ಮವಾಗಿ ಯಾವ ಬಲಹೀನತೆಯನ್ನು ಅನುಭವಿಸುವಿರಿ? ಯಾವ ಬಲಹೀನತೆಯಲ್ಲಿ ನಿಮಗೆ ಪವಿತ್ರಾತ್ಮನು ಸಹಾಯ ಮಾಡಬೇಕೆಂದು ನೀವು ಇಚ್ಛಿಸುವಿರಿ? ಆ ಪ್ರಶ್ನೆಗೆ ಹಲವಾರು ಉತ್ತರಗಳನ್ನು ಕೊಡಬಹುದಾಗಿದೆ: ಪಾಪಪ್ರಜ್ಞೆಯ ಬಲಹೀನತೆ, ಒಂದು ನೈತಿಕ ಬಲಹೀನತೆ, ಏನೇ ಸಂಭವಿಸಿದರೂ ಕರ್ತನನ್ನು ನಿಜವಾಗಿಯೂ ವಿಶ್ವಾಸಿಸುವದರಲ್ಲಿ ಬಲಹೀನತೆ. ಪೌಲನು ನಮ್ಮ *ಪ್ರಾರ್ಥನಾ* ಜೀವಿತಗಳ ಕುರಿತಾದ ತನ್ನ ದೃಷ್ಟಾಂತಕ್ಕಾಗಿ—ನ್ಯೂನ್ಯತೆ—ಆರಿಸಿಕೊಂಡ ಬಲಹೀನತೆಯು ಕೆಲವರಿಗೆ ಆಶ್ಚರ್ಯವನ್ನುಂಟು ಮಾಡಬಹುದು: **ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ.** ಹೇಗಿದ್ದರೂ, ಪ್ರಾರ್ಥನೆಯು ನಮಗೆ ದೇವರೊಂದಿಗಿನ ಜೀವನಾಡಿಯಾಗಿರುತ್ತದೆ. ನಮ್ಮ ಪ್ರಾರ್ಥನಾಜೀವಿತಗಳು ಇರತಕ್ಕ ರೀತಿಯಲ್ಲಿರುವದಾದರೆ, ದೇವರು ನಮಗೆ ಇಲ್ಲಿ ಉಲ್ಲೇಖಿಸಲ್ಪಟ್ಟಿರುವ ಇತರ ಸಮಸ್ಯೆಗಳಲ್ಲಿ ಸಹಾಯ ಮಾಡುವನು; ಆದರೆ ಜೀವನಾಡಿಯನ್ನು ಕತ್ತರಿಸಿಕೊಂಡರೆ, ಎಲ್ಲವೂ ಕಳೆದುಹೋಗುತ್ತದೆ.

ಪೌಲನು ಪ್ರಾರ್ಥನೆಯಲ್ಲಿನ ನಮ್ಮ ಅಶಕ್ತಿಯನ್ನು "ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ" ಎಂದು ಹೇಳುವ ಮೂಲಕ ಬಣ್ಣಿಸುತ್ತಾನೆ

(ಒತ್ತಿಹೇಳಿದ್ದು ನನ್ನದು). KJV ಯು ಹೀಗೆ ಹೇಳುತ್ತದೆ "ನಾವು ಮಾಡಬೇಕಾದ ರೀತಿಯಲ್ಲಿ *ಏನು* ಪ್ರಾರ್ಥಿಸಬೇಕೆಂದು ಅರಿಯದವರಾಗಿದ್ದೇವೆ" (ಒತ್ತಿ ಹೇಳಿದ್ದು ನನ್ನದು). "ಏನು" ಎಂಬುದು τίς (*tis*) ಎಂಬ ಒಂದು ಪ್ರಶ್ನಾರ್ಥಕ ಸರ್ವನಾಮ ರೂಪದ ಪದದಿಂದ ಅನುವಾದಿಸಲ್ಪಟ್ಟಿದೆ. *Tis* ಅನೇಕ ಸಾರಿ "ಏನು," ಎಂದು ಅನುವಾದಿಸಲ್ಪಟ್ಟಿದೆ, ಆದರೆ ಅದು "ಯಾರು," "ಯಾವ (ದು)," "ಏಕೆ," ಅಥವಾ "ಹೇಗೆ" ಎಂದು ಸಹ ಅರ್ಥವಾಗಬಹುದು.[110] ರೋಮಾ 8:26ರ ವಿಯಷದಲ್ಲಿ, ತರ್ಜುಮೆಗಳು "ಏನು" ಮತ್ತು "ಹೇಗೆ" ಎಂಬುವುಗಳ ನಡುವೆ ಸಮಾನವಾಗಿ ವಿಂಗಡಿಸಲ್ಪಟ್ಟಿವೆ. *Tis* ಎರಡರಲ್ಲಿ ಯಾವ ವಿಧದಲ್ಲಾದರೂ ಅನುವಾದಿಸಲ್ಪಡಬಹುದಾದ್ದರಿಂದ, ಮತ್ತು ಎರಡೂ ನಮ್ಮ ಪ್ರಾರ್ಥನೆ ಯಲ್ಲಿನ ಕೊರತೆಯ ವಿಷಯದಲ್ಲಿಯಾಗಿರುವದರಿಂದ, AB ತರ್ಜುಮೆಯು ಎರಡೂ ವಿಚಾರಗಳನ್ನು ಸೇರ್ಪಡೆಗೊಳಿಸುತ್ತದೆ: "ನಮಗೆ *ಏನು* ಪ್ರಾರ್ಥಿಸಬೇಕೆಂಬದಾಗಲಿ, ತಕ್ಕ ಹಾಗೆ *ಹೇಗೆ* ಯೋಗ್ಯವಾದ ರೀತಿಯಲ್ಲಿ ಪ್ರಾರ್ಥಿಸಬೇಕೆಂದಾಗಲಿ ತಿಳಿಯದು" (ಒತ್ತಿ ಹೇಳಿದ್ದು ನನ್ನದು).

ನಾವು ಪ್ರಾರ್ಥಿಸುವ ವೇಳೆ ಪವಿತ್ರಾತ್ಮನು ನಮ್ಮ ಅಶಕ್ತಿಯಲ್ಲಿ ಯಾವ ವಿಧವಾಗಿ ಸಹಾಯ ಮಾಡುವನು? **ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ.** "ನಮಗೋಸ್ಕರ ಪ್ರಾರ್ಥಿಸುತ್ತಾನೆ" ಎಂಬುದರ ಅನುವಾದಿತ ಪದವು ὑπερεντυγχάνω (*huperentunchanō*); ಇದು ὑπέρ (*huper*, "ಪರವಾಗಿ") ಮತ್ತು ἐντυγχάνω (*entunchanō,* "ಬೇಡಿಕೊ") ಎಂಬ ಪದಗಳ ಸಂಯೋಜನೆಯಾಗಿರುತ್ತದೆ. ಈ ಗ್ರೀಕ್ ಪದ ಹಾಗೂ ಆಂಗ್ಲದ "intercede" ಎಂಬ ಪದಗಳು ಮತ್ತೊಬ್ಬರ ಪರವಾಗಿ ಬೇಡಿಕೊಳ್ಳುವದನ್ನು ಸೂಚಿಸುತ್ತವೆ. ರೋಮಾ 8ನೇ ಆಧ್ಯಾಯದಲ್ಲಿ ಸ್ವಲ್ಪ ಹೊತ್ತಿನ ಬಳಿಕ, ಕ್ರಿಸ್ತನು ಪರಲೋಕದಲ್ಲಿ ಕ್ರೈಸ್ತರಿಗೋಸ್ಕರ ಬೇಡುವವನಾಗಿದ್ದಾನೆ ಎಂಬದಾಗಿ ಓದುತ್ತೇವೆ (8:34; ನೋಡಿರಿ ಇಬ್ರಿಯ 7:25). ಒಂದು ಅತಿ ವಿಶೇಷವಾದ ರೀತಿಯಲ್ಲಿ, ನಮ್ಮೊಳಗೆ ವಾಸಿಸುವ ಪವಿತ್ರಾತ್ಮನು ನಮಗೋಸ್ಕರ ಬೇಡಿಕೊಳ್ಳುತ್ತಾನೆಂಬುದನ್ನು 26ನೇ ವಚನವು ನಮಗೆ ತಿಳಿಯಪಡಿಸುತ್ತದೆ.

ಕೆಲವರು ರೋಮಾ 8:26 ವಚನದಿಂದ ಗಲಿಬಿಲಿಗೊಳಗಾಗಿದ್ದಾರೆ. ಅವರು ಆಕ್ಷೇಪನೆ ಮಾಡುವವರಾಗಿ, "ಆದರೆ 1 ತಿಮೊಥೆ 2:5ನೇ ವಚನವು ನಮಗೊಬ್ಬನೇ ಮಧ್ಯಸ್ಥನು, ಮತ್ತು ಆತನು ಯೇಸುವೇ ಎಂದು ಹೇಳುತ್ತದೆ" ಎನ್ನುತ್ತಾರೆ. ಮಧ್ಯಸ್ಥನು ಒಬ್ಬನೇ ಎಂಬುದು ನಿಜವೇ, ಆದರೆ ನಮಗೋಸ್ಕರ ಬೇಡಿಕೊಳ್ಳುವವರು ಅನೇಕರಿರಬಹುದಾಗಿದೆ, ಅದರಲ್ಲಿ ಮನುಷ ಮತ್ತು ದೈವಿಕ ಕಡೆಯವರಿಬ್ಬರೂ ಸೇರಿರುತ್ತಾರೆ. ಮಾನವರು ಸಹ ಇತರರ ಪರವಾಗಿ "ಬೇಡಿಕೊಳ್ಳಬೇಕು" ಎಂದು ಹೊಸ ಒಡಂಬಡಿಕೆಯು ಕಲಿಸುತ್ತದೆ (ನೋಡಿರಿ 15:30; 1 ತಿಮೊಥೆ 2:1, 2). ಆದುದರಿಂದ, ಯೇಸು ಹಾಗೂ ಪವಿತ್ರಾತ್ಮರಿಬ್ಬರೂ ನಮಗೋಸ್ಕರ ಬೇಡಿಕೊಳ್ಳುತ್ತಾರೆಂದು ಹೇಳುವದರಲ್ಲಿ ಯಾವ ವಿರೋಧೋಕ್ತಿಯಿರುವದಿಲ್ಲ. ಕ್ರಿಸ್ತನು ನಮಗೋಸ್ಕರ ದೇವರ ಸಿಂಹಾಸನದ ಬಳಿಯಲ್ಲಿ ಬೇಡಿಕೊಂಡರೆ, ಪವಿತ್ರಾತ್ಮನು ನಮ್ಮ ಹೃದಯದ ಸಿಂಹಾಸನದ ಬಳಿಯಿಂದ ಬೇಡಿಕೊಳ್ಳುತ್ತಾನೆಂದು ಹೇಳಲಾಗುತ್ತದೆ. ಈ ಸಂಬಂಧವನ್ನು ವಿವರಿಸಬಹುದಾದ ಇನ್ನೊಂದು ರೀತಿಯು ಹೀಗಿರುತ್ತದೆ: ನಾವು ಯೇಸುವಿನ *ಮೂಲಕ*, ಪವಿತ್ರಾತ್ಮನ

*ಸಹಾಯದೊಂದಿಗೆ* ದೇವರಿಗೆ ಪ್ರಾರ್ಥಿಸುತ್ತೇವೆ.

ಪವಿತ್ರಾತ್ಮನು ನಮಗೋಸ್ಕರ ಬೇಡಿಕೊಳ್ಳುತ್ತಾನೆಂದಷ್ಟೆ ಪೌಲನು ಹೇಳಲಿಲ್ಲ. ಪವಿತ್ರಾತ್ಮನು "ಮಾತಿಲ್ಲದಂಥ ನರಳಾಟದಿಂದ" ನಮಗೋಸ್ಕರ ಬೇಡಿಕೊಳ್ಳುತ್ತಾನೆಂದು ಆತನು ಹೇಳಿದನು. "ಮಾತಿಲ್ಲದ" λαλέω, (*laleō*) ಎಂಬುದು ἀλαλήτος (*alalētos*) ಪದದಿಂದ ಬಂದದ್ದಾಗಿದೆ, ಅದು "ಮಾತಾಡು" ಎಂಬ ಪದವನ್ನು ಧರಿಸಿಕೊಂಡು ಅದಕ್ಕೆ ನಕಾರಾತ್ಮಕವನ್ನು (α, *a*) ಒದಗಿಸುತ್ತದೆ. *Alalētos* ವ್ಯಕ್ತಪಡಿಸದ ಅಥವಾ ವ್ಯಕ್ತಪಡಿಸಲಸಾಧ್ಯವಾದದ್ದನ್ನು ಸೂಚಿಸುತ್ತದೆ.[111] ನಿಮಗೆ ಮಾತಾಡುವದಕ್ಕೆ ಶಬ್ದಗಳೇ ಇಲ್ಲದಂಥ ಸ್ಥಿತಿ ಬಂದಾಗ ಎಂದಾದರೂ ಬಹಳ ಸಂತೋಷಗೊಂಡಿದ್ದಿರೋ? ನಿಮ್ಮ ಕಂಗೆಟ್ಟಸ್ಥಿತಿಯನ್ನು ವಿವರಿಸುವದಕ್ಕೆ ನಿಮ್ಮಲ್ಲಿ ಮಾತುಗಳೇ ಹೊರಡದ್ದಕ್ಕಾಗಿ ಎಂದಾದರೂ ಬಹಳ ದುಃಖಪಟ್ಟದ್ದುಂಟೋ? ಹಾಗಾದರೆ ನಿಮಗೆ *alalētos* ಎಂಬುದರ ಪ್ರಾಥಮಿಕ ಅರ್ಥವು ತಿಳಿಯುತ್ತದೆ.

ಪವಿತ್ರಾತ್ಮನು ನಮಗೋಸ್ಕರ "ನರಳಾಟದಿಂದ" ಬೇಡಿಕೊಳ್ಳುತ್ತಾನೆ. 26ನೇ ವಚನದಲ್ಲಿ ಯಾರು ನರಳಾಟದಲ್ಲಿರುತ್ತಾರೆಂಬ ವಿಷಯದಲ್ಲಿ ಒಮ್ಮತವಿರುವದಿಲ್ಲ. ಈ ವಾಕ್ಯಾಭಾಗದ ಅರ್ಥನಿರೂಪನೆ ಮಾಡಬಹುದಾದ ಸರಳವಾದ ದಾರಿಯೆಂದರೆ, ಜಗತ್ತು "ನರಳುತ್ತಾ" ಇರುವ ಪ್ರಕಾರ (8:22) ಮತ್ತು ನಾವು "ನರಳುತ್ತೇವೆ" (8:23) ಎಂಬ ಪ್ರಕಾರ, ಪವಿತ್ರಾತ್ಮನು ನಮ್ಮೊಂದಿಗೆ ಅನುಕಂಪದಿಂದ "ನರಳಾಟದಿಂದ" ಬೇಡಿಕೊಳ್ಳುತ್ತಾನೆ.[112] ಹೇಗೂ, ಅನೇಕರು 26ನೇ ವಚನದಲ್ಲಿನ "ನರಳಾಟದಿಂದ" ಎಂಬುದು ಮತ್ತು 23ನೇ ವಚನದಲ್ಲಿನ "ನರಳುತ್ತೇವೆ" ಎಂಬುದು ಒಂದೇ ಆಗಿವೆಯೆಂದು ಮತ್ತು ಅವುಗಳು ನಮ್ಮ ನರಳುವಿಕೆಗಳಾಗಿರಬೇಕಷ್ಟೆ ಎಂದು ವಾದಿಸುತ್ತಾರೆ. ವಾಕ್ಯಭಾಗವು (8:26) ಪವಿತ್ರಾತ್ಮನ ನರಳುವಿಕೆಯೆಡೆಗೆ ಒಲವು ತೋರಿದರೆ, ಸನ್ನಿವೇಶವು (8:23) ನರಳಾಟವು ಕ್ರೈಸ್ತರಿಂದ ಬರುತ್ತದೆಂಬ ವಿಚಾರಕ್ಕೆ ಒಲವು ತೋರಿಸುತ್ತದೆ.

Charismatics (ದೈವಶಕ್ತಿಯ ವರಗಳಾಧಾರಿತ) ಗುಂಪಿನವರು "ಮಾತಿಲ್ಲದ ನರಳಾಟದಿಂದ" ಎಂಬುದನ್ನು ಓದುತ್ತಾರೆ ಮತ್ತು "ಪವಿತ್ರಾತ್ಮದಿಂದ ತುಂಬಿದ ಪ್ರಾರ್ಥನಾ ಭಾಷೆ"ಯ ಬಗ್ಗೆ ಮಾತಾಡುತ್ತಾರೆ. ಅವರು ಪ್ರಾರ್ಥಿಸುವಾಗ ಪವಿತ್ರಾತ್ಮನು ಅವರ ಗಂಟಲುಗಳು, ಬಾಯಿಗಳು, ಮತ್ತು ತುಟಿಗಳ ಮೇಲೆ ನಿಯಂತ್ರಣವನ್ನು ವಹಿಸಿಕೊಂಡು, ಅವರು ಮಾನವ ಬುದ್ಧಿಗೆ ಅರ್ಥವಾಗದಂತಹ ಸಾಲುಸಾಲಾದ ಉಚ್ಚಾರಣೆಗಳನ್ನು ಮಾತಾಡುವಂತೆ ಮಾಡುತ್ತಾನೆ ಎಂದು ಹೇಳಿಕೊಳ್ಳುತ್ತಾರೆ. ಅವರು ಈ "ಪ್ರಾರ್ಥನಾ ಭಾಷೆ" ಅನ್ನುವಂತದ್ದು "ಅನ್ಯಭಾಷೆಗಳನ್ನಾಡುವ"ದರ ಒಂದು ವ್ಯಕ್ತಗೊಳಿಸುವಿಕೆಯಾಗಿದೆ ಎಂದು ನಂಬುತ್ತಾರೆ.[113] "ಮಾತಿಲ್ಲದ ನರಳಾಟದಿಂದ" ಎಂಬ ಪದಗುಚ್ಛದ ಅರ್ಥವು ಅದಾಗಿರುವದಿಲ್ಲ. ಈ ಒತ್ತುಕೊಟ್ಟ ಹೇಳಿಕೆಯನ್ನು ನಾನು ಹಲವಾರು ಕಾರಣಗಳಿಗಾಗಿ ನೀಡುತ್ತೇನೆ. ಉದಾಹರಣೆಗೆ, ನಾವು ಈಗ ಅದ್ಭುತಗಳ (ಸೂಚಕಕಾರ್ಯಗಳ) ಕಾಲದಲ್ಲಿ ಜೀವಿಸುವದಿಲ್ಲವೆಂದು ಹೊಸ ಒಡಂಬಡಿಕೆಯು ಕಲಿಸುತ್ತದೆ,[114] ಆದ್ದರಿಂದ ಈ ದಿನ ಜನರು "ಪವಿತ್ರಾತ್ಮನಿಂದ ಪ್ರೇರಿತ ಭಾಷೆ"ಯನ್ನು ಮಾತಾಡಲು ಸಾಧ್ಯವಿಲ್ಲ. ಅದರ ಜೊತೆಯಲ್ಲಿ, ಈ ವಾಸ್ತವಾಂಶಗಳನ್ನು ಗಮನಿಸಿರಿ:

1. "ಮಾತಿಲ್ಲದ ನರಳಾಟದಿಂದ" ಎಂದರೆ ಮಾತ*ನಾಡದ* ಅಥವಾ ಮಾತಾಡಲು

*ಆಗದ* ಎಂದಾಗುತ್ತದೆ, ಆದರೆ ಈ "ಪ್ರಾರ್ಥನಾ ಭಾಷೆ" ಎಂಬುದು ಉಚ್ಛರಿಸುವದಾಗಿರುತ್ತದೆ. ಇದನ್ನು Stott ಈ ವಿಧದಲ್ಲಿ ಹೇಳಿದನು: "ನರಳಾಟಗಳು" ಅನ್ಯ *ಭಾಷಾಜ್ಞಾನ*[115] (*glossolalia*) ಆಗಿರಲಾರದು, ಯಾಕೆಂದರೆ ಆ 'ಭಾಷೆಗಳು' ಅಥವಾ ನುಡಿಗಳು ಕೆಲವರಿಗೆ ಅರ್ಥವಾಗಬಲ್ಲ ಮತ್ತು ಅರ್ಥಹೇಳಬಲ್ಲಂತಹ ವಿಧದಲ್ಲಿ ವ್ಯಕ್ತಗೊಳಿಸಲ್ಪಟ್ಟವುಗಳು. ಇಲ್ಲಿ ಪೌಲನು ಅಸ್ಪಷ್ಟೋಚ್ಚಾರಣೆಯ ನರಳಾಟವನ್ನು ಸೂಚಿಸಿ ಹೇಳುತ್ತಿದ್ದಾನೆ."[116]

2. ಹೊಸ ಒಡಂಬಡಿಕೆ ಕಾಲದಲ್ಲಿ ("ಅದ್ಭುತಗಳು ನಡೆಯುತ್ತಿದ್ದ ಯುಗ") ಸಹ, ಪ್ರತಿಯೊಬ್ಬ ಕ್ರೈಸ್ತನಿಗೂ ಅನ್ಯಭಾಷೆಗಳನ್ನಾಡುವ ಅದ್ಭುತವಾದ ವರವು ಇರಲಿಲ್ಲ (ನೋಡಿರಿ 1 ಕೊರಿಂಥ 12:30); ಆದರೆ ರೋಮಾ 8:26ನೇ ವಚನವು ಪವಿತ್ರಾತ್ಮನು ಹೇಗೆ ದೇವರ *ಪ್ರತಿಯೊಬ್ಬ* ಮಗುವಿಗೆ ಸಹಾಯ ಮಾಡುತ್ತಾನೆಂಬದರ ಬಗ್ಗೆ ಮಾತಾಡುತ್ತಿದೆ. ಈ ಕಾರಣದಿಂದ ಅದು ಅನ್ಯಭಾಷೆಗಳನ್ನಾಡುವ ಕುರಿತಾಗಿ ಹೇಳುತ್ತಿರುವದು ಅಸಾಧ್ಯವಾಗಿರುತ್ತದೆ.

3. ಈ ಅಧ್ಯಾಯದಲ್ಲಿ "ನರಳಾಟದಿಂದ" ಎಂಬುದು ಮೂರನೆಯ ಸಾರಿ ಉಲ್ಲೇಖಿಸಲ್ಪಟ್ಟದ್ದಾಗಿದೆ (8:22, 23, 26). ಈ ಮುಂಚೆ ಉಲ್ಲೇಖಿಸಲ್ಪಟ್ಟ ಎರಡರಲ್ಲಿ ಯಾವುದರಲ್ಲಿಯೂ "ನರಳಾಟದಿಂದ" ಎಂಬುದು "ಅನ್ಯಭಾಷೆಗಳನ್ನಾಡುವದು" ಅಥವಾ "ಒಂದು ವಿಶೇಷ ಪ್ರಾರ್ಥನಾ ಭಾಷೆ"ಯಲ್ಲಿ ಮಾತಾಡುವುದು ಎಂಬ ಅರ್ಥವನ್ನು ಕೊಡಲಿಲ್ಲ. ಇಲ್ಲಿ ಮಾತ್ರ ಅದು ಆ ಅರ್ಥವನ್ನು ಕೊಡಬೇಕು?

4. ವಾಕ್ಯಭಾಗದಲ್ಲಾಗಲಿ ಅಥವಾ ಸನ್ನಿವೇಶದಲ್ಲಾಗಲಿ ಇರುವಂತ ಯಾವದೇ ಸಂಗತಿಯಾಗಲಿ ಪೌಲನು ಮನಸ್ಸಿನಲ್ಲಿ "ವಿಶೇಷವಾದ ಪ್ರಾರ್ಥನಾ ಭಾಷೆಯನ್ನು" ಇಟ್ಟುಕೊಂಡು ಮಾತಾಡಿದನೆಂದು ಸೂಚಿಸುವದಿಲ್ಲ. ಇದು ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ charismatic (ದೈವಶಕ್ತಿಯ ವರಗಳಾಧಾರಿತ) ಉಪದೇಶವನ್ನು ಹುಡುಕುವದಕ್ಕೆ ಕಾತರರಾಗಿರುವವರು ವಾಕ್ಯಭಾಗದಲ್ಲಿ ಓದುವ ಒಂದು ಅರ್ಥನಿರೂಪನೆಯಾಗಿರುತ್ತದೆ.

ನಾವು "ನರಳಾಟದಿಂದ" ಎಂಬುದರ ಚರ್ಚೆಯಲ್ಲಿಯೇ ಸಿಕ್ಕಿಹಾಕಿಕೊಂಡು ಬಿಟ್ಟು ಪೌಲನ ಸಂದೇಶದ ಮುಖ್ಯಒತ್ತಿನ ಮೇಲಿನ ದೃಷ್ಟಿಯನ್ನು ಕಳೆದುಕೊಳ್ಳದಿರೋಣ. ನಮಗೆ ಹೇಗೆ ಅಥವಾ ಏನು ಪ್ರಾರ್ಥಿಸಬೇಕೆಂಬುದು ತಿಳಿಯದು ಎಂಬದಾಗಿ ಅಪೊಸ್ತಲನು ಘೋಷಿಸಿದನು. ನಾವು ಕೇವಲ ನಮ್ಮ ಮೇಲೆಯೇ ಆತುಕೊಳ್ಳಬೇಕಾದ ಸಂದರ್ಭವಿದ್ದಲ್ಲಿ, ನಮ್ಮ ಪ್ರಾರ್ಥನಾ ಜೀವಿತಗಳಲ್ಲಿ ನಾವು ನಿರೀಕ್ಷೆಯಿಲ್ಲದವರಾಗುತ್ತಿದ್ದೆವು—ಆದರೆ ಪವಿತ್ರಾತ್ಮನು ನಮಗೆ ಸಹಾಯ ಮಾಡುತ್ತಾನೆ. ಆತನಿಗೆ ನಮ್ಮ ಹೃದಯಗಳು ತಿಳಿದವೆ; ಆತನಿಗೆ ನಮ್ಮ ಅಗತ್ಯತೆಗಳು ಗೊತ್ತಿವೆ; ನಾವೇನು ಹೇಳುವದಕ್ಕೆ *ಪ್ರಯತ್ನಿಸುತ್ತಿದ್ದೇವೆಂದು* ಆತನಿಗೆ ಗೊತ್ತಿರುತ್ತದೆ; ಮತ್ತು ಆತನು ನಮ್ಮ ದುರ್ಬಲ ಯತ್ನಗಳನ್ನು ತೆಗೆದುಕೊಂಡು ಅವುಗಳನ್ನು ದೇವರ ಸಿಂಹಾಸನ ಮುಂದೆ ಒಪ್ಪುವಂತೆ ಮಾಡುತ್ತಾನೆ. ಬೇರೊಂದು ಕಡೆಯಲ್ಲಿ, ನಾವು ಆತನ ಮಕ್ಕಳಾಗಿ ಪ್ರಾರ್ಥಿಸುವಾಗ, ನಾವು "ಆತ್ಮನಲ್ಲಿ" ಪ್ರಾರ್ಥಿಸುವವರಾಗಿದ್ದೇವೆ ಎಂದು ಪೌಲನು ಹೇಳುತ್ತಾನೆ (ಎಫೆಸ 6:18; ನೋಡಿರಿ ಯೂದನು 20).

**ವಚನ 27.** ಪವಿತ್ರಾತ್ಮನ ಕಾರ್ಯದ ಫಲಿತವಾಗಿ ನಮ್ಮ ಪ್ರಾರ್ಥನೆಗಳು ನಿಜಕ್ಕೂ ದೇವರ ಕಿವಿಗಳಿಗೆ ತಲುಪುತ್ತವೋ, ಮತ್ತು ಆತನು ನಿಜಕ್ಕೂ ಅವುಗಳಿಗೆ ಗಮನ

ಕೊಡುತ್ತಾನೋ? ಹೌದು. ಈ ವಚನವು ಹೀಗೆ ಆರಂಭಗೊಳ್ಳುತ್ತದೆ, **ಆದರೆ ಹೃದಯಗಳನ್ನು ಶೋಧಿಸಿ ನೋಡುವಾತನಿಗೆ ಪವಿತ್ರಾತ್ಮನ ಮನೋಭಾವವು ಏನೆಂದು ತಿಳಿದದೆ.** "ಹೃದಯಗಳನ್ನು ಶೋಧಿಸಿ ನೋಡುವಾತನಿಗೆ" ಎಂದರೆ ದೇವರು (ನೋಡಿರಿ ಅಪೊಸ್ತಲರ ಕೃತ್ಯಗಳು 1:24; 1 ಕೊರಿಂಥ 4:5; 1 ಥೆಸಲೋನಿಕ 2:4; ಪ್ರಕಟಣೆ 2:23). ದೇವರ ಕುರಿತ ಈ ಬಣ್ಣನೆಯು ನಡುಕ ಹುಟ್ಟಿಸುವಂತದ್ದು ಮತ್ತು ಆದರಣೆ ತರುವಂತದ್ದು ಆಗಿದೆ: ಪಶ್ಚಾತಾಪವಿಲ್ಲದೆ ಪಾಪಿಗೆ ನಡುಕ ಹುಟ್ಟಿಸುವಂತದ್ದು, ಆದರೆ ಸತತ ಘರ್ಷಣೆಯಿಂದ ಬೆಂಡಾದ ಪರಿಶುದ್ಧನಿಗೆ ಆದರಣೆ ತರುವಂತದ್ದು. ದೇವರಿಗೆ ನಮ್ಮ ಹೃದಯಗಳು ತಿಳಿದಿರುವದಾದರೆ, ಆತನಿಗೆ ಖಂಡಿತವಾಗಿಯೂ ಪವಿತ್ರಾತ್ಮನ ಮನೋಭಾವವು ತಿಳಿದಿರುತ್ತದೆ; ಇಬ್ಬರೂ ನಿರಂತರವಾದ ಸಂವಹನದಲ್ಲಿರುತ್ತಾರೆ.

ವಚನ 27 ಹೀಗೆ ಮುಂದುವರೆಯುತ್ತದೆ, **ಆ ಆತ್ಮನು** [ಪವಿತ್ರಾತ್ಮನು] **ದೇವರ ಚಿತ್ತಾನುಸಾರವಾಗಿ ದೇವಜನರಿಗೋಸ್ಕರ ಬೇಡಿಕೊಳ್ಳುವನೆಂದು ಆತನು ಬಲ್ಲನು.** ಇಲ್ಲಿ ಪವಿತ್ರಾತ್ಮನು ಕೇಲವ "ದೇವಜನರಿಗೋಸ್ಕರ," ಅಂದರೆ ಕ್ರೈಸ್ತರಿಗೋಸ್ಕರ ಪ್ರಾರ್ಥಿಸುತ್ತಾನೆಂಬ ಅರ್ಥವು ಕಾಣಿಸುತ್ತದೆ. ಇದು ಕ್ರೈಸ್ತೇತರಿಗೋಸ್ಕರ ಇರುವ ವಾಗ್ದನವಲ್ಲ. "ದೇವರ ಚಿತ್ತಾನುಸಾರವಾಗಿ"[117] ಎಂಬ ಪದದ ಅರ್ಥವು ಪವಿತ್ರಾತ್ಮನು ನಮಗೋಸ್ಕರ ಪ್ರಾರ್ಥಿಸಬೇಕೆಂಬುದು ದೇವರ ಚಿತ್ತವಾಗಿದೆ ಎಂದಾಗಿರಬಹುದಾಗಿದೆ, ಅಥವಾ ನಮ್ಮ ಪರವಾಗಿ ಪವಿತ್ರಾತ್ಮನು ಮಾಡುವ ಯಾವುದೇ ಮನವಿಯು ಯಾವಾಗಲೂ ದೇವರ ಚಿತ್ತಾನುಸಾರವಾಗಿಯೇ ಇರುವದು ಎಂಬ ಅರ್ಥ ಸಹ ಆಗಿರಬಹುದಾಗಿದೆ. ಎರಡರಲ್ಲಿ ಯಾವದಿದ್ದರೂ, ನಮ್ಮ ಪರವಾಗಿ ಪವಿತ್ರಾತ್ಮನು ಅರ್ಪಿಸುವ ಬೇಡುವಿಕೆಯನ್ನು ದೇವರು ಆಲಿಸುವನು ಮತ್ತು ಪ್ರತ್ಯುತ್ತರ ಕೊಡುವನು ಎಂಬ ಸೂಚ್ಯಾರ್ಥವು ಕಾಣಿಸುತ್ತದೆ. ಅಪೊಸ್ತಲನಾದ ಯೋಹಾನನು ಹೀಗೆ ಬರೆದನು,

> ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬುದೂ ನಮಗೆ ಗೊತ್ತಾಗಿದೆ (1 ಯೋಹಾನ 5:14, 15).

## ಆತನ ಅನುಗ್ರಹದ ಕುರಿತು ದೇವರ ವಾಗ್ದಾನ (8:28-30)

**28ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ. 29ಯಾಕೆಂದರೆ ದೇವರು ತನ್ನ ಮಗನಿಗೆ ಅನೇಕ ಸಹೋದರರಿದ್ದು ಅವರಲ್ಲಿ ಆತನೇ ಹಿರಿಯವನಾಗಿರಬೇಕೆಂದು ಉದ್ದೇಶಿಸಿ ತಾನು ಯಾರನ್ನು ತನ್ನವರೆಂದು ಮೊದಲು ತಿಳುಕೊಂಡನೋ ಅವರನ್ನು ತನ್ನ ಮಗನ ಸಾರೂಪ್ಯವುಳ್ಳವರಾಗುವದಕ್ಕೆ ಮೊದಲೇ ನೇಮಿಸಿದನು, 30ಮತ್ತು ಯಾರನ್ನು ಮೊದಲು ನೇಮಿಸಿದನೋ ಅವರನ್ನು ಕರೆದನು; ಯಾರನ್ನು ಕರೆದನೋ ಅವರನ್ನು ನೀತಿವಂತರೆಂದು ನಿರ್ಣಯಿಸಿದನು; ಯಾರನ್ನು**

**ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು ಮಹಿಮಪದವಿಗೆ ಸೇರಿಸಿದನು.**

**ವಚನ 28.** ಪೌಲನು ಪ್ರಾರ್ಥನೆಯ ವಿಷಯದಿಂದ ಅನುಗ್ರಹದ ವಿಷಯದೆಡೆಗೆ ಸಾಗುತ್ತಾನೆ. 26ನೇ ವಚನದಲ್ಲಿ, ನಮಗೆ ಗೊತ್ತಿರದ ಸಂಗತಿಯೊಂದಿದೆ ಎಂಬದಾಗಿ ಆತನು ಹೇಳಿದ್ದನು: "ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ." ಈಗ ಆತನು ನಮಗೆ ಗೊತ್ತಾಗಬಹುದಾದ ಸಂಗತಿಯೊಂದರ ಬಗ್ಗೆ ಮಾತಾಡುತ್ತಾನೆ: **ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ. ಇದು ಬೈಬಲಿನಲ್ಲಿಯೇ ಅತ್ಯಂತ ಪರಿಚಿತವಾದ ಹಾಗೂ ಅತ್ಯುತ್ತಮ–ಪ್ರೀತಿಪಾತ್ರವಾದ ವಾಕ್ಯಭಾಗಗಳಲ್ಲೊಂದಾಗಿದೆ.** Stott ಹೀಗೆ ಬರೆಯುತ್ತಾನೆ, "ಇದರ ಮೇಲೆ ಪ್ರತಿಯೊಂದು ಯುಗದ ಮತ್ತು ಸ್ಥಳದ ವಿಶ್ವಾಸಿಗಳು ತಮ್ಮ ಮನಸ್ಸುಗಳನ್ನು ತಂಗಗೊಳಿಸಿದ್ದಾರೆ. ಅದು ನಮ್ಮ ಬಳಲಿದ ತಲೆಗಳನ್ನಿಡುವ ಒಂದು ತಲೆದಿಂಬಿಗೆ ಹೋಲಿಸಲ್ಪಟ್ಟಿದೆ."[118]

ರೋಮಾ 8:28ನೇ ವಚನವು "ಇಡೀ ಬೈಬಲಿನಲ್ಲಿಯೇ ಕೊಡಲ್ಪಟ್ಟಿರುವ ಅತ್ಯಂಥ ಶ್ರೇಷ್ಠವಾದ ವಾಗ್ದಾನಗಳಲ್ಲೊಂದಾಗಿದೆ" ಎಂದು Moo ಹೇಳುತ್ತಾನೆ. ಆದರೆ ನಂತರ ಆತನು ಸೇರಿಸಿ ಹೇಳಿದ್ದೇನೆಂದರೆ, "ಇದು ಅತ್ಯಂಥ ಅಪಾರ್ಥಮಾಡಿಕೊಳ್ಳಲ್ಪಟ್ಟ ವಾಗ್ದಾನಗಳಲ್ಲೊಂದು ಸಹ ಆಗಿರುತ್ತದೆ."[119] ಉದಾಹರಣೆಗೆ, ದೇವರ ನಂಬಿಗಸ್ತ ಮಕ್ಕಳ ಜೀವಿತದಲ್ಲಿ ಮಾತ್ರವೇ ಹಿತ ಸಂಭವಿಸುವದೆಂದು ಈ ವಾಕ್ಯಭಾಗವು ಹೇಳುವದಿಲ್ಲ. ಅಲ್ಲದೆ ಈ ಜೀವಿತಕ್ಕೆ ಸಂಬಂಧಪಟ್ಟಂತೆ "ಎಲ್ಲವೂ ಹಿತಕರವಾಗಿ ಮಾರ್ಪಡುವದು" ಎಂದಾಗಲಿ ಸಹ ಕುರುಡು ಆಶಾವಾದವನ್ನು ವ್ಯಕ್ತಪಡಿಸುವದಿಲ್ಲ. ಈ ವಚನವು *ಏನು* ಹೇಳುತ್ತದೆ?

ಮೊದಲನೆಯದಾಗಿ, ಅದು ದೇವರು ತನ್ನ ಮಕ್ಕಳ ಜೀವಿತಗಳಲ್ಲಿ ಕಾರ್ಯಮಾಡುತ್ತಿದ್ದಾನೆಂದು ಹೇಳುತ್ತದೆ. ಅನೇಕ ಪ್ರಾಚೀನ ಹಸ್ತಪ್ರತಿಗಳು ಹೇಳುವದೇನೆಂದರೆ, ಅಕ್ಷರಶಃ, "ಒಳ್ಳೇದಕ್ಕಾಗಿ ಎಲ್ಲವೂ ಒಟ್ಟಾಗಿ ಸಂಭವಿಸುತ್ತವೆಯೆಂದು ನಾವು ಬಲ್ಲೆವು" (KJV). ಒಬ್ಬನು NASB ತರ್ಜುಮೆಯನ್ನು ಉಪಯೋಗಿಸಿದರೂ ಸರಿಯೇ, ಅಥವಾ KJV ತರ್ಜುಮೆಯನ್ನು ಉಪಯೋಗಸಿದರೂ ಸರಿಯೇ, ಕಾರ್ಯಗಳು ತಮ್ಮಷ್ಟಕ್ಕೆ ತಾವೇ ಅನುಕೂಲವಾಗುತ್ತಿಲ್ಲ, ಆದರೆ ಅದರಲ್ಲಿ ದೈವಿಕ ಮಧ್ಯವರ್ತಿಯು ಪಾತ್ರವಹಿಸಿರುತ್ತಾನೆ.

ಯೇಸು ಸಬ್ಬತ್‌ನಲ್ಲಿ ಕೆಲಸ ಮಾಡಿದ್ದರ ವಿಷಯದಲ್ಲಿ ತನ್ನನ್ನು ಸಮರ್ಥಿಸಿಕೊಳ್ಳುವ ವೇಳೆ, ಆತನು ಹೀಗೆ ಹೇಳಿದನು, "ನನ್ನ ತಂದೆಯು ಇಂದಿನವರೆಗೂ ಕೆಲಸಮಾಡುತ್ತಾನೆ, ನಾನೂ ಕೆಲಸಮಾಡುತ್ತೇನೆ" (ಯೋಹಾನ 5:17). ಏಳನೆಯ ದಿನದಲ್ಲಿ, ದೇವರು ಸೃಷ್ಟಿಯ ಕೆಲಸವನ್ನು ನಿಲ್ಲಿಸಿ ವಿಶ್ರಮಿಸಿಕೊಂಡನು (ಆದಿಕಾಂಡ 2:2), ಆದರೆ ಆತನು ಕೆಲಸ ಮಾಡುವದನ್ನೇ ನಿಲ್ಲಿಸಿಬಿಟ್ಟನು ಎಂಬುದು ಅದರರ್ಥವಾಗಿರುವದಿಲ್ಲ. ಆತನು ಇಂದಿನವರೆಗೂ ವಿಶ್ವವನ್ನು ಎತ್ತಿಹಿಡಿಯುವದನ್ನು ಮುಂದುವರೆಸಿರುತ್ತಾನೆ, ಮತ್ತು ಆತನ ತನ್ನ ಮಕ್ಕಳನ್ನು ಆರೈಸುವದನ್ನು ಮುಂದುವರೆಸಿಕೊಂಡು ಬಂದಿದ್ದಾನೆ. ದೇವರು ತನ್ನವರಿಗೋಸ್ಕರ ಒಂದು ವೈಯಕ್ತಿಕವಾದ ವಿಧದಲ್ಲಿ ನಿರಂತರವಾಗಿ ಕಾರ್ಯಮಾಡುತ್ತಿದ್ದಾನೆಂಬುದನ್ನು ಅನೇಕ ವಾಕ್ಯಭಾಗಗಳು ಘೋಷಿಸುತ್ತವೆ. ಉದಾಹರಣೆಗೆ, ಪರ್ವತದ ಮೇಲಿನ ಪ್ರಸಂಗದಲ್ಲಿ, ದೇವರಿಗೆ ನಮ್ಮ ಅಗತ್ಯತೆಗಳೇನೆಂದು

ಗೊತ್ತಿದೆ ಮತ್ತು ಆ ಅಗತ್ಯತೆಗಳನ್ನು ಅನುಗ್ರಹಿಸುತ್ತಾನೆಂಬುದನ್ನು ಯೇಸು ಒತ್ತಿ ಹೇಳಿದನು (ಮತ್ತಾಯ 6:32; 7:11). ದೇವರು ಕ್ರಿಯೆ ಮಾಡುವಂತಹ ಇನ್ನೊಂದು ವಿಧದ ಬಗ್ಗೆ ಕೊರಿಂಥ 10:13ರಲ್ಲಿ ಹೇಳಲಾಗಿರುತ್ತದೆ, ನಾವು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವದೂ ಸಂಭವಿಸುವಂತೆ ಅನುಮತಿಸುವದಿಲ್ಲ, ಆದರೆ "ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು" ಎಂದು ಅದು ಹೇಳುತ್ತದೆ.

ನಾವು ರೋಮಾ 8:28ನೇ ವಚನವನ್ನು ಅದರ ಮುಂಚಿನ ಹಾಗೂ ನಂತರದ ವಚನಗಳಿಂದ ಬೇರ್ಪಡಿಸುವದಾದರೆ, ನಾವು ಅದರ ಕೆಲ ಸಿರಿವಂತಿಕೆಯನ್ನು ತಪ್ಪಿಸಿಕೊಳ್ಳುವೆವು. ಪವಿತ್ರಾತ್ಮನು ನಮ್ಮ ಅಶಕ್ತಿಯಲ್ಲಿ ಸಹಾಯ ಮಾಡುತ್ತಾನೆಂಬುದನ್ನು ಪೌಲನು ಒತ್ತಿಹೇಳುವವನಾಗಿದ್ದನು. ಆತನು ಈ ಕಾರ್ಯವನ್ನು ಮಾಡುವ ಒಂದು ದಾರಿಯೆಂದರೆ ನಮ್ಮ ಪ್ರಾರ್ಥನಾ ಜೀವಿತಗಳಲ್ಲಿ ಸಹಾಯ ಮಾಡುವದು (8:26, 27). ಆತನು ಅದನ್ನು ಮಾಡುವಂತಹ ಇನ್ನೊಂದು ದಾರಿಯೆಂದರೆ, ನಮ್ಮ ಜೀವಿತಗಳಲ್ಲಿ ಸಂಭವಿಸುವ ಅರ್ಥಹೀನವೆಂದು ತೋರುವ ಕಾರ್ಯಗಳನ್ನು ನಮಗೆ ಅರ್ಥಮಾಡಿಸಿ ಕೊಡುವ ಮೂಲಕವಾಗಿದೆ (8:28). ಕೆಲವು ತರ್ಜುಮೆಗಳು 28ನೇ ವಚನ ಹಾಗೂ ಅದರ ಮುಂಚಿನ ವಚನಗಳ ನಡುವಿನ ಸಂಬಂಧವನ್ನು ಒತ್ತಿಹೇಳುತ್ತವೆ. ಉದಾಹರಣೆಗೆ, 27 ಮತ್ತು 28ನೇ ವಚನಗಳಲ್ಲಿ, "ದೇವಜನರಿಗೋಸ್ಕರ ದೇವರ ಸ್ವದಾರಿಯಲ್ಲಿಯೇ ಬೇಡಿಕೊಳ್ಳುತ್ತಾನೆ; ಮತ್ತು ನಮಗೆ ಗೊತ್ತಿರುವ ಹಾಗೆ, ಎಲ್ಲದರಲ್ಲಿಯೂ ಆತನು [ಪವಿತ್ರಾತ್ಮನು] ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಅವರೊಡನೆ ಸಹಕಾರವನ್ನು ನೀಡುವನು" ಎಂದು NEB ಹೇಳುತ್ತದೆ.

ನಮಗೆ ಸಹಾಯ ಮಾಡುವವರು ತಂದೆಯಾದ ದೇವರೆಂದು ನಾವು ಭಾವಿಸುತ್ತೇವೋ ಅಥವಾ ಪವಿತ್ರಾತ್ಮನಾದ ದೇವರೆಂದು ಭಾವಿಸುತ್ತೇವೋ ಎಂಬುದು ಪ್ರಾಮುಖ್ಯವಾದದ್ದಲ್ಲ. (ಪುನಃ, ಒಬ್ಬನು ಏನು ಮಾಡುತ್ತಾನೋ, ಅದನ್ನು ಮತ್ತೊಬ್ಬನು ಸಹ ಮಾಡುವನೆಂದು ಹೇಳಲಾಗುತ್ತದೆ.) ದೇವರು ನಮ್ಮ ಜೀವಿತಗಳಲ್ಲಿ ಕಾರ್ಯಮಾಡು*ತ್ತಿದ್ದಾನೆಂಬುದನ್ನು* ತಿಳಿಯುವದೇ ಪ್ರಾಮುಖ್ಯವಾದದ್ದು. "ಆತನು ಎಡೆಬಿಡದೆ, ಉತ್ಸಾಹಭರಿತವಾಗಿ ಮತ್ತು ಉದ್ದೇಶಭರಿತವಾಗಿ [ನಮ್ಮ] ಪರವಾಗಿ ಸಕ್ರಿಯವಾಗಿರುತ್ತಾನೆ."[120]

ಎರಡನೆಯದಾಗಿ, ರೋಮಾ 8:28 ಹೇಳುವದೇನೆಂದರೆ ದೇವರು ತನ್ನ ಮಕ್ಕಳ ಜೀವಿತಗಳಲ್ಲಿ ಕಾರ್ಯಸಾಧಿಸುತ್ತಿದ್ದಾನೆ, ಹೀಗೆ ಅವರಿಗೆ ಸಂಭವಿಸುವ ಎಲ್ಲದರಲ್ಲಿಯೂ—ಕೆಟ್ಟದ್ದು ಹಾಗೂ ಒಳ್ಳೇದರಲ್ಲಿಯೂ—ಅಂತಿಮವಾಗಿ ಅವರ ಹಿತಕ್ಕೋಸ್ಕರ ಆಗಬೇಕೆಂಬದೇ. ಕೆಲವು ಸಾರಿ ಜನರು "ಎಲ್ಲಾ ಕಾರ್ಯಗಳು": "ದೇವರು *ಎಲ್ಲಾ ಕಾರ್ಯಗಳನ್ನು* ಅವರಿಗೆ ಹಿತವಾಗುವಂತೆ ಮಾಡುತ್ತಾನೆ" ಎಂದು ಪೌಲನು ಹೇಳಿದ್ದರ ಅರ್ಥವೇನಾಗಿತ್ತೆಂದು ಅಚ್ಚರಿಗೊಳ್ಳುತ್ತಾರೆ. ಪೌಲನು "ಎಲ್ಲಾ ಕಾರ್ಯಗಳು" ಎಂಬುದಕ್ಕೆ ಕೆಲವು ವಚನಗಳ ನಂತರದಲ್ಲಿ ಆತನು "ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ?" ಎಂಬದರ ಬಗ್ಗೆ ಮಾತಾಡುತ್ತಾ ಒಂದು ಅರ್ಥನಿರೂಪನೆಯನ್ನು ನೀಡುತ್ತಾನೆ, ಮತ್ತು ನಂತರ ಆತನು, "ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ" ಎಂದು ಹೇಳುತ್ತಾನೆ (8:35, 37). ಒಬ್ಬನ ಪರಿಸ್ಥಿತಿಗಳು ಎಷ್ಟೇ

ಕೆಟ್ಟವುಗಳಾಗಿದ್ದರೂ ಸರಿಯೇ, ದೇವರು ಅವುಗಳನ್ನು "ಹಿತಕ್ಕಾಗಿ ಅನುಕೂಲವಾಗುವಂತೆ" ಮಾಡಬಲ್ಲನು.

ಇತರರು "ಹಿತಕ್ಕಾಗಿ" ಎಂಬ ಪದದ ಬಗ್ಗೆ ಚಕಿತಗೊಳ್ಳುತ್ತಾರೆ; ಈ ವಚನದಲ್ಲಿ ಅದು ಯಾವ ಅರ್ಥವನ್ನು ಕೊಡುತ್ತದೆ? ಇದಕ್ಕೆ ಹಲವಾರು ವಿಧದಲ್ಲಿ ಉತ್ತರವನ್ನು ನೀಡಬಹುದು—ಆದರೆ ಸನ್ನಿವೇಶದಲ್ಲಿರುವ ಹಾಗೆ, "ಹಿತಕ್ಕಾಗಿ" ಎನ್ನುವಂತದ್ದು ಜನರ ಜೀವಿತಗಳನ್ನು ದೇವರ ಉದ್ದೇಶದೊಂದಿಗೆ ಹೆಚ್ಚು ಸಾಮರಸ್ಯೆಗೊಳ್ಳುವಂತೆ ಮಾಡುವದೇ ಎಂದು ಹೇಳಬಹುದು. ಪ್ರತಿಯೊಬ್ಬರು "ತನ್ನ ಮಗನ ಸಾರೂಪ್ಯವುಳ್ಳವರಾಗುವದಕ್ಕೆ" ಇಷ್ಟಪಡುತ್ತಾನೆಂಬದಾಗಿ 29ನೇ ವಚನವು ಹೇಳುತ್ತದೆ. ಯಾವದೇ ಆಗಲಿ ಜನರನ್ನು ಹೆಚ್ಚಾಗಿ ಯೇಸುವಿನ ಸಾರೂಪ್ಯವುಳ್ಳವರಾಗುವಂತೆ ಮಾಡುವದಾದರೆ ಅದು "ಹಿತವಾದದ್ದೇ," ಅದೇ ವೇಳೆಯಲ್ಲಿ ಈ ಉದ್ದೇಶವನ್ನು ವಿಫಲಗೊಳಿಸುವಂತದ್ದು "ಕೆಟ್ಟದ್ದು." 30ನೇ ವಚನದ ಅಂತ್ಯಭಾಗವು ಸೂಚಿಸುವದೇನೆಂದರೆ ದೇವರು ಅಂತಿಮವಾಗಿ ಪರಲೋಕದಲ್ಲಿ ತನ್ನ ಮಕ್ಕಳನ್ನು ಮಹಿಮೆಗೊಳಿಸುವದಕ್ಕೆ ಬಯಸುತ್ತಾನೆ ಎಂಬದೆ. ಒಬ್ಬ ವ್ಯಕ್ತಿಯನ್ನು ಪರಲೋಕಕ್ಕೆ ಸೇರುವಂತೆ ಸಿದ್ಧಗೊಳಿಸುವ ಯಾವ ಸಂಗತಿಯೇ ಆಗಲಿ "ಹಿತವಾದದ್ದೇ," ಅದೇ ವೇಳೆಯಲ್ಲಿ ಯಾವುದಾದರೂ ಅವರನ್ನು ಈ ಗುರಿಯಿಂದ ದಾರಿತಪ್ಪಿಸುವದಾದರೆ ಅದು "ಕೆಟ್ಟದ್ದು."

ಪೌಲನು ಏಕೆ ದೃಢವಿಶ್ವಾಸದಿಂದ "ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ" ಎಂದು ಹೇಳಿದನು? ಯಾಕೆಂದರೆ ಈ ಸಾಮಾನ್ಯಸೂತ್ರವು ಆತನ ಸ್ವಜೀವನದಲ್ಲಿ ಪುನಃ ಪುನಃ ಸಂಭವಿಸಿದ್ದನ್ನು ಕಂಡಿದ್ದನು. ಉದಾಹರಣೆಗೆ, ಆತನ ಶರೀರದಲ್ಲಿ "ಒಂದು ಮುಳ್ಳು" ಇತ್ತು (2 ಕೊರಿಂಥ 12:7), ಅದೊಂದು ಶಾರೀರಿಕ ವ್ಯಾದಿಯಾಗಿದ್ದು ಆತನಿಗೆ ಬಹಳ ಕಿರಿಕಿರಿಯುಂಟು ಮಾಡುತ್ತಿತ್ತು. ಇದು ಪೌಲನಿಗೆ "ಕೆಟ್ಟದ್ದು" ಎಂದು ಕಂಡಿತು, ಆದ್ದರಿಂದ ಆತನು ಸ್ವಸ್ಥಗೊಳ್ಳುವದಕ್ಕಾಗಿ ಪ್ರಾರ್ಥಿಸಿದನು (2 ಕೊರಿಂಥ 12:8); ಆದರೆ ಕರ್ತನು ಆತನಿಗೆ, "ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ" ಎಂದು ಹೇಳಿದನು (2 ಕೊರಿಂಥ 12:9a). ಕೊನೆಯಲ್ಲಿ, ಪೌಲನು ಕರ್ತನ ಮೇಲೆ ಹೆಚ್ಚು ಅವಲಂಬನೆಗೊಳ್ಳುವದನ್ನು ಕಲಿತ ಹಾಗೆ, ಆತನ ಶಾರೀರಿಕ ವ್ಯಾದಿಯೊಳಗಿಂದ ಹಿತವಾದದ್ದು ಹೊರಹೊಮ್ಮಿತು. ಆತನು ಅತ್ಯಂಥ ಸಂತೋಷದಿಂದ, "ಹೀಗಿರಲಾಗಿ ಕ್ರಿಸ್ತನ ಬಲವು ನನ್ನಲ್ಲಿ ನೆಲೆಸಿಕೊಂಡಿರ ಬೇಕೆಂದು ನನಗುಂಟಾಗುವ ನಿರ್ಬಲಾವಸ್ಥೆಗಳ ವಿಷಯದಲ್ಲಿಯೇ ಬಹುಸಂತೋಷವಾಗಿ ಹೆಚ್ಚಳಪಡುವೆನು" ಎಂದು ಬರೆದನು (2 ಕೊರಿಂಥ 12:9b).

ಪೌಲನ ಜೀವಿತದೊಳಗಿನ ಅನೇಕ ದೃಷ್ಟಾಂತಗಳು ನೆನಪಿಗೆ ಬರುತ್ತವೆ. ಒಂದು ಸಂದರ್ಭದಲ್ಲಿ, ಆತನು ಮತ್ತು ಆತನ ಜೊತೆಸೇವಕನು ಹೊಡೆತಗಳನ್ನು ತಿಂದು ಸೆರೆಮನೆಗೆ ಹಾಕಲ್ಪಟ್ಟಿದ್ದರು (ಅಪೊಸ್ತಲರ ಕೃತ್ಯಗಳು 16:23, 24). ಬಹಳ ಜನರು ಇದನ್ನು "ಕೆಟ್ಟದ್ದು" ಎಂದು ಕರೆಯುವರು—ಆದರೆ ದೇವರು ಅದರೊಳಗಿಂದ "ಹಿತವಾದದ್ದು" ಬರುವಂತೆ ಉಪಯೋಗಿಸಿದನು: ಸೆರೆಮನೆಯ ಅಧಿಕಾರಿ ಮತ್ತು ಆತನ ಕುಟುಂಬದವರು ಕ್ರೈಸ್ತರಾದರು (ಅಪೊಸ್ತಲರ ಕೃತ್ಯಗಳು 16:30-34). ಇನ್ನೊಂದು ಉದಾಹರಣೆಯೆಂದರೆ, ಪೌಲನು ಯೆರೂಸಲೇಮಿನಲ್ಲಿ ಬಂಧಿಸಲ್ಪಟ್ಟ ಸಮಯದಿಂದ ರೋಮಾಪುರದಲ್ಲಿ ಆತನು

ಸೆರೆಯಾಳಾಗುವ ವರೆಗೂ ಕೆಟ್ಟದ್ದಾಗಿ ನಡಿಸಿಕೊಳ್ಳಲ್ಪಟ್ಟದ್ದು, ಅಲ್ಲಿ ಆತನಿಗೆ ಹಗಲುರಾತ್ರಿ ರೋಮಾಯ ಸಿಪಾಯಿಗಳು ಕಾವಲಾಗಿದ್ದರು. ಇದೆಲ್ಲಾ "ಕೆಟ್ಟದ್ದು" ಎಂದು ತೋರುತ್ತದೆ—ಆದರೆ, ಪೌಲನ ಪ್ರಕಾರವಾಗಿ, ಅದರಿಂದ "ಹಿತವಾದದ್ದು" ಉಂಟಾಗಿತ್ತು. ಆತನು ಫಿಲಿಪ್ಪಿಯವರಿಗೆ ಹೀಗೆ ಬರೆದನು,

> . . . ನನಗೆ ಸಂಭವಿಸಿರುವದು ಸುವಾರ್ತೆಯ ಪ್ರಸಾರಣೆಗೆ ಸಹಾಯವಾಯಿತೆಂದು ನೀವು ತಿಳಿಯಬೇಕೆಂಬದಾಗಿ ಅಪೇಕ್ಷಿಸುತ್ತೇನೆ. ಹೇಗಂದರೆ ನನ್ನ ಬೇಡಿಗಳು ಕ್ರಿಸ್ತನ ನಿಮಿತ್ತವೇ ಎಂದು ಅರಮನೆಯ ಪಹರೆಯವರೆಲ್ಲರಿಗೂ ಮಿಕ್ಕಾದವರೆಲ್ಲರಿಗೂ ಪ್ರಸಿದ್ಧವಾಯಿತು. ಇದಲ್ಲದೆ ಸಹೋದರರಲ್ಲಿ ಬಹಳ ಜನರು ನನ್ನ ಬೇಡಿಗಳಿಂದಲೇ ಕರ್ತನಲ್ಲಿ ಭರವಸವುಳ್ಳವರಾಗಿ ದೇವರ ವಾಕ್ಯವನ್ನು ನಿರ್ಭಯದಿಂದ ಹೇಳುವದಕ್ಕೆ ಇನ್ನೂ ವಿಶೇಷ ಧೈರ್ಯಹೊಂದಿದ್ದಾರೆ (ಫಿಲಿಪ್ಪಿ 1:12-14).

ಕೆಲವು ಸಾರಿ ಪೌಲನಿಗೆ ತಕ್ಷಣದಲ್ಲಿಯೇ ಯಾವುದೇ "ಹಿತವಾದ"ದ್ದನ್ನು ಕಾಣುವದು ಕಠಿಣವಾಗಿದ್ದಿರಬಹುದು. ಹಾಗಿದ್ದ ಪಕ್ಷದಲ್ಲಿ, ಆತನು ಹೇಳಿದ್ದೇನೆಂದರೆ,

> . . . ನಾವು ಧೈರ್ಯಗೆಡುವದಿಲ್ಲ. ನಮ್ಮ ದೇಹವು ನಾಶವಾಗುತ್ತಾ ಇದ್ದರೂ ನಮ್ಮ ಅಂತರ್ಯವು ದಿನೇದಿನೇ ಹೊಸದಾಗುತ್ತಾ ಬರುತ್ತದೆ. ಹೇಗಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾಧಿಕವಾದ ಪ್ರತಿಫಲವನ್ನು ಉಂಟು ಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ. ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸುವವರಾಗಿದ್ದೇವೆ. ಕಾಣುವಂಥದು ಸ್ವಲ್ಪಕಾಲ ಮಾತ್ರ ಇರುವದು; ಕಾಣದಿರುವಂಥದು ಸದಾಕಾಲವೂ ಇರುವದು (2 ಕೊರಿಂಥ 4:16-18; ನೋಡಿರಿ 2 ತಿಮೊಥೆ 4:8).

ಇಬ್ರಿಯ 12:11ರ ಮಾತುಗಳನ್ನು ಇಲ್ಲಿ ಅಳವಡಿಸಿಕೊಂಡರೆ ನಮಗೆ ಇನ್ನಷ್ಟು ತಿಳಿವಳಿಕೆಯನ್ನು ಅನುಗ್ರಹಿಸಿಬಹುದಾಗಿದೆ: ಜೀವನದ ಎಲ್ಲಾ ಸಮಸ್ಯೆಗಳು ಸಹ *ತತ್ಕಾಲಕ್ಕೆ* ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ; ಆದರೂ *ತರುವಾಯ* ಅದು ಶೀಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟುಮಾಡುತ್ತದೆ.

ರೋಮಾ 8:28 ಕಲಿಸುವದೇನೆಂದರೆ ದೇವರು ತನ್ನ ಮಕ್ಕಳ ಜೀವಿತಗಳಲ್ಲಿ ಹಿತವಾದದ್ದು ಸಂಭವಿಸುವ ಹಾಗೆ ವಿಶೇಷವಾದ ರೀತಿಯಲ್ಲಿ ಕಾರ್ಯಮಾಡುತ್ತಿದ್ದಾನೆ ಎಂದು ಕಲಿಸುತ್ತದೆ—ಆದರೆ, ಮೂರನೆಯದಾಗಿ, ವಚನವು ಇದನ್ನು ಆತನು ತನ್ನ ಮಕ್ಕಳಿಗಾಗಿ *ಮಾತ್ರವೇ* ಕಾರ್ಯಮಾಡುತ್ತಿದ್ದಾನೆಂಬದಾಗಿ ಒತ್ತಿಹೇಳುತ್ತದೆ. ರೋಮಾಪುರದವರಿಗೆ ಪತ್ರಿಕೆಯ ಸನ್ನಿವೇಶದ ಪ್ರಕಾರ, "ಯೇಸುವಿನಲ್ಲಿ *ವಿಶ್ವಾಸವಿಡುವವರ* ಹಿತಕ್ಕೋಸ್ಕರ ದೇವರು ಎಲ್ಲಾ ಕಾರ್ಯಗಳು ಅನುಕೂಲಮಾಡುತ್ತಾನೆ" ಎಂದು ಪೌಲನು ಹೇಳುತ್ತಾನೆಂದು ನಾವು ನಿರೀಕ್ಷಿಸಿದ್ದಿರಬೇಕು. ಬದಲಾಗಿ, ಆತನು ಬೇರೆ ಪರಿಭಾಷೆಯನ್ನು ಉಪಯೋಗಿಸಿದನು, ಅದೊಂದು ಆಲೋಚನೆ—ಮಾಡುವಂತೆ ಮಾಡುವ ಪರಿಭಾಷೆಯಾಗಿದೆ: ರೋಮಾ 8:28ರ ವಾಗ್ದಾನವು "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರಿ" ಗೋಸ್ಕರವಾಗಿರುತ್ತದೆ. ಈ ಪದಗಳು ದೇವರ ನಂಬಿಗಸ್ತ ಮಕ್ಕಳ ಅರ್ಥವನ್ನು ನಿರೂಪಿಸುತ್ತವೆ. Moo ಅಭಿಪ್ರಾಯಪಟ್ಟದ್ದೇನೆಂದರೆ "ಕ್ರೈಸ್ತರು ಮೊದಲು ಮಾನವ ಕೋನದಿಂದ ಅರ್ಥನಿರೂಪಿಸಲ್ಪಡುತ್ತಾರೆ ('[ದೇವರನ್ನು]

ಪ್ರೀತಿಸುವವರು')" ಮತ್ತು ನಂತರ "ದೈವಿಕ ಕೋನದಿಂದ ('ಆತನ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟವರು')."[121]

"ಅದ್ಭುತವಾದ ವಾಗ್ದಾನವು" ಮೊದಲು "ದೇವರನ್ನು ಪ್ರೀತಿಸುವವರ"ಗೋಸ್ಕರ ಎಂಬುದನ್ನು ಗಮನಕ್ಕೆ ತರುತ್ತಾನೆ. ರೋಮಾ 8ನೇ ಅಧ್ಯಾಯದ ಕಡೇ ಭಾಗವು ನಮಗೋಸ್ಕರ ಇರುವ ದೇವರ ಪ್ರೀತಿಯ ಸುತ್ತ ಕೇಂದ್ರಕೃತವಾಗಿರುತ್ತದೆ. ಯಾವದೂ "ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು" ಪೌಲನು ಒತ್ತಿ ಹೇಳಿದನು (8:39). ನಮ್ಮ ಮೇಲೆ ದೇವರು ಇಟ್ಟಿರುವ ಪ್ರೀತಿಯು ಆತನನ್ನು ಪ್ರೀತಿಸುವಂತೆ ನಮ್ಮನ್ನು ಸ್ಫೂರ್ತಿಗೊಳಿಸತಕ್ಕದ್ದು (1 ಯೋಹಾನ 4:19; KJV). ಆತನ ಮೇಲೆ ನಮಗಿರುವ ಪ್ರೀತಿಯು ಆತನಲ್ಲಿ ಭರವಸವಿಡುವಂತೆ ಮತ್ತು ಆತನ ಚಿತ್ತವನ್ನು ಮಾಡುವಂತೆ ನಮ್ಮನ್ನು ಸ್ಫೂರ್ತಿಗೊಳಿಸತಕ್ಕದ್ದು (ಯೋಹಾನ 14:15; 1 ಯೋಹಾನ 5:3).

ನಂತರ ಪೌಲನು "ಕರೆಯಲ್ಪಟ್ಟು" ಎಂಬ ಪದವನ್ನು ಉಪಯೋಗಿಸುತ್ತಾನೆ: "ಆತನ ಸಂಕಲ್ಪದ ಮೇರೆಗೆ *ಕರೆಯಲ್ಪಟ್ಟು*." "ಕರೆಯಲ್ಪಟ್ಟು" ಎಂಬ ಪದವು ನಂತರದಲ್ಲಿ ಹೆಚ್ಚು ವಿವರವಾಗಿ ಚರ್ಚಿಸಲ್ಪಟ್ಟಿರುತ್ತದೆ (8:30ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಇಲ್ಲಿ, ಸುವಾರ್ತೆಯ ಮೂಲಕ ಎಲ್ಲರೂ ಕರೆಯಲ್ಪಟ್ಟಿದ್ದಾರೆ (2 ತಿಮೊಥೆ 2:14) ಮತ್ತು "ಕರೆಯಲ್ಪಟ್ಟು" ಎಂಬುದು ಅನೇಕ ಸಾರಿ ಸುವಾರ್ತೆಯ ಕರೆಗೆ *ಪ್ರತಿಸ್ಪಂದಿಸಿರುವವರನ್ನು* ಸೂಚಿಸುತ್ತದೆಂಬದನ್ನು ತಿಳಿದುಕೊಂಡರೆ ಸಾಕಾಗಿರುತ್ತದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಅದು ಕರ್ತನ ಆಮಂತ್ರಣ ಓಗೊಟ್ಟವರನ್ನು ಸೂಚಿಸುತ್ತದೆ.

ಬಹುಶಃ, ಅತ್ಯಂಥ ಪ್ರಾಮುಖ್ಯವಾದ ಅರ್ಹಗೊಳಿಸುವ ಪದಗುಚ್ಛವೆಂದರೆ "ಆತನ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟವರು": "ದೇವರ *ಸಂಕಲ್ಪದ ಮೇರೆಗೆ* ಕರೆಯಲ್ಪಟ್ಟು." ದೇವರು ಒಂದು ಸಂಕಲ್ಪ ಮತ್ತು ಉದ್ದೇಶವೊಂದನ್ನು ಹೊಂದಿದ್ದಾನೆ. ಪೌಲನು ಎಫೆಸದಲ್ಲಿರುವ ಕ್ರೈಸ್ತರಿಗೆ ದೇವರ "ದೇವರು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಅನಾದಿಕಾಲದಿಂದ ಮಾಡಿದ ಸಂಕಲ್ಪದ ಮೇರೆಗೆ" ಎಂದು ಬರೆಯುತ್ತಾನೆ (ಎಫೆಸ 3:11). ಆತನು ತಿಮೊಥೆಯನಿಗೆ ಹೇಳಿದ್ದೇನೆಂದರೆ ದೇವರು "ತನ್ನ ಸಂಕಲ್ಪವನ್ನು ಅನುಸರಿಸಿ . . . ನಮ್ಮನ್ನು ರಕ್ಷಿಸಿ" (2 ತಿಮೊಥೆ 1:9). "ಸಂಕಲ್ಪ" ಎಂಬುದು πρόθεσις (*prothesis*) ಎಂಬ ಪದದಿಂದ ಬಂದದ್ದು, ಅದು πρό (*pro,* "ಮುಂಚೆ") ಮತ್ತು θέσις (*thesis,* "ಇಡಲ್ಪಟ್ಟಂಥದ್ದು") ಎಂಬ ಪದಗಳ ಸಂಯೋಜನೆಯಾಗಿರುತ್ತದೆ. *Prothesis* ಎಂಬ ಪದವು ಯೇಸುವನ್ನು ಕಳುಹಿಸಿ ಕೊಟ್ಟು ಮಾನವರನ್ನು ವಿಮೋಚಿಸುವದಕ್ಕೆ ದೇವರು ಮಾಡಿದ ನಿತ್ಯವಾದ ಸಂಕಲ್ಪವನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಟ್ಟಿದೆ. ಈ ಪದವು ಕರ್ತನು ಮುಂಚಿತವಾಗಿಯೇ ಯೋಜನೆ ರೂಪಿಸುವದನ್ನು ಸೂಚಿಸುವದು ಮಾತ್ರವಲ್ಲದೆ, ಏನೇ ನಡೆದರೂ ಆ ಯೋಜನೆಯನ್ನು ಕಾರ್ಯಸಾಧಿಸಬೇಕೆಂಬ ದೃಢನಿರ್ಧಾರವನ್ನು ಸಹ ತೋರ್ಪಡಿಸುತ್ತದೆ. ದೇವರ ಯೋಜನೆ ಅಥವಾ ಸಂಕಲ್ಪವು, ಮುಂದಿನ ಎರಡು ವಚನಗಳ ಕೇಂದ್ರ ಚರ್ಚೆಯಾಂಶವಾಗಿರುತ್ತದೆ.

**ವಚನಗಳು 29, 30.** ಪೌಲನು 28ನೇ ವಚನದಲ್ಲಿ ದೇವರ ಸಂಕಲ್ಪದ ಬಗ್ಗೆ ಉಲ್ಲೇಖಿಸಿದ್ದು 29 ಮತ್ತು 30 ವಚನಗಳಲ್ಲಿ ಆತನನ್ನು ತನ್ನ ಉದ್ದೇಶದ ಸಂಕ್ಷಿಪ್ತ

ವಿವರಣೆಗಳನ್ನು ಕೊಡುವಂತೆ ಹುರಿದುಂಬಿಸಿತು. Stott ಹೀಗೆ ಬರೆದನು, ಈ ವಚನಗಳಲ್ಲಿ ಮತ್ತು ನಂತರದ ವಚನಗಳಲ್ಲಿ,

> . . . [ಪೌಲನು] ಬಹುವಾಗಿ ಪವಿತ್ರಾತ್ಮನಿಂದ ನಡಿಸಲ್ಪಟ್ಟವನಾಗಿ . . . ಅನಾದಿಕಾಲದಿಂದ ಮೊದಲ್ಗೊಂಡು ಮುಂದಿನ ನಿತ್ಯಕಾಲದ ವರೆಗಿನ ದೇವರ ಯೋಜನೆ ಮತ್ತು ಸಂಕಲ್ಪದ ವರೆಗೆ ರಭಸವಾಗಿ ಸಾಗಿ ಬರುತ್ತಾನೆ, ದೈವಿಕ ಪೂರ್ವಜ್ಞಾನದಿಂದ ಮತ್ತು ಪೂರ್ವಸಂಕಲ್ಪದಿಂದ ನೇಮಿಸಲ್ಪಟ್ಟಿರುವ ಆತನ ಪ್ರೀತಿಯಿಂದ ನಮ್ಮನ್ನು ಅಗಲಿಸುವದಕ್ಕೆ ಶಕ್ತವಾದದ್ದು ಯಾವದೂ ಇಲ್ಲವೇ ಇಲ್ಲ.[122]

ರೋಮಾ 8:29, 30 ವಚನಗಳು ಪುಸ್ತಕದಲ್ಲಿಯೇ "ಅತ್ಯಂಥ ಕಠಿಣಕರವಾದ ವಾಕ್ಯಭಾಗಗಳಲ್ಲೊಂದು"[123] ಎಂದು ಅಭಿಪ್ರಾಯ ಪಡಲ್ಪಡುತ್ತದೆ; ಈ ಎರಡು ವಚನಗಳು ಬಹಳಷ್ಟು ದೈವಶಾಸ್ತ್ರಿಕ ವಾಗ್ವಾದದ ಮುಖ್ಯ ಭಾಗವಾಗಿರುತ್ತವೆ. Moses E. Lard ಹೀಗೆ ಬರೆದನು, "ಬಹುಶಃ ಈ ಕ್ಲಪ್ತ ಭಾಗವು ಅಧಿಕ ವಿಸ್ತರಿತ ವಿವಾದಗಳಿಗೆ ದಾರಿ ಮಾಡಿಕೊಟ್ಟಷ್ಟು ಹೊಸ ಒಡಂಬಡಿಕೆಯಲ್ಲಿನ ಇನ್ಯಾವದೇ ವಾಕ್ಯಭಾಗವು ಎಡೆಮಾಡಿಕೊಟ್ಟಿಡುವದಿಲ್ಲ [ರೋಮಾ 8:28-30]."[124] ಅಲ್ಲದೆ Lard ಇನ್ನೂ ಗಮನಕ್ಕೆ ತಂದದ್ದೇನೆಂದರೆ 29 ಮತ್ತು 30ನೇ ವಚನಗಳು "ಕ್ಯಾಲ್ವಿನ್‌ವಾದಿಗಳ ವಿಶ್ವಾಸಪ್ರಮಾಣ" ವನ್ನು ರೂಪಿಸುತ್ತವೆ.[125] ನಮ್ಮ ವಾಕ್ಯಭಾಗದೊಂದಿಗೆ ಸಂಬಂಧಪಡುವಂತಹ John Calvinನ[126] ಕೆಲವು ತತ್ವಗಳು ಇಲ್ಲಿವೆ:

ದೇವರು ತಾನು ರಕ್ಷಿಸಲಿದ್ದ ವ್ಯಕ್ತಿಗಳನ್ನು ಪೂರ್ವದಲ್ಲಿಯೇ ತಿಳಿದಿದ್ದನು.
ಇವರನ್ನು ರಕ್ಷಿಸಬೇಕೆಂದು ಆತನು ಮೊದಲೇ ನೇಮಿಸಿದಂತೆ [ಪೂರ್ವದಲ್ಲಿಯೇ ನಿರ್ಧರಿಸಿದನು] ಮಾಡಿದನು—ಅವರಲ್ಲಿ ಯಾವುದೇ ಶ್ಲಾಘ್ಯವಿದೆಯೆಂಬ ಕಾರಣದಿಂದಲ್ಲ, ಆದರೆ ತನ್ನ ಸಾರ್ವಭೌಮ ಚಿತ್ತವನ್ನು ವ್ಯಕ್ತಗೊಳಿಸುವವನಾಗಿ ಮಾಡಿದನು.
ಆತನು ಯಾರನ್ನು ರಕ್ಷಿಸಬೇಕೆಂದು ಮೊದಲೇ ನಿರ್ಧರಿಸಿದನೋ, ಅವರನ್ನು ನೇರವಾಗಿ, ಪವಿತ್ರಾತ್ಮನ ಅಪ್ರತಿರೋಧ್ಯ ಕ್ರಿಯೆಯನ್ನು ಕಳುಹಿಸುವ ಮೂಲಕ ಕರೆದನು. ಇದು ಅವರನ್ನು ಜೀವಂತಗೊಳಿಸಿತು (ಅವರನ್ನು ಪುನಃ ಆತ್ಮೀಕವಾಗಿ ಜೀವಿತಗೊಳಿಸಿತು) ಮತ್ತು ಅವರನ್ನು ನಂಬಿಕೆಯನ್ನು ಪ್ರಚೋದಿಸಿತು.
ಇವರನ್ನು ಆತನು ರಕ್ಷಿಸಿದನು (ನೀತಿವಂತರೆಂದು ನಿರ್ಣಯಿಸಿದನು).
ಇವರು ರಕ್ಷಣೆ ಹೊಂದುವದಕ್ಕಾಗಿ ಏನನ್ನೂ ಮಾಡಲಿಲ್ಲವಾದ್ದರಿಂದ, ಅವರು ನಾಶವಾಗಿ ಹೋಗುವದಕ್ಕೆ ಸಹ ಏನನ್ನೂ ಮಾಡಲಾರರು. ಹೀಗೆ, ಪ್ರಶ್ನಾತೀತವಾಗಿ ದೇವರು ಒಂದು ದಿನ ಅವರನ್ನು (ಪರಲೋಕದಲ್ಲಿ) ಮಹಿಮಪದವಿಗೆ ಸೇರಿಸುವನು.

ಈ ದೈವಶಾಸ್ತ್ರವನ್ನು ರೋಮಾ 8:29, 30, ವಚನಗಳೊಂದಿಗೆ ಹೋಲಿಸಲ್ಪಟ್ಟಾಗ, ಏಕೆ ಈ ವಾಕ್ಯಭಾಗವು ಕ್ಯಾಲ್ವಿನ್‌ವಾದಿಗಳೊಳಗೆ ಜನಪ್ರಿಯವಾಗಿದೆ ಎಂಬುದು ಒಬ್ಬನಿಗೆ ಗೊತ್ತಾಗಿ ಬರುತ್ತದೆ. ಅದೇ ವೇಳೆಯಲ್ಲಿ, ಒಬ್ಬನು ಜಾಗರೂಕತೆಯಿಂದ ಹೋಲಿಕೆ ಮಾಡಿ ನೋಡುವಾಗ, ಎರಡು ಸತ್ಯಗಳನ್ನು ಕಾಣಬಹುದಾಗಿದೆ. ಮೊದಲನೆಯದಾಗಿ, ಕ್ಯಾಲ್ವಿನ್‌ವಾದಿಗಳು ಇಷ್ಟಪಡಬಹುದಾದ ರೀತಿಯಲ್ಲಿ ಈ ವಾಕ್ಯಭಾಗವು ನಿರ್ದಿಷ್ಟವಾಗಿ

ಓದಲ್ಪಡುವದಿಲ್ಲ. ಎರಡನೆಯದಾಗಿ, ಅವರು ಈ ವಾಕ್ಯಭಾಗಕ್ಕೆ ತಮ್ಮ ದೈವಶಾಸ್ತ್ರದ ಬಹಳಷ್ಟು ಅಂಶಗಳನ್ನು *ಸೇರ್ಪಡೆಗೊಳಿಸಿರುತ್ತಾರೆ.*

ಇಲ್ಲಿ Barclayಯ ವ್ಯಾಖ್ಯೆಯನ್ನು ಪರಿಗಣಿಸುವದು ಯೋಗ್ಯವಾಗಿರುತ್ತದೆ: "ಇದು ಅತ್ಯಂಥ ಗಂಬೀರವಾಗಿ ದುರುಪಯೋಗಪಡಿಸಿಕೊಳ್ಳಲ್ಪಟ್ಟಿರುವ ವಾಕ್ಯಭಾಗವಾಗಿದೆ. ನಾವು ಇದನ್ನು ಅರ್ಥಮಾಡಿಕೊಳ್ಳಲೇಬೆಕೆಂದರೆ ನಾವು ಇದು ಒಂದು [ಗಹನವಾದ] ದೈವಶಾಸ್ತ್ರ ಅಥವಾ ತತ್ವಜ್ಞಾನದ ವಿವರಣೆಯಾಗಿರಬೇಕೆಂಬುದು ಪೌಲನ ತಾತ್ಪರ್ಯ ವಾಗಿರಲೇ ಇಲ್ಲ ಎಂಬ ಪ್ರಾಥಮಿಕ ವಾಸ್ತವಾಂಶವನ್ನು ನಾವು ಗ್ರಹಿಸಿಕೊಳ್ಳತಕ್ಕದ್ದು."[127] 8:29, 30 ವಚನಗಳಲ್ಲಿ, ಪೌಲನು ಕ್ರೈಸ್ತರಿಗೆ ದೇವರು ಎಲ್ಲಾ ಕಾರ್ಯಗಳನ್ನು ಹಿತಕ್ಕಾಗಿ ಅನುಕೂಲ ಮಾಡುತ್ತಾನೆಂಬ ಭರವಸೆ ಕೊಡುವದನ್ನು ಮುಂದುವರೆಸಿದ್ದನು (8:28). ಆ ಭರವಸೆ ಕೊಡುವಿಕೆಯನ್ನು ಈ ರೀತಿಯಾಗಿ ವ್ಯಕ್ತಪಡಿಸಬಹುದಾಗಿದೆ:

> ದೇವರು ಒಂದು ಯೋಜನೆ ಹೊಂದಿದ್ದಾನೆ.
> ಲೋಕವು ಎಷ್ಟೇ ಅಸ್ತವ್ಯಸ್ತವಾಗಿ ಕಂಡರೂ ಸರಿಯೆ, ಆ ಯೋಜನೆ ಆಗಲೂ ಕ್ರಿಯೆಯಲ್ಲಿರುತ್ತದೆ. ಅದು ಭಂಗಗೊಳ್ಳದು—ಭಂಗಗೊಳ್ಳಲು ಸಾಧ್ಯವಿಲ್ಲ. ಅದು ಪೂರ್ಣ ಕಾರ್ಯಸಾಧಿ*ಸಲ್ಪಡುವದು*; ಅದು ನೆರವೇರಿಸ*ಲ್ಪಡುವದು*.
> ಹೀಗೆ, ಪೌಲನ ವಾಚಕರು ತಮ್ಮನ್ನು ಆ ಸಂಕಲ್ಪದ ಭಾಗವಾಗಿ ಮಾಡಿಕೊಳ್ಳುವದಾದರೆ, ಅವರು ಜಯಶಾಲಿಗಳಾಗುವರು (ನೋಡಿರಿ 8:37).

ಆದಿ ಕ್ರೈಸ್ತರಿಗೆ ಅಗತ್ಯವಾಗಿದ್ದ ಭರವಸೆಯು ಅದೇ ಆಗಿತ್ತು. ನಮಗೆ ಅಗತ್ಯವಿರುವ ಭರವಸೆಯು ಸಹ ಅದೇ ಆಗಿರುತ್ತದೆ.

ಹೇಗಿದ್ದರೂ, ಪೌಲನು 8:29, 30 ವಚನಗಳಲ್ಲಿ ಉಪಯೋಗಿಸುವ ಪರಿಭಾಷೆಯನ್ನು ಅರ್ಥಮಾಡಿಕೊಳ್ಳಲು ನಾವು ಈಗಲೂ ಹೋರಾಡಬೇಕಿದೆ. ಆತನು ಆ ರೀತಿಯಲ್ಲಿ ಏಕೆ ತನ್ನ ಮಾತುಗಳನ್ನು ವ್ಯಕ್ತಗೊಳಿಸಿದನು? ನಾವು ವಾಕ್ಯಭಾಗವನ್ನು ಜಾಗರೂಕತೆಯಿಂದ ಪರೀಕ್ಷಿಸೋಣ. ನಮ್ಮ ಅಧ್ಯಯನವು ಮೂರು ಭಾಗಗಳಾಗಿ ವಿಂಗಡಿಸಲ್ಪಡುವದು: ದೇವರರು ಗತಕಾಲದಲ್ಲಿ ಮಾಡಿದ ಕಾರ್ಯ, ಆತನು ಈಗಿನ ಕಾಲದಲ್ಲಿ ಮಾಡುತ್ತಿರುವದು, ಮತ್ತು ಆತನು ಭವಿಷ್ಯದ ಕಾಲದಲ್ಲಿ ಮಾಡಲಿರುವ ಕಾರ್ಯ.

ವಾಕ್ಯಭಾಗವು ಬಹಳ ದೀರ್ಘಕಾಲದ ಹಿಂದೆ ದೇವರು ಮಾಡಿದ ಕಾರ್ಯದ ಬಗ್ಗೆ ಒತ್ತಿಹೇಳುತ್ತದೆ. 29ನೇ ವಚನವು ಹೀಗೆ ಆರಂಭಗೊಳ್ಳುತ್ತದೆ, **ತಾನು** [ದೇವರು] **ಯಾರನ್ನು ತನ್ನವರೆಂದು ಮೊದಲು ತಿಳುಕೊಂಡನೋ.** "ಮೊದಲು ತಿಳುಕೊಂಡನೋ" ಎಂಬುದು προγινώσκω (*proginōskō*) ಎಂಬ ಪದದಿಂದ ಬಂದದ್ದು. ಈ ಪದವು γινώσκω (*ginōskō*) ಎಂಬದನ್ನೊಳಗೊಂಡಿರುತ್ತದೆ, ಇದು ಗ್ರೀಕ್‌ನಲ್ಲಿ "ತಿಳಿದುಕೋ" ಎಂಬುದಕ್ಕಿರುವ ಅತ್ಯಂಥ ಸರ್ವಸಾಧಾರಣ ಪದವಾಗಿದ್ದು, πρό (*pro*, "ಮುಂಚೆ") ಎಂಬ ಉಪಸರ್ಗವನ್ನು ಹೊಂದಿರುತ್ತದೆ. ದೇವರ ಪೂರ್ವಜ್ಞಾನವು ನಮ್ಮ ನಂಬಿಕೆಯ ಅರ್ಥಮಾಡಿಕೊಳ್ಳಲಾಗದಂತಹ ಮರ್ಮಗಳಲ್ಲೊಂದಾಗಿದೆ. ಒಬ್ಬ ವ್ಯಕ್ತಿಯ ಸ್ವೇಚ್ಛಾ—ಚಿತ್ತದ ಮೇಲೆ ತನ್ನ ಪೂರ್ವಜ್ಞಾನವು ಹಸ್ತಕ್ಷೇಪ ಮಾಡದಂತೆಯೇ ಆ ವ್ಯಕ್ತಿಯು ಯಾವ ಸಂಗತಿಯನ್ನು ಮಾಡುವನೆಂಬದನ್ನು ಮುಂಚಿತವಾಗಿಯೇ ತಿಳಿದುಕೊಳ್ಳಲು ಶಕ್ತನು ಎಂಬದನ್ನು ನಮ್ಮಲ್ಲಿ ಬಹುತೇಕರಿಗೆ ಅರ್ಥಮಾಡಿಕೊಳ್ಳಲು ಕಷ್ಟಕರವಾಗಿರುತ್ತದೆ. "ಏನು

ಸಂಭವಿಸುತ್ತದೆಂಬುದು ದೇವರಿಗೆ ಗೊತ್ತಿದ್ದರೆ, ಆ ವ್ಯಕ್ತಿಗೆ ನಿಜಕ್ಕೂ ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯವಿತ್ತೋ?" ಎಂದು ನಾವು ಚಕಿತಗೊಳ್ಳುತ್ತೇವೆ. ಯಥಾಃ ರೀತಿಯಲ್ಲಿಯೇ, ಪೌಲನು ನಮ್ಮ ಮನಸ್ಸುಗಳಿಗೆ ತದ್ವಿರುದ್ಧವಾಗಿ ತೋರುವ ಈ ಎರಡು ಭಾವನೆಗಳ ನಡುವೆ ಸಂಧಾನಗೊಳಿಸುವದಕ್ಕೆ ಯಾವದೇ ಪ್ರಯತ್ನ ಮಾಡಲಿಲ್ಲ.

ಪೌಲನು ಮನುಷ್ಯನ ಸ್ವೇಚ್ಛಾ-ಚಿತ್ತದಲ್ಲಿ, ಆತನಿಗೆ ಆರಿಸಿಕೊಳ್ಳುವ ಹಕ್ಕು ಇದೆ ಎಂಬ ವಿಶ್ವಾಸ ಹೊಂದಿದ್ದನೆಂಬುದು ಸ್ಪಷ್ಟವಾಗಿ ತೋರುತ್ತದೆ. ರೋಮಾಪುರದವರಿಗೆ ಪುಸ್ತಕದಲ್ಲಿ, ಪೌಲನು ತನ್ನ ವಾಚಕರಿಗೆ, ಅವರು ಅದನ್ನು ಮಾಡುವದಕ್ಕೆ ಇಚ್ಛಿಸಬಹುದು ಅಥವಾ ನಿರಾಕರಿಸಲೂಬಹುದು (ಅದೊಂದು ಸ್ವೇಚ್ಛಾ-ಚಿತ್ತದ ಕ್ರಿಯೆ) ಎಂಬ ಅರ್ಥವನ್ನು ಸೂಚಿಸುತ್ತಾ ಅವರನ್ನು ವಿಶ್ವಾಸಿಸುವಂತೆ ಪ್ರೋತ್ಸಾಹಿಸಿದನು. ಪತ್ರಿಕೆಯುದ್ದಕ್ಕೂ, ಆತನು ನೀಡಿದ ಸೂಚ್ಯವೇನೆಂದರೆ (ನಂತರದಲ್ಲಿ ಆತನು ತಿಮೊಥೆಯನಿಗೆ ಬರೆದ ಪ್ರಕಾರ) "ಎಲ್ಲಾ ಮನುಷ್ಯರು ರಕ್ಷಣೆ ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬದು ಆತನ [ದೇವರ] ಚಿತ್ತ" ಎಂಬದೆ (1 ತಿಮೊಥೆ 2:4; ನೋಡಿರಿ ಅಪೊಸ್ತಲರ ಕೃತ್ಯಗಳು 10:34, 35; 2 ಪೇತ್ರ 3:9). ಹೇಗಿದ್ದರೂ, ಆತನು ರೋಮಾ 8:29ರಲ್ಲಿ, ಒಂದು ಅರ್ಥದಲ್ಲಿ, ಯಾರು ಕರೆಯಲ್ಪಡಲಿದ್ದರು, ನೀತಿವಂತರೆಂದು ನಿರ್ಣಯಿಸಲ್ಪಡಲಿದ್ದರು ಮತ್ತು ಮಹಿಮಪದವಿಗೆ ಸೇರಿಸಲ್ಪಡಲಿದ್ದರು ಎಂಬುದು ದೇವರಿಗೆ ಮೊದಲೇ ಗೊತ್ತಿತ್ತು ಎಂದು ಆತನು ಹೇಳಿದನು. ದೇವರ ಪೂರ್ವಜ್ಞಾನವು ಮನುಷ್ಯರ ಸ್ವೇಚ್ಛಾ-ಚಿತ್ತದಲ್ಲಿ ಹಸ್ತಕ್ಷೇಪ ಮಾಡಲಿಲ್ಲ ಮತ್ತು ಮಾನವ ಜವಾಬ್ದಾರಿಯನ್ನು ರದ್ದುಗೊಳಿಸಲಿಲ್ಲ ಎಂಬುದನ್ನು ತಿಳಿದಿರುವದು ಪೌಲನಿಗೆ ಸಾಕಾಗಿತ್ತು.

ಹೇಗೂ, ನಮಲ್ಲಿ ಅನೇಕರಿಗೆ ಬೈಬಲ್‌ನ ಈ ಎರಡು ಸತ್ಯಗಳನ್ನು ಸಾಮರಸ್ಯಗೊಳಿಸಬೇಕೆಂಬ ಹಂಬಲವಿರುತ್ತದೆ. ಒಂದು ಸಾಧ್ಯತೆಯೇನೆಂದರೆ ದೇವರು ನಿಖರವಾದ ವ್ಯಕ್ತಿಯು ರಕ್ಷಣೆ ಹೊಂದುವದನ್ನ ಪೂರ್ವದಲ್ಲಿಯೇ ತಿಳಿದವನಾಗಿರಲಿಲ್ಲ, ಆದರೆ ಒಂದು ವಿಧವಾದ ವ್ಯಕ್ತಿಯೆಂದಷ್ಟೆ ಬಲ್ಲವನಾಗಿದ್ದನು ಎಂಬದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಆತನು ರಕ್ಷಣೆ ಹೊಂದಿದ ಜನರ ಗುಂಪನ್ನು ಮತ್ತು ಕಳೆದುಹೋದವರ ಗುಂಪನ್ನು ಮೊದಲೇ ಕಂಡನು, ಮತ್ತು ಪ್ರತಿಯೊಬ್ಬ ವ್ಯಕ್ತಿಯು ಸಹ ತಾನು ರಕ್ಷಣೆ ಹೊಂದಿದವರ ಗುಂಪಿನಲ್ಲಿರುತ್ತೇನೋ ಅಥವಾ ರಕ್ಷಣೆ ಹೊಂದದ ಗುಂಪಿನಲ್ಲಿರುತ್ತೇನೋ ಎಂಬದನ್ನು ಸ್ವತಃ ತೀರ್ಮಾನಿಸಿಕೊಂಡನು. Jimmy Allen ಈ ನಿಲುವನ್ನು ಹೀಗೆ ಸಾರಾಂಶಗೊಳಿಸಿದನು: ದೇವರು "ತನ್ನ ಮಕ್ಕಳು ವಿಧೇಯರಾಗಿರುವರೆಂದು ಪೂರ್ವದಲ್ಲೇ ನೇಮಿಸಲಿಲ್ಲ ಆದರೆ ವಿಧೇಯರಾಗುವವರು ತನ್ನ ಮಕ್ಕಳೆಂಬುದನ್ನು ಪೂರ್ವದಲ್ಲೇ ನೇಮಿಸಿದನು."[128]

ಈ ರೀತಿಯ ಅರ್ಥೈಸುವಿಕೆಯು 30ನೇ ವಚನದಲ್ಲಿ "ಕರೆದನು" ಎಂಬ ಪದದೊಂದಿಗೆ ಜೋಡಿಸಲ್ಪಟ್ಟಿರುತ್ತದೆ: **ಮತ್ತು ಯಾರನ್ನು ಮೊದಲು ನೇಮಿಸಿದನೋ ಅವರನ್ನು ಕರೆದನು.** "ಕರೆದನು" ಎಂಬುದು καλέω (*kaleō*, "ಕರೆ") ಎಂಬ ಅನಿಶ್ಚಿತ ಭೂತಕಾಲ ರೂಪದ ಪದದಿಂದ ಬಂದದ್ದಾಗಿದೆ. ಪೌಲನು ಕೊಲೊಸ್ಸೆಯವರಿಗೆ ಅವರು "ಒಂದೇ ದೇಹಕ್ಕೆ" ಸೇರಿದವರಾಗಿರುವದಕ್ಕೆ ಕರೆಯಲ್ಪಟ್ಟಿದ್ದಾರೆ ಎಂದು ಹೇಳಿದನು (ಕೊಲೊಸ್ಸೆ 3:15). ಒಂದೇ ದೇಹ ಎಂಬುದು "ಸಭೆ" ಆಗಿರುತ್ತದೆ (ಕೊಲೊಸ್ಸೆ 1:18). "ಸಭೆ" ಎಂಬುದರ ಅನುವಾದಗೊಳ್ಳುವ ಗ್ರೀಕ್ ಪದವು ἐκκλησία (*ekklēsia*), ಅದು καλέω (*kaleō,*

"ಕರೆ") ಎಂಬ ರೂಪದ ಪದವನ್ನು ἐκ (*ek,* "ಹೊರಗೆ") ಎಂಬ ಉಪಸರ್ಗದೊಂದಿಗೆ ಒಂದುಗೂಡಿಸುತ್ತದೆ. ಕ್ರೈಸ್ತೀಯ ಅರ್ಥದಲ್ಲಿ ಉಪಯೋಗಿಸುವಾಗ, *ekklēsia*ವು ಆತ್ಮೀಕ ಕತ್ತಲೆಯಿಂದ ಹೊರಗೆ ಬಂದು ದೇವರ ಬೆಳಕಿನೊಳಗೆ ಸೇರುವಂತೆ ಕರೆಯಲ್ಪಟ್ಟವರು ಎಂಬ ಅರ್ಥವನ್ನು ಸೂಚಿಸುತ್ತದೆ (ನೋಡಿರಿ 1 ಪೇತ್ರ 2:9). ಪೌಲನು ಎಫೆಸದಲ್ಲಿನ ಸಭೆಗೆ ಬರೆದಾಗ, ಸಭೆಯು ದೇವರ ನಿತ್ಯಸಂಕಲ್ಪದ ಭಾಗವಾಗಿತ್ತೆಂಬುದನ್ನು ಅವರಿಗೆ ಸ್ಪಷ್ಟಪಡಿಸಿದನು (ಎಫೆಸ 3:10, 11, 21). ಆದದರಿಂದ ದೇವರು ಮೊದಲೇ ತಿಳಿದಿದ್ದ ಸಂಗತಿಯೇನೆಂದರೆ ಮುಂದೆ ಒಂದು ರಕ್ಷಣೆ ಹೊಂದಿದವರ ಸಮೂಹ, "ಹೊರಗೆ ಕರೆಯಲ್ಪಟ್ಟ" "ಸಭೆ" ಎಂದು ಪರಿಚಿತವಿರುವ ಜನರಿರುತ್ತಾರೆ ಎಂಬುದನ್ನೇ ಎಂಬ ಮುಕ್ತಾಯಕ್ಕೆ ನಾವು ಬರಬಹುದಾಗಿದೆ. ಪುನಃ, ಕರ್ತನ ಸಭೆಯ ಒಬ್ಬ ಸದಸ್ಯನಾಗುತ್ತೇನೋ ಇಲ್ಲವೋ ಎಂಬುದನ್ನು ನಿರ್ಧರಿಸಬೇಕಾದದ್ದು ಆಯಾ ವ್ಯಕ್ತಿಗಳೇ.

"ತಿಳಿಕೊಂಡನೋ" (*ginōskō*) ಎಂಬ ಪದವು ನಿರಂತರವಾಗಿ "ತಿಳುಕೊಂಡ ವ್ಯಕ್ತಿ ಮತ್ತು ತಿಳಿಕೊಳ್ಳಲ್ಪಟ್ಟ ವಸ್ತುವಿನ ನಡುವೆ ಸಂಬಂಧವಿರುವದನ್ನು ಸೂಚಿಸುತ್ತದೆ" ಎಂಬ ವಾಸ್ತವಾಂಶದ ಮೇಲೆ ಒಂದು ಪೂರಕವಾದ ಆಲೋಚನೆಯು ಆಧಾರವಾಗಿರುತ್ತದೆ.[129] AB ತರ್ಜುಮೆಯು ಇದನ್ನು ರೋಮಾ 8:29ರಲ್ಲಿ "ಆತನು [ದೇವರು] ಯಾರನ್ನು ಪೂರ್ವದಲ್ಲೇ ತಿಳುಕೊಂಡನೋ—ಯಾರ ಬಗ್ಗೆ ಆತನು ಮೊದಲೇ ಅರಿತವನಾಗಿದ್ದನು ಮತ್ತು ಪ್ರೀತಿಸಿದನೋ" ಎಂಬ ಪದಗುಚ್ಛದೊಂದಿಗೆ ಸೂಚಿಸುತ್ತದೆ. "ಮೊದಲೇ ತಿಳುಕೊಂಡನೋ" ಎಂಬ ಪದದ ಮುಖ್ಯ ಒತ್ತು ದೇವರು ಯಾರನ್ನು ಮೊದಲೇ ತಿಳುಕೊಂಡನು ಎಂಬದರ ಮೇಲಲ್ಲ, ಆದರೆ ದೇವರು ಏನು ಮಾಡಬೇಕೆಂದು ಯೋಜಿಸಿಕೊಂಡಿದ್ದನೆಂಬುದರ ಮೇಲೆಯೇ ಎಂದು ಅಭಿಪ್ರಾಯ ಪಡಲಾಗುತ್ತದೆ: ದೇವರು ತನ್ನ ಸೃಷ್ಟಿಯ ಸಂಗಡ ಸಂಬಂಧವನ್ನಿಟ್ಟುಕೊಳ್ಳಲು ಒಂದು ತೀರ್ಮಾನ ಮಾಡಿಕೊಂಡಾಗಲೇ ಆತನ ಯೋಜನೆಯು ಆರಂಭಗೊಂಡಿತು.

ಈ ವಿಧವಾದ ಅರ್ಥೈಸುವಿಕೆಯು ವಾಕ್ಯಭಾಗದ ಬೇಡಿಕೆಯನ್ನು ತೃಪ್ತಗೊಳಿಸುತ್ತದೆ, ಇದು ಬೇರೆಡೆಯಲ್ಲಿನ ಬೈಬಲಾಧಾರಿತ ಉಪದೇಶದೊಂದಿಗೆ ಹೊಂದಾಣಿಕೆಯಾಗುತ್ತದೆ, ಮತ್ತು ಬಹುಪಾಲು ಜನರಿಂದ ಅರ್ಥಮಾಡಿಕೊಳ್ಳ ಬಲ್ಲದ್ದಾಗಿದೆ. ಅದೇ ವೇಳೆಯಲ್ಲಿ, "ಯಾವ ವ್ಯಕ್ತಿಯು ಸುವಾರ್ತೆಯನ್ನು ಅಂಗೀಕರಿಸಿಕೊಳ್ಳುವನು ಮತ್ತು ಯಾವ ವ್ಯಕ್ತಿಯು ತಿರಸ್ಕರಿಸುವನು ಎಂಬುದನ್ನು ದೇವರು ಮುಂಚಿತವಾಗಿಯೇ ಬಲ್ಲವನಾಗಿದ್ದರೆ ಹೇಗಿರುತ್ತದೆ?" ಎಂಬ ಪ್ರಶ್ನೆಯೊಂದಿಗೆ ನಾವು ಒದ್ದಾಡುವದರಲ್ಲಿ ಮೌಲ್ಯವಿರಬಹುದಾಗಿದೆ. ನಮಗೆ ದೇವರ ಸರ್ವಜ್ಞಾನದಲ್ಲಿ (ಆತನು ಸರ್ವಜ್ಞಾನಿ ಎಂಬ ವಾಸ್ತವಾಂಶ) ನಂಬಿಕೆಯಿದ್ದರೆ, ಆತನು ಇಚ್ಛಿಸುವದಾದರೆ ಅದನ್ನು ತಿಳಿದುಕೊಂಡಿರುವ ಸಾಧ್ಯತೆಯಿರುತ್ತದೆಂಬದನ್ನು ನಾವು ಒಪ್ಪಿಕೊಳ್ಳಲೇಬೇಕು (ನೋಡಿರಿ ಅಪೊಸ್ತಲರ ಕೃತ್ಯಗಳು 18:10).

ಕೆಲವು ಜನರಿಗೆ ಚಿಂತೆಗೀಡುಗೊಳಿಸುವ ಪ್ರಶ್ನೆಯೆಂದರೆ ಆತನು ಇದನ್ನು ಸಂಬಂಧಪಟ್ಟ ವ್ಯಕ್ತಿಯ ಸ್ವೇಚ್ಛಾ—ಚಿತ್ತದೊಂದಿಗೆ ಹಸ್ತಕ್ಷೇಪವಿಲ್ಲದೆಯೇ ಮಾಡುವನೋ ಇಲ್ಲವೋ ಎಂಬುದು. ದೇವರ ಪೂರ್ವಜ್ಞಾನದ ಕುರಿತು ನಮಗೆ ಅರ್ಥವಾಗದಂಥದ್ದು ಬಹಳಷ್ಟಿದೆ, ಆದರೆ ಆ ಪ್ರಶ್ನೆಗೆ ಉತ್ತರವು ಹೌದು ಎಂಬದು ನನಗೆ ಮನದಟ್ಟಾಗಿರುತ್ತದೆ.

ಒಂದು ಘಟನೆಯು ಸಂಭವಿಸಿದ ಬಳಿಕ ಸಂಬಂಧ ಪಟ್ಟ ವ್ಯಕ್ತಿಯ ಸ್ವೇಚ್ಛಾ-ಚಿತ್ತದೊಂದಿಗೆ ಹಸ್ತಕ್ಷೇಪ ಮಾಡದೆಯೇ ನಮಗೆ ತಿಳಿದುಬರುವ ಪ್ರಕಾರವೇ, ದೇವರು ವ್ಯಕ್ತಿಗಿರುವ ಆಯ್ಕೆಮಾಡಿಕೊಳ್ಳುವ ಸ್ವಾತಂತ್ರ್ಯವನ್ನು ಕಸಿದುಕೊಳ್ಳದೆಯೇ ಒಂದು ಸಂಗತಿಯು ಸಂಭವಿಸುವ ಮುಂಚೆಯೇ ಅದನ್ನು ತಿಳಿದಿರಬಲ್ಲನು.

ಪುನಃ, ದೇವರ ಪೂರ್ವಜ್ಞಾನದ ಕುರಿತಾಗಿ ನಮಗೆ ಗ್ರಹಿಸಿಕೊಳ್ಳಲಾಗದಂಥದ್ದು ಬಹಳಷ್ಟಿರುತ್ತದೆ. ಹೇಗೂ, ಆತನ ಪೂರ್ವಜ್ಞಾನದ ವಿಷಯವಾದ ಕೆಲವು ರೋಮಾಂಚಕಾರಿ ಸತ್ಯಗಳನ್ನು ನಾವು ಅರ್ಥಮಾಡಿಕೊಳ್ಳಬಹುದಾಗಿದೆ. ದೇವರು ಮಾನವಕುಲವನ್ನು ಸೃಷ್ಟಿಸುವದಕ್ಕೆ ಮುಂಚೆಯೇ, ಆತನು ಭವಿಷ್ಯವನ್ನು ಮುಂದಾಗಿ ಕಂಡನು. ಆತನ ಮಾನವಕುಲದ ಬೀಳುವಿಕೆಯನ್ನು ಕಂಡನು ಮತ್ತು ಮಾನವಕುಲದ ವಿಮೋಚನೆಯ ಯೋಜನೆಯನ್ನು ಮಾಡಿದನು ಎಂಬುದು ಸ್ಪಷ್ಟವಾಗುತ್ತದೆ. ಆ ಯೋಜನೆಯ ಕೇಂದ್ರಭಾಗವೆಂದರೆ ಕ್ರಿಸ್ತನ ಶಿಲುಬೆಗೇರುವಿಕೆ ಮತ್ತು ಮಹಿಮಪದವಿಗೆ ಏರಿಸಲ್ಪಟಡುವಿಕೆ ಹಾಗೂ ಸಭೆಯ ಸ್ಥಾಪನೆ ಆಗಿತ್ತು (ಅಪೊಸ್ತಲರ ಕೃತ್ಯಗಳು 2:23, 24, 36; ಎಫೆಸ 3:10, 11, 21). ಇದನ್ನು ನಾವು ಇನ್ನಷ್ಟು ವೈಯಕ್ತಿಕವಾದ ರೀತಿಯಲ್ಲಿ ನೋಡೋಣ: ದೇವರು ನಮ್ಮನ್ನು ಮತ್ತು ನಮ್ಮ ಆತ್ಮೀಕ ಅಗತ್ಯತೆಗಳನ್ನು ನೋಡಿದನು ಮತ್ತು ನಮಗೋಸ್ಕರ ಒಂದು ದಾರಿಯನ್ನು (ಮುನ್ನೇರ್ಪಾಡು) ಮಾಡಿದನು. ಕರ್ತನ ಈ ಪೂರ್ಜಜ್ಞಾನಕ್ಕೋಸ್ಕರ ನಾವೆಲ್ಲರು ಆತನಿಗೆ ಸ್ತೋತ್ರ ಸಲ್ಲಿಸಬೇಕು!

ವಾಕ್ಯಭಾಗದಲ್ಲಿ ನಾವು ಮುಂದಕ್ಕೆ ಸಾಗಿದಂತೆ, ನಾವು ಹೀಗೆ ಕೇಳಬಹುದು, "ತನ್ನ ಪೂರ್ವಜ್ಞಾನದ [ಮುಂಚಿತವಾಗಿಯೇ ಯೋಜನೆ ಮಾಡುವದರಲ್ಲಿ] ದೇವರ ಗುರಿಯೇನಾಗಿತ್ತು?" "ತಾನು ಯಾರನ್ನು . . . ಮೊದಲು ತಿಳುಕೊಂಡನೋ" **ಅವರನ್ನು ತನ್ನ ಮಗನ ಸಾರೂಪ್ಯವುಳ್ಳವರಾಗುವದಕ್ಕೆ** [εἰκών, *eikōn*] **ಮೊದಲೇ ನೇಮಿಸಿದನು** ಎಂದು ಪೌಲನು ಹೇಳಿದನು. "ಮೊದಲೇ ನೇಮಿಸಿದನು" ಎಂಬುದು προορίζω (*proorizō*) ಎಂಬ ಪದದಿಂದ ಬಂದ್ದು, ಅದು πρό (*pro*, "ಮುಂಚೆ, ಮುಂದಾಗಿಯೇ") ಮತ್ತು ὁρίζω (*horizō*, "ಒಂದು ಗಡಿಯನ್ನು ಏರ್ಪಡಿಸು, ನಿರ್ಧರಿಸು") ಎಂಬ ಪದಗಳನ್ನು ಒಂದುಗೂಡಿಸುತ್ತದೆ.[130] ಅದರರ್ಥವು "ಮುಂದಾಗಿಯೇ ನಿರ್ಧರಿಸು" ಎಂದಾಗುತ್ತದೆ. "ವುಳ್ಳವರಾಗುವದಕ್ಕೆ" ಎಂಬುದು σύμμορφος (*summorphos*) ಎಂಬ ಪದದಿಂದ ಬಂದದ್ದು, ಅದು σύν (*sun*, "ಯೊಂದಿಗೆ") ಮತ್ತು μορφή (*morphē*, "ಸ್ವರೂಪ") ಎಂಬ ಪದಗಳ ಸಂಯೋಜನೆಯಾಗಿದೆ. ಈ ಪದವು ಒಬ್ಬನು ಮತ್ತೊಬ್ಬನ ಅದೇ "ಸ್ವರೂಪ" ಹೊಂದಿರುವದನ್ನು ಸೂಚಿಸುತ್ತದೆ. ಯುಗಯುಗಗಳಿಂದಲೂ ದೇವರ ಗುರಿಯು ಯೇಸುವಿನ ಹಾಗಿರುವ ಒಂದು ಗುಂಪನ್ನು ಉಂಟುಮಾಡುವದೇ ಆಗಿರುತ್ತದೆ.

ಮಾನವಕುಲವು ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟಿತು (ಆದಿಕಾಂಡ 1:26); ಆದರೆ, ಪಾಪದ ಕಾರಣದಿಂದಾಗಿ, ಇದು ಮುರಿದುಹೋದ, ಕುರೂಪಗೊಳಿಸಲ್ಪಟ್ಟ ಸ್ವರೂಪವಾಯಿತು. ನಂತರ ಯೇಸು ಲೋಕದೊಳಗೆ ಬಂದನು. ಯೇಸು "ಅದೃಶ್ಯನಾದ ದೇವರ ಪ್ರತಿರೂಪನೂ" ಆಗಿದ್ದನು (ಕೊಲೊಸ್ಸೆ 1:15; ನೋಡಿರಿ 2 ಕೊರಿಂಥ 4:4), "ಆತನ ತತ್ವದ ಮೂರ್ತಿಯೂ" ಆಗಿದ್ದನು (ಇಬ್ರಿಯ 1:3). ಈಗ, ಪ್ರತಿಯೊಬ್ಬ ಕ್ರೈಸ್ತನಿಗಿರುವ ಸವಾಲು ಎಂದರೆ ಯೇಸುವಿನ ಸಾರೂಪ್ಯವುಳ್ಳವರಾಗುವದೇ (ಫಿಲಿಪ್ಪಿ 2:5; 1 ಪೇತ್ರ 2:21; ನೋಡಿರಿ

ಎಫೆಸ 1:4). Phillips ತರ್ಜುಮೆಯಲ್ಲಿ ಹೀಗಿದೆ, "ದೇವರು . . . ಅವರನ್ನು ತನ್ನ ಮಗನ ಕುಟುಂಬದ ಸ್ವರೂಪವನ್ನು ಧರಿಸಿಕೊಳ್ಳುವದಕ್ಕಾಗಿ ಆರಿಸಿಕೊಂಡನು." ಆ ಪ್ರಕ್ರಿಯೆಯು ಈ ಜೀವನದಲ್ಲಿ ಆರಂಭಗೊಂಡಿದೆ ಮತ್ತು ಕ್ರಿಸ್ತನು ತಿರಿಗಿ ಬಂದಾಗ ಅದು ಪರಾಕಾಷ್ಠೆಯನ್ನು ತಲುಪುತ್ತದೆ. ಪೌಲನು ಹೀಗೆ ಬರೆದನು, ನಾವು "ಕರ್ತನ ಪ್ರಭಾವವನ್ನು . . . ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ" (2 ಕೊರಿಂಥ 3:18). ಯೋಹಾನನು ಇಲ್ಲೊಂದು ವಿಚಾರವನ್ನು ಸೇರ್ಪಡೆಗೊಳಿಸುತ್ತಾ, "ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" ಎಂದು ಹೇಳುತ್ತಾನೆ (1 ಯೋಹಾನ 3:2b-3a).

ವಾಕ್ಯಭಾಗವು ಮುಂದುವರೆದು ಹೇಳುತ್ತದೆ, **ಅನೇಕ ಮಂದಿ ಸಹೋದರರಿದ್ದು ಅವರಲ್ಲಿ ಆತನೇ** [ಯೇಸು] **ಹಿರಿಯವನಾಗಬೇಕೆಂದು ಉದ್ದೇಶಿಸಿ.**[131] "ಹಿರಿಯವನಾ ಗಬೇಕೆಂದು" ಎಂಬುದು πρωτότοκος (*prōtotokos*) ಎಂಬ ಪದದಿಂದ ಬಂದದ್ದು, ಅದು πρῶτος (*prōtos,* "ಮೊದಲು") ಎಂಬುದನ್ನು τίκτω (*tiktō,* "ಹುಟ್ಟಿದ") ರೊಂದಿಗೆ ಜೋಡಿಸುತ್ತದೆ. ಬೈಬಲಿನ ಕಾಲದಲ್ಲಿ, ಜೇಷ್ಠಪುತ್ರನಿಗೆ ಒಂದು ಮೆಚ್ಚಿನ (ದಯೆಗೆ ಪಾತ್ರವಾದ) ಸ್ಥಾನವಿತ್ತು.[132] "ಹಿರಿಯವನಾಗಬೇಕೆಂದು" ಎಂಬ ಪದವು ಕಾಲಾನುಕ್ರಮದಲ್ಲಿ ಮೊದಲು ಹುಟ್ಟಿದವನು ಮಾತ್ರವಲ್ಲದೆ, ಪ್ರಾಮುಖ್ಯತೆಯಲ್ಲಿ ಸಹ ಮೊದಲಿನವನು ಎಂಬ ಅರ್ಥವನ್ನು ಪಡೆದುಕೊಂಡಿತು. ಆದ್ದರಿಂದ NIRV ಯಲ್ಲಿ "ಕ್ರಿಸ್ತನು ಅನೇಕ ಮಂದಿ ಸಹೋದರರಲ್ಲಿ ಹಿರಿಯವನು ಮತ್ತು ಅತ್ಯಂಥ ಗೌರವಗೊಂಡವನು ಆಗಿರುವನು" ಎಂದಿರುತ್ತದೆ.

ದೇವರು ತನ್ನ ಅನಾದಿಕಾಲದ ಯೋಜನೆಯಲ್ಲಿ, ಯೇಸುವನ್ನು ಒಂದು ಬೃಹತ್ ಆತ್ಮೀಕ ಕುಟುಂಬದ ಮುಂದೂತನನ್ನಾಗಿ ಮೊದಲೇ ನೇಮಿಸಿದನು. ಆ ಕುಟುಂಬದಲ್ಲಿ (ಸಭೆ; 1 ತಿಮೊಥೆ 3:15), ದೇವರು ನಮ್ಮ ತಂದೆಯು, ಯೇಸು ನಮ್ಮ "ಹಿರಿಯ ಸಹೋದರ," ಮತ್ತು ನಾವೆಲ್ಲರು ಸಹೋದರರು ಹಾಗೂ ಸಹೋದರಿಯರು ಆಗಿದ್ದೇವೆ. ಕ್ರಿಸ್ತನು ನಮ್ಮನ್ನು ತನ್ನ "ಸಹೋದರರು" ಎಂದು ಕರೆಯುವದಕ್ಕೆ ನಾಚಿಕೊಳ್ಳುವವನಲ್ಲ ಎಂಬುದನ್ನು ತಿಳಿಯುವದು ಎಷ್ಟು ಅದ್ಭುತವಲ್ಲವೇ (ಇಬ್ರಿಯ 2:11).

ದೇವರು ಆದಾಮನನ್ನು ಮತ್ತು ಹವ್ವಳನ್ನು ಸಹ ಸೃಷ್ಟಿಸುವದಕ್ಕೆ ಮುನ್ನವೇ ಅದನ್ನೆ ಯೋಜನೆ ಮಾಡಿದ್ದನು ಮತ್ತು ಸಂಕಲ್ಪಿಸಿದ್ದನು. ಆ ಯೋಜನೆಯನ್ನು ಆತನು ಹೇಗೆ ಕಾರ್ಯರೂಪಕ್ಕೆ ತಂದನು? ಆತನು ಈಗಿನ ಕಾಲದಲ್ಲಿ ಏನು ಮಾಡುತ್ತಿದ್ದಾನೆ? ಪೌಲನು ಹೀಗೆ ಹೇಳಿದನು, "ಯಾರನ್ನು ಮೊದಲು ನೇಮಿಸಿದನೋ ಅವರನ್ನು ಕರೆದನು." ಬೇರೊಂದು ಕಡೆಯಲ್ಲಿ ಪೌಲನು "ನಮ್ಮ ಕರ್ತನಾದ ಯೇಸು ಕ್ರಿಸ್ತನೆಂಬ ತನ್ನ ಮಗನ ಅನ್ಯೋನ್ಯತೆಗೆ ನಿಮ್ಮನ್ನು ಕರೆದವನು ಆತನೇ" ಎಂದು ಹೇಳುತ್ತಾನೆ (1 ಕೊರಿಂಥ 1:9). ನಾವು ಈ ಮುಂಚೆ "ಕರೆದನು" ಎಂಬ ಪದದ ಬಗ್ಗೆ ಚರ್ಚಿಸಿದ್ದೇವೆ, ಆದರೆ ಇಲ್ಲಿ ಕೆಲವು ಹೆಚ್ಚುವರಿ ವ್ಯಾಖ್ಯೆಗಳನ್ನು ನೀಡುವದು ಸರಿಯೇನಿಸುತ್ತದೆ.

ಒಂದು ಅರ್ಥದಲ್ಲಿ ದೇವರು ಪ್ರತಿಯೊಬ್ಬರನ್ನು ಕರೆಯುತ್ತಾನೆ (ಆಮಂತ್ರಿಸುತ್ತಾನೆ). ಯೇಸು ಹೇಳಿದನು, "ಎಲ್ಳೈ ಕಷ್ಟಪಟ್ಟವರೇ, ಹೊರೆಹೊತ್ತವರೇ, *ನೀವೆಲ್ಲರೂ* ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು" (ಮತ್ತಾಯ 11:28; ಒತ್ತಿ ಹೇಳಿದ್ದು ನನ್ನದು).

2 ಥೆಸಲೋನಿಕ 2:14ರಲ್ಲಿ, ದೇವರು ನಮ್ಮನ್ನು ಸುವಾರ್ತೆಯ—ಮತ್ತು ಸುವಾರ್ತೆಯು ಸರ್ವರಿಗಾಗಿಯೂ ಇರುತ್ತದೆ (ಮಾರ್ಕ 16:15)—ಮೂಲಕ ಕರೆಯು ತ್ತಾನೆಂಬದಾಗಿ ಪೌಲನು ಹೇಳಿದನು. ದುಃಖಕರವಾಗಿ, ಸುವಾರ್ತೆಯನ್ನು ಆಳಿಸುವ ಪ್ರತಿಯೊಬ್ಬರು ಸಹ ಸುವಾರ್ತೆಗೆ ಪ್ರತಿಸ್ಪಂದಿಸುವದಿಲ್ಲ (ನೋಡಿರಿ 10:16, 17). ಆದ್ದರಿಂದ "ಕರೆದನು" ಎಂಬ ಪದಗುಚ್ಛವು ವಿಧೇಯತೆಯ ವಿಶ್ವಾಸದೊಂದಿಗೆ ದೇವರ ಕರೆಗೆ ಓಗೊಟ್ಟವರನ್ನು ಮಾತ್ರವೇ ಸೂಚಿಸುತ್ತದೆಂಬ ಒಂದು ಅರ್ಥವು ಇರುತ್ತದೆ (ನೋಡಿರಿ 1:6; 1 ಕೊರಿಂಥ 1:24; ಯೂದನು 1; ಪ್ರಕಟಣೆ 17:14).

ಇಂದು, ದೇವರು ಸುವಾರ್ತೆಯ ಮೂಲಕ ಜನರನ್ನು ಕರೆಯುತ್ತಿದ್ದಾನೆ—ಆದರೆ ಆತನು ಬೇರೆ ಇನ್ನೇನು ಮಾಡುತ್ತಿದ್ದಾನೆ? ನಾವು ಹೀಗೆ ಓದುತ್ತೇವೆ, **ಯಾರನ್ನು ಕರದನೋ** [ವಿಶ್ವಾಸದಿಂದ ಪ್ರತಿಸ್ಪಂದಿಸಿದವರನ್ನು] **ಅವರನ್ನು ನೀತಿವಂತರೆಂದು ನಿರ್ಣಯಿಸಿದನು.** "ನೀತಿವಂತರೆಂದು ನಿರ್ಣಯಿಸಿದನು" ಎಂಬುದು ರೋಮಾಪುರದವರಿಗೆ ಪತ್ರಿಕೆಯಲ್ಲಿ ಸರ್ವಸಾದಾರಣವಾದದ್ದು, ಯಾಕೆಂದರೆ ದೇವರು ಪಾಪಿಗಳನ್ನು ಯಾವುದರ ಆಧಾರದಲ್ಲಿ ನೀತಿವಂತರೆಂದು ನಿರ್ಣಯಿಸುತ್ತಾನೆಂಬುದನ್ನು ರುಜುವಾತು ಮಾಡುವದಕ್ಕೆ ಪತ್ರಿಕೆಯ ಅರ್ಧಭಾಗವನ್ನು ಉಪಯೋಗಿಸಿದನು. ಶಿಲುಬೆಯ ನಿಮಿತ್ತವಾಗಿ, ದೇವರು ವಿಶ್ವಾಸಿಸುವಂತ ನಮ್ಮನ್ನು ನೀತಿವಂತರೆನೋ ಎಂಬಂತೆ ಎಣಿಸುತ್ತಾನೆ.

29 ಮತ್ತು 30 ವಚನಗಳಲ್ಲಿ, ಪೌಲನು ದೈವಿಕ ಚಟುವಟಿಕೆಗಳ ಸರಪಣಿಯನ್ನು ಬಣ್ಣಿಸಿದನು, ಅದು ಐದು ಕೊಂಡಿಗಳುಳ್ಳ ಸರಪಣಿ. ನಾವು ಮೊದಲ ನಾಲ್ಕು ಕೊಂಡಿಗಳ ಕುರಿತು ಕಲಿತಿದ್ದೇವೆ: ಪೂರ್ವಜ್ಞಾನ, ಪೂರ್ವನೇಮಕ, ಕರೆಯುವಿಕೆ, ಮತ್ತು ನೀತಿವಂತರೆಂಬ ನಿರ್ಣಯ. ನಾವು ಈಗ ಆ ಸರಪಣಿಯಲ್ಲಿನ ಕೊನೆಯ ಕೊಂಡಿಯ ಕುರಿತು ತಿಳಿಯಲು ಸಿದ್ಧರಾಗಿದ್ದೇವೆ: **ಯಾರನ್ನು ನೀತಿವಂತರೆಂದು ನಿರ್ಣಯಿಸಿದನೋ ಅವರನ್ನು ಮಹಿಮಪದವಿಗೆ ಸೇರಿಸಿದನು.** "ಮಹಿಮಪದವಿಗೆ ಸೇರಿಸಿದನು" ಎಂಬುದು ಭೂತಕಾಲದ ರೂಪದಲ್ಲಿರುವದರಿಂದ (ಗ್ರೀಕ್‌ನಲ್ಲಿ ಅನಿಶ್ಚಿತ ಭೂತಕಾಲ), ಇದು ನಾವು ಪ್ರಭಾವವುಳ್ಳ ದೇವರ ಮಕ್ಕಳಾಗಿ ಈಗ ಅನುಭವಿಸುತ್ತಿರುವಂತಹ ಪ್ರತಿಫಲನಗೊಂಡಿರುವ ಪ್ರಭಾವವನ್ನು ಸೂಚಿಸಬಹುದಾಗಿದೆ (ನೋಡಿರಿ 2 ಕೊರಿಂಥ 3:18; 1 ಪೇತ್ರ 1:8). ಹೇಗೂ, ಸನ್ನಿವೇಶವು ಸೂಚಿಸುವದೇನೆಂದರೆ ಪೌಲನು ಕ್ರಿಸ್ತನ ಪುನರಾಗಮನದ ವೇಳೆಯಲ್ಲಿ "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು" ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದು ಎಂಬದೆ (8:18; ನೋಡಿರಿ 8:17, 21). ಅಪೊಸ್ತಲನು ಕೊಲೊಸ್ಸೆಯವರಿಗೆ, "ನಮಗೆ ಜೀವವಾಗಿರುವ ಕ್ರಿಸ್ತನು ಪ್ರತ್ಯಕ್ಷನಾಗುವಾಗ ನೀವು ಸಹ ಆತನ ಜೊತೆಯಲ್ಲಿ ಪ್ರಭಾವದಿಂದ ಕೂಡಿದವರಾಗಿ ಪ್ರತ್ಯಕ್ಷರಾಗುವಿರಿ" (ಕೊಲೊಸ್ಸೆ 3:4; ನೋಡಿರಿ 1 ಪೇತ್ರ 1:7). ಪೌಲನು ಮುಂದಿನ ಕಾಲದಲ್ಲಿ ಇರುವದನ್ನು ಮನಸ್ಸಿನಲ್ಲಿ ಹೊಂದಿದ್ದರೆ, ಆತನು ಏಕೆ ಭೂತಕಾಲವನ್ನು ಉಪಯೋಗಿಸಿದನು? ಬಹುಶಃ ಆತನು ಪ್ರವಾದನಾತ್ಮಕ ಭೂತಕಾಲವೆಂದು ಕರೆಯುವ ರೂಪವನ್ನು ಉಪಯೋಗಿಸಿದ್ದಿರಬೇಕು, "ಅದರ ಮೂಲಕ ಒಂದು ಮುಂತಿಳಿಸಲ್ಪಟ್ಟ ಘಟನೆಯನ್ನು ಅದು ನೆರವೇರುವದು ಎಷ್ಟೊಂದು ಖಚಿತವಾಗಿರುತ್ತದೆಂದರೆ ಅದನ್ನು ಈಗಾಗಲೇ ಸಂಭವಿಸಿದೆಯೆನೋ ಎಂಬಂತೆ ಗುರುತಿಸಲ್ಪಡುತ್ತದೆ."[133]

ನೀತಿವಂತನೆಂದು ನಿರ್ಣಯಿಸಲ್ಪಟ್ಟಿರುವ ಪ್ರತಿಯೊಬ್ಬನು ಸಹ ನಿತ್ಯವಾಗಿ ಮಹಿಮಪದವಿಗೆ ಸೇರಿಸಲ್ಪಡುವನು, ಆತನು ಕಳೆದುಹೋಗುವದಕ್ಕೆ ಯಾವದೇ ಸಾಧ್ಯತೆಯಿರುವದಿಲ್ಲ ಎಂಬದಾಗಿ ಪೌಲನು ಹೇಳುತ್ತಿದ್ದಾನೋ? ಇಲ್ಲ, ದೇವರು ಒಂದು ಯೋಜನೆ—ಒಂದು ಅನಾದಿಕಾಲದ ಯೋಜನೆ—ಹೊಂದಿದ್ದಾನೆ ಮತ್ತು ಅದು ಕಾರ್ಯಸಾಧಿಸಲ್ಪಡುವದು ಎಂಬ ಬಗ್ಗೆ ಪೌಲನು ಒತ್ತಿ ಹೇಳುತ್ತಿದ್ದನು. ವ್ಯಕ್ತಿಪರರಾಗಿ, ನಾವು ಆ ಯೋಜನೆಯನ್ನು ಅನುಸರಿಸಿ ಅದರಲ್ಲಿ ಪಾಲುಗಾರರಾಗುವ ಅಥವಾ ಆಗದಿರುವ ಆಯ್ಕೆಯನ್ನು ಮಾಡಬಹುದು.

- ನಾವು ದೇವರ ಕರೆಯನ್ನು ಸ್ವೀಕರಿಸಬಹುದು ಅಥವಾ ಅದನ್ನು ನಿರ್ಲಕ್ಷಿಸಬಹುದು.
- ನಾವು ನಂಬಿಕೆಯಿಂದ ನೀತಿವಂತರೆಂದು ನಿರ್ಣಯಿಸಲ್ಪಡಬಹುದು, ಅಥವಾ ನಾವು ವಿಮೋಚಿಸಲ್ಪಡ ದವರಾಗಿಯೇ ಉಳಿಯಬಹುದು.
- ಒಮ್ಮೆ ನಾವು ನೀತಿವಂತರೆಂದು ನಿರ್ಣಯಿಸಲ್ಪಟ್ಟರೆ, ನಾವು ಪವಿತ್ರಾತ್ಮಾನುಸಾರವಾಗಿ ನಡೆಯುವವರಾಗಿ ಒಂದು ದಿನ ಮಹಿಮಪದವಿಗೆ ಸೇರಿಸಲ್ಪಡಬಹುದು, ಅಥವಾ ನಾವು ಶರೀರಭಾವವನ್ನು ಅನುಸರಿಸಿ ತಪ್ಪಿಹೋಗಬಹುದು (ನೋಡಿರಿ 8:13).

ವ್ಯಕ್ತಿಪರರಾಗಿ ನಾವು ದೇವರ ಯೋಜನೆಯೊಳಗೆ ನಮ್ಮನ್ನು ಸೇರ್ಪಡೆಗೊಳಿಸಿಕೊಳ್ಳುತ್ತೇವೋ ಇಲ್ಲವೋ ಎಂಬುದು ಅದರ ನೆರವೇರಿಕೆಯ ಮೇಲೆ ಯಾವದೇ ಪರಿಣಾಮವನ್ನು ಬೀರುವದಿಲ್ಲ. ಆತನ ಸಂಕಲ್ಪವು ಯಾವದೇ ವ್ಯಕ್ತಿಯ ಗೀಳು ಅಥವಾ ಹುಚ್ಚಾಟಿಕೆ ಮೇಲೆ ಅವಲಂಬಗೊಂಡಿರುವದಿಲ್ಲ. ಆತನ ಯೋಜನೆಯು ಸಾಧಿಸಲ್ಪಡುವದು. ಕೆಲವೇ ಕೆಲವರು ಪ್ರತಿಸ್ಪಂದಿಸಿದರೂ ಸರಿಯೇ, ಬಹಳಷ್ಟು ಜನರು ಪ್ರತಿಸ್ಪಂದಿಸಿದರೂ ಸರಿಯೇ ಅದು ಕಾರ್ಯರೂಪಕ್ಕೆ ತರಲ್ಪಡುವದು. ದೇವರ ಯೋಜನೆಯು ಸ್ಥಿರಗೊಂಡದ್ದು ಮತ್ತು ನಿಶ್ಚಯವಾದದ್ದು. ಅಸ್ತವ್ಯಸ್ತತೆ ಹಾಗೂ ಗಲಿಬಿಲಿ ತುಂಬಿರುವ ಲೋಕದಲ್ಲಿ, ಇದು ಆದರಣೆಯುಂಟು ಮಾಡುವ ಒಂದು ದೊಡ್ಡ ಮೂಲವಾಗಿದೆ. ವಿಶ್ವಕ್ಕೆ ಒಂದು ಅರ್ಥ ಮತ್ತು ಸಂಕಲ್ಪ ಇರುವದು ನಿಜವೇ. ಎಲ್ಲಾ ಜೀವರಾಶಿ ದೇವರ ಯೋಜನೆ ಮತ್ತು ಸಂಕಲ್ಪದ ವಿಜಯೋತ್ಸಾಹದ ಮುಕ್ತಾಯದ ಕಡೆಗೆ ಅಪರಿವರ್ತನೀಯವಾಗಿ ಮುನ್ನಡೆಯುತ್ತಿದೆ.

ಈ ಮುಂಚೆ ಗಮನಿಸಿದ ಹಾಗೆ, ರೋಮಾ 8:29, 30 ವಚನಗಳ ವಾಕ್ಯಭಾಗವು ವಿವಾದಗಳಿಂದ ಸುತ್ತುವರೆಯಲ್ಪಟ್ಟಿರುತ್ತದೆ. ಹೇಗೂ, Moo ಹೇಳಿದ ಪ್ರಕಾರ,

> . . . ಪೌಲನು ಹೇಳಿಲಿಚ್ಚಿಸುವ ಮುಖ್ಯ ಅಂಶದ ಮೇಲಿನಿಂದ ನಮ್ಮ ದೃಷ್ಟಿಯನ್ನು ಕಳಕೊಳ್ಳಬಾರದು, ಯಾವದೆಂದರೆ, ದೇವರು ಒಂದು ಯೋಜನೆ ಹೊಂದಿದ್ದು ಅದನ್ನು ಬಯಲುಗೊಳಿಸುತ್ತಿದ್ದಾನೆ, ಅದರ ಮೇಲೆ ನಮ್ಮ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಪೂರ್ಣವಾಗಿ ಒದಗಿಸುತ್ತಾನೆಂಬುದೇ. ನಾವು ವಾಕ್ಯಭಾಗ ದೊಳಗಿಂದ ದೈವಶಾಸ್ತ್ರೀಕ ಪ್ರಶ್ನೆಗಳಿಂದ ಹೊರಬರಬೇಕೆಂದು ಆತನು ಬಯಸುವದಿಲ್ಲ ಆದರೆ ವಿನೂತನಗೊಂಡ ಭರವಸೆಯ ಭಾವನೆಯೊಂದಿಗೆ ಬರಬೇಕೆಂದು ಬಯಸುತ್ತಾನೆ: ಏನೆಂದರೆ ನಮ್ಮಲ್ಲಿ ಒಂದು ಒಳ್ಳೇ ಕೆಲಸವನ್ನು ಪ್ರಾರಂಭಿಸಿದಾತನು ಖಂಡಿತವಾಗಿಯೂ ಅದನ್ನು ಕ್ರಿಸ್ತ ಯೇಸುವಿನ ಬರೋಣದ ದಿನದಲ್ಲಿ ಪೂರ್ಣತೆಗೆ ತರುವನು (ಫಿಲಿಪ್ಪಿ 1:6).[134]

## ದೇವರ ಪ್ರೀತಿಯಿಂದ ಅಗಲಿಸುವಿಕೆಯಿಲ್ಲ (8:31-39)

**[31]ಹಾಗಾದರೆ ಈ ವಿಷಯಗಳಲ್ಲಿ ನಾವು ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? [32]ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೇ? [33]ದೇವರು ಆದುಕೊಂಡವರ ಮೇಲೆ ಯಾರು ತಪ್ಪುಹೊರಿಸಾರು? ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ. [34]ಅಪರಾಧಿಗಳೆಂದು ನಿರ್ಣಯಿಸುವವರು ಯಾರು? ಕ್ರಿಸ್ತ ಯೇಸು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ. [35]ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು? ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ?**

**[36]ದೇವರೇ, ನಾವು ನಿನ್ನ ನಿಮಿತ್ತ ದಿನವೆಲ್ಲಾ**
**ಕೊಲೆಗೆ ಗುರಿಯಾಗಿದ್ದೇವೆ;**
**ಜನರು ನಮ್ಮನ್ನು ಕೊಯ್ಗುರಿಗಳಂತೆ**
**ಎಣಿಸಿದರು.**

**[37]ಎಂಬದಾಗಿ ಬರೆದಿರುವಂತೆ ಆಗುತ್ತದಲ್ಲಾ. ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ, [38]ಹೇಗಂದರೆ ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ [39]ಮುಂದಣ ಸಂಗತಿಗಳಾಗಲಿ ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು.**

ನಾವು ರೋಮಾಪುರದವರಿಗೆ ಪತ್ರಿಕೆಯಲ್ಲಿಯೇ ಅತ್ಯಂಥ ವಾಗ್ಮಿತೆಯಿಂದ ಕೂಡಿದ ವಾಕ್ಯಭಾಗಗಳಲ್ಲೊಂದಕ್ಕೆ ಬಂದಿದ್ದೇವೆ, ಇದನ್ನು ಅನೇಕರು ಈ ಪುಸ್ತಕದ ಪರಾಕಾಷ್ಠೆ ಎಂದು ಪರಿಗಣಿಸುತ್ತಾರೆ: ರೋಮಾ 8:31-39. Stott ಹೇಳುವದೇನೆಂದರೆ, ಈ ವಿಭಾಗದಲ್ಲಿ, "ಅಪೊಸ್ತಲನು ಹೊಸ ಒಡಂಬಡಿಕೆಯಲ್ಲಿ ಬೇರೆ ಎಲ್ಲಿಯೂ ಸಮಾನವಾಗದಷ್ಟು ಮಹೋನ್ನತವಾದ ಎತ್ತರಗಳಿಗೆ ಹಾರಿ ಹೋಗುತ್ತಾನೆ."[135] ರೋಮಾ 8ನೇ ಅಧ್ಯಾಯದ ಕಡೇ ಭಾಗವನ್ನು Moo "ತನ್ನ ಜನರೆಡೆಗೆ ದೇವರು ಹೊಂದಿರುವ ಅನಾದಿಕಾಲದ ಸಮರ್ಪಣೆಯ ಶೋಭಾಯಮಾನವಾದ ಕೊಂಡಾಟವಾಗಿರುತ್ತದೆ" ಎಂದು ಕರೆದನು.[136]

8ನೇ ಅಧ್ಯಾಯದ ಮುಕ್ತಾಯದ ವಚನಗಳಲ್ಲಿ, ನಾವು ಮೊದಲು ಕ್ಷಮಿಸಲ್ಪಟ್ಟವರನ್ನು ದೇವರು ಪೋಷಣೆ ಮಾಡುವದರ ವಿಷಯದಲ್ಲಿ ಮೂರು ಅಲ್ಲಾಡಿಸಲಾಗದ ಮನವರಿಕೆಗಳಿರುತ್ತವೆ (8:28): ದೇವರು ತನ್ನ ಮಕ್ಕಳ ಪರವಾಗಿ ಕಾರ್ಯಮಾಡುತ್ತಿದ್ದಾನೆ, ಆತನು ಎಲ್ಲಾ ಕಾರ್ಯಗಳನ್ನು ಹಿತಕ್ಕಾಗಿ ಅನುಕೂಲಗೊಳಿಸುತ್ತಿದ್ದಾನೆ, ಮತ್ತು ಆತನು ಇದನ್ನು ತಾನು ಪ್ರೀತಿಸುವವರಿಗೋಸ್ಕರ ಮಾಡುತ್ತಿದ್ದಾನೆ. ನಂತರ, ದೇವರು ತನ್ನ ಸಂಕಲ್ಪವನ್ನು ಕಾರ್ಯರೂಪಕ್ಕೆ ತರುವ ವಿಷಯದಲ್ಲಿ ಮೂರು ವಿಫಲವಾಗದ ನಿರ್ಣಯಗಳನ್ನು ಕಾಣುತ್ತೇವೆ (8:29, 30): ಗತಕಾಲದಲ್ಲಿ, ದೇವರು ಮೊದಲೇ

ತಿಳುಕೊಂಡನು ಮತ್ತು ಪೂರ್ವನೇಮಿಸಿದನು; ಈಗಿನ ಕಾಲದಲ್ಲಿ, ಆತನು ಕರೆಯುತ್ತಿದ್ದಾನೆ ಮತ್ತು ನೀತಿವಂತರೆಂದು ನಿರ್ಣಯಿಸುತ್ತಿದ್ದಾನೆ; ಮತ್ತು ಮುಂದಿನ ಕಾಲದಲ್ಲಿ, ಆತನು ಮಹಿಮಪದವಿಗೆ ಸೇರಿಸುವನು. ಅಂತಿಮವಾಗಿ, 8:31-39 ರಲ್ಲಿ, ದೇವರು ತನ್ನ ಜನರ ಕಡೆಗೆ ಹೊಂದಿರುವ ಕನಿಕರದ ಕುರಿತ ಮೂರು ಮರೆಯಲಾಗದಂತಹ ಪ್ರಶ್ನೆಗಳನ್ನು ನೋಡುತ್ತೇವೆ: "ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು?" (8:31); "ದೇವರು ಆದುಕೊಂಡವರ ಮೇಲೆ ಯಾರು ತಪ್ಪುಹೊರಿಸಾರು?" (8:33); ಮತ್ತು "ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು?" (8:35). ಈ ವಾಕ್ಯಭಾಗದಲ್ಲಿ ಇತರ ಪ್ರಶ್ನೆಗಳು ಕಾಣಸಿಕ್ಕುತ್ತವೆ, ಆದರೆ ಅವುಗಳೆಲ್ಲಾ ಈಗಷ್ಟೆ ಪಟ್ಟಿಮಾಡಿದ ಮೂರು ಪ್ರಶ್ನೆಗಳಿಗೆ ಸಂಬಂಧಿಸಿದವುಗಳು.

**ವಚನ 31.** ನಮ್ಮ ವಾಕ್ಯಭಾಗವು, **ಹಾಗಾದರೆ ಈ ವಿಷಯಗಳಲ್ಲಿ ನಾವು ಏನು ಹೇಳೋಣ** ಎಂದು ಕೇಳುವ ಮೂಲಕ ಆರಂಭಗೊಳ್ಳುತ್ತದೆ. ಬೇರೆ ಮಾತುಗಳಲ್ಲಿ, "ನಾವು ಚರ್ಚಿಸುತ್ತಿರುವಂಥ ವಿಷಯಗಳ ಬಗ್ಗೆ ನಾವು ಏನು ಹೇಳೋಣ?"[137] ತಕ್ಷಣದ ಸನ್ನಿವೇಶದಲ್ಲಿ ಬರುವಂಥ ವಿಷಯಗಳಾವವೆಂದರೆ, ನಮ್ಮ ಅಶಕ್ತಿಗಳಲ್ಲಿ ಪವಿತ್ರಾತ್ಮನು ನಮಗೆ ಸಹಾಯ ಮಾಡುವದು (8:26, 27), ದೇವರು ತನ್ನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳನ್ನು ಅನುಕೂಲಗೊಳಿಸುವದು (8:28), ಮತ್ತು ದೇವರು ತನ್ನ ಅನಾದಿಕಾಲದ ಯೋಜನೆ ಹಾಗೂ ಸಂಕಲ್ಪವನ್ನು ಕಾರ್ಯರೂಪಕ್ಕೆ ತರುವದು (8:29, 30). "ಈ ಎಲ್ಲಾ ವಿಷಯಗಳನ್ನು ಮನಸ್ಸಿನಲ್ಲಿಟ್ಟುಕೊಂಡವರಾಗಿ, ನಾವು ಏನು ಹೇಳೋಣ?" (NEB). ನಾವು ಯಾವ ನಿರ್ಣಯಕ್ಕೆ (ಅಥವಾ ನಿರ್ಣಯಗಳಿಗೆ) ಬರತಕ್ಕದ್ದು?

ಪೌಲನು ರೋಮಾಪುರದವರಿಗೆ ಪತ್ರಿಕೆಯಲ್ಲಿ ಅನೇಕ ಸಾರಿ ಉಪಯೋಗಿಸಿದ ಅದೇ ದಾರಿಯಲ್ಲಿಯೇ ಪ್ರತ್ಯುತ್ತರ ನೀಡುತ್ತಾನೆ: ಉತ್ತರಗಳ ಭಾವಾರ್ಥವಿರುವಂತಹ ಪ್ರಶ್ನೆಗಳನ್ನು ಮುಂದಿಡುವ ಮೂಲಕ. ನಾವು ಇವುಗಳನ್ನು "ಭಾವೋತ್ತೇಜಕ ಪ್ರಶ್ನೆಗಳು" ಎಂದು ಕರೆಯುತ್ತೇವೆ. ದೇವರು ಅವರಿಂದ ಒಂದು ಮೌಖಿಕ ಉತ್ತರವನ್ನು ಬರುವಂತೆ ಮಾಡುವದಕ್ಕಾಗಿ ಪ್ರಶ್ನೆಯನ್ನು ಕೇಳಲಿಲ್ಲ, ಆದರೆ ಸತ್ಯಗಳನ್ನು ಒಂದು ಭಾವಪ್ರಚೋದಕ ರೀತಿಯಲ್ಲಿ ಹೇಳಿ ತನ್ನ ವಾಚಕರನ್ನು ಯೋಚಿಸುವಂತೆ ಮಾಡಿ ಅವರನ್ನು ಅಂತರ್ಗತಗೊಳಿಸುವ ಉದ್ದೇಶದಿಂದ ಕೇಳಿದನು.

ಪೌಲನು ತನ್ನ ಆರಂಭಿಕ ಪ್ರಶ್ನೆಗೆ ಮತ್ತೊಂದು ಪ್ರಶ್ನೆಯ ಮೂಲಕ ಉತ್ತರಿಸಿದನು— ಈ ವಿಭಾಗದ ಪ್ರಮುಖ ಪ್ರಶ್ನೆಗಳಲ್ಲೊಂದಾಗಿದೆ: **ದೇವರು ನಮ್ಮ ಕಡೆ ಇದ್ದರೆ**[138] **ನಮ್ಮನ್ನು ಎದುರಿಸುವವರು ಯಾರು?** ನಮ್ಮ ಮುಂದೆ ಆ ಪ್ರಶ್ನೆಯ ಕಡೇ ಭಾಗವು ಮಾತ್ರ—"ನಮ್ಮನ್ನು ಎದುರಿಸುವವರು ಯಾರು?"—ಇದ್ದಿದ್ದರೆ ನಮ್ಮ ಬಳಿಯಲ್ಲಿ ಅನೇಕ ಉತ್ತರಗಳಿರುತ್ತಿದ್ದರಬಹುದು. ಪೌಲನು ಸಹ ತನ್ನನ್ನು "ಎದುರಿಸುವವರು" ಯಾರೆಂಬುವವರ ದೊಡ್ಡ ಪಟ್ಟಿಯನ್ನೇ ಕೊಟ್ಟಿರಬಹುದಿತ್ತು, ಅವರಲ್ಲಿ ಕುಟುಂಬದಲ್ಲಿನ ಕ್ರಿಸ್ತನಂಬಿಕೆಗೆ ಬಂದಿರದ ಸದಸ್ಯರು, ಮಾತ್ಸರ್ಯವುಳ್ಳ ಯೆಹೂದ್ಯರು, ಅನ್ಯಜನಾಂಗಕ್ಕೆ ಸೇರಿದ ತೊಂದರೆಮಾಡುವವರು, ಸಹಾನುಭೂತಿಯಿಲ್ಲದ ರೋಮಾಯ ನಾಯಕರು, ಮತ್ತು ಸೈತಾನನು. ಯೇಸುವಿಗೋಸ್ಕರ ಜೀವಿಸುವದಕ್ಕಾಗಿ ನಾವು ಮಾಡುವ ಯತ್ನಗಳನ್ನು ವಿರೋಧಿಸುವವರ ಪಟ್ಟಿಯನ್ನು ನಾವು ಮಾಡಬಹುದಾಗಿದೆ.

ಹೇಗೂ, ಪ್ರಶ್ನೆಯ ಮೊದಲ ಭಾಗವು ಸೇರಿಸಲ್ಪಟ್ಟಾಗ, ಆ ಪ್ರಶ್ನೆಯ ದನಿಯೇ ಬದಲಾಗುತ್ತದೆ: "*ದೇವರು ನಮ್ಮ ಕಡೆ ಇದ್ದರೆ* ನಮ್ಮನ್ನು ಎದುರಿಸುವವರು ಯಾರು?" ಈ ವಾಕ್ಯದಲ್ಲಿ, "ಇದ್ದರೆ" ಎಂಬುದರ ಅರ್ಥವು "(ಆದ್ದ)ರಿಂದ" ಎಂದಾಗುತ್ತದೆ: "ದೇವರು ನಮ್ಮ ಕಡೆ ಇರುವ*ದರಿಂದ* . . ." "ನಮ್ಮ ಕಡೆ" ಎಂದರೆ "ನಮ್ಮ ಪಕ್ಷದಲ್ಲಿ" ಎಂಬರ್ಥವಾಗುತ್ತದೆ (McCord). ದೇವರು ನಮ್ಮ ಕಡೆ ಇರುವದರಿಂದ, ನಮ್ಮನ್ನು ಯಾರು *ಯಶಸ್ವಿಯಾಗಿ* ಎದುರಿಸುವರು? ದೇವರು ನಮ್ಮ ಪರವಾಗಿ ಇರುವದರಿಂದ, ಯಾರು ನಮ್ಮ ವಿರುದ್ಧವಾಗಿದ್ದು ಜಯಿಸಬಲ್ಲರು? ಸೂಚ್ಯಾರ್ಥವು ಏನೆಂದರೆ "ಯಾರೊಬ್ಬರೂ ಇಲ್ಲ!" ಕೀರ್ತನೆಗಾರನು ಹೀಗೆ ಬರೆದನು, "ಯೆಹೋವನು ನನಗಿದ್ದಾನೆ; ಭಯಪಡೆನು; ಮನುಷ್ಯನು ನನಗೆ ಏನು ಮಾಡಾನು?" (ಕೀರ್ತನೆ 118:6).

**ವಚನ 32.** ದೇವರು "ನಮ್ಮ ಕಡೆ" ಇದ್ದಾನೆ ಎಂದು ಪೌಲನು ಸುಮ್ಮನೇ ಹೇಳಲಿಲ್ಲ; ಅದು ಸತ್ಯ ಎಂಬುದಕ್ಕೆ ಆತನು ಪುರಾವೆಯನ್ನು ಒದಗಿಸಿದನು. 32ನೇ ವಚನವು ದೇವರ ವರ್ಣನೆಯೊಂದಿಗೆ ಆರಂಭಗೊಳ್ಳುತ್ತದೆ: **ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ.**[139] ಅನುವಾದಿತ ಗ್ರೀಕ್ ಪದ "ಉಳಿಸಿಕೊಳ್ಳದೆ" (φείδομαι, *pheidomai*) ಎಂಬುದು ಅಬ್ರಹಾಮನು ತನ್ನ ಮಗನನ್ನು ಯಜ್ಞಮಾಡುವದಕ್ಕೆ ತನ್ನ ಒಪ್ಪಿಗೆಯನ್ನು ವ್ಯಕ್ತಪಡಿಸಿದಾಗ ದೇವರು ಪ್ರಶಂಸೆಮಾಡಿದ ಸಂದರ್ಭದಲ್ಲಿ ಈ ಪದವು LXX ನಲ್ಲಿ ಉಪಯೋಗಿಸಲ್ಪಟ್ಟಿದೆ: "ನೀನು ನಿನ್ನ ಒಬ್ಬನೇ ಮಗನನ್ನಾದರೂ ನನಗೆ ಸಮರ್ಪಿಸುವದಕ್ಕೆ ಹಿಂದೆಗೆಯಲಿಲ್ಲವಾದ್ದರಿಂದ [φείδομαι, *pheidomai*] ನೀನು ದೇವರಲ್ಲಿ ಭಯಭಕ್ತಿಯುಳ್ಳವನೆಂಬದು ಈಗ ತೋರಿಬಂತು" (ಆದಿಕಾಂಡ 22:12). ಅಬ್ರಹಾಮನು ಯಾವುದನ್ನು ಮಾಡುವದಕ್ಕೆ ಮನಸ್ಸುಳ್ಳವನಾಗಿ ದ್ದನೋ, ಅದನ್ನು ದೇವರು ನಿಜವಾಗಿಯೂ ಮಾಡಿದನು. ದೇವರು ತನ್ನ ಏಕೈಕ ಕುಮಾರನನ್ನು ಉಳಿಸಿಕೊಳ್ಳಲಿಲ್ಲ.[140]

ಬದಲಾಗಿ, ಆತನು ಮರಣಿಸುವದಕ್ಕಾಗಿ "ಆತನನ್ನು . . . ಒಪ್ಪಿಸಿಕೊಟ್ಟನಲ್ಲಾ." ದೇವರು ಏಕೆ ಅದನ್ನು ಮಾಡುವನು? ಆತನು ಅದನ್ನು "ನಮ್ಮೆಲ್ಲರಿಗೋಸ್ಕರ" ಮಾಡಿದನು! Octavius Winslow ಹೀಗೆ ಬರೆದನು, "ಯೇಸುವನ್ನು ಮರಣಿಸುವದಕ್ಕಾಗಿ ಯಾರು ಒಪ್ಪಿಸಿ ಕೊಟ್ಟರು? ಹಣಕ್ಕಾಗಿ ಯೂದನು ಆಗಲಿ; ಭಯದಿಂದಾಗ ಪಿಲಾತನು ಆಗಲಿ ಅದನ್ನು ಮಾಡಲಿಲ್ಲ; ಹೊಟ್ಟೇಕಿಚ್ಚಿನಿಂದ ಯೆಹೂದ್ಯರಾಗಲಿ ಅದನ್ನು ಮಾಡಲಿಲ್ಲ;—ಆದರೆ ಪ್ರೀತಿಯ ನಿಮಿತ್ತವಾಗಿ ತಂದೆಯಾದ ದೇವರೇ ಅದನ್ನು ಮಾಡಿದನು!"[141] "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು" (ಯೋಹಾನ 3:16).

ದೇವರು "ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ" ಎಂದು ಹೇಳಿದ ಬಳಿಕ, ಪೌಲನು ಈ ಪ್ರಶ್ನೆಯನ್ನು ಕೇಳುತ್ತಾನೆ, **ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೇ?** ಇಲ್ಲಿ ಸಾಮಾನ್ಯಸೂತ್ರವು ಸರಳವಾಗಿದೆ: ಹೆಚ್ಚಾಗಿ ಕೊಡುವವನು ಖಂಡಿತವಾಗಿಯೂ ಕಡಿಮೆಯದ್ದನ್ನು ಕೊಡುವದಕ್ಕೆ ಅಣಿಯಾಗಿರುತ್ತಾನೆ.[142] ಒಬ್ಬನು ನಿನಗೆ ನೂರು ರೂಪಾಯಿಗಳನ್ನು ಕೊಟ್ಟರೆ, ನಿಮಗೆ 25 ಪೈಸೆಗಳು ನಿಜವಾಗಿಯೂ ಅಗತ್ಯವಿದ್ದರೆ ಬಹುಶಃ ಆ ಮನುಷ್ಯನು ನಿಮಗೆ ಕೊಡುವದಕ್ಕೆ ನಿರಾಕರಿಸಲಾರನು. ದೇವರು ನಮಗೆ ಈಗಾಗಲೇ ಅತಿ ದೊಡ್ಡ ವರವನ್ನು—ತನ್ನ ಮಗನನ್ನು—ಕೊಟ್ಟಿದ್ದಾನೆ, ಆದ್ದರಿಂದ ಆತನು ನಮಗೆ

ಅಲ್ಪವಾದ ವರವನ್ನು ಕೊಡುವದಕ್ಕೆ ಸಂಕೋಚಪಡುವದಿಲ್ಲ.

ಈ ವಚನದಲ್ಲಿನ "ಸಮಸ್ತವನ್ನೂ" ಎಂಬುದು ನಾವು ಬಯಸಬಹುದಾದ *ಎಲ್ಲವೂ* ಎಂಬರ್ಥವನ್ನು ಸೂಚಿಸುವದಿಲ್ಲ. (ಅನೇಕ ಸಾರಿ, ನಾವು ಬಯಸುವಂತದ್ದು ನಮಗೆ ಹಿತಕರವಾಗಿರುವದಿಲ್ಲ.) ಬದಲಾಗಿ, ಅದು ನೈಜವಾದ ಅಗತ್ಯತೆಗಳನ್ನು ಸೂಚಿಸುತ್ತದೆ. "ದೇವರು ಕ್ರಿಸ್ತ ಯೇಸುವಿನ ಮೂಲಕ ತನ್ನ ಪ್ರಭಾವದ ಐಶ್ವರ್ಯಕ್ಕೆ ತಕ್ಕ ಹಾಗೆ ನಿಮ್ಮ ಪ್ರತಿಯೊಂದು ಕೊರತೆಯನ್ನು ನೀಗಿಸುವನು" ಎಂದು ಪೌಲನು ಫಿಲಿಪ್ಪಿಯವರಿಗೆ ಹೇಳಿದನು (ಫಿಲಿಪ್ಪಿ 4:19). ಇದರಲ್ಲಿ ಶಾರೀರಿಕ ಅಗತ್ಯತೆಗಳು ಸೇರಿರುತ್ತವೆ. ಯೇಸು ಹೀಗೆ ಹೇಳಿದನು, "ಹೀಗಿರುವದರಿಂದ ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು" (ಮತ್ತಾಯ 6:33). ಎಲ್ಲಕ್ಕಿಂತ ಮೇಲಾಗಿ, ಅದು ಆತ್ಮೀಕ ಅಗತ್ಯತೆಗಳನ್ನು ಒಳಗೊಂಡಿರುತ್ತದೆ: ನಾವು ಏನಾಗಿರಬೇಕೋ ಅದಾಗಿರುವದಕ್ಕೆ ಅಗತ್ಯವಿರುವಂತದ್ದು ಮತ್ತು ಏನು ಮಾಡತಕ್ಕದ್ದೋ ಅದನ್ನು ಮಾಡುವಂತಾಗಲು—ನಮ್ಮ ಜೀವಿತಗಳಲ್ಲಿ ದೇವರ ಸಂಕಲ್ಪವನ್ನು ನೆರವೇರಿಸುವದಕ್ಕೆ ಅಗತ್ಯವಾದ ಸಂಗತಿಗಳು.

**ವಚನಗಳು 33, 34.** ಪೌಲನು ಕೇಳಿದ ಇನ್ನೊಂದು ಪ್ರಮುಖ ಪ್ರಶ್ನೆಯು ಇದಾಗಿತ್ತು: **ದೇವರು ಆದುಕೊಂಡವರ ಮೇಲೆ ಯಾರು ತಪ್ಪುಹೊರಿಸಾರು?** "ಆದುಕೊಂಡವರ" ಎಂಬುದು ἐκλεκτός (*eklektos*) ಎಂಬ ಪದದಿಂದ ಬಂದದ್ದು, ಅದರರ್ಥವು "ಆರಿಸಿ ತೆಗೆದುಕೊಂಡವರು" ಅಥವಾ "ಆರಿಸಿಕೊಳ್ಳಲ್ಪಟ್ಟವರು" ಎಂದಾಗುತ್ತದೆ.[143] "ಆದುಕೊಂಡವರು" ಯಾರೆಂದರೆ ದೇವರಿಂದ ಮೊದಲೇ ತಿಳುಕೊಳ್ಳಲ್ಪಟ್ಟು, ಪೂರ್ವನೇಮಿಸಲ್ಪಟ್ಟು, ಕರೆಯಲ್ಪಟ್ಟು, ಮತ್ತು ನೀತಿವಂತರೆಂದು ನಿರ್ಣಯಿಸಲ್ಪಟ್ಟು ಇರುವವರೇ (8:29, 30). SEB ತರ್ಜುಮೆಯಲ್ಲಿ "ದೇವರಿಂದ ಆದುಕೊಂಡ ಜನರು" ಎಂದು ಇರುತ್ತದೆ.

"ತಪ್ಪುಹೊರಿಸಾರು" ಎಂಬುದು ἐγκαλέω (*enkaleō*) ಎಂಬ ಪದದಿಂದ ಬಂದದ್ದು. ಅದು ಮತ್ತೊಬ್ಬನ ಮೇಲೆ ದೋಷಾರೋಪ ಅಥವಾ ತಪ್ಪು ಹೊರಿಸುವದನ್ನು ಸೂಚಿಸುತ್ತದೆ.[144] ಪೌಲನು ಅನೇಕ ಸಾರಿ ಪತ್ರಿಕೆಯಲ್ಲಿ ಉಪಯೋಗಿಸುವ ಪ್ರಕಾರವೇ ಇಲ್ಲಿ ಆಲಂಕಾರಿಕ ನಿರೂಪಣೆಗೆ ಹಿಂದಿರುಗುತ್ತಾ, ನ್ಯಾಯಾಲಯದ ಚಿತ್ರಣವನ್ನು ಉಪಯೋಗಿಸುತ್ತಾನೆ. ಇದು 34ನೇ ವಚನದಲ್ಲಿ ಅಪರಾಧ ನಿರ್ಣಯ ಕುರಿತು ಕೇಳಲಾಗುವ ಮೊದಲ ಪ್ರಶ್ನೆಯಲ್ಲಿ ಮತ್ತಷ್ಟು ಪುಷ್ಟಿಗೊಳಿಸಲ್ಪಡುತ್ತದೆ.

ನಾವು ಈ ಪ್ರಶ್ನೆಯನ್ನು 33ನೇ ವಚನದ ಆರಂಭದಲ್ಲಿಯೇ ಬೇರ್ಪಡಿಸುವದಾದರೆ, ನಮ್ಮ ಮೇಲೆ ತಪ್ಪುಹೊರಿಸುವ ಅನೇಕರ ಪಟ್ಟಿಯನ್ನು ನಾವು ಮಾಡಬಹುದಾಗಿದೆ. ನಮ್ಮ ಬಗ್ಗೆ ಚೆನ್ನಾಗಿ ತಿಳಿದಿರುವವರಿಗೆ ನಾವು ಪರಿಪೂರ್ಣರಲ್ಲವೆಂಬುದು ಗೊತ್ತಿರುತ್ತದೆ, ಮತ್ತು ನಮ್ಮನ್ನು ಇಷ್ಟಪಡದಿರುವವರು ನಮ್ಮಲ್ಲಿನ ನ್ಯೂನ್ಯತೆಗಳನ್ನು ಎತ್ತಿತೋರಿಸುವದಕ್ಕೆ ಕಾತರರಾಗಿರುತ್ತಾರೆ. ನಮ್ಮ ಪಟ್ಟಿಯಲ್ಲಿ ನಮ್ಮ ಸ್ವಹೃದಯವನ್ನು (1 ಯೋಹಾನ 3:20, 21) ಮತ್ತು ನಮ್ಮ ಮನಸಾಕ್ಷಿಯನ್ನು (2:15) ಸಹ ಸೇರಿಸಬಹುದಾಗಿದೆ. ನಮ್ಮ ಪಟ್ಟಿಯಲ್ಲಿ ಪಿಶಾಚನನ್ನು ಸೇರಿಸದಿದ್ದರೆ ಅದು ಅಪೂರ್ಣಗೊಳ್ಳುವುದು. ಸೈತಾನನು "ಹಗಲಿರುಳು ನಮ್ಮ ಸಹೋದರರ ಮೇಲೆ ನಮ್ಮ ದೇವರ ಮುಂದೆ ದೂರು ಹೇಳಿದ ದೂರುಗಾರನು" ಎಂದು ಕರೆಯಲ್ಪಟ್ಟಿದ್ದಾನೆ (ಪ್ರಕಟಣೆ 12:10; ನೋಡಿರಿ ಜೆಕರ್ಯ 3:1).

ಹೇಗೂ, ಪೌಲನು "ದೇವರು ಆದುಕೊಂಡವರ ಮೇಲೆ ಯಾರು ತಪ್ಪುಹೊರಿಸಾರು?" ಎಂಬ ಪ್ರಶ್ನೆಯೊಂದಿಗೆ ನಿಲ್ಲಿಸಲಿಲ್ಲ. ಆತನು ಮತ್ತೊಂದು ಪ್ರಶ್ನೆಯನ್ನು ಕೇಳಿದನು: **ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ. ಅಪರಾಧಿಗಳೆಂದು ನಿರ್ಣಯಿಸುವವರು ಯಾರು?** "ಅಪರಾಧಿಗಳೆಂದು ನಿರ್ಣಯಿಸುವವರು" ಎಂಬುದು κατακρίνω (*katakrinō*) ಎಂಬ ಪದದಿಂದ ಬಂದದ್ದು, ಅದು κρίνω (*krinō,* "ತೀರ್ಪುಮಾಡು") ಎಂಬುದರೊಂದಿಗೆ ಬಲಗೊಂಡ κατά (*kata*) ಎಂಬ ಪದಗಳ ಸಂಯೋಜನಯಾಗಿರುತ್ತದೆ. ಅದರರ್ಥವು "ಅಪರಾಧವನ್ನು ನಿರ್ಧರಿಸಿದ ಬಳಿಕ ದಂಡನೆಯ ತೀರ್ಪನ್ನು ಪ್ರಕಟಿಸುವದು" ಎಂದಾಗುತ್ತದೆ.[145] ದೇವರು ನಮ್ಮನ್ನು ನೀತಿವಂತರೆಂದು ನಿರ್ಣಯಿಸಿರುವದಾದರೆ, ನಮ್ಮ ಪಾಪಗಳನ್ನು ಕ್ಷಮಿಸಿರುವದಾದರೆ, ಮತ್ತು ಆತನು ನಮ್ಮನ್ನು ನಾವು ಎಂದಿಗೂ ಪಾಪವನ್ನೇ ಮಾಡಲಿಲ್ಲವೇನೋ "ಎಂಬಂತೆ" ನಡಿಸಿಕೊಳ್ಳುತ್ತಿರುವದಾದರೆ, ಯಾರು ಆ ಹಳೆಯ ಪಾಪಗಳನ್ನು ಜ್ಞಾಪಕಕ್ಕೆ ತಂದು ನಮ್ಮ ಮೇಲೆ ಅವುಗಳ ದೋಷವನ್ನು ಹೊರಿಸಾರು? ಪುನಃ, ಸೂಚ್ಯಾರ್ಥದ ಪ್ರತ್ಯುತ್ತರವು "ಒಬ್ಬನೂ ಇಲ್ಲ" ಎಂದಾಗಿರುತ್ತದೆ.

"ಅಪರಾಧಿಗಳೆಂದು ನಿರ್ಣಯಿಸುವವರು ಯಾರು?" ಎಂದು ಕೇಳಿದ ಬಳಿಕ ಪೌಲನು ಹೀಗೆ ಹೇಳುತ್ತಾನೆ, **ಕ್ರಿಸ್ತ ಯೇಸುವು ಮರಣವನ್ನು ಹೊಂದಿದ್ದಲ್ಲದೆ ಜೀವಿತನಾಗಿ ಎದ್ದು ದೇವರ ಬಲಗಡೆಯಲ್ಲಿದ್ದು ನಮಗೋಸ್ಕರ ಬೇಡುವವನಾಗಿದ್ದಾನೆ.** ವೇದಪಂಡಿತರು 33 ಮತ್ತು 34 ವಚನಗಳಲ್ಲಿನ ವಿರಾಮಚಿಹ್ನೆಗಳ ವಿಷಯದಲ್ಲಿ ಗೊಂದಲಕ್ಕೀಡಾಗುತ್ತಾರೆ ಯಾಕೆಂದರೆ "ಹೊಸ ಒಡಂಬಡಿಕೆಯ ಪ್ರಾಚೀನ ಗ್ರೀಕ್ ಹಸ್ತಪ್ರತಿಗಳಲ್ಲಿ ಯಾವದೇ ವಿರಾಮಚಿಹ್ನೆಗಳಿರುವದಿಲ್ಲ."[146] ವಿವಿಧ ತರ್ಜುಮೆಗಳು ವ್ಯಾಪಕ ವಿಧವಾದ ಭಾವವ್ಯಂಜನ ಗಳನ್ನು ಮುಂದಿಡುತ್ತವೆ. 33 ಮತ್ತು 34 ವಚನಗಳ ವಿವಿಧ ವಿಭಾಗಗಳು ಪ್ರಶ್ನೆಗಳಲ್ಲಿ, ವ್ಯಾಖ್ಯೆಗಳಲ್ಲಿ, ಮತ್ತು ನಿರಾಕರಣೆಗಳಲ್ಲಿ ಸಹ ಅಂತ್ಯಗೊಳ್ಳುತ್ತವೆ.

34ನೇ ವಚನವು ಯಾವ ವಿರಾಮಚಿಹ್ನೆಗಳನ್ನು ಕೊಡಲ್ಪಟ್ಟಿದ್ದರೂ ಸರಿಯೇ, ಹೇಳಲಿಚ್ಛಿಸುವ ವಿಷಯವು ಪ್ರಾಥಮಿಕವಾಗಿ ಒಂದೇ ಆಗಿದೆ. ನಮ್ಮನ್ನು ಅಪರಾಧಿಗಳೆಂದು ನಿರ್ಣಯಿಸುವದಕ್ಕೆ ಅಧಿಕಾರವಿರುವ ಒಬ್ಬನೇ ಒಬ್ಬನೆಂದರೆ ಅದು ಯೇಸು ಕ್ರಿಸ್ತನೇ, ಆತನು ಒಂದು ದಿನ ಎಲ್ಲಾ ಮನುಷ್ಯರಿಗೂ ನ್ಯಾಯತೀರಿಸುವನು (ಅಪೊಸ್ತಲರ ಕೃತ್ಯಗಳು 17:31). McGuiggan ಗುರುತು ಕಂಡುಹಿಡಿಯುವದಕ್ಕೆ ಕರೆ ಕೊಡುತ್ತಾನೆ: "ಯಾವನಾದರೂ ಎಲ್ಲಾ ನ್ಯಾಯತೀರ್ಪಿಗೆ ತಾನು ಸಾರ್ವಭೌಮ ಕರ್ತನೆಂದು ದಾಪುಗಾಲು ಹಾಕುತ್ತಾ ಬರುವದಾರೆ, ಆತನ ಕೈಗಳನ್ನು, ಕಾಲು ಮತ್ತು ಪಕ್ಕೆಯನ್ನು ಪರೀಕ್ಷಿಸಿರಿ. ಆತನು ಗಾಯಗೊಂಡವನಾಗಿಲ್ಲದಾದರೆ, ಆತನನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಡಿರಿ!"[147] ಯೇಸು ತನ್ನನ್ನು ತಿರಸ್ಕರಿಸುವವರಿಗೆ ಒಂದು ದಿನ ನ್ಯಾಯತೀರಿಸುವನು (ಮತ್ತಾಯ 7:21-23; 25:31, 32, 41, 46; 2 ಕೊರಿಂಥ 5:10)—ಆದರೆ ನಂಬಿಗಸ್ತರನ್ನು ಆತನು ಎಂದಿಗೂ ಅಪರಾಧಿಗಳೆಂದು ನಿರ್ಣಯಿಸು*ವದಿಲ್ಲ* ಎಂಬುದಕ್ಕೆ ಆತನು ಸಾಕಷ್ಟು ರುಜುವಾತುಗಳನ್ನು ಅನುಗ್ರಹಿಸಿದ್ದಾನೆ. ರೋಮಾ 8:34ರ ಪ್ರಕಾರವಾಗಿ ಯೇಸು ಏನು ಮಾಡಿದ್ದಾನೆ ಮತ್ತು ಈಗ ಮಾಡುತ್ತಿದ್ದಾನೆಂಬುದನ್ನು ನೋಡೋಣ:

ಆತನು ನಮ್ಮ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡು ನಮಗೋಸ್ಕರ "ಸತ್ತನು"

(ನೋಡಿರಿ 1 ಕೊರಿಂಥ 15:3).
ದೇವರು ಆತನನ್ನು ಮತ್ತು ಆತನ ಯಜ್ಞವನ್ನು (ನೋಡಿರಿ ರೋಮಾ 1:4) ಅಂಗೀಕರಿಸಿಕೊಂಡನು ಮತ್ತು ಸ್ವತಃ ನಮ್ಮ ಪುನರುತ್ಥಾನಕ್ಕೆ ಒಂದು ಭರವಸೆಯಾಗಿ ಎಂಬುದಕ್ಕೆ ಖಾತರಿಯಾಗಿ ಆತನು "ಎಬ್ಬಿಸಲ್ಪಟ್ಟನು" (ನೋಡಿರಿ 1 ಕೊರಿಂಥ 15:20).
ಆತನು ದೇವರ ಬಳಿಗೆ ಏರಿಹೋದನು ಮತ್ತು ಈಗ "ದೇವರ ಬಲಗಡೆಯಲ್ಲಿದ್ದಾನೆ" (ನೋಡಿರಿ ಕೀರ್ತನೆ 110:1; ಅಪೊಸ್ತಲರ ಕೃತ್ಯಗಳು 2:33, 34), ಒಂದು ಅಧಿಕಾರದ ಸ್ಥಾನದಲ್ಲಿರುತ್ತಾನೆ (ನೋಡಿರಿ ಮತ್ತಾಯ 28:18).
ಆತನು "ನಮಗೋಸ್ಕರ ಬೇಡುವವನಾಗಿದ್ದಾನೆ" (ನೋಡಿರಿ ಇಬ್ರಿಯ 4:14-16; 7:25). "ಬೇಡುವವನಾಗಿದ್ದಾನೆ" ಎಂಬ ಪದವು ಮತ್ತೊಬ್ಬನ ಪರವಾಗಿ ಬೇಡಿಕೊಳ್ಳುವದನ್ನು ಸೂಚಿಸುತ್ತದೆ. 8:34ರಲ್ಲಿ, NEB ಯು ಹೀಗೆ ಹೇಳುತ್ತದೆ, "ಕ್ರಿಸ್ತನು . . . ದೇವರ ಬಲಗಡೆಯಲ್ಲಿದ್ದಾನೆ, ಮತ್ತು ನಿಜವಾಗಿಯೂ ನಮ್ಮ ವಿಷಯದಲ್ಲಿ ಬೇಡಿಕೊಳ್ಳುವವನಾಗಿದ್ದಾನೆ."

**ವಚನ 35.** ಅದು ನಮ್ಮನ್ನು ಇನ್ನೊಂದು ಪ್ರಮುಖ ಪ್ರಶ್ನೆಗೆ ತಂದು ನಿಲ್ಲಿಸುತ್ತದೆ: **ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು?** "ಯಾರು" ಎಂಬುದು τίς (*tis*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, 33 ಮತ್ತು 34 ವಚನಗಳಲ್ಲಿರುವ ಪ್ರಶ್ನೆಯಲ್ಲಿ ಇದೇ ಪದವು ಉಪಯೋಗಿಸಲ್ಪಟ್ಟಿದೆ. ಸಾಧಾರಣವಾಗಿ, "ಯಾರು" ಎಂಬುದು ಜನರನ್ನು ಸೂಚಿಸುತ್ತದೆ, ಹೊರತು ಸಂಗತಿಗಳನ್ನಲ್ಲ; ಆದರೆ ಪೌಲನು ಜನರನ್ನಲ್ಲ, ಸಂಗತಿಗಳ ಪಟ್ಟಿಯನ್ನು ಮಾಡುತ್ತಾನೆ. *Tis* ಎಂಬದನ್ನು "ಯಾರು" ಎಂಬುದರ ಬದಲಾಗಿ "ಏನು" ಎಂದು ಅನುವಾದಿಸಬೇಕಾದ ಸಾಧ್ಯತೆಯಿರುತ್ತದೆ (NEB; REB). ಅಲ್ಲದೆ ಪೌಲನು, ಸಂಗತಿಗಳಿಂದ ಉಂಟಾಗಲ್ಪಟ್ಟ ಬಹುತೇಕ ತೊಂದರೆಗಳಲ್ಲಿ, ಸಕ್ರಿಯವಾಗಿದ್ದ ಮಧ್ಯವರ್ತಿಗಳು ಜನರೇ ಆಗಿದ್ದರು ಎಂಬ ಸೂಚ್ಯಾರ್ಥವನ್ನು ಸಹ ನೀಡುತ್ತಿರುವ ಸಾಧ್ಯತೆಯಿರುತ್ತದೆ.

ಸನ್ನಿವೇಶದಲ್ಲಿ, "ಕ್ರಿಸ್ತನ ಪ್ರೀತಿಯಿಂದ" ಎಂಬುದು ನಾವು ಕ್ರಿಸ್ತನ ಮೇಲಿಟ್ಟಿರುವ ಪ್ರೀತಿಯ ಬದಲಾಗಿ, ಕ್ರಿಸ್ತನು ನಮ್ಮ ಮೇಲೆ ಇಟ್ಟಿರುವ ಪ್ರೀತಿಯನ್ನು ಅದು ಸೂಚಿಸುತ್ತದೆ. 5ನೇ ಅಧ್ಯಾಯವು ಆ ಪ್ರೀತಿಯನ್ನು ವರ್ಣಿಸುತ್ತದೆ:

> ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು. ನೀತಿವಂತನಿಗೋಸ್ಕರ ಯಾರಾದರೂ ಪ್ರಾಣಕೊಡುವದು ಅಪರೂಪ. ಉಪಕಾರಿಗೋಸ್ಕರ ಪ್ರಾಣಕೊಡುವದಕ್ಕೆ ಯಾವನಾದರೂ ಧೈರ್ಯಮಾಡಿದರೂ ಮಾಡಾನು. ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ (5:6-8).

"ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು?" ಎಂಬ ಪ್ರಶ್ನೆಯು ಈ ಹಿಂದಿನ ಪ್ರಶ್ನೆಯಲ್ಲಿರುವ ಅದೇ ಸೂಚ್ಯಾರ್ಥವನ್ನು ಹೊಂದಿದೆ: "ಒಬ್ಬನೂ ಇಲ್ಲ!" ಇದರ ಜೊತೆಗೆ, ನಾವು ಇದನ್ನು ಸೇರಿಸಬಹುದು, "ಮತ್ತು ಯಾವದೂ ಇಲ್ಲ!" Stott ಹೀಗೆ ಬರೆದನು, "ನಮ್ಮ ಕ್ರೈಸ್ತ ನಿರೀಕ್ಷೆಯು ದೇವರ ಅಚಂಚಲ ಪ್ರೀತಿಯ ದೃಢವಾಗಿ ನೆಲೆಗೊಂಡಿರುತ್ತದೆ."[148]

ಪೌಲನು ತನ್ನ ಕಾಲದ ಕ್ರೈಸ್ತರಿಗೆ ಎದುರಾಗುವಂತಹ ನಿರ್ದಿಷ್ಟವಾದ ಕಷ್ಟಗಳ ಪಟ್ಟಿಯನ್ನು ಮಾಡುವ ಮೂಲಕ ತನ್ನ ಪ್ರಶ್ನೆಯನ್ನು ವಿಸ್ತರಿಸುತ್ತಾನೆ. ಪಟ್ಟಿಯಲ್ಲಿರುವ ಮೊದಲ ಎರಡು ಪದಗಳು "ತೊಂದರೆ" ಎಂಬದಕ್ಕಾಗಿರುವ ಪದಗಳಾಗಿವೆ, ಆದರೆ ಒಂದೊಂದು ಪದವು ಸಹ ಸ್ವಲ್ಪ ವ್ಯತ್ಯಾಸವಾದ ಒತ್ತು ಹೊಂದಿವೆ. **ಕಷ್ಟವೋ** ಎಂಬುದು θλῖψις (*thlipsis*) ಎಂಬ ಪದದಿಂದ ಬಂದದ್ದು, ಅದು "ಪ್ರಾಥಮಿಕವಾಗಿ 'ಅದುಮು, ಒತ್ತಡ' ಎಂದರ್ಥವಾಗಿದೆ."[149] ದ್ರಾಕ್ಷೆಗಳನ್ನು ತುಳಿದಾಡುವ ಮೂಲಕ ಅವುಗಳಿಂದ ರಸವನ್ನು ತೆಗೆಯುವದನ್ನು ಸೂಚಿಸುವದಕ್ಕೆ ಇದೇ ಪದವು ಉಪಯೋಗಿಸಲ್ಪಟ್ಟಿತ್ತು. ನೀವು ಕಷ್ಟಗಳಿಂದ ಒತ್ತಡವನ್ನು ಅನುಭವಿಸಿದ್ದೀರೋ? ನೀವು ಜೀವಿತದಿಂದ ಜಜ್ಜಾಡಲ್ಪಟ್ಟಿದ್ದೀರೋ? ಹಾಗಾದರೆ ನಿಮಗೆ *thlipsis* ಎಂದರೇನೆಂಬುದು ನಿಮಗೆ ಅರ್ಥವಾಗುತ್ತದೆ.

**ಸಂಕಟವೋ** ಎಂಬುದು ಗ್ರೀಕ್‌ನ στενοχωρία (*stenochōria*) ಎಂಬ ಪದದಿಂದ ಅನುವಾದಿಸಲ್ಪಟ್ಟಿರುತ್ತದೆ, ಅದು ಇಕ್ಕಟ್ಟಾದ ಅಥವಾ ಮಿತಿಗೊಳಿಸಲ್ಪಟ್ಟ ಸ್ಥಳವನ್ನು ಸೂಚಿಸುತ್ತದೆ. ಅದು στενός (*stenos*, "ಇಕ್ಕಟ್ಟಾದ") ಮತ್ತು χώρια (*chōra,* "ಸ್ಥಳ") ಎಂಬ ಪದಗಳ ಸಂಯೋಜನವಾಗಿರುತ್ತದೆ.[150] ನಿಮಗೆ ಎಂದಾದರೂ ಒಂದು ಬಿಗಿಹಿಡಿತದಲ್ಲಿ ಹಿಸುಕಲ್ಪಟ್ಟು, ಉಸಿರಾಡುವದಕ್ಕೂ ಆಗದಂತಹ ಅನುಭವವಾಗಿರುತ್ತದೋ? ಹಾಗಾದರೆ ನಿಮಗೆ *stenochōria* ಅಂದರೇನೆಂಬುದು ತಿಳಿಯುತ್ತದೆ. *Thlipsis* ಮತ್ತು *stenochōria* ಗಳನ್ನು ಒಂದುಗೂಡಿಸಿದಾಗ, ಅವು ಅನುಕ್ರಮವಾಗಿ *ಬಾಹ್ಯದಲ್ಲಾಗುವ ವೇದನೆ* ಮತ್ತು *ಅಂತರ್ಯದಲ್ಲಾಗುವ ಸಂಕಟ*ವನ್ನು ಸೂಚಿಸುತ್ತವೆಂದು ಅಭಿಪ್ರಾಯ ಪಡಲಾಗುತ್ತದೆ.[151] ಈ ಎರಡು ಪದಗಳು ಊಹಿಸಿಕೊಳ್ಳಬಹುದಾದ ಎಲ್ಲಾ ವಿಧಧ ಸಮಸ್ಯೆ ಮತ್ತು ತೊಂದರೆಗಳನ್ನು ಒಳಗೊಂಡಿರುತ್ತವೆ.

ಪೌಲನ ದಿನಗಳಲ್ಲಿ ಕ್ರೈಸ್ತರಿಂದ ಎದುರಿಸಲಾಗುತ್ತಿದ್ದ ನಿರ್ದಿಷ್ಟವಾದ ಸಮಸ್ಯೆಗಳನ್ನು ಸಾಮಾನ್ಯವಾದ ಪದಗಳಿಂದ ತಿಳಿಯಲಾಗುತ್ತಿತ್ತು. **ಹಿಂಸೆಯೋ** (διωγμός, *diōgmos*) ಎಂದು ಅನುವಾದಿಸಲ್ಪಟ್ಟ ಪದವು ಅಟ್ಟಿಸಿಕೊಂಡು ಹೋಗಲ್ಪಡುವುದು ಎಂಬದನ್ನು ಸೂಚಿಸುವದಾಗಿತ್ತು,[152] ಒಂದು ಪ್ರಾಣಿಯು ಬೇಟೆಗಾರನಿಂದ ಅಟ್ಟಿಸಿಕೊಂಡು ಹೋಗಲ್ಪಡುವ ರೀತಿಯಲ್ಲಿ ಆಗಿತ್ತು. LB ತರ್ಜುಮೆಯ ಸರಳಾನುವಾದವು "ನಾವು ಅಟ್ಟಿಸಿಕೊಂಡು ಹೋಗಲ್ಪಡುವಾಗ" ಎಂದಿರುತ್ತದೆ. ಸಭೆಯು ಒಂದು ಆಕ್ರಮಿತ ಪ್ರದೇಶದಲ್ಲಿ ಮತ್ತು ಕ್ರೈಸ್ತರನ್ನು ಅಟ್ಟಿಸಿಕೊಂಡು ಬಂದು ಹಿಂಸಿಸುತ್ತಿದ್ದ ಕಠೋರ ಅರಸರುಗಳ ಆಡಳಿತದಡಿಯಲ್ಲಿ ಆರಂಭಗೊಂಡಿತೆಂಬುದು ತಿಳಿದಿರುವಂಥ ವಿಷಯವಾಗಿದೆ. **ಅನ್ನವಿಲ್ಲದಿರುವದೋ** (λιμός, *limos,* ಆಹಾರದ ಕೊರತೆ) ಮತ್ತು **ವಸ್ತ್ರವಿಲ್ಲದಿರುವದೋ** (γυμνότης, *gumnotēs,* ಉಡುಪುಗಳ ಕೊರತೆ) ಎಂಬವುಗಳು ಕ್ರಿಸ್ತನ ಹಿಂಬಾಲಕರಿಗಿರುತ್ತಿದ್ದ ಆರ್ಥಿಕ ಮುಗ್ಗಟ್ಟಗಳನ್ನು ಸೂಚಿಸಬಹುದಾಗಿದೆ.

**ಗಂಡಾಂತರವೋ** (κίνδυνος, *kindunos*) ಎಂಬುದು "ಅಪಾಯ" ಎಂಬುದಕ್ಕಿರುವ ಸಾಮಾನ್ಯ ಪದವಾಗಿದ್ದರೆ, **ಖಡ್ಗವೋ** ಎಂಬುದು (μάχαιρα, *machaira*) ಹಲವಾರು ದುರುದ್ದೇಶದ ಅಧಿಕಾರ್ಥಗಳನ್ನು ಹೊಂದಿದೆ, ಅವುಗಳಲ್ಲಿ ಕ್ರೂರ ಮರಣ ಮತ್ತು ಶಿರಛ್ಛೇದ ಸೇರಿರುತ್ತವೆ. ಮೊಟ್ಟಮೊದಲು ರಕ್ತಸಾಕ್ಷಿಯಾಗಿ ಮರಣಿಸಿದ ಅಪೊಸ್ತಲನಾದ

ಯಾಕೋಬನು "ಕತ್ತಿಯಿಂದ ಕೊಲ್ಲಿಸಲ್ಪಟ್ಟನು" (ಅಪೊಸ್ತಲರ ಕೃತ್ಯಗಳು 12:2). ರೋಮಾಪುರದವರಿಗೆ ಪತ್ರಿಕೆಯಲ್ಲಿ "ಖಡ್ಗ" ಎಂಬ ಪದವನ್ನು ಸೇರ್ಪಡೆಗೊಳಿಸಿರುವ ಬಗ್ಗೆ ಹೆಚ್ಚುಕಡಿಮೆ ಒಂದು ಪ್ರವಾದನಾತ್ಮಕ ಸಂಗತಿಯು ಇರುತ್ತದೆ. ಪೌಲನು ಅದನ್ನು ಬರೆದ ಕೆಲವು ವರ್ಷಗಳ ಬಳಿಕ, ಖಡ್ಗವು ರೋಮಾಪುರದಲ್ಲಿ ಪುನಃ ಪುನಃ ಜಳಪಿಸಲ್ಪಡುತ್ತಿತ್ತು, ಮತ್ತು ಪಟ್ಟಣದುದ್ದಕ್ಕೂ ಇರುವ ಆಖಾಡಗಳಲ್ಲಿನ ಮರಳು ಕ್ರೈಸ್ತರ ರಕ್ತದಿಂದ ನೆನೆದುಹೋಗಿತ್ತು.

ಇಲ್ಲಿ ಪಟ್ಟಿ ಮಾಡಲಾಗಿರುವ ಸಂಕಷ್ಟಗಳು—ಕಷ್ಟ, ಸಂಕಟ, ಹಿಂಸೆ, ಅನ್ನವಿಲ್ಲದಿರುವಿಕೆ, ವಸ್ತ್ರವಿಲ್ಲದಿರುವಿಕೆ, ಗಂಡಾಂತರ, ಮತ್ತು ಖಡ್ಗ—"ಹೇಗೇ ಕಂಡಾಗ್ಯೂ ಪ್ರೀತಿಯ ಕೋಮಲವಾದ ಮೈದಡವಿಕೆಗಳಂತೆ ಅಂತೂ ಕಾಣಿಸುವದಿಲ್ಲ."[153] ವಾಸ್ತವಾಂಶವೇನೆಂದರೆ, ಅಜ್ಞಾನಿಗಳ ದೃಷ್ಟಿಯಲ್ಲಾದರೋ, ಆ ರೀತಿಯಲ್ಲಿ ಭಾರದಿಂದ ತುಂಬಿರುವವನು ದೇವರಿಂದ ಕೈಬಿಡಲ್ಪಟ್ಟವನಂತೆ ಮತ್ತು ಬಹುಶಃ ದೇವರಿಂದ ಪೀಡಿಸಲ್ಪಟ್ಟವನಂತೆ ಸಹ ಕಾಣಿಸಬಹುದು. ಈ ಯಾವದೇ ಭಯಾನಕಗಳಾಗಲಿ ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸವು ಅಥವಾ ಅಗಲಿಸುವದಕ್ಕೆ ಸಾಧ್ಯವಿಲ್ಲ ಎಂಬದಾಗಿ ಪೌಲನು ಕ್ರೈಸ್ತರಿಗೆ ಭರವಸೆ ನೀಡುತ್ತಾನೆ.

ಪೌಲನು ವೈಯಕ್ತಿಕವಾದ ಅನುಭವದಿಂದ ಮಾತಾಡುತ್ತಿದ್ದನು, ಸ್ವತಃ ತಾನೇ ಕರ್ತನಿಗೋಸ್ಕರ ಅನೇಕ ಸಂಕಷ್ಟಗಳನ್ನು ಅನುಭವಿಸಿದ್ದನು (ನೋಡಿರಿ 2 ಕೊರಿಂಥ 6:4, 5; 11:26, 27; 12:10). ರೋಮಾ 8:35ರಲ್ಲಿ ಪಟ್ಟಿ ಮಾಡಲಾಗಿರುವ ಪ್ರತಿಯೊಂದು ಸಂಕಷ್ಟವು ಆ ವಾಕ್ಯಭಾಗಗಳಲ್ಲಿ ಕಂಡುಬರುತ್ತವೆ—"ಖಡ್ಗವೋ" ಮಾತ್ರವೇ ಅಲ್ಲಿರುವದಿಲ್ಲ. ಖಡ್ಗವು ಇನ್ನೂ ಪೌಲನ ತಲೆಯನ್ನು ಅವನಿಂದ ಬೇರ್ಪಡಿಸಿರಲಿಲ್ಲ, ಆದರೆ ಆದಿ ಸಭೆಯ ಲೇಖಕರ ಪ್ರಕಾರವಾಗಿ, ಅದು ಕ್ರಮೇಣದಲ್ಲಿ ಸಂಭವಿಸಿತು—ರೋಮಾಪುರ ಪಟ್ಟಣದಲ್ಲಿ.[154] ಹಾಗಾದರೆ ಅಪೊಸ್ತಲನು ತನ್ನನ್ನು ದೇವರಿಂದ ಕೈಬಿಡಲ್ಪಟ್ಟವನು ಅಥವಾ ದೇವರಿಂದ ಪೀಡಿಸಲ್ಪಟ್ಟವನೆಂದು ನಿರ್ಣಯಿಸಿಕೊಂಡನೋ? ಇಲ್ಲ, ಬದಲಾಗಿ ಆತನು "ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; . . . ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು" ಎಂದು ಹೇಳಿದನು (ಗಲಾತ್ಯ 2:20).

**ವಚನ 36.** ಈ ಹಂತದಲ್ಲಿ, ಪೌಲನು ಸ್ವಲ್ಪ ಬಿಡುವು ತೆಗೆದುಕೊಂಡು ಸಂಕಷ್ಟಗಳು ಮತ್ತು ಹಿಂಸೆಗಳು ಸಹಜವಾದವು, ದೇವರಿಗಾಗಿ ಜೀವಿಸುವದರ ನಿರೀಕ್ಷಿತ ಭಾಗವಾಗಿರುತ್ತವೆ ಎಂಬದನ್ನು ಒತ್ತಿ ಹೇಳುತ್ತಾನೆ (ನೋಡಿರಿ 5:3; 8:17; ಅಪೊಸ್ತಲರ ಕೃತ್ಯಗಳು 14:22). ಆತನು ಕೀರ್ತನೆಗಳ ಪುಸ್ತಕದಿಂದ ಉಲ್ಲೇಖಿಸುವ ಮೂಲಕ ಇದನ್ನು ಹೇಳುತ್ತಾನೆ: **ದೇವರೇ, ನಾವು ನಿನ್ನ ನಿಮಿತ್ತ ದಿನವೆಲ್ಲಾ ಕೊಲೆಗೆ ಗುರಿಯಾಗಿದ್ದೇವೆ; ಜನರು ನಮ್ಮನ್ನು ಕೊಯ್ಗುರಿಗಳಂತೆ ಎಣಿಸಿದರು. ಎಂಬದಾಗಿ ಬರೆದಿರುವಂತೆ ಆಗುತ್ತದಲ್ಲಾ** (ನೋಡಿರಿ ಕೀರ್ತನೆ 44:22).

ಕೀರ್ತನೆ 44ನೇ ಅಧ್ಯಾಯವು ಬಾಬಿಲೋನಿನಲ್ಲಿ ಸೆರೆಯಾಳಾಗಿರುವ ವೇಳೆಯಲ್ಲಿ ಬರೆಯಲ್ಪಟ್ಟಿತೆಂದು ಅನೇಕರು ಯೋಚಿಸುತ್ತಾರೆ (ನೋಡಿರಿ ಕೀರ್ತನೆ 44:11, 14). ಅದು ದೇವರು ಹಿಂದೆ ತನ್ನ ಜನರನ್ನು ವಿಮೋಚಿಸಿದ್ದ ಪ್ರಕಾರವೇ (ಕೀರ್ತನೆ 44:1-8) ತಮ್ಮನ್ನು

ತೊಂದರೆ ಪಡಿಸುವವರಿಂದ ಬಿಡಿಸುವಂತೆ ಇಸ್ರಾಯೇಲ್ಯರು ದೇವರಿಗೆ ಮಾಡುವ ಮೊರೆಯಾಗಿತ್ತು (ಕೀರ್ತನೆ 44:26). ಕೀರ್ತನೆಯ ಹೃದಯಭಾಗದಲ್ಲಿ ಈ ಶೋಕಪೂರಿತ ಕೂಗು ಇರುತ್ತದೆ: "ದೇವರೇ, ನಾವು ನಿನ್ನ ನಿಮಿತ್ತ ದಿನವೆಲ್ಲಾ ಕೊಲೆಗೆ ಗುರಿಯಾಗಿದ್ದೇವೆ; ಜನರು ನಮ್ಮನ್ನು ಕೊಯ್ಗುರಿಗಳಂತೆ ಎಣಿಸಿದ್ದಾರೆ" (ಕೀರ್ತನೆ 44:22). "ನಿನ್ನ ನಿಮಿತ್ತ" ಎಂಬ ಪದಗುಚ್ಛವು ಅವರು ಬಾಧೆಗಳನ್ನು ಅನುಭವಿಸುವದಕ್ಕೆ ಕಾರಣವೆಂದರೆ ಅವರು ಕರ್ತನ ಹಿಂಬಾಲಕರಾಗಿದ್ದರು ಎಂಬದಕ್ಕಾಗಿಯೇ ಎಂಬ ಅಭಿಪ್ರಾಯವನ್ನು ಕೊಡುತ್ತದೆ.[155]

"ದಿನವೆಲ್ಲಾ ಕೊಲೆಗೆ [ಕೊಲ್ಲಲ್ಪಡುವದು] ಗುರಿಯಾಗಿದ್ದೇವೆ" ಎಂಬುದರ ವಿಷಯವಾಗಿ, ಇಬ್ರಿಯ 11:37 ಒಂದು ಉತ್ತಮ ವ್ಯಾಖ್ಯೆಯನ್ನು ಒದಗಿಸುತ್ತದೆ: "ಕೆಲವರನ್ನು ಜನರು ಕಲ್ಲೆಸೆದು ಕೊಂದರು; ಕೆಲವರನ್ನು ಗರಗಸದಿಂದ ಕುಯ್ದು ಕೊಂದರು; ದೇವದ್ರೋಹಿಗಳಾಗಿ ಪ್ರಾಣವನ್ನ ಉಳಿಸಿಕೊಳ್ಳಿರೆಂದು ಕೆಲವರನ್ನು ಪ್ರೇರೇಪಿಸಿದರು; ಕೆಲವರನ್ನು ಕತ್ತಿಯಿಂದ ಕೊಂದರು. ಕೆಲವರು ಕೊರತೆ ಹಿಂಸೆ ಬಾಧೆ ಇವುಗಳನ್ನು ಅನುಭವಿಸುವವರಾಗಿದ್ದು ಕುರಿ ಮೇಕೆಗಳ ಚರ್ಮವನ್ನು ಉಟ್ಟುಕೊಂಡವರಾಗಿ ತಿರುಗಾಡಿದರು." ಕೊಯ್ಯುವದಕ್ಕೆ ಕೊಂಡೊಯ್ಯಲ್ಪಡುತ್ತಿರುವ ಕುರಿಯ ಚಿತ್ರಣವು ಅಸಹಾಕತೆಯನ್ನು ಭಾವನೆಯನ್ನು ಮನಸ್ಸಿಗೆ ತರಿಸುತ್ತದೆ. ಈಗಾಗಲೇ ಗಮನಿಸಿರುವ ಹಾಗೆ, ಕರ್ತನನ್ನು ಹಿಂಬಾಲಿಸುವವರು ಕೆಟ್ಟದಾಗಿ ನಡಿಸಿಕೊಳ್ಳಲ್ಪಡುವದನ್ನು ನಿರೀಕ್ಷಿಸಬಹುದು ಎಂಬ ವಿಚಾರವನ್ನು ಮತ್ತಷ್ಟು ಒತ್ತಿಹೇಳುವದಕ್ಕೆ ಪೌಲನು ಕೀರ್ತನೆ 44ನೇ ಅಧ್ಯಾಯದಿಂದ ವಾಕ್ಯಭಾಗವನ್ನು ಉಪಯೋಗಿಸಿದನು.

**ವಚನ 37.** ಕೆಟ್ಟದಾಗಿ ನಡಿಸಿಕೊಳ್ಳಲ್ಪಡುವದೇ ನಮ್ಮ ಪಾಲಿಗೆ ಬಂದದ್ದು ಎಂದಾದರೆ, ನಾವು ನಿರಾಶೆಗೊಳ್ಳತಕ್ಕದ್ದೋ? ಇಲ್ಲ. 37ನೇ ವಚನದಲ್ಲಿ, ಪೌಲನು 35ನೇ ವಚನದಲ್ಲಿ ಪಟ್ಟಿ ಮಾಡಿರುವ ಸಂಕಷ್ಟಗಳನ್ನು ಸೂಚಿಸಿ ಹೇಳುತ್ತಾನೆ: **ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ಈ ಎಲ್ಲಾ ವಿಷಯಗಳಲ್ಲಿ**—ಕಷ್ಟ, ಸಂಕಟ, ಹಿಂಸೆ, ಅನ್ನವಿಲ್ಲದಿರುವಿಕೆ, ವಸ್ತ್ರವಿಲ್ಲದಿರುವಿಕೆ, ಗಂಡಾಂತರ, ಮತ್ತು ಖಡ್ಗ—**ಪೂರ್ಣ ಜಯಶಾಲಿಗಳಾಗುತ್ತೇವೆ.** "ನಾವು . . . ಪೂರ್ಣ ಜಯಶಾಲಿಗಳಾಗುತ್ತೇವೆ" ಎಂಬುದು ಒಂದೇ ಪದದಿಂದ ಬಂದದ್ದಾಗಿದೆ: ὑπερνικάω (*hupernikaō*). ಗ್ರೀಕ್‌ನ ಈ ವಿರಳ ಪದವು ಶಾಸ್ತ್ರದಲ್ಲಿ ಈ ಒಂದು ಸಾರಿ ಮಾತ್ರವೇ ಉಪಯೋಗಿಸಲ್ಪಟ್ಟಿದೆ. ಇದು "ಮೇಲೆ" (ὑπέρ, *huper*[156]) ಎಂಬ ಉಪಸರ್ಗವನ್ನು "ಜಯವನ್ನು ಹೊಂದು" ಎಂಬರ್ಥದ (νικάω, *nikaō*[157]) ಪದದೊಂದಿಗೆ ಒಂದುಗೂಡಿಸುತ್ತದೆ. "ಮೇಲೆ" (over) ಅಥವಾ "ಮೇಲುಗಡೆ" (above) ಎಂಬದಕ್ಕಾಗಿರುವ ಲ್ಯಾಟಿನ್ ಪದವು *super* ಎಂಬುದಾಗಿರುತ್ತದೆ. ಆದ್ದರಿಂದ CJB ತರ್ಜುಮೆಯಲ್ಲಿ "ನಾವು ಭರ್ಜರಿ-ಜಯಶಾಲಿಗಳು (super-conquerors)" ಎಂದಿರುತ್ತದೆ. ಪರಿಚಿತ KJV ತರ್ಜುಮೆಯು ಹೀಗೆ ಹೇಳುತ್ತದೆ "ನಾವು ಜಯಶಾಲಿಗಳಿಗಿಂತಲೂ ಹೆಚ್ಚಿನವರಾಗಿದ್ದೇವೆ."

ಕ್ರೈಸ್ತರು ಅನೇಕ ವಿಧಗಳಲ್ಲಿ "ಜಯಶಾಲಿಗಳಿಗಿಂತಲೂ ಹೆಚ್ಚಿನವರಾಗಿರುವರು." ನಾವು ಜಯಶಾಲಿಗಳಿಗಿಂತಲೂ ಹೆಚ್ಚಿನವರು ಯಾಕೆಂದರೆ ನಾವು ನಮ್ಮ ಸಮಸ್ಯೆಗಳಲ್ಲಿ ಬದುಕುಳಿಯುವದು ಮಾತ್ರವಲ್ಲ; ಅವುಗಳ ಮೇಲೆ ಜಯವನ್ನು ಸಹ ಗಳಿಸುತ್ತೇವೆ. ನಾವು "ಜಯಶಾಲಿಗಳಿಗಿಂತಲೂ ಹೆಚ್ಚಿನವರು" ಯಾಕೆಂದರೆ ನಾವು ಜೀವಿತದ ಸವಾಲುಗಳನ್ನು ಎದುರಿಸಿ ನಿಲ್ಲುವವರು ಮಾತ್ರವಾಗಿರುವದಿಲ್ಲ, ಆದರೆ—ದೇವರ ಸಹಾಯದೊಂದಿಗೆ—

ನಾವು ಆ ಸವಾಲುಗಳನ್ನು ಉಪಯೋಗಿಸಿಕೊಂಡು ಇನ್ನಷ್ಟು ಉತ್ತಮ ಜನರಾಗುತ್ತೇವೆ. ಎಲ್ಲಕ್ಕಿಂತ ಮೇಲಾಗಿ, "ನಾವು ಜಯಶಾಲಿಗಳಿಗಿಂತಲೂ ಹೆಚ್ಚಿನವರು" ಯಾಕೆಂದರೆ ದೇವರ ಕೃಪೆಯು ನಮ್ಮನ್ನು ಬಹಳವಾಗಿ ಪ್ರತಿಕೂಲವಾಗಿರುವ ಯುದ್ಧಗಳನ್ನು ಗೆಲ್ಲುವಂತೆ ಶಕ್ತಗೊಳಿಸುವದು. ಅಂತ್ಯದಲ್ಲಿ, ನಾವು ಆತನ ಸನ್ನಿಧಿಯೊಳಗೆ ಪ್ರವೇಶಿಸುವೆವು ಮತ್ತು ನಾವು ಊಹಿಸಿಕೊಳ್ಳಬಹುದಾದ ಯಾವದಕ್ಕಿಂತಲೂ ಎಷ್ಟೋ ದೊಡ್ಡದಾದ ಪ್ರತಿಫಲವನ್ನು ಪಡೆದುಕೊಳ್ಳುವೆವು.

ಈ ಪೂರ್ಣ ವಿಜಯವು "ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ" ಮಾತ್ರವೇ ಸಾಧ್ಯವಾಗಿರುತ್ತದೆ.[158] ಪೌಲನು ಸ್ವಾವಲಂಭನೆಯ ಪರವಾಗಿ ಅಲ್ಲ, ಆದರೆ ಕ್ರಿಸ್ತನಾವಲಂಬನೆಯ ಪರವಾಗಿ ವಾದವನ್ನು ಮಾಡುತ್ತಿದ್ದಾನೆ. ಯೇಸು ಹೇಳಿದನು, "ನೀವು ನನ್ನನ್ನು ಬಿಟ್ಟು ಏನೂ ಮಾಡಲಾರರಿ" (ಯೋಹಾನ 15:5). ಪೌಲನು, "ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" ಎಂದು ಹೇಳಿದನು (ಫಿಲಿಪ್ಪಿ 4:13). ಅಲ್ಲದೆ ಆತನು ". . . ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ" ಎಂದು ಸಹ ಹೇಳುತ್ತಾನೆ (1 ಕೊರಿಂಥ 15:57). ಲೋಕವು ಜಯವನ್ನು ಗಳಿಸುವದಕ್ಕೆ ಯೇಸುವಿನ *ಸುತ್ತಲು* ಹೋಗುವದಕ್ಕೆ ಪ್ರಯತ್ನಿಸುತ್ತಿದೆ, ಆದರೆ ಆತನ *ಮೂಲಕ* ಮಾತ್ರವೇ ಜಯವು ಸಾಧ್ಯವಿರುತ್ತದೆಂದು ಪೌಲನು ಹೇಳುತ್ತಾನೆ.

**ವಚನಗಳು 38, 39.** 35ನೇ ವಚನದಲ್ಲಿ, ಪೌಲನು ಹೀಗೆ ಕೇಳಿದ್ದನು, "ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು [ಅಥವಾ ಯಾವುದು]?" 38 ಮತ್ತು 39ನೇ ವಚನಗಳಲ್ಲಿ, ಆತನು ತನ್ನ ಪ್ರಶ್ನೆಗೆ ತಾನೇ ಉತ್ತರವನ್ನು ನೀಡುತ್ತಾನೆ.

ಅಪೊಸ್ತಲನು ತನ್ನ ಉತ್ತರಕ್ಕೆ ಮುನ್ನುಡಿಯಾಗಿ, **ನನಗೆ ನಿಶ್ಚಯ ಉಂಟು** ಎಂದು ಹೇಳುತ್ತಾನೆ. ಇದು πείθω (*peithō,* "ಮನವೊಲಿಸು") ಎಂಬ ಕರ್ಮಣಿ ಕ್ರಿಯಾಪದದಿಂದ ಅನುವಾದಿಸಲ್ಪಟ್ಟದ್ದು, ಅದು ಯಾವ ಸಂಶಯಗಳಿಲ್ಲದೆ ಸಂಪೂರ್ಣವಾಗಿ ಮನವೊಲಿಸಲ್ಪಡುವದು ಎಂಬುದನ್ನು ಸೂಚಿಸುತ್ತದೆ. KJV ತರ್ಜುಮೆಯಲ್ಲಿ "ಮನವೊಲಿಸಲ್ಪಟ್ಟಿದ್ದೇನೆ," ಎಂದು ಮತ್ತು NIRV ಯಲ್ಲಿ "ನನಗೆ ಸಂಪೂರ್ಣ ಖಚಿತವಾಗಿರುತ್ತದೆ" ಎಂದು ಇರುತ್ತದೆ.

ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸುವಂತದ್ದು ಯಾವದೂ, ಯಾವದೊಂದೂ ಇಲ್ಲವೇ ಇಲ್ಲ ಎಂಬುದನ್ನು ಒತ್ತಿ ಹೇಳುವದಕ್ಕೆ ಪೌಲನು ಈ ಪದಗಳನ್ನು ಒಂದಾದರ ಮೇಲೊಂದರಂತೆ ಮುಂದಿಡುತ್ತಾನೆ. ಆತನು ನೀಡುವ ಸಂಭಾವ್ಯ "ಅಗಲಿಸುವವರ" ಅನುಕ್ರಮಣಿಕೆಯಲ್ಲಿ ಹತ್ತು ಅಂಶಗಳಿರುತ್ತವೆ. ಅದರಲ್ಲಿ ಮೂರು ಜೋಡಿಗಳು, ನಂತರ ಒಂಟಿ ಅಂಶ, ಮತ್ತೊಂದು ಜೋಡಿ, ಮತ್ತು ನಂತರ ಒಂಟಿಯಾದ ಆಕರಸೂಚನೆ (ಉಲ್ಲೇಖ) ಇರುತ್ತದೆ. ಅಪೊಸ್ತಲನ ಉದ್ದೇಶವು ಜೀವಿತದ ದಾರಿಯಲ್ಲಿ ಅಡ್ಡಿಯಾಗಿ ಬರುವ ಎಲ್ಲವನ್ನೂ ವಿವರವಾಗಿ ಹೇಳುವುದು ಆಗಿರಲಿಲ್ಲ, ಆದರೆ ವಿಶಿಷ್ಟವಾದವುಗಳನ್ನು ಬರೆಯುವದಾಗಿತ್ತು. "ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ" ನಾವು ಈ ಎಲ್ಲಾ ವಿಷಯಗಳಲ್ಲಿ "ಪೂರ್ಣ ಜಯಶಾಲಿಗಳಾಗುತ್ತೇವೆ" (8:37).

ಈ ಪಟ್ಟಿಯಲ್ಲಿರುವ ಪ್ರತಿಯೊಂದನ್ನು ಸಹ ಅತಿಯಾಗಿ ವಿಶ್ಲೇಷಣೆ ಮಾಡುವದರಿಂದ ದೂರವಿರಬೇಕು. ಪೌಲನು "ಅಷ್ಟೊಂದು ವ್ಯಾಪಕತೆ ಮತ್ತು ವೈಭವವನ್ನೊಳಗೊಂಡ ಸಂಗತಿಗಳ ಒಂದು ಅದ್ಭುತವಾದ ಪಟ್ಟಿಯನ್ನು ಕೊಟ್ಟಿದ್ದು ಅವುಗಳನ್ನು [ಕುಂದಿಸದೆಯೇ]

ಮತ್ತು ನಷ್ಟಗೊಳಿಸದೆ ಅರ್ಥನಿರೂಪನೆ ಮಾಡುವದಕ್ಕಾಗದು" ಎಂದು McGarvey ಹೇಳುತ್ತಾನೆ.[159] ಹೇಗಿದ್ದರೂ, ಪೌಲನು ಏಕೆ ಪ್ರತಿಯೊಂದು ಪದವನ್ನು ಸೇರ್ಪಡೆಗೊಳಿಸಿದನೆಂಬುದನ್ನು ಪರಿಗಣಿಸುವದರಲ್ಲಿ ಮೌಲ್ಯವಿರುತ್ತದೆ. ಪ್ರತಿಯೊಂದು ಸಂಗತಿಯು ಯಾವ ರೀತಿಯಲ್ಲಿ ನಮ್ಮನ್ನು ದೇವರಿಂದ ಅಗಲಿಸುವದಕ್ಕೆ ಸಾಧ್ಯವಿರುತ್ತದೆ?

(1) **ಮರಣವಾಗಲಿ** ಮತ್ತು (2) **ಜೀವವಾಗಲಿ.** "ಮರಣವಾಗಲಿ" (θάνατος, *thanatos*) ಎಂಬುದು ಕೆಲವರ ದೃಷ್ಟಿಯಲ್ಲಿ ಅದು ನಾವು ಎದುರಿಸುವ ಅತ್ಯಂಥ ಭೀಕರವಾದ ವೈರಿಯಾಗಿರುತ್ತದೆಂಬ ಕಾರಣಕ್ಕೆ ಬಹುಶಃ ಪಟ್ಟಿಯಲ್ಲಿ ಮೊದಲು ಸೇರಿಸಲ್ಪಟ್ಟಿರಬೇಕು. ಕ್ರೈಸ್ತೇತರನಿಗಾದರೋ, ಮರಣವೆಂದರೆ ಅಂತ್ಯವೇ. ನಂಬಿಕೆಯಿಲ್ಲದವನು "ಜಾನ್ ನಮ್ಮನ್ನು ಬಿಟ್ಟು ಅಗಲಿದನು" ಎಂದು ಬರೆಯುತ್ತಾನೆ. ಹೇಗೂ, ಮರಣವು ಒಬ್ಬ ಕ್ರೈಸ್ತನನ್ನು ದೇವರಿಂದಲೂ ಆತನ ಪ್ರೀತಿಯಿಂದಲೂ ಅಗಲಿಸಲಾರದು. ಒಬ್ಬರು ಹೀಗೆ ಹೇಳಿದ್ದಾರೆ, "ದೇವರು ಮರಣದ ಧೂಳಿನಲ್ಲಿ ನಮ್ಮನ್ನು ಕಳೆದುಕೊಳ್ಳುವದಿಲ್ಲ." ದೇವರ ನಂಬಿಗಸ್ತ ಮಗುವಿಗೆ, ಮರಣವು ಒಂದು ಗೋಡೆಯಲ್ಲ, ಆದರೆ ಒಂದು ದ್ವಾರ—ಕರ್ತನ ಪ್ರಸನ್ನತೆಯೊಳಗೆ ನಡಿಸುವಂತಹ ಒಂದು ದ್ವಾರ. ಪೌಲನು "ನನಗಂತೂ ಬದುಕುವದೆಂದರೆ ಕ್ರಿಸ್ತನೇ, ಸಾಯುವದು ಲಾಭವೇ" ಎಂದು ಬರೆದನು (ಫಿಲಿಪ್ಪಿ 1:21). ಆತನು ಕೊರಿಂಥದಲ್ಲಿನ ಕ್ರೈಸ್ತರಿಗೆ, "ಮರಣವು ನುಂಗಿಯೇ ಹೋಯಿತು, ಜಯವಾಯಿತು" ಎಂಬದಾಗಿ ಭರವಸೆ ಕೊಟ್ಟನು (1 ಕೊರಿಂಥ 15:54).

"ಜೀವವಾಗಲಿ" (ζωή, *zōē*) ಎಂಬುದು ಪಟ್ಟಿಯಲ್ಲಿ ನಂತರ ಬರುತ್ತದೆ. ಜನರು ಕೆಲವು ಸಾರಿ ಮರಣಕ್ಕಿಂತಲೂ ಜೀವನವನ್ನು ಎದುರಿಸುವದಕ್ಕೆ ಕಷ್ಟಕರವಾಗಿ ಕಾಣುತ್ತಾರೆ. ವ್ಯಂಗ್ಯಕಾರರು ಜೀವನವನ್ನು ಒಂದು ದೊಡ್ಡ ಪ್ರಮಾದ, ಒಂದು ವ್ಯಾದಿ, ಮೋಸಗಾರ, ಏನೂ ಮಹತ್ವವನ್ನು ಸೂಚಿಸಿದೆ ಒಬ್ಬ ಮೂರ್ಖನಿಂದ ಹೇಳಲ್ಪಟ್ಟ ಕಥೆ, ಅಥವಾ ಹುಟ್ಟಿದ ತಪ್ಪಿಗಾಗಿ ಸೆರೆವಾಸದ ತೀರ್ಪಾಗಿರುತ್ತದೆ ಎಂಬಂತೆ ವರ್ಣಿಸಿದ್ದಾರೆ. ಜೀವನವು ನಮಗೆ ವೈಯಕ್ತಿಕವಾಗಿ ಏನನ್ನೇ ತಂದರೂ, ಅದು ನಮ್ಮನ್ನು ದೇವರ ಪ್ರೀತಿಯ ಕಾಳಜಿಯಿಂದ ಅಗಲಿಸಾರದು ಎಂಬದನ್ನು ನಾವು ತಿಳಿದುಕೊಳ್ಳತಕ್ಕದ್ದು. ಪೇತ್ರನು ಹೀಗೆ ಬರೆದನು, "ನಿಮ್ಮ ಚಿಂತೆಯನ್ನೆಲ್ಲಾ ಆತನ ಮೇಲೆ ಹಾಕಿರಿ, ಆತನು ನಿಮಗೋಸ್ಕರ ಚಿಂತಿಸುತ್ತಾನೆ" (1 ಪೇತ್ರ 5:7). ಈ ಮುಂಚೆ, ನಾವು ಫಿಲಿಪ್ಪಿ 4:13ನೇ ವಚನವನ್ನು ಗಮನಿಸಿದ್ದೇವೆ. ಈಗ ಆ ವಚನವನ್ನು ಈ ಸನ್ನಿವೇಶದಲ್ಲಿ ಪರಿಗಣಿಸೋಣ:

> . . . ನಾನಂತೂ ಇದ್ದ ಸ್ಥಿತಿಯಲ್ಲಿಯೇ ಸಂತುಷ್ಟನಾಗಿರುವದನ್ನು ಕಲಿತುಕೊಂಡಿದ್ದೇನೆ. ಬಡವನಾಗಿರಲೂ ಬಲ್ಲೆನು, ಸಮೃದ್ಧಿಯುಳ್ಳವನಾಗಿರಲೂ ಬಲ್ಲೆನು. ನಾನು ತೃಪ್ತನಾಗಿದ್ದರೂ ಹಸಿದವನಾಗಿದ್ದರೂ, ಸಮೃದ್ಧಿಯುಳ್ಳವನದರೂ ಕೊರತೆಯು ಳ್ಳವನಾದರೂ, ಯಾವ ತರದ ಸ್ಥಿತಿಯಲ್ಲಿರುವವನಾದರೂ ಅದರ ಗುಟ್ಟು ನನಗೆ ತಿಳಿದದೆ. ನನ್ನನ್ನು ಬಲಪಡಿಸುವಾತನಲ್ಲಿದ್ದು ಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ (ಫಿಲಿಪ್ಪಿ 4:11-13).

(3) **ದೇವದೂತರಾಗಲಿ** ಮತ್ತು (4) **ದುರಾತ್ಮಗಳಾಗಲಿ.** "ದೇವದೂತರಾಗಲಿ" ಎಂಬುದಕ್ಕಿರುವ ಗ್ರೀಕ್ ಪದದ (ἄγγελος, *angelos* ಎಂಬುದರ ಬಹುವಚನ) ದ ಅರ್ಥವು "ಸಂದೇಶವಾಹಕರು," ಅದು ಶಾರೀರಿಕ ಸಂದೇಶವಾಹಕರನ್ನು (ಜನರನ್ನು)[160] ಅಥವಾ

ಆತ್ಮೀಕ ಸಂದೇಶವಾಹಕರನ್ನು (ದೇವದೂತರು) ಸೂಚಿಸಬಹು ದಾಗಿದೆ. "ದುರಾತ್ಮಗಳಾಗಲಿ" ಎಂಬದರೊಂದಿಗೆ ಜೋಡಿಸುವ ಮೂಲಕ ಪೌಲನು ಮನಸ್ಸಿನಲ್ಲಿ ಆತ್ಮೀಕ ಸಂದೇಶವಾಹಕರನ್ನಿಟ್ಟುಕೊಂಡು ಹೇಳಿದನೆಂಬದನ್ನು ಸೂಚಿಸುತ್ತದೆ. ಪೌಲನು ತನ್ನ ಪಟ್ಟಿಯಲ್ಲಿ ಏಕೆ "ದೇವದೂತರಾಗಲಿ" ಸೇರಿಸಿದನೋ ನಮಗೆ ತಿಳಿಯದು, ಆದರೆ ಹೊಸ ಒಡಂಬಡಿಕೆಯ ಕಾಲದಲ್ಲಿ ಕೆಲವು ಜನರು ದೇವದೂತರನ್ನು ಪೂಜಿಸುತ್ತಿದ್ದರು (ಕೊಲೊಸ್ಸೆ 2:18). ಅಷ್ಟುಮಾತ್ರವಲ್ಲದೆ, ಬೈಬಲ್ ನಮಗೆ ಕೆಟ್ಟ ದೇವದೂತರು ಹಾಗೂ ಒಳ್ಳೇ ದೇವದೂತರು ಇರುವ ಬಗ್ಗೆ ಕಲಿಸುತ್ತದೆ (ಮತ್ತಾಯ 25:41; 2 ಪೇತ್ರ 2:4; ಪ್ರಕಟಣೆ 12:7). ಪೌಲನು ಹೀಗೆ ಎಚ್ಚರಿಸಿದನು, "ಆದರೂ ನಾವು ನಿಮಗೆ ಸಾರಿದ ಸುವಾರ್ತೆಗೆ ವಿರುದ್ಧವಾದದ್ದನ್ನು . . . ಪರಲೋಕದಿಂದ ಬಂದ ದೇವದೂತನೇ ಆಗಲಿ ನಿಮಗೆ ಸಾರಿದರೆ ಶಾಪಗ್ರಸ್ತನಾಗಲಿ" (ಗಲಾತ್ಯ 1:8). ರೋಮಾ 8:38ರಲ್ಲಿ, ಪೌಲನ ಬಹುಶಃ "ದೇವದೂತರಷ್ಟು ಬಲಿಷ್ಠರಾಗಿದ್ದರೂ, ಯಾವ ದೇವದೂತನಾಗಲಿ ಅಥವಾ ದೇವದೂತರ ಗುಂಪಾಗಲಿ– ಒಳ್ಳೆಯವರು ಅಥವಾ ಕೆಟ್ಟವರು–ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸುವ ಶಕ್ತಿಯನ್ನು ಹೊಂದಿಲ್ಲ" ಎಂಬದಾಗಿ ಹೇಳುತ್ತಿದ್ದಿರಬೇಕು.

"ದುರಾತ್ಮಗಳಾಗಲಿ" ಎಂಬುದು ἀρχή (*archē*) ಎಂಬದರ ಬಹುವಚನವಾಗಿರುತ್ತದೆ, ಅದರ ಅಕ್ಷರಶಃ ಅರ್ಥವು "ಆರಂಭ" ಮತ್ತು ಅದು "ಅಧಿಕಾರದಲ್ಲಿ ಮುಂಚೂಣಿಯಲ್ಲಿರುವ" ಎಂಬ ಅರ್ಥವನ್ನು ಕೊಡಬಹುದಾಗಿದೆ. ಆ ಪದವನ್ನು ಮನುಷ್ಯ ಆಡಳಿತಗಾರರನ್ನು (ದೊರೆಗಳನ್ನು) ಸೂಚಿಸುವದಕ್ಕೆ ಉಪಯೋಗಿಸಲ್ಪಡುತ್ತಿತ್ತು (ತೀತನು 3:1), ಆದರೆ ಪೌಲನು ಸಾಧಾರಣವಾಗಿ ಅದನ್ನು ಆತ್ಮೀಕ ಆಡಳಿತಗಾರರನ್ನು ಸೂಚಿಸುವದಕ್ಕೆ ಉಪಯೋಗಿಸಿದನು (ಎಫೆಸ 1:21; 3:10; ಕೊಲೊಸ್ಸೆ 1:16). ಈ ನಂತರದ ವರ್ಗದಲ್ಲಿ ನಮ್ಮನ್ನು ಆತ್ಮೀಕವಾಗಿ ನಾಶಗೊಳಿಸುವದಕ್ಕೆ ಪ್ರಯತ್ನಿಸುತ್ತಿರುವ ದುರಾತ್ಮಶಕ್ತಿಗಳು ಸೇರಿರಬಹುದಾಗಿದೆ (ಎಫೆಸ 6:12). 38ನೇ ವಚನದಲ್ಲಿ, NIVಯು "ದೆವ್ವಗಳು" ಎಂದು ಹೇಳಿದರೆ, NEBಯು "ಅತಿಮಾನುಷ ಶಕ್ತಿಗಳು" ಎಂದು ಹೇಳುತ್ತದೆ. ದುರಾತ್ಮಗಳಷ್ಟು ಭಯಾನಕ ಜೀವಿಗಳಾಗಿದ್ದರೂ ಸರಿಯೇ, ಕ್ರಿಸ್ತನು ಅವುಗಳನ್ನು ಶಿಲುಬೆಯ ಮೇಲೆ ಜಯಿಸಿದನು (ಕೊಲೊಸ್ಸೆ 2:14, 15; ನೋಡಿರಿ 1 ಪೇತ್ರ 3:22); ಅವುಗಳ ಅಂತ್ಯಸ್ಥಿತಿಯು ಈಗಾಗಲೇ ನಿರ್ಧರಿಸಲ್ಪಟ್ಟಿದೆ (1 ಕೊರಿಂಥ 15:24).

ಹೇಳಿಕೆಯಲ್ಲಿ "ದೇವದೂತರಾಗಲಿ" ಮತ್ತು "ದುರಾತ್ಮಗಳಾಗಲಿ" ಎಂಬದರ ಸಂಯೋಜನವು, "ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸುವದಕ್ಕೆ ಯಾವ ಆತ್ಮೀಕ ಶಕ್ತಿಗೂ ಅಧಿಕಾರವಿಲ್ಲ" ಎಂಬದಾಗಿ ಪೌಲನು ಹೇಳುವ ರೀತಿಯಾಗಿತ್ತು. C. S. Lewis ವಿವೇಕದ ಮಾತನ್ನು ಹೇಳುತ್ತಾನೆ, "ಏನೆಂದರೆ ನಾವು ಸೈತಾನನನ್ನು ಮತ್ತು ಆತನ ಗುಲಾಮರನ್ನು ನಿರ್ಲಕ್ಷಿಸುತ್ತೇವೆ ಇಲ್ಲವೇ ಅವರಿಗೆ ಅತಿಯಾದ ಶ್ಲಾಘ್ಯವನ್ನು ಕೊಡುವ ಪ್ರವೃತ್ತಿ ಹೊಂದಿರುತ್ತೇವೆ."[161]

(5) **ಈಗಿನ ಸಂಗತಿಗಳಾಗಲಿ** ಮತ್ತು (6) **ಮುಂದಣ ಸಂಗತಿಗಳಾಗಲಿ.** ಕೆಲವರು ಈ ದಿನದ ಸಮಸ್ಯೆಗಳಿಂದ ಮುಳುಗಿ ಹೋಗಿದ್ದರೆ, ಇನ್ನು ಕೆಲವರು ನಾಳೆ ಏನಾಗುವದೋ ಎಂಬ ಆತಂಕದಲ್ಲಿ ನಡುಗುತ್ತಾರೆ. ಕಾಲವು ವಿಶ್ವಾಸಿಗಳ ವಿರುದ್ಧ ಶಕ್ತಿಹೀನವಾಗಿದೆ ಎಂಬದಾಗಿ Everett F. Harrison ಹೇಳುತ್ತಾನೆ, "ಅದು ಶೋಧನೆಗಳು ಮತ್ತು

ಬಾಧೆಗಳಿಂದ ಕೂಡಿದ ಈಗಿನ ಕಾಲವಿರಬಹುದು ಅಥವಾ ಅನಿಶ್ಚಿತತೆಗಳಿಂದ ಕೂಡಿದ ಭವಿಷ್ಯದ ಕಾಲವೇ ಆಗಿರಬಹುದು."[162] ದೇವರು ಹೀಗೆ ಹೇಳಿದ್ದಾನೆ, "ನೀನಂತು ಹೆದರಬೇಡ, ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು, ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು ನಿನಗೆ ಸಹಾಯಕೊಡುತ್ತೇನೆ; ನನ್ನ ಧರ್ಮದ ಬಲಗೈಯನ್ನು ನಿನಗೆ ಆಧಾರಮಾಡುತ್ತೇನೆ" (ಯೆಶಾಯ 41:10). ನಿಮ್ಮ ಕೈ ಎಲ್ಲಿಯ ವರೆಗೂ ದೇವರ ಕೈಯಲ್ಲಿರುತ್ತದೋ, ನಾವು "ಸ್ಥಿರಚಿತ್ತರಾಗಿಯೂ ನಿಶ್ಚಲರಾಗಿಯೂ" ಇರಬಲ್ಲೆವು (1 ಕೊರಿಂಥ 15:58). ಏನೇ ಸಂಭವಿಸಿದರೂ ಸರಿಯೇ, "ದೇವರು . . . ಹಿತಕ್ಕಾಗಿ ಎಲ್ಲಾ ಕಾರ್ಯಗಳನ್ನು ಅನುಕೂಲವಾಗುತ್ತವೆ" ಎಂಬುದನ್ನು ನಾವು ಬಲ್ಲೆವು (8:28). ಹೀಗೆ, "ಇಂದು ಸಂಭವಿಸುವದಾಗಲಿ ಅಥವಾ ನಾಳೆ ಸಂಭವಿಸಲಿರುವದೇ ಆಗಲಿ" (Phillips) ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸಲಾರದು.

(7) **ಮಹತ್ವಗಳಾಗಲಿ.** "ಮಹತ್ವಗಳಾಗಲಿ" ಎಂಬದಕ್ಕಾಗಿರುವ ಗ್ರೀಕ್ ಪದವು δύναμις (*dunamis*). ಪೌಲನು ಬೇರೊಂದು ಕಡೆಯಲ್ಲಿ ಆತ್ಮೀಕ ಶಕ್ತಿಗಳನ್ನು ಸೂಚಿಸುವದಕ್ಕಾಗಿ ಈ ಪದವನ್ನು ಉಪಯೋಗಿಸಿದನು (1 ಕೊರಿಂಥ 15:24; ಎಫೆಸ 1:21), ಅದು ಈಗಾಗಲೇ ತಿಳಿಸಲಾಗಿರುವ "ದೇವದೂತರಾಗಲಿ" ಮತ್ತು "ದುರಾತ್ಮಗಳಾಗಲಿ" ಎಂಬವುಗಳೊಂದಿಗೆ ಸಂಬಂಧಿಸಗೊಳಿಸುತ್ತದೆ. ಹೇಗೂ, ಮುಂಚಿನ ಎರಡು ಪದಗಳು ಕ್ರೈಸ್ತರ ವಿರುದ್ಧ ಕಾದಾಡುವಂತಹಹ ಎಲ್ಲಾ ಆತ್ಮೀಕ ಶಕ್ತಿಗಳನ್ನು ಒಳಗೊಂಡಿರುವದಕ್ಕೆ ಸಾಕಾದವುಗಳಾಗಿರುವದರಿಂದ, ಇಲ್ಲಿ ಪೌಲನು ಆ ಪಿಶಾಚ ಶಕ್ತಿಗಳ ಕೈಗೊಂಬೆಯಾಗಿರುವವರನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದು: ಕ್ರೈಸ್ತರನ್ನು ದಬ್ಬಾಳಿಕೆ ಮಾಡುವ ಮನುಷ್ಯ ಪ್ರಭುಗಳು. ಅಂತಹ ದಬ್ಬಾಳಿಕೆಗೊಂದು ಉದಾಹರಣೆಯೆಂದರೆ ಅಪೊಸ್ತಲರಿಗೆ ಯೆಹೂದಿ ಅಧಿಕಾರಿಗಳು "ಆ ಯೇಸುವಿನ ಹೆಸರನ್ನು ಎತ್ತಿ ಹೇಗೂ ಮಾತಾಡಬಾರದು, ಉಪದೇಶಮಾಡಲೂ ಬಾರದು" ಎಂದು ಖಂಡಿತವಾಗಿ ಅಪ್ಪಣೆ ಕೊಟ್ಟದ್ದು (ಅಪೊಸ್ತಲರ ಕೃತ್ಯಗಳು 4:18). ಇನ್ನೊಂದು ಉದಾಹರಣೆಯೆಂದರೆ ರೋಮಾಯ ಸಾಮ್ರಾಜ್ಯ, ಅದು ಕ್ರಮೇಣದಲ್ಲಿ ಕ್ರೈಸ್ತತ್ವದ ಅತ್ಯಂಥ ತೀವ್ರ ಪೀಡಕವಾಗಿ ಮಾರ್ಪಟ್ಟಿತು. ಈ ದಿನ ಸಹ, ಕೆಲವು ಕ್ರೈಸ್ತರು ಆ ರೀತಿಯ ಹಿಂಸೆಯನ್ನು ಅನುಭವಿಸುವದೆಂದರೆ ಏನೆಂಬುದನ್ನು ಬಲ್ಲವರಾಗಿದ್ದಾರೆ. ಮಾನವ ಸರ್ಕಾರಗಳಿಗೆ ವಿಶ್ವಾಸಿಗಳನ್ನು ಸೆರೆಮನೆಯೊಳಗೆ ಹಾಕುವ ಅಧಿಕಾರ ಹೊಂದಿರಬಹುದು, ಆದರೆ ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸುವದಕ್ಕೆ ಅಧಿಕಾರವನ್ನು ಹೊಂದಿರು*ವದಿಲ್ಲ*.

(8) **ಮೇಲಣ ಲೋಕವಾಗಲಿ** ಮತ್ತು (9) **ಕೆಳಗಣ ಲೋಕವಾಗಲಿ.** "ಮೇಲಣ ಲೋಕವಾಗಲಿ" ಮತ್ತು "ಕೆಳಗಣ ಲೋಕವಾಗಲಿ" ಎಂಬ ಪದಗಳು ಪೌಲನ ವಿಷಯಗಳ ಪಟ್ಟಿಯಲ್ಲಿ ಅತ್ಯಂಥ ಅಸ್ಪಷ್ಟವಾದವುಗಳಾಗಿವೆ. ಅವುಗಳು "ಗುರುತಿಸುವದಕ್ಕೆ ಅತ್ಯಂಥ ಕಠಿಣವಾಗಿರುವ ಜೋಡಿ ಪದಗಳಾಗಿವೆ"[163] ಎಂದು ಕರೆಯಲ್ಪಟ್ಟಿವೆ. ಈ ಪದಗಳು ಕೀರ್ತನೆ 139ನ್ನು ನೆನಪಿಗೆ ತರುತ್ತವೆ. ಕೀರ್ತನೆಗಾರನು, ನಾವು ಎಷ್ಟೇ ಮೇಲಕ್ಕೆ ಏರಿಹೋದರೂ ಅಥವಾ ಎಷ್ಟೇ ಪಾತಾಳಕ್ಕೆ ಇಳಿದುಹೋದರೂ, ನಾವು ದೇವರ ಸನ್ನಿಧಿಯಿಂದ ತಪ್ಪಿಸಿಕೊಳ್ಳಲಾರೆವು ಎಂದು ಘೋಷಿಸುತ್ತಾನೆ:

ನಾನು ನಿನ್ನ ಆತ್ಮಕ್ಕೆ ತಪ್ಪಿಸಿಕೊಳ್ಳುವಂತೆ ಎಲ್ಲಿಗೆ ಹೋಗಲಿ?

ನಿನ್ನ ಕಣ್ಣಿಗೆ ಮರೆಯಾಗುವಂತೆ ಎಲ್ಲಿಗೆ ಓಡಲಿ?
ಮೇಲಣ ಲೋಕಕ್ಕೆ ಏರಿಹೋದರೆ ಅಲ್ಲಿ ನೀನಿ ರುತ್ತೀ;
ಪಾತಾಳಕ್ಕೆ ಹೋಗಿ ಮಲಗಿಕೊಂಡೇನೆಂದರೆ ಅಲ್ಲಿಯೂ ನೀನಿರುವಿ.
ಅರುಣನ ರೆಕ್ಕೆಗಳನ್ನು ಕಟ್ಟಿಕೊಂಡು ಹಾರಿಹೋಗಿ
ಸಮುದ್ರದ ಕಟ್ಟಕಡೆಯಲ್ಲಿ ವಾಸಮಾಡೇನೆಂದರೆ
ಅಲ್ಲಿಯೂ ನಿನ್ನ ಕೈ ನನ್ನನ್ನು ನಡಿಸುವದು;
ನಿನ್ನ ಬಲಗೈ ನನ್ನನ್ನು ಹಿಡಿದಿರುವದು (ಕೀರ್ತನೆ 139:7-10).

ಕೆಲವು ವ್ಯಾಖ್ಯಾನಕಾರರು "ಮೇಲಣ ಲೋಕವಾಗಲಿ" ಮತ್ತು "ಕೆಳಗಣ ಲೋಕವಾಗಲಿ" ಎಂಬುವುಗಳನ್ನು ಸಾಂಕೇತಿಕ ಅರ್ಥದಲ್ಲಿ ಉಪಯೋಗಿಸುವದಕ್ಕೆ ಇಷ್ಟಪಡುತ್ತಾರೆ. ಅವರು "ಸಮೃದ್ಧಿಯ ಶಿಖರ" ಮತ್ತು "ದುರವಸ್ಥೆಯ ಆಳತೆ" "ಎಂದು ಮಾತಾಡುತ್ತಾರೆ,"[164] ಅಥವಾ ಸಂತೋಷದ ತುತ್ತತುದಿ ಮತ್ತು ಸಂಕಷ್ಟದ ಗಾಢತೆ, ಅಥವಾ ಯಶಸ್ಸಿನ ಪರಮಾವಧಿ ಮತ್ತು ಸೋಲಿನ ತಟ್ಟತಳ ಎಂದು ಮಾತಾಡುತ್ತಾರೆ. ಇತರ ಲೇಖಕರು ಗಮನಕ್ಕೆ ತರುವದೇನಂದರೆ "ಮೇಲಣ ಲೋಕವಾಗಲಿ" (ὕψωμα, *hupsōma*) ಮತ್ತು "ಕೆಳಗಣ ಲೋಕವಾಗಲಿ" (βάθος, *bathos*) ಎಂಬುದಕ್ಕಾಗಿರುವ ಗ್ರೀಕ್ ಪದಗಳು ಮೊದಲ ಶತಮಾನದ ಭಕ್ತಿಹೀನ ಜ್ಯೋತಿಷ್ಯಶಾಸ್ತ್ರದ ತತ್ವಜ್ಞಾನಗಳಲ್ಲಿ ಉಪಯೋಗಿಸಲ್ಪಡುತ್ತಿದ್ದವು. "ಮೇಲಣ ಲೋಕವಾಗಲಿ" ಎಂಬುದು ಆಕಾಶದಲ್ಲಿ ತನ್ನ ಅತ್ಯಂಥ ಎತ್ತರದ ಸ್ಥಾನದಲ್ಲಿರುವ ಒಂದು ನಕ್ಷತ್ರವನ್ನು ಸೂಚಿಸುವದಾಗಿತ್ತು, ಮತ್ತು "ಕೆಳಗಣ ಲೋಕವಾಗಲಿ" ಎಂಬುದು ಅದರ ಅತ್ಯಂಥ ತಳಮಟ್ಟದ ಸ್ಥಾನವನ್ನು ಸೂಚಿಸುವದಾಗಿತ್ತು. ನಕ್ಷತ್ರಗಳು ಇರುತ್ತಿದ್ದ ಸ್ಥಾನವು ಅವರ ಜೀವಿತದ ಮೇಲೆ ಪರಿಣಾಮ ಬೀರುತ್ತದೆಂದು ಮತ್ತು ಅವರ ಜೀವಿತದ ಪಥವನ್ನು ನಡಿಸುವದಾಗಿತ್ತೆಂದು ಸಹ ವಿಗ್ರಹಾರಾಧಕ ಜನಾಂಗದವರು ನಂಬುತ್ತಿದ್ದರು. ಬಹುಶಃ ಈ ವಿಧವಾದ ಕಾಲ್ಪನಿಕ ಅಸಂಬದ್ಧತೆಯು "ಮೇಲಣ ಲೋಕವಾಗಲಿ" ಮತ್ತು "ಕೆಳಗಣ ಲೋಕವಾಗಲಿ" ಎಂಬ ಪದಗಳಲ್ಲಿ ಸೇರ್ಪಡೆಗೊಳಿಸಲ್ಪಟ್ಟಿತ್ತು. ಮಾನವರು ಅಂತಹ ಕೀಳುಮಟ್ಟದ ಮೂಢನಂಬಿಕೆಯಿಂದ ದಬ್ಬಾಳಿಕೆಗೊಳಗಾಗುವ ಅಗತ್ಯವಿಲ್ಲವೆಂಬುದನ್ನು ಪೌಲನ ಪ್ರೇರಿತ ನುಡಿಗಳು ಸ್ಪಷ್ಟಪಡಿಸುತ್ತವೆ. ದೇವರ ಪ್ರೀತಿಯಿಂದ ನಮ್ಮನ್ನು *ಯಾವದೂ* ಅಗಲಿಸಲಾರದು.

(10) **ಬೇರೆ ಯಾವ ಸೃಷ್ಟಿಯಾಗಲಿ.** ಈ ಪಟ್ಟಿಯಲ್ಲಿರುವ ಅಂತಿಮವಾದ ಸಂಗತಿಯು ಪೌಲನ "ಇಂಥ ಕಾರ್ಯಗಳನ್ನು" ಎಂಬದನ್ನು (ಗಲಾತ್ಯ 5:21; ESV) ಮತ್ತು ನಮ್ಮ ಎಲ್ಲವನ್ನೊಳಗೊಂಡ "et cetera" ಪದವನ್ನು ಹೋಲುತ್ತದೆ. ಅದೊಂದು ರೀತಿಯಲ್ಲಿ ಪೌಲನು ಸ್ವಲ್ಪ ತಡೆದು ಈ ರೀತಿಯಲ್ಲಿ ಕೇಳುವಂತಿರುತ್ತದೆ, "ನಾನು ಏನನ್ನಾದರೂ ಬಿಟ್ಟಿದ್ದೇನೋ? ಸರಿ, ನಾನು ಅದನ್ನು ಈ ಪದಗುಚ್ಛದಿಂದ ಸಂಪೂರ್ಣವಾಗಿ ತಿಳಿಸಬಲ್ಲೆನು: 'ಬೇರೆ ಯಾವ ಸೃಷ್ಟಿಯಯಾಗಲಿ.'" NCVಯಲ್ಲಿ "ಲೋಕದಲ್ಲಿರುವ ಬೇರೆ ಯಾವದೇ ಆಗಲಿ" ಎಂದಿರುತ್ತದೆ.

ನಾವು ಜೀವನದಲ್ಲಿ ಯಾವ ಕಷ್ಟಗಳನ್ನು ಮತ್ತು ಸಮಸ್ಯೆಗಳನ್ನು ಎದುರಿಸಿದರೂ ಸರಿಯೇ, ಇವ್ಯಾವದೇ ಪರಿಸ್ಥಿಗಳಾಗಲಿ **ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ**

**ದೇವರ ಪ್ರೀತಿಯಿಂದ ಅಗಲಿಸಲಾರವೆಂದು** ನಿಶ್ಚಿಂತೆಯಿಂದಿರಿ.

ಈ ವಿಚಾರದಲ್ಲಿ ಪ್ರಕಟಗೊಳಿಸಿ ಒಂದು ಶ್ರೇಷ್ಠ ಹೇಳಿಕೆಯೊಂದಿಗೆ ಮುಕ್ತಾಯಗೊಳಿಸುವದು ಅದ್ಭುಕರವಾಗಿರುವದು. ದುಃಖಕರವಾಗಿ, ದೇವರ ಮಕ್ಕಳಲ್ಲೊಬ್ಬನು ಕಳೆದುಹೋಗುವದು ಅಸಾಧ್ಯವೆಂಬುದನ್ನು ಕಲಿಸುವದಕ್ಕೆ ಪ್ರಯತ್ನಿಸಲು ಈ ವಚನಗಳನ್ನು ಕೆಲವರು ಉಪಯೋಗಿಸುವವರಾಗಿದ್ದಾರೆ. ಆದಕಾರಣ, ಕೆಲವು ಹೆಚ್ಚುವರಿ ಮಾತುಗಳನ್ನ ಇಲ್ಲಿ ಸೇರಿಸುವದು ಅಗತ್ಯವಾಗಿರುತ್ತದೆ. ಪೌಲನು 38 ಮತ್ತು 39 ವಚನಗಳಲ್ಲಿ ಪಟ್ಟಿ *ಮಾಡದ* ಎರಡು ಸಂಗತಿಗಳೆಂದರೆ ಪಾಪ ಹಾಗೂ ಸ್ವಾರ್ಥ.[165] ಪಾಪವು ನಮ್ಮನ್ನು ದೇವರಿಂದ ಅಗಲಿಸುತ್ತದೆಂದು (ಯೆಶಾಯ 59:1, 2) ಮತ್ತು ಕ್ರೈಸ್ತರು ಪಾಪಮಯ ಜೀವಿತವನ್ನು ಜೀವಿಸುವದಕ್ಕೆ ಆಯ್ಕೆಮಾಡಿಕೊಳ್ಳಬಲ್ಲರು (ಗಲಾತ್ಯ 6:1; ಯಾಕೋಬ 5:19, 20) ಎಂದು ಬೈಬಲ್ ಕಲಿಸುತ್ತದೆ. ಈ ಅರ್ಹತೆಯನ್ನು McGarvey ಹೀಗೆ ಸೇರ್ಪಡೆಗೊಳಿಸುತ್ತಾನೆ: "(*ಶಿಷ್ಯನ ಸ್ವಚಿತ್ತದ ಹೊರತಾಗಿ*) ಇನ್ನಾವುದೂ ಆತನನ್ನು ದೇವರ ಪ್ರೀತಿಯಿಂದ ಅಗಲಿಸಲಾಗದು."[166] ಒಬ್ಬ ಶಿಷ್ಯನಿಗೆ ತನ್ನನ್ನು ದೇವರ ಪ್ರೀತಿಯಿಂದ ಅಗಲಿಸಿಕೊಳ್ಳುವುದು ಅಸಾಧ್ಯವಾಗಿದ್ದಲ್ಲಿ, ಯೂದನು ಇದನ್ನು ಬರೆದಿರುತ್ತಿದ್ದಿಲ್ಲವೇನೋ "ನಿಮ್ಮನ್ನು ದೇವರ ಪ್ರೀತಿಯಲ್ಲಿ *ಕಾಪಾಡಿಕೊಳ್ಳಿರಿ"* (ಯೂದನು 21; ಒತ್ತಿ ಹೇಳಿದ್ದು ನನ್ನದು).

ಹೇಗೂ, ನಾವು ನಕಾರಾತ್ಮಕತೆಯಲ್ಲಿಯೇ ತಲ್ಲೀನರಾಗದಿರೋಣ. ಬದಲಾಗಿ, ದೇವರ ನಂಬಿಗಸ್ತ ಮಕ್ಕಳಾಗಿ, ನಮ್ಮನ್ನು ಆತನ ಸರಿಸಾಟಿಯಿಲ್ಲದ ಪ್ರೀತಿಯಿಂದ ಯಾವದೂ ಅಗಲಿಸಲಾರದು ಎಂಬದಕ್ಕಾಗಿ ಸಂಭ್ರಮಿಸೋಣ!

# ಅನ್ವಯಿಸುವಿಕೆ

## ಪವಿತ್ರಾತ್ಮನನ್ನು ಪರಿಚಯಿಸುವದು (ಅಧ್ಯಾಯ 8)

"ಪವಿತ್ರಾತ್ಮ" (πνεῦμα, *pneuma*) ಎಂಬ ಪದವು—ಕೆಲವು ಸಾರಿ ಚಿಕ್ಕ "s" ದೊಂದಿಗೆ, ಆದರೆ ಸಾಧಾರಣವಾಗಿ "S"—ರೋಮಾ 8ನೇ ಅಧ್ಯಾಯದಲ್ಲಿ ಇಪ್ಪತ್ತುಕ್ಕೂ ಅಧಿಕ ಸಾರಿ ಕಾಣಿಸಿಕೊಳ್ಳುತ್ತದೆ. ದೊಡ್ಡ "S"ನೊಂದಿಗೆ ಉಚ್ಚರಿಸಲ್ಪಟ್ಟಾಗ, ಆ ಪದವು ಪವಿತ್ರಾತ್ಮನನ್ನು ಸೂಚಿಸುತ್ತದೆ. ರೋಮಾ 8ನೇ ಅಧ್ಯಾಯದಲ್ಲಿ ಪವಿತ್ರಾತ್ಮ ಮತ್ತು ಆತನ ಕೆಲಸವು ಅತ್ಯಂಥ ಪ್ರಧಾನವಾಗಿರುವದರಿಂದ, ಒಂದು ಪರಿಚಯಾತ್ಮಕ ಅಧ್ಯಯನವು ಸೂಕ್ತವಾಗಿರುತ್ತದೆ.

ಅನೇಕರಿಗೆ ಪವಿತ್ರಾತ್ಮನು ಯಾರು ಮತ್ತು ಆತನ ಕೆಲಸವೇನು ಎಂಬ ವಿಷಯದಲ್ಲಿ ಸ್ಪಷ್ಟವಾದ ತಿಳುವಳಿಕೆಯಿರುವದಿಲ್ಲ. KJVಯು "Holy Ghost" ಎಂದು ಉಪಯೋಗಿಸುತ್ತದೆ (5:5; 9:1; 14:17; 15:13, 16). "Ghost" ಎಂಬುದು ಹಳೇ ಆಂಗ್ಲದ ಒಂದು ಪದವಾಗಿದ್ದು "ಆತ್ಮ" ಎಂಬರ್ಥವಾಗಿದೆ, ಆದರೆ ಇಂದು ಈ "ghost" ಎಂಬ ಪದವು ಭಯಹುಟ್ಟಿಸುವ, ನಿಗೂಢವಾದ ಚಿತ್ರಗಳನ್ನು ಕಣ್ಣುಗಳ ಮುಂದೆ ತರುತ್ತದೆ. ಕೆಲವರು "ಪವಿತ್ರಾತ್ಮ" ಎಂಬ ಪದವನ್ನು ಒಂದು ಸುಧಾರಿತ ಸ್ಥಿತಿ ಎಂದು ಪರಿಗಣಿಸುವದಿಲ್ಲ ಯಾಕೆಂದರೆ ಒಂದು ಆತ್ಮಕ್ಕೆ (ಭೂತಕ್ಕೆ) "ಮಾಂಸವೂ ಎಲುಬುಗಳೂ" ಇರುವದಿಲ್ಲ (ಲೂಕ 24:39). ಹೇಗೂ, "ದೇವರು ಆತ್ಮಸ್ವರೂಪನು" (ಯೋಹಾನ 4:24) ಎಂಬದನ್ನು ನಾವು

ಮನಸ್ಸಿನಲ್ಲಿಟ್ಟುಕೊಳ್ಳಬೇಕು, ಆಗ ಬಹುಶಃ ನಾವು ನಮ್ಮ ತಿಳುವಳಿಕೆಯಲ್ಲಿ ಒಂದು ದೊಡ್ಡ ಜಿಗಿತವನ್ನು ಕಾಣುವೆವು.

ಒಂದು ಸಮಸ್ಯೆಯೆಂದರೆ ಪವಿತ್ರಾತ್ಮನಿಗೆ ಶಾಸ್ತ್ರಗಳಲ್ಲಿ ಒಂದು ಸಮರ್ಪಕವಾದ ಪ್ರತ್ಯೇಕ ಹೆಸರನ್ನು ಕೊಟ್ಟಿರುವದಿಲ್ಲ. ದೇವರು (ತಂದೆಯಾದ ದೇವರು) ಹಳೆ ಒಡಂಬಡಿಕೆಯಲ್ಲಿ ವೈವಿಧ್ಯಮಯವಾದ ಬಿರುದುಗಳಿಂದ ತಿಳಿಯಲ್ಪಟ್ಟಿದ್ದಾನೆ; ಯೇಸು (ಕುಮಾರನು) ಯೇಸುವೆಂದು, ಕ್ರಿಸ್ತನೆಂದು, ಮತ್ತು ವಾಕ್ಯವೆಂದು (ಇನ್ನಿತರ ಹೆಸರುಗಳೊಳಗೆ) ಕರೆಯಲ್ಪಟ್ಟಿದ್ದಾನೆ; ಆದರೆ ಪವಿತ್ರಾತ್ಮನು ವರ್ಣನಾತ್ಮಕ ಬಿರುದುಗಳಿಂದ ಕರೆಯಲ್ಪಟ್ಟಿದ್ದಾನೆ. "ಪವಿತ್ರಾತ್ಮನು" ಎಂಬ ಪದಗುಚ್ಛವು ಸಹ ಕೇವಲ "ಪರಿಶುದ್ಧವಾಗಿರುವ ಆತ್ಮನು [ἅγιος, *hagios*]" ಎಂಬರ್ಥವನ್ನು ಕೊಡುತ್ತದೆ. ಆ ಪದಗುಚ್ಛದ ವಿಷಯದಲ್ಲಿ ಪ್ರತ್ಯೇಕವಾದದ್ದೇನೂ ಇರುವದಿಲ್ಲ ಯಾಕೆಂದರೆ ದೇವರು ಸಹ ಒಬ್ಬ ಆತ್ಮನಾಗಿದ್ದು ಪರಿಶುದ್ಧನಿರುತ್ತಾನೆ, ಅದೇ ರೀತಿಯಲ್ಲಿಯೇ ಭೂಮಿಗೆ ಬರುವದಕ್ಕೆ ಮುಂಚೆ ಯೇಸುವು ಸಹ ಇದ್ದನು. ರೋಮಾ 8ನೇ ಅಧ್ಯಾಯದಲ್ಲಿ, ಪವಿತ್ರಾತ್ಮನು ದೇವರಾತ್ಮನು ಮತ್ತು ಕ್ರಿಸ್ತನ ಆತ್ಮನು ಎಂದು ಕರೆಯಲ್ಪಟ್ಟಿದ್ದಾನೆ, ಆದರೆ ಪುನಃ ಇವುಗಳು ಕೇವಲ ವರ್ಣನಾತ್ಮಕ ಪದಗಳಾಗಿವೆ. ಪವಿತ್ರಾತ್ಮನಿಗೆ ನಾವು "ಒಂದು ಹೆಸರು" ಎಂದು ಕರೆಯಲ್ಪಡುವದನ್ನು ಏಕೆ ಕೊಡಲ್ಪಟ್ಟಿರುವದಿಲ್ಲ ಎಂಬುದನ್ನು ಬೈಬಲ್ ವಿವರಿಸುವದಿಲ್ಲ. ಬಹುಶಃ ಅದಕ್ಕೆ ಕಾರಣವು ಆತನ ಉದ್ದೇಶವು ತನ್ನನ್ನು ಪ್ರಕಟಿಸಿಕೊಳ್ಳುವದಾಗಿರಲಿಲ್ಲ ಎಂಬುದಿರಬಹುದು. ಹಳೇ ಒಡಂಬಡಿಕೆಯ ಕಾಲದಲ್ಲಿ, ಆತನು ತಂದೆಯನ್ನು ಪ್ರಕಟಗೊಳಿಸಿದನು; ಹೊಸ ಒಡಂಬಡಿಕೆಯಲ್ಲಿ, ಆತನು ಕುಮಾರನನ್ನು ಪ್ರಕಟಗೊಳಿಸಿದನು. ಒಂದು ಅರ್ಥದಲ್ಲಿ, ಆತನು ಯಾವಾಗಲೂ ತೆರೆಮರೆಯಲ್ಲಿಯೇ ಕೆಲಸ ಮಾಡಿದ್ದಾನೆ.

ಪವಿತ್ರಾತ್ಮನ ಕುರಿತಾಗಿ ನಮಗೆ *ಎಲ್ಲವನ್ನೂ* ತಿಳಿದುಕೊಳ್ಳಲು ಆಗದು, ಆದರೆ *ಕೆಲವು ಸಂಗತಿಗಳನ್ನು* ತಿಳಿದುಕೊಳ್ಳಬಲ್ಲೆವು—ಮತ್ತು ಇವುಗಳು ನಮಗೆ ತಿಳಿದಿರಬೇಕಾದ ಸಂಗತಿಗಳಾಗಿವೆ. ಈ ಕ್ಲುಪ್ತ ಅಧ್ಯಯನದಲ್ಲಿ, ನಾವು ಪವಿತ್ರಾತ್ಮನ ಗುಣಲಕ್ಷಣಗಳಲ್ಲಿ ಕೆಲವೊಂದನ್ನು ನೋಡುವ ಮೂಲಕ ಆತನನ್ನು ಪರಿಚಯಗೊಳಿಸಲಿದ್ದೇವೆ.

*ಆತನು ಒಬ್ಬ ವ್ಯಕ್ತಿಯಾಗಿದ್ದಾನೆ.* ಯೋಹಾನ 16:13, 14ರಲ್ಲಿ, ಪವಿತ್ರಾತ್ಮನು ಒಂಬತ್ತು ಸಾರಿ "ಅವನು" ಮತ್ತು "ಆತನ" ಎಂಬ ನಾಮಪದಗಳಿಂದ NASB ತರ್ಜುಮೆಯಲ್ಲಿ ಸೂಚಿಸಲ್ಪಟ್ಟಿದ್ದಾನೆ. ಈ ಎರಡು ವಚನಗಳ ಗ್ರೀಕ್ ವಾಕ್ಯಭಾಗದಲ್ಲಿ, ಪವಿತ್ರಾತ್ಮನನ್ನು ಸೂಚಿಸುವ ನಾಮಪದಗಳು ಸಹ ಪುಲ್ಲಿಂಗದಲ್ಲಿರುತ್ತವೆ ಮತ್ತು ಸಂಖ್ಯೆಯಲ್ಲಿ ಏಕವಚನವಾಗಿರುತ್ತವೆ. ಒಬ್ಬರು ಹೀಗೆ ಹೇಳಿದ್ದಾರೆ,

> ಪವಿತ್ರಾತ್ಮನು ಬೈಬಲಿನಲ್ಲಿ ಒಬ್ಬ ದೈವಸಂಭೂತನಾದ "ಆತನು" ಎಂದು ಪ್ರಕಟಿಸಲ್ಪಟ್ಟಿದ್ದಾನೆ ಆದರೆ ಎಂದಿಗೂ "ಅದು" ಎಂದು ಮಹಿಮೆಗೊಳಿಸಲ್ಪಟ್ಟಿಲ್ಲ. ಆತನು ಒಬ್ಬ ಸಜೀವನಾದ, ಸಕ್ರಿಯನಾದ ವ್ಯಕ್ತಿಯೆಂದು ಮಾತಾಡಲ್ಪಟ್ಟಿದ್ದಾನೆ, ಹೊರತು ಕೇವಲ ಒಂದು ಪ್ರಭಾವ ಎಂದಲ್ಲ. ಆತನು ಪ್ರಭಾವಕ್ಕಿಂತ ದೊಡ್ಡ ಪ್ರಭಾವವಾಗಿದ್ದಾನೆ. ಆತನಿಗೆ ದೊಡ್ಡ ಶಕ್ತಿಯಿದೆ, ಆದರೆ ಆತನು ಕೇವಲ ಒಂದು ಶಕ್ತಿಯಷ್ಟೇ ಆಗಿರುವದಿಲ್ಲ.

ಪವಿತ್ರಾತ್ಮನು ಒಬ್ಬ ವ್ಯಕ್ತಿಯು ಮಾಡಬಲ್ಲ ಈ ಎಲ್ಲಾ ಚಟುಚಟಿಕೆಗಳನ್ನು ಮಾಡುವದಕ್ಕೆ ಸಮರ್ಥನಾಗಿದ್ದಾನೆ:

ಆದರಿಸುವದು (ಯೋಹಾನ 14:26; KJV).
ಉಪದೇಶಿಸುವದು (ಯೋಹಾನ 14:26).
ಸಾಕ್ಷಿ ಹೇಳುವದು (ಯೋಹಾನ 15:26; KJV).
ಗದರಿಸುವದು (ಯೋಹಾನ 16:8; KJV).
ದಾರಿನಡಿಸುವದು (ಯೋಹಾನ 16:13).
ತಡೆಯುವದು (ಅಪೊಸ್ತಲರ ಕೃತ್ಯಗಳು 16:6, 7).
ಸಾಕ್ಷಿಯಾಗಿರುವದು (ರೋಮಾ 8:16).
ಬೇಡಿಕೊಳ್ಳುವುದು (ರೋಮಾ 8:27).
ಹುಡುಕುವದು (1 ಕೊರಿಂಥ 2:10).
ಮಾತಾಡುವದು (1 ತಿಮೊಥೆ 4:1).

ಕೆಲವು ರೀತಿಗಳಲ್ಲಿ, ಪವಿತ್ರಾತ್ಮನು *ನಮ್ಮ ಹಾಗೆಯೇ* ಒಬ್ಬ ವ್ಯಕ್ತಿಯಾಗಿದ್ದಾನೆ. ನಾವು ದೇವರ ಸ್ವರೂಪದಲ್ಲಿ ನಿರ್ಮಿಸಲ್ಪಟ್ಟೆವು, ಅದರಲ್ಲಿ ಪವಿತ್ರಾತ್ಮನ ಸ್ವರೂಪದಲ್ಲಿ ರೂಪಿಸಲ್ಪಡುವದು ಸಹ ಸೇರಿರುತ್ತದೆ.[167] ನಮ್ಮ ಹಾಗೆಯೇ, ಪವಿತ್ರಾತ್ಮನು ಈ ಕೆಳಗಿನವುಗಳನ್ನು ಹೊಂದಿದ್ದಾನೆ:

ಒಂದು ಮನೋಭಾವವು (ರೋಮಾ 8:27).
ತಿಳಿವಳಿಕೆ (1 ಕೊರಿಂಥ 2:11).
ಒಂದು ಚಿತ್ತ (1 ಕೊರಿಂಥ 12:11).
ಭಾವನೆಗಳು, ಉದಾಹರಣೆಗೆ ಪ್ರೀತಿ (ರೋಮಾ 15:30).
ಸಂವೇದನೆಗಳು. ಆತನು ಎದುರಿಸಲ್ಪಡಬಲ್ಲನು (ಅಪೊಸ್ತಲರ ಕೃತ್ಯಗಳು 7:51), ಆತನಿಗೆ ಸುಳ್ಳು ಹೇಳಲ್ಪಡಬಹುದು (ಅಪೊಸ್ತಲರ ಕೃತ್ಯಗಳು 5:3), ಮತ್ತು ನಿಂದನೆಗೊಳಗಾಗಬಲ್ಲನು (ಇಬ್ರಿಯ 10:29). ಆತನು ದೂಷಣೆ ಒಳಗಾಗಬಲ್ಲನು (ಮತ್ತಾಯ 12:31). ಆತನು ದುಃಖಕ್ಕೊಳಗಾಗಬಲ್ಲನು (ಎಫೆಸ 4:30).

ನಮಗೆ ಪವಿತ್ರಾತ್ಮನು "ಹೇಗೆ ಕಾಣಿಸುತ್ತಾನೆ" ಎಂಬುದನ್ನು ತಿಳಿದಿದ್ದರೆ ಚೆನ್ನಾಗಿತ್ತೆಂದು ಹಾರೈಸಬಹುದು, ಆದರೆ ಮತ್ತೊಬ್ಬ ವ್ಯಕ್ತಿಯೊಂದಿಗೆ ಪರಿಚಯ ಬೆಳೆಸಿಕೊಳ್ಳುವದಕ್ಕೆ ಅದು ಅತ್ಯಂಥ ಪ್ರಾಮುಖ್ಯವಾದ ಕಾರಣಾಂಶವಾಗುವದಿಲ್ಲ. ಒಬ್ಬ ವ್ಯಕ್ತಿಯ ಮುಖದ ಪರಿಚಯಕ್ಕಿಂತಲೂ ಆತನ ಹೃದಯದ ಪರಿಚಯವನ್ನು ಮಾಡಿಕೊಂಡರೆ ಅದು ಆ ಮನುಷ್ಯನ ಬಗ್ಗೆ ಬಹಳಷ್ಟನ್ನು ತಿಳಿಸಿ ಕೊಡುತ್ತದೆ.

*ಆತನು ಒಬ್ಬ ದೈವಿಕತೆಯುಳ್ಳ ವ್ಯಕ್ತಿ.* ಆತನು ತಂದೆ ಮತ್ತು ಕುಮಾರನ ಹಾಗಿದ್ದಾನೆ. ಆತನು ಕರೆಯುವ KJV ಪ್ರಕಾರ "ದೈವತ್ವ" ದ ಭಾಗವಾಗಿದ್ದಾನೆ (ಅಪೊಸ್ತಲರ ಕೃತ್ಯಗಳು 17:29; ರೋಮಾ 1:20; ಕೊಲೊಸ್ಸೆ 2:9). ದೇವರು ಮತ್ತು ಯೇಸುವಿಗೆ ಏನೇನು ಎಣಿಸಲಾಗುತ್ತದೋ ಅದು ಪವಿತ್ರಾತ್ಮನಿಗೂ ಎಣಿಸಲಾಗುತ್ತದೆ: ಆತನು ಜೀವವಾಗಿದ್ದಾನೆ (ಯೋಬನು 33:4; ಯೋಹಾನ 3:5, 6); ಆತನು ಬೆಳಕು (ಅಥವಾ ಪ್ರಕಾಶ; 1 ಕೊರಿಂಥ 2:9-11); ಮತ್ತು ಆತನು ಪ್ರೀತಿಸ್ವರೂಪದನು (ರೋಮಾ 5:3-5; 15:30). ಈಗ ನಾವು

ಆತನ ಕೆಲವು ದೈವಿಕ ಗುಣಗಳನ್ನು ಕುರಿತು ನೋಡೋಣ. ಆತನು ಹೀಗಿರುವನೆಂದು ಬಣ್ಣಿಸಲ್ಪಟ್ಟಿದ್ದಾನೆ . . .

ನಿತ್ಯನು (ಇಬ್ರಿಯ 9:14).
ಸರ್ವಜ್ಞಾನಿ (1 ಕೊರಿಂಥ 2:10, 11).
ಸರ್ವಶಕ್ತನು (ಶಕ್ತಿ ಮತ್ತು ಪವಿತ್ರಾತ್ಮನ ನಡುವೆ ಅನೇಕ ಸಾರಿ ಸಂಬಂಧವಿರುತ್ತದೆ; ಮೀಕನು 3:8; ಅಪೊಸ್ತಲರ ಕೃತ್ಯಗಳು 1:8).
ಸರ್ವವ್ಯಾಪಿ (ಕೀರ್ತನೆ 139:7, 8).
ಒಳ್ಳೆಯವನು (ನೆಹಮೀಯ 9:20).

ತಂದೆ ಮತ್ತು ಕುಮಾರನ ಜೊತೆಯಾಗಿ, ಪವಿತ್ರಾತ್ಮನು ನಮ್ಮನ್ನು ನಿರ್ಮಿಸಿದನು ಮತ್ತು ಆಶೀರ್ವದಿಸಿದನು. ದೇವರು ಮತ್ತು ಯೇಸುವನ್ನು ಗ್ರಹಿಸಿಕೊಳ್ಳುವುದು ಎಷ್ಟು ಕಠಿಣವಲ್ಲವೋ ಹಾಗೆಯೇ ಪವಿತ್ರಾತ್ಮನನ್ನು ಗ್ರಹಿಸಿಕೊಳ್ಳುವದು ಸಹ ಕಠಿಣವಾಗಿರಕೂಡದು.

*ಆತನು ಒಬ್ಬ ದೈವತ್ವವುಳ್ಳ ವ್ಯಕ್ತಿ: "ತ್ರೈಯೇಕತ್ವ"ದಲ್ಲಿ ಒಬ್ಬನು.* "ತ್ರೈಯೇಕತ್ವ"ವು ಬೈಬಲಿನ ಪದವಲ್ಲ, ಆದರೆ ಅದು ಬೈಬಲ್‌ನ ವಿಚಾರವನ್ನು ವ್ಯಕ್ತಪಡಿಸುತ್ತದೆ. "ತ್ರೈಯೇಕತ್ವ" ಎಂಬುದು "ತ್ರೈ [ಮೂರು]" ಜೊತೆಗೆ "ಐಕ್ಯತೆ [ಏಕತೆ]" ಎಂಬದರಿಂದ ಬರುತ್ತದೆ. ಅದರರ್ಥವು "ಒಬ್ಬರಲ್ಲಿ ಮೂವರು."

ತಂದೆ, ಕುಮಾರ, ಮತ್ತು ಪವಿತ್ರಾತ್ಮರು ಮೂವರು ಪ್ರತ್ಯೇಕವಾದ ವ್ಯಕ್ತಿಗಳಾಗಿದ್ದಾರೆ (ಮತ್ತಾಯ 3:16, 17; 28:19; ಯೋಹಾನ 14:16, 17; ರೋಮಾ 15:30; 2 ಕೊರಿಂಥ 13:14). ಅದೇ ವೇಳೆಯಲ್ಲಿ, "ಯೆಹೋವನು ಒಬ್ಬನೇ ದೇವರು!" (ಧರ್ಮೋಪದೇಶಕಾಂಡ 6:4).[168] ಅದಕ್ಕೆ ಈ ಭೂಮಿಯಲ್ಲಿ ಹೋಲಿಸಬಹುದಾದದ್ದು ಯಾವದೂ ಇಲ್ಲ, ಆದರೆ ಒಂದು ಕಾರ್ಯವು ಹೇಗೆ ಒಂದೇ ಮತ್ತು ಅದೇ ವೇಳೆಯಲ್ಲಿ, ಒಂದಕ್ಕಿಂತ ಅಧಿಕವಾಗಿರುವದಕ್ಕೆ ಸಾಧ್ಯವೆಂಬುದನ್ನು ವಿವರಿಸುವದಕ್ಕೆ ವಿವಿಧ ರೀತಿಯ ದೃಷ್ಟಾಂತಗಳು ಉಪಯೋಗಿಸಲ್ಪಟ್ಟಿರುತ್ತವೆ. ಆ ವಿಧದಲ್ಲಿ ಉಪಯೋಗಿಸಲ್ಪಟ್ಟಿರುವ ಒಂದು ದೃಷ್ಟಾಂತವೆಂದರೆ ತ್ರಿಕೋನ: ಅದು ಮೂರು ಕೋನಗಳನ್ನು ಹೊಂದಿದ್ದು ಆಕಾರದಲ್ಲಿ ಒಂದೇ ಆಗಿರುತ್ತದೆ. ಕೆಲವು ಸಾರಿ ಉಪಯೋಗಿಸಲಾಗುವ ಮತ್ತೊಂದು ದೃಷ್ಟಾಂತವೆಂದರೆ ವಿವಾಹ. ವಿವಾಹದಲ್ಲಿ, ಇಬ್ಬರು ಒಂದೇ ಶರೀರವಾಗುತ್ತಾರೆ (ಆದಿಕಾಂಡ 2:24; ಮತ್ತಾಯ 19:5, 6; ಎಫೆಸ 5:31). ಗಂಡ ಮತ್ತು ಹೆಂಡತಿ ಒಂದೇ ಶರೀರವಾಗಿದ್ದಾರೆ, ಆದರೆ ಅವರು ಇಬ್ಬರು ವ್ಯಕ್ತಿಗಳಾಗಿ ಉಳಿಯುತ್ತಾರೆ.

ದೈವತ್ವದ ಮೂವರು ಸದಸ್ಯರು ತಿರುಳಿನಲ್ಲಿ ಮತ್ತು ಸಂಕಲ್ಪದಲ್ಲಿ ಒಂದೇ ಆಗಿದ್ದಾರೆ, ಆದರೆ ಪ್ರತಿಯೊಬ್ಬನಿಗೂ ಆತನದ್ದೇ ಆಗಿರುವ ಕಾರ್ಯವ್ಯಾಪ್ತಿ ಇರುವ ಸಾಧ್ಯತೆಯಿದೆ. ಒಬ್ಬ ಲೇಖಕನು ಅಭಿಪ್ರಾಯ ಪಡುವದೇನೆಂದರೆ, ತಂದೆಯು ಯೋಜನೆ ರೂಪಿಸುವಾತನು, ಕುಮಾರನು ಆ ಯೋಜನೆಯನ್ನು ಜಾರಿಗೊಳಿಸುವಾತನು, ಮತ್ತು ಪವಿತ್ರಾತ್ಮನು ಒಬ್ಬ ಸಂಘಟಕನು. ಮತ್ತೊಬ್ಬ ಲೇಖಕನು ತಂದೆಯನ್ನು ಒಬ್ಬ ವಾಸ್ತುಶಿಲ್ಪಿ ಎಂದೂ, ಕುಮಾರನು ನಿರ್ಮಾಣಿಕನೆಂದೂ, ಮತ್ತು ಪವಿತ್ರಾತ್ಮನನ್ನು ಪೂರ್ಣಗೊಳಿಸುವಾತನೆಂದೂ ಸೂಚಿಸುತ್ತಾನೆ. ಉದಾಹರಣೆಗೆ, ಒಂದು ಭೌತಿಕ ನಿರ್ಮಾಣದಲ್ಲಿ, ತಂದೆಯು

ನಿಶ್ಚಯವಾಗಿಯೂ ಅದರ ಯೋಜನೆಯನ್ನು ರೂಪಿಸಿದನು; ಆದರೆ ಸಮಸ್ತವೂ ಕುಮಾರನ ಮೂಲಕ ಸೃಷ್ಟಿಸಲ್ಪಟ್ಟಿತೆಂದು ಇಬ್ರಿಯ 1:2 ಮತ್ತು ಯೋಹಾನ 1:3 ನಮಗೆ ತಿಳಿಸುತ್ತವೆ, ಮತ್ತು ಪವಿತ್ರಾತ್ಮನು ಅಸ್ತವ್ಯಸ್ತತೆಯನ್ನು ಕ್ರಮಗೊಳಿಸಿದನೆಂದು ಆದಿಕಾಂಡ 1:2 ಸೂಚಿಸಬಹುದಾಗಿದೆ (ಕೀರ್ತನೆ 104:30).

"ಆತ್ಮೀಕ ಸೃಷ್ಟಿ"ಯ ವಿಷಯದಲ್ಲಿ—ರಾಜ್ಯದ/ಸಭೆಯ ಸ್ಥಾಪನೆ ಮತ್ತು ಸುವಾರ್ತೆಯ ಸಾರೋಣ—ದೇವರೇ ಅದರ ಯೋಜನೆ ಮಾಡಿದನು (ಎಫೆಸ 3:10, 11) ಮತ್ತು ಯೇಸು ಆ ಯೋಜನೆಯನ್ನು ಕಾರ್ಯರೂಪಕ್ಕೆ ತಂದನು (ಯೋಹಾನ 4:34; 5:19; 8:28; 12:49), ಆದರೆ "ಸಂಘಟಿಸುವ ಕಾರ್ಯ"ವನ್ನು ಪವಿತ್ರಾತ್ಮನು ಮಾಡಿದನು. ಆತನು ಕನ್ಯಾಜತ್ವದಲ್ಲಿ (ಯೇಸು ಕನ್ಯೆಯಲ್ಲಿ ಹುಟ್ಟುವಿಕೆ), ಸಿಮೆಯೋನ ಮತ್ತು ಅನ್ನಳ ಮಾತುಗಳನ್ನು ಪ್ರೇರೆಪಿಸುವದರಲ್ಲಿ, ಸ್ನಾನಿಕನಾದ ಯೋಹಾನನ ಸೇವೆಯಲ್ಲಿ, ಯೇಸುವಿನ ದೀಕ್ಷಾಸ್ನಾನದ ವೇಳೆಯಲ್ಲಿ ಆತನನ್ನು ಗುರುತಿಸುವಿಕೆಯಲ್ಲಿ, ಯೇಸುವನ್ನು ಅರಣ್ಯದೊಳಗೆ ನಡಿಸುವದರಲ್ಲಿ, ಮತ್ತು ಕರ್ತನ ಅದ್ಭುತವಾದ ಸೇವೆಯಲ್ಲಿ ಸಕ್ರಿಯನಾಗಿದ್ದನು. ಈತನು ಯೇಸುವಿನಿಂದ ಕಳುಹಿಸಲ್ಪಡುವನೆಂದು ಆತನ ಶಿಷ್ಯರಿಗೆ ವಾಗ್ದಾನ ಮಾಡಲ್ಪಟ್ಟಿದ್ದನು ಮತ್ತು ಪಂಚಾಶತ್ತಮ ದಿನದಂದು ರಾಜ್ಯವನ್ನು/ಸಭೆಯನ್ನು ಆರಂಭಗೊಳಿಸುವದಕ್ಕೆ ಆತನು ಇಳಿದು ಬಂದನು. ಆತನು ನಂತರ ಜನರು ರಕ್ಷಣೆ ಹೊಂದುವಂತಾಗುವದಕ್ಕೆ ಅಪೊಸ್ತಲರನ್ನು ಸುವಾರ್ತೆಯನ್ನು ಸಾರುವಂತೆ, ಮತ್ತು ಸುವಾರ್ತೆಯನ್ನು ಬರೆದಿಡುವಂತೆ ಹೊಸ ಒಡಂಬಡಿಕೆಯ ಲೇಖಕರನ್ನು ಪ್ರೇರಿಸಿದನು. ನಮ್ಮ ರಕ್ಷಣೆಯ ವಿಷಯಕ್ಕೆ ಸಂಬಂಧಿಸಿದಂತೆ, ದೇವರು ಅದನ್ನು ಆಲೋಚಿಸಿದನು, ಯೇಸು ಅದನ್ನು ಸಾಧಿಸಿದನು, ಮತ್ತು ಪವಿತ್ರಾತ್ಮನು ಅದನ್ನು ಉಪದೇಶಿಸಿದನು ಎಂದು ಹೇಳಲಾಗುತ್ತದೆ.

*ಮುಕ್ತಾಯ.* ನಾವು ಪರಲೋಕದಲ್ಲಿರುವ ಮೂವರು ಪರಿಶುದ್ಧರ ಪ್ರಸನ್ನತೆಯಲ್ಲಿ ಆನಂದಿಸುವ ತನಕ ನಾವು ಪವಿತ್ರಾತ್ಮನನ್ನು ಎಂದಿಗೂ ತಿಳಿದುಕೊಳ್ಳಲಾರೆವು. ಹೇಗೂ, ಈಗ ನಾವು ಏನನ್ನು ಅರ್ಥಮಾಡಿಕೊಳ್ಳಲು ಸಾಧ್ಯವೋ ಅದನ್ನು ಗ್ರಹಿಸಿಕೊಳ್ಳತಕ್ಕದ್ದು. ರೋಮಾ 8ನೆ ಅಧ್ಯಾಯವು ನಮಗೆ ಪವಿತ್ರಾತ್ಮನ ಮತ್ತು ಆತನ ಕ್ರಿಯೆಗಳ ಕುರಿತಾಗಿ ಕಲಿತುಕೊಳ್ಳುವಂತೆ ಸಹಾಯ ಮಾಡುವದಕ್ಕೆ ಒಂದು ಅಮೂಲ್ಯವಾದ ಮೂಲವಾಗಿರುತ್ತದೆ.

## ಪವಿತ್ರಾತ್ಮನು ನಮಗೋಸ್ಕರ ಏನು ಮಾಡಲು ಶಕ್ತನು (ಅಧ್ಯಾಯ 8)

ನಾವು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ, ದೇವರು ನಮಗೆ ಪವಿತ್ರಾತ್ಮನನ್ನು ವರದಾನವಾಗಿ ದಯಪಾಲಿಸಿದನು (ಅಪೊಸ್ತಲರ ಕೃತ್ಯಗಳು 2:38; 5:32; ನೋಡಿರಿ ಗಲಾತ್ಯ 4:6). ಈ ವರದಾನದ ಉದ್ದೇಶವು, ಆದಿ ಸಭೆಯಲ್ಲಿ ಸಹ, ಅದ್ಭುತಗಳನ್ನು ನಡಿಸುವಂತೆ ಕ್ರೈಸ್ತರನ್ನು ಶಕ್ತಗೊಳಿಸುವದು ಆಗಿರಲಿಲ್ಲ. (ಈ ವರವು ಎಲ್ಲಾ ಕ್ರೈಸ್ತರಿಗೆ ಇತ್ತು, ಆದರೆ ಎಲ್ಲರೂ ಅದ್ಭುತಗಳನ್ನು ನಡಿಸಲಾರರು.) ಈ ವರದ ಉದ್ದೇಶವೇನಾಗಿತ್ತು? ಇಂದು ಕ್ರೈಸ್ತರಾದ ನಮಗೆ ಪವಿತ್ರಾತ್ಮನು ಏನು ಮಾಡುವನು?

ಕ್ರೈಸ್ತನು ಪರಕೀಯ ಪಾಪಿಯಲ್ಲಿ ಇಲ್ಲದ್ದೊಂದನ್ನು ಹೊಂದಿದವನಾಗಿದ್ದಾನೆ. ಪವಿತ್ರಾತ್ಮನು ಕ್ರೈಸ್ತನಿಗೋಸ್ಕರ *ಎಲ್ಲವನ್ನೂ* ಮಾಡುವದಿಲ್ಲ, ಆದರೆ *ಏನೋ ಒಂದನ್ನು* ಮಾಡುವನು. ಫಿಲಿಪ್ಪಿ 1:19ರಲ್ಲಿ, ". . . ಹೇರಳವಾಗಿ ದಯಪಾಲಿಸುವ ಆತ್ಮನ

ಸಹಾಯದಿಂದಲೂ" ಎಂಬ ವಿಷಯವನ್ನು ಪೌಲನು ಹೇಳುತ್ತಾನೆ. "ದಯಪಾಲಿಸುವ" ಎಂಬದರ (ἐπιχορηγία, *epichorēgia*) ಅನುವಾದಿತ ಪದವು "*ಹೇರಳವಾದ* ದಯಪಾಲಿಸುವಿಕೆ"ಯನ್ನು ಸೂಚಿಸುತ್ತದೆ. ದೇವರು ಪವಿತ್ರಾತ್ಮನ ಮೂಲಕ ನಮಗೆ ಹೇರಳವಾಗಿ ಒದಗಿಸಿರುತ್ತಾನೆ.

ದೇವರ ಮಕ್ಕಳ ಜೀವಿತದಲ್ಲಿ ಪವಿತ್ರಾತ್ಮನು ಮಾಡುವ ಕ್ರಿಯೆಯ ಕುರಿತ ಒಂದು ಪ್ರಾಮುಖ್ಯವಾದ ವಾಕ್ಯಭಾಗವೆಂದರೆ ರೋಮಾ 8ನೇ ಅಧ್ಯಾಯವಾಗಿದೆ. ಪವಿತ್ರಾತ್ಮನು ಕ್ರೈಸ್ತರಿಗೋಸ್ಕರ ಏನು ಮಾಡುತ್ತಾನೆಂಬುದನ್ನು ಕಲಿತುಕೊಳ್ಳುವದಕ್ಕಾಗಿ ನಾವು ಈ ಅಧ್ಯಾಯದ ಸಮಗ್ರ ಪರಿಶೀಲನೆ ನಡಿಸೋಣ.

*ಆತನು ನಮಗೆ ಜೀವನದ ಮೇಲೆ ಜಯವನ್ನು ಅನುಗ್ರಹಿಸುವನು* (8:1-10). 1ನೇ ವಚನದಲ್ಲಿ "ಆದದರಿಂದ" ಎಂಬುದು 7ನೇ ಅಧ್ಯಾಯವನ್ನು ಸೂಚಿಸುತ್ತದೆ, ಅದು ಮಾನವ ಆತ್ಮದ ಸೋಲಿನ ಬಗ್ಗೆ ಮಾತಾಡಿತು (ನೋಡಿರಿ 7:15, 18, 19, 24). ಈಗ, ಹೇಗೂ, ಒಂದು ಹೊಸ ಅಂಶವು ಸೇರ್ಪಡೆಗೊಳಿಸಲ್ಪಟ್ಟಿದೆ: ದೇವರ ಪವಿತ್ರಾತ್ಮನು (8:1, 2, 4, 5, 9). ಪವಿತ್ರಾತ್ಮನ ಮೂಲಕವಾಗಿ, ನಾವು ಸೋಲಿನ ಬದಲಾಗಿ ಜಯವನ್ನು ಗಳಿಸಬಲ್ಲೆವು.

*ಆತನು ನಮಗೆ ಮರಣದ ಮೇಲೆ ಜಯವನ್ನು ಅನುಗ್ರಹಿಸುವನು* (8:11). ಕ್ರಿಸ್ತನು ದೇವರ ಶಕ್ತಿಯ ಮೂಲಕವಾಗಿ ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು. ಅದೇ ರೀತಿಯಲ್ಲಿಯೇ, ನಮ್ಮೊಳಗೆ ನೆಲೆಸಿರುವ ಪವಿತ್ರಾತ್ಮನ ಮುಖಾಂತರ, ನಾವು ಸಹ ಜೀವಿತರಾಗಿ ಎಬ್ಬಿಸಲ್ಪಡುವೆವು. ಒಳ್ಳೇವರೂ ಕೆಟ್ಟವರೂ ಸೇರಿದಂತೆ ಎಲ್ಲರೂ ಎಬ್ಬಿಸಲ್ಪಡುವರಾದ್ದರಿಂದ (ಯೋಹಾನ 5:28, 29), ರೋಮಾ 8:11ನೇ ವಚನವು *ನಿತ್ಯಜೀವ*ಕ್ಕಾಗಿ ಎಬ್ಬಿಸಲ್ಪಡುವದನ್ನು ಸೂಚಿಸುತ್ತಿರಬಹುದಾಗಿದೆ.

*ಆತನು ನಮಗೆ ಶೋಧನೆಗಳ ಮೇಲೆ ಜಯವನ್ನು ಅನುಗ್ರಹಿಸುತ್ತಾನೆ* (8:13). 7:24ರಲ್ಲಿ, ಪೌಲನು "ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವನು ಯಾರು?" ಎಂದು ಕೇಳಿದನು. 8:13ರಲ್ಲಿ, ಪವಿತ್ರಾತ್ಮನಿಂದ, ನಾವು ದೇಹದ ದುರಭ್ಯಾಸಗಳನ್ನು ನಾಶಮಾಡಬಲ್ಲೆವು ಎಂಬದಾಗಿ ಆತನು ಹೇಳುತ್ತಾನೆ. ಬೇರೊಂದು ಕಡೆಯಲ್ಲಿ, ಪೌಲನು ಪವಿತ್ರಾತ್ಮನ ಮೂಲಕ ನಾವು ಅಂತರ್ಯದಲ್ಲಿ ವಿಶೇಷ ಬಲವನ್ನು ಹೊಂದಿದವರಾಗುತ್ತೇವೆ ಎಂದು ಹೇಳಿದನು (ಎಫೆಸ 3:16; ನೋಡಿರಿ 3:20). ಕೆಲವು ಜನರು ಹೀಗೆ ಹೇಳಿದ್ದಾರೆ, "ನಾನು ಕ್ರೈಸ್ತ ಜೀವಿತವನ್ನು ಜೀವಿಸುವದಕ್ಕೆ ಶಕ್ತನಾದ ಕೂಡಲೇ, ನಾನು ಕ್ರೈಸ್ತನಾಗುವೆನು; ನಾನು ದೀಕ್ಷಾಸ್ನಾನ ಮಾಡಿಸಿಕೊಳ್ಳುವೆನು." ಹೇಗೂ, ಒಬ್ಬನು ಕ್ರೈಸ್ತ*ನಾಗಿರುವ*—ದೇವರಾತ್ಮನ ಸಹಾಯ ಹೊಂದಿರುವ ದೇವರ ಒಬ್ಬ ಮಗು—ಹೊರತು ಕ್ರೈಸ್ತ ಜೀವನವನ್ನು ನಡಿಸಲಾರನು.

*ಆತನು ನಮಗೆ ಸಂದಿಗ್ಧತೆಯಲ್ಲಿ ಜಯವನ್ನು ಅನುಗ್ರಹಿಸುವನು* (8:14a). ಬೈಬಲ್‌ನುದ್ದಕ್ಕೂ, ದೇವರು ತನ್ನ ಜನರನ್ನು "ನಡಿಸಿರುತ್ತಾನೆ" ಎಂದು ಹೇಳಲಾಗಿರುತ್ತದೆ. ರೋಮಾ 8:14ನೇ ವಚನವು ಪವಿತ್ರಾತ್ಮನು ಕ್ರೈಸ್ತರನ್ನು ನಡಿಸುವ ಬಗ್ಗೆ ಹೇಳುತ್ತದೆ. ಎರಡು ಅತಿರೇಕದ ನಿಲುವುಗಳಿಂದ ದೂರವಿರತಕ್ಕದ್ದು. ಮೊದಲನೆಯದು ತಾವು ಮಾಡುವ ಪ್ರತಿಯೊಂದು ತೀರ್ಮಾನಗಳಿಗೂ ಪವಿತ್ರಾತ್ಮನು ಜವಾಬ್ದಾರನೆಂದು ಪ್ರತಿಪಾದಿಸುವವರು ಹೇಳುವಂಥ ನಿಲುವು. ಎರಡನೆಯದು ಪವಿತ್ರಾತ್ಮನು ಅವರ ಮೇಲೆ *ಯಾವದೇ* ರೀತಿಯಲ್ಲಿ

ಪ್ರಭಾವ ಬೀರುವದನ್ನು ಅಲ್ಲಗಳೆಯುವಂಥ ಕ್ರೈಸ್ತರ ನಿಲುವು. ಪವಿತ್ರಾತ್ಮನು ನಮ್ಮನ್ನು ನಡಿಸಬಹುದಾದ ಹಲವಾರು ದಾರಿಗಳಿರುತ್ತವೆ. ಅತ್ಯಂಥ ಕರಾರುವಾಕ್ಕಾದ (ಮತ್ತು ಅತ್ಯಂಥ ಪ್ರತ್ಯೇಕ ದಾರಿ) ದಾರಿಯೆಂದರೆ ತಾನು ಪ್ರೇರಿಸಿದ ವಾಕ್ಯದ ಮುಖಾಂತರವಾಗಿಯೇ ಆಗಿದೆ (ಎಫೆಸ 6:17). ಇತರ ಸಾಧ್ಯತೆಗಳಲ್ಲಿ ದೈವಿಕ ಒದಗಿಸುವಿಕೆ (ರೋಮಾ 8:28) ಸೇರಿರುತ್ತದೆ, ಉದಾಹರಣೆಗೆ "ಮಹಾಸಂದರ್ಭವು" (ನೋಡಿರಿ 1 ಕೊರಿಂಥ 16:9). ಅಲ್ಲದೆ ಆತನು ನಮ್ಮ ಮನಸಾಕ್ಷಿಯ ಮುಖಾಂತರ ಅಥವಾ ಭಕ್ತಿಯುಳ್ಳ ಸ್ನೇಹಿತರ ಮೂಲಕ ನಡಿಸಬಲ್ಲನು. ಅದು "ಹೇಗೆ" ಎಂಬ ವಿಷಯದಲ್ಲಿ ಉದ್ಧಟ ವಾದ ಮಾಡುವದಕ್ಕಾಗದು. ದೇವರು ನಮ್ಮ ಜೀವಿತಗಳಲ್ಲಿ ಕಾರ್ಯಮಾಡುತ್ತಿದ್ದಾನೆ ಎಂಬುದನ್ನು ಅರ್ಥಮಾಡಿಕೊಳ್ಳುವದೇ ನಮಗೆ ಪ್ರಾಮುಖ್ಯವಾದದ್ದು (ನೋಡಿರಿ ಕೀರ್ತನೆ 37:23).

*ಆತನು ನಮಗೆ ಅನಿಶ್ಚಿತತೆಯ ಮೇಲೆ ಜಯವನ್ನು ಅನುಗ್ರಹಿಸುವನು* (8:14b-17, 23). ನಾವು ದೀಕ್ಷಾಸ್ನಾನ ಮಾಡಿಸಿಕೊಂಡ ವೇಳೆಯಲ್ಲಿ ದೇವರು ನಮಗೆ ಪವಿತ್ರಾತ್ಮನನ್ನು ಅನುಗ್ರಹಿಸಿದನೆಂಬ ವಾಸ್ತವಾಂಶವು ನಾವು ದೇವರ ಮಕ್ಕಳು ಮತ್ತು ಆತನ ಬಾಧ್ಯಸ್ಥರಾಗಿ ಎಲ್ಲಾ ಆಶೀರ್ವಾದಗಳನ್ನು ಹೊಂದಿದವರು ಎಂಬುದಕ್ಕೆ ಒಂದು ಶಕ್ತಿಯುತವಾದ ಪುರಾವೆ ಆಗಿರುತ್ತದೆ. ನಾವು "ಪ್ರಥಮ ಫಲವಾಗಿರುವ ಪವಿತ್ರಾತ್ಮವರವನ್ನು" ಹೊಂದಿದವರು ಎಂಬದಾಗಿ 23ನೇ ವಚನವು ಹೇಳುತ್ತದೆ. ಫಸಲಿನ "ಪ್ರಥಮ ಫಲ"ವು ಮಿಕ್ಕ ಫಸಲಿಗೆ ಒಂದು ಖಾತರಿಯಾಗಿತ್ತು. "ಪ್ರಥಮ ಫಲವಾದ" ಎಂಬುದರ ಪ್ರಾಥಮಿಕ ಅರ್ಥವು ಎಫೆಸ 1:13, 14, ಮತ್ತು 2 ಕೊರಿಂಥ 1:21, 22; 5:5ರಲ್ಲಿರುವ "ಸಂಚಕಾರವಾಗಿದ್ದಾನೆ" ಎಂಬುದರಂತೆಯೇ ಆಗಿರುತ್ತದೆ. ಪವಿತ್ರಾತ್ಮನು ನಮಗೆ ಪರಲೋಕದ "ಖಾತರಿ" ಆಗಿರುತ್ತಾನೆ. ರೋಮಾ 8:16 ಹೀಗೆ ಹೇಳುತ್ತದೆ, "ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುತ್ತಾನೆ." ದೇವರು ಪವಿತ್ರಾತ್ಮನ ಮೂಲಕ ನಮಗಾಗಿ ಏನು ಮಾಡುತ್ತಾನೆಂಬದನ್ನು ತಿಳಿಯುವಾಗ, ಆತನು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಾವು ಆತನ ಮಕ್ಕಳಾಗಿದ್ದೇವೆ ಎಂಬ ಭರವಸೆ ನಮಗುಂಟಾಗುತ್ತದೆ. ಇದು ನಮಗೆ ದೃಢವಿಶ್ವಾಸವನ್ನು ಒದಗಿಸತಕ್ಕದ್ದು!

*ಆತನು ನಮ್ಮ ಅಶಕ್ತಿಗಳಲ್ಲಿ ಜಯವನ್ನು ಅನುಗ್ರಹಿಸುವನು* (8:26, 27). ನಾವು ಕೆಲವು ಸಮಯಗಳಲ್ಲಿ ಬಲಹೀನತೆಯನ್ನು ಅನುಭವಿಸುತ್ತೇವೆ. ಪವಿತ್ರಾತ್ಮನು ನಮ್ಮ ಅಶಕ್ತಿಗಳಲ್ಲಿ ನಮಗೆ ಸಹಾಯ ಮಾಡುವನು. "ಸಹಾಯಮಾಡುತ್ತಾನೆ" ಎಂಬುದು ಒಂದು ಸಂಯುಕ್ತ ಪದದಿಂದ ಬಂದದ್ದಾಗಿದ್ದು ಅದು "ಎದುರಿನ" ಕಡೆಯಿಂದ "ಹಿಡಿದುಕೊಳ್ಳುವದು" ಎಂಬ ಅರ್ಥವನ್ನು ಕೊಡುತ್ತದೆ. ಈ ಪದವನ್ನು ಹೀಗೆ ದೃಷ್ಟಾಂತಗೊಳಿಸಬಹುದು, ಏನೆಂದರೆ ಒಬ್ಬ ವ್ಯಕ್ತಿಯು ತನಗೆ ಅತ್ಯಂಥ ಭಾರವಾಗಿರುವಂತ ಒಂದು ದೊಡ್ಡ ವಸ್ತುವನ್ನು ಎತ್ತಿಕೊಳ್ಳುವದಕ್ಕೆ ಪ್ರಯತ್ನ ಮಾಡುತ್ತಿರುವಾಗ—ಎದುರಿನಿಂದ ಬಂದ ಒಬ್ಬ ವ್ಯಕ್ತಿಯು ಆತ*ನೊಂದಿಗೆ* ಸೇರಿ ಅದನ್ನು ಅತ್ತ ಕಡೆಯಿಂದ ಎತ್ತುವಾಗ ಈತನು ನಿಟ್ಟುಸಿರು ಬಿಡುತ್ತಾನೆ. ಜೀವನದಲ್ಲಿ ನಮಗೆ ಎದುರಾಗುವ ಸವಾಲುಗಳ ವಿಷಯದಲ್ಲಿ, ನಾವು ಏಕಾಂಗಿಯಾಗಿ ಮಾಡುವದಕ್ಕೆ ಆಗದಂತಹ ಒಂದನ್ನು ಮಾಡುವಂತೆ ಸಹಾಯ ಒದಗಿಸುವ ಆ ಒಬ್ಬ ವ್ಯಕ್ತಿಯು ಪವಿತ್ರಾತ್ಮನೇ. 26ನೇ ವಚನವು ಪವಿತ್ರಾತ್ಮನು ನಮಗೆ ಸಹಾಯ ಮಾಡುವ ಕುರಿತಾಗಿ ಒಂದು ನಿರ್ದಿಷ್ಟವಾದ ದೃಷ್ಟಾಂತವನ್ನು ಕೊಡುತ್ತದೆ: ನಾವು ಪ್ರಾರ್ಥಿಸುವ ವೇಳೆ

ಆತನು ನಮಗೆ ಸಹಾಯ ಮಾಡುವನು.

*ಮುಕ್ತಾಯ*. ಪವಿತ್ರಾತ್ಮನು ನಮ್ಮ ಜೀವಿತಗಳಲ್ಲಿ ಕೆಲಸ ಮಾಡುವದಕ್ಕೆ ಮುನ್ನ ನಾವು ಆತನ ಕುರಿತಾಗಿ ಎಲ್ಲವನ್ನೂ ತಿಳಿದುಕೊಳ್ಳಬೇಕಾಗಿರುತ್ತದೋ? ಇಲ್ಲ. ಪವಿತ್ರಾತ್ಮನು ನಮ್ಮ ಜೀವಿತಗಳಲ್ಲಿ ಕೆಲಸ ಮಾಡುವದಕ್ಕೆ ಬಹು ಮುಖ್ಯವಾದದ್ದೆಂದರೆ ನಾವು "ಪವಿತ್ರತ್ಮಾನುಸಾರವಾಗಿ ನಡೆಯುವವರಾದ" ಎಂಬುದು (8:4). ಆತನ ನಮಗೆ ಅನುಗ್ರಹಿಸಿರುವ ಹೊಸ ಒಡಂಬಡಿಕೆಯಲ್ಲಿ ಸಿಕ್ಕುವ ಪವಿತ್ರಾತ್ಮನ ಉಪದೇಶಗಳಿಗೆ ನಾವು ವಿಧೇಯರಾಗುವ ಅಗತ್ಯವಿರುತ್ತದೆ. ಪವಿತ್ರಾತ್ಮನು ನಿಮ್ಮೊಳಗೆ ವಾಸಿಸುತ್ತಿದ್ದಾನೋ? ಇಲ್ಲವಾದಲ್ಲಿ, ನೀವು ಯೆಸುವಿಗೆ ಸೇರಿದವರಲ್ಲ (8:9): ನೀವು ದೀಕ್ಷಾಸ್ನಾನ ಮಾಡಿಸಿಕೊಂಡು ಈ ಆಶ್ಚರ್ಯಕರವಾದ ವರವನ್ನು ಸ್ವೀಕರಿಸಿಕೊಳ್ಳುವ ಅಗತ್ಯವಿರುತ್ತದೆ!

## ಎರಡು ವಿಧಿಗಳು, ಒಂದು ತೀರ್ಮಾನ (8:1-13)

8:1–13ರಲ್ಲಿ, ನಾವು ಆತ್ಮೀಕ ತದ್ವಿರುದ್ಧತೆಗಳ ಬಗ್ಗೆ ಓದುತ್ತೇವೆ. (1) ನಾವು ಹೋಗಬಹುದಾದ *ಎರಡು ದಿಕ್ಕುಗಳಿರುತ್ತವೆ*: ಶರೀರಭಾವದ ದಾರಿ ಅಥವಾ ಪವಿತ್ರಾತ್ಮಾನುಸಾರವಾದ ದಾರಿ (8:4). (2) *ಇಬ್ಬರು ವಾಸಿಸುವವರಿದ್ದಾರೆ*: ಪಾಪವು ನಮ್ಮೊಳಗೆ ವಾಸಿಸುತ್ತದೆ, ಅಥವಾ ಪವಿತ್ರಾತ್ಮನು ನಮ್ಮೊಳಗೆ ವಾಸಿಸುತ್ತಾನೆ (8:2, 9, 11). (3) *ಎರಡು ಹಂಗುಗಳಿರುತ್ತವೆ*: ಕ್ರೈಸ್ತರು ಇನ್ನು ಮೇಲೆ ಇರದಂಥ ಹಂಗು (ಶರೀರಭಾವದ) ಮತ್ತು ಇನ್ನೂ ಬಾಕಿಯಿರುವ ಹಂಗು (ಪವಿತ್ರಾತ್ಮನಿಗೆ) (8:12, 13). (4) ಏಕೆ ಅಂತಹ ಸಂಗತಿಗಳು ಪ್ರಾಮುಖ್ಯವಾದವುಗಳು? ಏಕೆಂದರೆ ಮಾನವ ಜನಾಂಗಕ್ಕಾಗಿ ಎರಡು ವಿಧಿಗಳು (ಅಂತ್ಯಸ್ಥಿತಿಗಳು) ಕಾಯುತ್ತಿವೆ: ಮರಣ ಮತ್ತು ಜೀವ (8:6, 11, 13).

*ಎರಡು ವಿಧಿಗಳಿ*ರುತ್ತವೆ, ಆದರೆ ತೀರ್ಮಾನ ಮಾತ್ರ ಒಂದೇ ಒಂದು ಇರುತ್ತದೆ. ನೀವು ಶರೀರಭಾವ ಮತ್ತು ಪವಿತ್ರಾತ್ಮನ ನಡುವೆ ಆಯ್ಕೆಮಾಡಿಕೊಳ್ಳತಕ್ಕದ್ದು. ನಿಮಗೆ ಕ್ಷೀಣಿಸುವ ಶರೀರಭಾವವೇ ಮುಖ್ಯವಾದದ್ದೋ ಎಂಬಂತೆ ಜೀವಿಸುವದನ್ನು ಮುಂದುವರೆಸಬಹುದು, ಅಥವಾ ಆತ್ಮೀಕವಾದದ್ದೇ ಶಾಶ್ವತವಾಗಿ ಉಳಿಯುವದು ಎಂಬ ಮನವರಿಕೆಯೊಂದಿಗೆ ಜೀವಿಸುವದಕ್ಕೆ ಪ್ರಾರಂಭಿಸಬಹುದು.

## ಪವಿತ್ರಾತ್ಮನ ವಾಸಿಸುವಿಕೆ (8:9, 11)

ರೋಮಾ 8:9, 11ರಲ್ಲಿ, ಮೂರು ಸಾರಿ ಪವಿತ್ರಾತ್ಮನು ಕ್ರೈಸ್ತರೊಳಗೆ ವಾಸಿಸುತ್ತಾನೆಂಬ ಬಗ್ಗೆ ಉಲ್ಲೇಖ ಮಾಡಲ್ಪಟ್ಟಿದೆ:

> ನೀವಾದರೋ, ನಿಮ್ಮಲ್ಲಿ ದೇವರ ಆತ್ಮನು ವಾಸವಾಗಿರುವದಾದರೆ ಶರೀರ ಭಾವಾಧೀನರಲ್ಲ (8:9a).
>
> ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ *ವಾಸವಾಗಿದ್ದರೆ* ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ *ವಾಸವಾಗಿರುವ* ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯದೇಹಗಳನ್ನು ಸಹ ಬದುಕಿಸುವನು (8:11).

ಪವಿತ್ರಾತ್ಮನ ವಾಸಮಾಡುವಿಕೆಯು ಕ್ರೈಸ್ತರು ಆನಂದಿಸುವಂತಹ ಒಂದು ಆಶೀರ್ವಾದ ಮತ್ತು ಆ ಆಶೀರ್ವಾದವು ಕ್ರೈಸ್ತೇತರರಿಗೆ ಇರುವದಿಲ್ಲ—ಆದರೆ ಹಾಗೆಂದರೇನು? ದೇವರ ಮಕ್ಕಳ ಸಂಗಡ ಪವಿತ್ರಾತ್ಮನು ಯಾವ ವಿಧವಾದ ವಿಶೇಷ ಸಂಬಂಧವನ್ನು ಹೊಂದಿದ್ದಾನೆ? ಪವಿತ್ರಾತ್ಮನು ಮತ್ತು ಕ್ರೈಸ್ತನ ವಿಷಯವಾಗಿ ಕೇಳಲ್ಪಡಬಹುದಾದಂತಹ ಪ್ರತಿಯೊಂದು ಪ್ರಶ್ನೆಗಳಿಗೂ ನಾವು ಉತ್ತರಿಸುವದಕ್ಕಾಗು ವದಿಲ್ಲ, ಆದರೆ ಈ ವಿಷಯದ ಮೇಲೆ ಹೊಸ ಒಡಂಬಡಿಕೆಯು ಏನು ಹೇಳುತ್ತದೆಂಬುದನ್ನು ಪುನರಾವಲೋಕಿಸುವದರಲ್ಲಿ ಪ್ರಯೋಜನವಿರುತ್ತದೆ.

*ಪವಿತ್ರಾತ್ಮನ ದಯಪಾಲಿಸುವಿಕೆ.* ಯೋಹಾನ 7:38ರಲ್ಲಿ, ಯೇಸು "ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು" ಎಂದು ಘೋಷಿಸಿದನು (ನೋಡಿರಿ ಯೆಶಾಯ 44:3). ಯೋಹಾನನು ನಂತರ ಹೀಗೆ ವಿವರಿಸಿದನು, "ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮವರವನ್ನು ಕುರಿತು ಹೇಳಿದನು; ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಿಲ್ಲ" (ಯೋಹಾನ 7:39). ಯೋಹಾನನ ವ್ಯಾಖ್ಯೆಗಳು ನಮಗೆ ತಿಳಿಸುವದೇನೆಂದರೆ ಪವಿತ್ರಾತ್ಮನು ವಿಶ್ವಾಸಿಗಳಿಗೋಸ್ಕರ ಭವಿಷ್ಯದ ಕಾಲದಲ್ಲಿ ಕೊಡಲ್ಪಡಲಿದ್ದನು—ಯೇಸುವಿನ ಮಹಿಮಪದವಿಯ ಬಳಿಯ (ಆತನ ಮರಣ, ಹೂಣಲ್ಪಡುವಿಕೆ, ಪುನರುತ್ಥಾನ, ಮತ್ತು ಪರಲೋಕಾರೋಹಣ). ಯೋಹಾನನ ಹೇಳಿಕೆಗಳಿಂದ ನಾವು ಊಹಿಸುವದೇನೆಂದರೆ ಪವಿತ್ರಾತ್ಮನನ್ನು ಅನುಗ್ರಹಿಸುವದು ಒಂದು ನೂತನ ವಿಧವಾದ ಕೊಡುವಿಕೆಯಾಗಿರಲಿತ್ತು—ಹಳೇ ಒಡಂಬಡಿಕೆಯ ಕಾಲಕ್ಕೆ ಸಂಬಂಧಪಟ್ಟದ್ದಲ್ಲ, ಆದರೆ ಕ್ರೈಸ್ತ ಯುಗಕ್ಕೆ ವಿಶಿಷ್ಟವಾದದ್ದಾಗಿತ್ತು.

ಆತನ ಮರಣದ ಕಡೇ ಗಳಿಗೆಯ ವೇಳೆಯಲ್ಲಿ, ಯೇಸು ಅಪೊಸ್ತಲರಿಗೆ ತಾನು ಈ ಭೂಮಿಯಿಂದ ಹೊರಟುಹೋದ ಮೇಲೆ ಪವಿತ್ರಾತ್ಮನನ್ನು ಕಳುಹಿಸಿ ಕೊಡುವೆನೆಂದು ವಾಗ್ದಾನ ಮಾಡಿದನು (ಯೋಹಾನ 14:16, 17, 25, 26; 15:26, 27; 16:7-14). ಯೇಸುವು ಪವಿತ್ರಾತ್ಮನ ವಿಷಯವಾಗಿ ಹೇಳಿದ ಬಹುತೇಕವಾದದ್ದು ನೇರವಾಗಿ ಮತ್ತು ಪ್ರತ್ಯೇಕವಾಗಿ ಹನ್ನೆರಡು ಮಂದಿ ಅಪೊಸ್ತಲರಿಗೆ ಮಾತ್ರವೇ ಅನ್ವಯಿಸುವಂತದ್ದಾಗಿತ್ತು (ನೋಡಿರಿ ಯೋಹಾನ 14:26; 16:13), ಆದರೆ ಕ್ರೈಸ್ತ ಯುಗದಲ್ಲಿ ನಿರಂತರವಾಗಿ ಪವಿತ್ರಾತ್ಮನ ಸೇವೆಯು ಸಾಗುತ್ತಿರುವ ಕುರಿತು ಸುಳಿವುಗಳಿರುತ್ತದೆ. ಉದಾಹರಣೆಗೆ, ಯೋಹಾನ 14:16ರಲ್ಲಿ ಯೇಸು ಹೀಗೆ ಹೇಳುತ್ತಾನೆ, "ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ[169] ಸಹಾಯಕನನ್ನು *ಸದಾಕಾಲ* ನಿಮ್ಮ ಸಂಗಡ ಇರುವದಕ್ಕೆ ಕೊಡುವನು" (ಒತ್ತಿ ಹೇಳಿದ್ದು ನನ್ನದು). "ಸಹಾಯಕನು" ಎಂಬುದು παράκλητος (*paraklētos*), ಎಂಬ ಪದದಿಂದ ಅನುವಾದಿಸಲ್ಪಟ್ಟಿದ್ದು, ಅದು παρά (*para,* "ಜೊತೆಯಾಗಿ") ಮತ್ತು καλέω (*kaleō,* "ಕರೆಯಲು") ಎಂಬವುಗಳ ಸಂಯುಕ್ತ ಪದವಾಗಿದೆ. ಆದಕಾರಣ ಪವಿತ್ರಾತ್ಮನು ಕೆಲವು ಸಾರಿ "Paraklete" ಎಂದು ಕರೆಯಲ್ಪಡುತ್ತಾನೆ. ಆ ಪದವು ಸಹಾಯ, ಪ್ರೋತ್ಸಾಹ, ಬಲಪಡಿಸುವಿಕೆ, ಮತ್ತು ಆದರಣೆಯನ್ನು ಒದಗಿಸುವದಕ್ಕಾಗಿ "ಜೊತೆಯಾಗಿರಲು ಕರೆಯಲ್ಪಟ್ಟವನು" ಎಂಬ

ಅರ್ಥವನ್ನು ಹೊಂದಿರುತ್ತದೆ. AB ತರ್ಜುಮೆಯಲ್ಲಿ ಹೀಗೆ ಇರುತ್ತದೆ "ಸಂತೈಸುವವನು (ಅಲೋಚನಾಕರ್ತನು, ಸಹಾಯಕನು, ಪರವಾಗಿ ಬೇಡುವವನು, ನಮಗಾಗಿ ವಾದಿಸುವವನು, ಬಲಪಡಿಸುವಾತನು ಮತ್ತು ಜೊತೆಯಲ್ಲಿ ನಿಲ್ಲುವವನು)."

ಯೇಸು ಪರಲೋಕಾರೋಹನಗೊಂಡ ಮೇಲೆ, ಆತನು ಯೆಹೂದ್ಯರ ಹಬ್ಬವಾದ ಪಂಚಾಶತ್ತಮ ದಿನದಂದು ಪವಿತ್ರಾತ್ಮನನ್ನು ಸುರಿಸಿದನು (ಅಪೊಸ್ತಲರ ಕೃತ್ಯಗಳು 1:9; 2:1-4, 33). ಕೆಲವು ಹಳೆಯ ವ್ಯಾಖ್ಯಾನಗ್ರಂಥಗಳು ಕರೆಯುವ ಪ್ರಕಾರ ಅಪೊಸ್ತಲರು "ಪವಿತ್ರಾತ್ಮನ ಅಸಾಧಾರಣವಾದ ವರವನ್ನು" ಪಡೆದುಕೊಂಡರು, ಅದರಲ್ಲಿ ಅದ್ಭುತಗಳನ್ನು ನಡಿಸುವ ಸಾಮರ್ಥ್ಯವೂ ಸೇರಿತ್ತು (ಅಪೊಸ್ತಲರ ಕೃತ್ಯಗಳು 2:4; 3:1-8; 5:12). ಬಳಿಕ, ಪೇತ್ರನು ತನ್ನ ಸಂದೇಶದ ಅಂತ್ಯಕ್ಕೆ ಸಮೀಪಿಸುತ್ತಿದ್ದ ಹಾಗೆ, ಆತನು ಶ್ರೋತೃಗಳಿಗೆ ವ್ಯಾಖ್ಯಾನಗ್ರಂಥಗಳು ಕರೆಯುವ ಪ್ರಕಾರ "ಪವಿತ್ರಾತ್ಮನ ಸಾಧಾರಣವಾದ ವರ"ವನ್ನು ಪಡೆದುಕೊಳ್ಳುವಂತೆ ಆಮಂತ್ರಿಸಿದನು. ಅಪೊಸ್ತಲನು ವಿಶ್ವಾಸಿಸಿದ ಇವರಿಗೆ ಹೀಗೆ ಹೇಳಿದನು, "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನಮಾಡಿಸಿಕೊಳ್ಳಿರಿ, *ಆಗ ನೀವು ಪವಿತ್ರಾತ್ಮದಾನವನ್ನು ಹೊಂದುವಿರಿ"* (ಅಪೊಸ್ತಲರ ಕೃತ್ಯಗಳು 2:38; ಒತ್ತಿ ಹೇಳಿದ್ದು ನನ್ನದು).

"ಪವಿತ್ರಾತ್ಮದಾನ" ಎಂಬ ಪದಗುಚ್ಛವು ವಿವಿಧ ಬಗೆಯ ಅರ್ಥಗಳನ್ನು ಹೊಂದಿರಬಹುದಾಗಿದೆ; ಆದರೆ ಅಪೊಸ್ತಲರ ಕೃತ್ಯಗಳು 2:38ರಲ್ಲಿ ಅದು ಸ್ವತಃ ಪವಿತ್ರಾತ್ಮನನ್ನು ಒಂದು ವರವೆಂದು ಸೂಚಿಸುತ್ತದೆಂಬದನ್ನು ಬಹುತೇಕರು ಒಪ್ಪಿಕೊಳ್ಳುತ್ತಾರೆ. ಅಪೊಸ್ತಲರ ಕೃತ್ಯಗಳು 5:32ರಲ್ಲಿ, ಪೇತ್ರನು ಆತನನ್ನು "ದೇವರು ತನಗೆ ವಿಧೇಯರಾಗಿರುವವರಿಗೆ ದಯಪಾಲಿಸಿರುವ ಪವಿತ್ರಾತ್ಮನೂ" ಎಂದು ಕರೆದನು. 1 ಥೆಸಲೋನಿಕ 4:8ರಲ್ಲಿ, ಪೌಲನು "ಪವಿತ್ರಾತ್ಮವರವನ್ನು ನಿಮಗೆ ದಯಪಾಲಿಸುವ ದೇವರನ್ನೂ" ಎಂದು ಮಾತಾಡುತ್ತಾನೆ.

ಪವಿತ್ರಾತ್ಮನ ವಾಗ್ದಾನದ ಕುರಿತಾದ ಎರಡು ಸತ್ಯಗಳು ಅಪೊಸ್ತಲರ ಕೃತ್ಯಗಳು 2:38 ರಲ್ಲಿ ಸಿಕ್ಕುತ್ತವೆ. ಮೊದಲನೆಯದು, ಪವಿತ್ರಾತ್ಮನು ಜನರಿಗೆ ಅವರು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಸಂದರ್ಭದಲ್ಲಿ ಕೊಡಲ್ಪಡುತ್ತಾನೆ. ಎರಡನೆಯದಾಗಿ, ಯಾರಾರು ಬೈಬಲ್‌ನುಸಾರವಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವ *ಪ್ರತಿಯೊಬ್ಬರಿಗಾಗಿಯೂ* ಪವಿತ್ರಾತ್ಮವರವು ವಾಗ್ದಾನ ಮಾಡಲ್ಪಟ್ಟಿದೆ. ಬೇರೆ ಮಾತುಗಳಲ್ಲಿ ಹೇಳುವದಾದರೆ, ಕ್ರೈಸ್ತನಾಗಿರುವವನು ಯಾವನೋ ಆತನು "ಪವಿತ್ರಾತ್ಮದಾನವನ್ನು" ಪಡೆದುಕೊಂಡಿರುತ್ತಾನೆ. ಇದು ನಮಗೆ ಈ ವರವನ್ನು ಕೊಡುವ ಉದ್ದೇಶವು ಅದನ್ನು ಪಡೆದುಕೊಳ್ಳುವವರಿಗೆ ಅದ್ಭುತಗಳನ್ನು ನಡಿಸುವ ಸಾಮರ್ಥ್ಯವನ್ನು ಕೊಡುವದಾಗಿರಲಿಲ್ಲ ಎಂಬುದನ್ನು ತಿಳಿಯಪಡಿಸುತ್ತದೆ. ಇಂದು ಕೆಲವರು, ಯಾರಾದರೂ ಇರುವದಾದಲ್ಲಿ, ಹೊಸ ಒಡಂಬಡಿಕೆಯ ಕಾಲದಲ್ಲಿ ಪ್ರತಿಯೊಬ್ಬ ಕ್ರೈಸ್ತನು ಅದ್ಭುತಗಳನ್ನು ನಡಿಸುತ್ತಿದ್ದನೆಂದು ಹೇಳಿಕೊಳ್ಳುತ್ತಾರೆ—ಆದರೆ ಪ್ರತಿಯೊಬ್ಬ ಕ್ರೈಸ್ತನು ಸಹ ಅಪೊಸ್ತಲರ ಕೃತ್ಯಗಳು 2:38ರಲ್ಲಿ ಕರೆಯಲ್ಪಟ್ಟಿರುವಂತೆ "ಪವಿತ್ರಾತ್ಮದಾನವನ್ನು" ಹೊಂದಿದ್ದರು.

ಈ ಅಧ್ಯಯನದಲ್ಲಿ ನಮ್ಮ ಉದ್ದೇಶವು ಈ ಶತಮಾನದಲ್ಲಿ ನಡೆಯುವ ಅದ್ಭುತಗಳ

ಬಗ್ಗೆ ಚರ್ಚೆ ಮಾಡುವದಾಗಿರುವದಿಲ್ಲ. ಇಷ್ಟನ್ನು ಹೇಳಿದರೆ ನಮಗೆ ಸಾಕಾಗಿರುತ್ತದೆ, ಏನೆಂದರೆ "ಪವಿತ್ರಾತ್ಮನ ಅಸಾಧಾರಣವಾದ ವರವು" ಸಭೆಯ ಆದಿ ದಿನಗಳಿಗೋಸ್ಕರ ಮಾತ್ರವೇ ಆಗಿದ್ದರೆ, "ಸಾಧಾರಣ ವರವು" ಎಲ್ಲಾ ಕಾಲಕ್ಕಾಗಿಯೂ ಆಗಿರುತ್ತದೆ, ಅಂದರೆ ಕರ್ತನ ಪುನರಾಗಮನದ ತನಕ.

ತಾನು "ಪವಿತ್ರಾತ್ಮದಾನವನ್ನು" ಪಡೆದುಕೊಂಡಿದ್ದೇನೆಂದು ಒಬ್ಬ ವ್ಯಕ್ತಿಗೆ ಹೇಗೆ *ತಿಳಿಯುತ್ತದೆ*? "ಹೇಳುವದಕ್ಕಿಂತಲೂ ಅನುಭವ ಮಾಡಿದ್ದು" ಎಂಬ ಒಂದು ಸಂವೇದನಾಸ್ಪರ್ಶದ ಕಾರಣದಿಂದಲ್ಲ, ಆದರೆ ಒಬ್ಬನು ಬೈಬಲ್‌ನುಸಾರವಾಗಿ ದೀಕ್ಷಾಸ್ನಾನ ಮಾಡಿಸಿಕೊಂಡಾಗ ದೇವರು ಪವಿತ್ರಾತ್ಮನನ್ನು ಅನುಗ್ರಹಿಸುತ್ತಾನೆಂದು *ಬೈಬಲ್ ಹೇಳುತ್ತದೆ* ಎಂಬ ಕಾರಣಕ್ಕಾಗಿಯೇ. ಕ್ರೈಸ್ತನು ತಾನು ಹೇಗೆ "[ತನ್ನ] ಪಾಪಗಳು ಪರಿಹಾರವಾಗಿವೆ" ಎಂದು ತಿಳಿದುಕೊಂಡಿರುತ್ತಾನೋ ಅದೇ ರೀತಿಯಲ್ಲಿಯೇ ತಾನು "ಪವಿತ್ರಾತ್ಮದಾನವನ್ನು" ಹೊಂದಿಕೊಂಡಿದ್ದೇನೆಂಬುದನ್ನು ತಿಳಿದುಕೊಳ್ಳುತ್ತಾನೆ: ಯಾಕೆಂದರೆ ಅಪೊಸ್ತಲರ ಕೃತ್ಯಗಳು 2:38 ದೇವರು ಅದನ್ನೇ ವಾಗ್ದಾನ ಮಾಡಿದ್ದಾನೆ– ಮತ್ತು ದೇವರು ತನ್ನ ವಾಗ್ದಾನಗಳನ್ನು ಯಾವಾಗಲೂ ಕಾಪಾಡಿಕೊಳ್ಳುತ್ತಾನೆ (ರೋಮಾ 4:21; 1 ಕೊರಿಂಥ 1:9; ತೀತನು 1:2; ಇಬ್ರಿಯ 6:18). ಅಪೊಸ್ತಲರ ಕೃತ್ಯಗಳು 2:38ರಲ್ಲಿನ ಕರ್ತನ ವಾಗ್ದಾನಗಳನ್ನು ತಿಳಿಯುವದು ಮತ್ತು ವಿಶ್ವಾಸಿಸುವದು ನಮಗೆ *ಹಿತವಾದ ಅನುಭವವನ್ನು* ನೀಡತಕ್ಕದ್ದು; ಆದರೆ ಹಿತವಾದ ಅನುಭವ ಪಡೆಯುವದು ಫಲಿತವಾಗಿರುತ್ತದೆ ಹೊರತು ಪುರಾವೆ ಆಗಿರುವದಿಲ್ಲ. ಶಾಸ್ತ್ರಗಳ ಸಾಕ್ಷಿಯು ಪ್ರಶ್ನಾತೀತವಾದ ಪುರಾವೆಯಾಗಿರುತ್ತದೆ, ಏನೆಂದರೆ ನಾವು ನಿಜವಾಗಿಯೂ ಪವಿತ್ರಾತ್ಮನನ್ನು ವರವಾಗಿ ಪಡೆದುಕೊಂಡಿದ್ದೇವೆ ಎಂಬುದೇ.

ಕೆಲವರು ಪವಿತ್ರಾತ್ಮನ ಕುರಿತಾಗಿ ಸ್ವಲ್ಪ ವಿಚಿತ್ರವೇನಿಸುವ ಕಲ್ಪನೆಗಳನ್ನು ಹೊಂದಿರುತ್ತಾರೆ. ಅವರಿಗೆ ದೇವರು ನಿಮ್ಮ ಜೀವಿತಗಳಲ್ಲಿ ಕಾರ್ಯಮಾಡುತ್ತಿದ್ದಾನೆಂದು ಹೇಳುವಾಗ ಅವರು ಆ ಸಂಬಂಧವಾಗಿ ಶಾಂತರಾಗಿ ಉಳಿಯುತ್ತಾರೆ. ಹೇಗೂ, ಅವರು "ಪವಿತ್ರಾತ್ಮನನ್ನು ಹೊಂದಿದರೆಂದು" ಅನ್ನಿಸುವಾಗ, ಅವರು ಯದ್ವಾತದ್ವಾ ರೀತಿಯಲ್ಲಿ ವರ್ತಿಸುತ್ತಾರೆ. ಹೇಗೂ, ತಂದೆ, ಕುಮಾರ, ಮತ್ತು ಪವಿತ್ರಾತ್ಮರು ಒಂದೇ ಆಗಿದ್ದಾರೆ; ಒಬ್ಬನು ಏನು ಮಾಡಬೇಕೆಂದು ಹೇಳುತ್ತಾನೋ, ಎಲ್ಲಾ ಮೂವರು ಸಹ ಮಾಡುವಂತೆ ಹೇಳಿದಂತೆಯೇ. ಆದುದರಿಂದ, ಅಪೊಸ್ತಲರ ಕೃತ್ಯಗಳು 2:38ನ್ನು ಚರ್ಚಿಸುವಾಗ, ನಾನು ಅನೇಕ ಸಾರಿ, "ನೀವು ದೀಕ್ಷಾಸ್ನಾನ ಮಾಡಿಸಿಕೊಂಡಾಗ, ದೇವರು ನಿಮಗೆ ಸಹಾಯವಾಗಿರುವದಕ್ಕಾಗಿ *ತನ್ನ ಸ್ವಂತ ಆತ್ಮನನ್ನು* ಕೊಟ್ಟನು" ಎಂದು ಹೇಳುತ್ತೇನೆ. ನಾವು "ಪವಿತ್ರಾತ್ಮದಾನವನ್ನು" ಎಂಬ ಪದಗುಚ್ಛವನ್ನು ಯಕ್ಷಿಣಿಕವಾದ ವ್ಯಂಗಾರ್ಥಗಳಿರು ವಂತೆ ಕಾಣಬಾರದು. ಬದಲಾಗಿ, ನಾವು ಆ ವರವನ್ನು ದೇವರು ನಿಮ್ಮ ಸಂಗಡ ನೀವು ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಮುನ್ನ ಇದ್ದಿಲ್ಲದಂತಹ *ಒಂದು ವಿಶೇಷವಾದ ಮತ್ತು ವೈಯಕ್ತಿವಾದ ಸಂಬಂಧದ* ಆರಂಭವನ್ನು ಮಾಡುತ್ತಿದ್ದಾನೆಂಬದಾಗಿ ಯೋಚಿಸತಕ್ಕದ್ದು.

*ಒಂದು ಮುದ್ರೆ ಮತ್ತು ಒಂದು ಸಂಚಕಾರ.* ದೇವರು ಈ ವಿಶೇಷ ವರವನ್ನು ಏಕೆ ಕೊಟ್ಟನು? ಪವಿತ್ರಾತ್ಮವರವನ್ನು ಕೊಡುವದಕ್ಕೆ ಒಂದು ಉದ್ದೇಶವೆಂದರೆ ನಮ್ಮ ರಕ್ಷಣೆಗೆ "ಒಂದು ಮುದ್ರೆ"ಯಾಗಿಯೂ ಮತ್ತು ನಮ್ಮ ಶಾಶ್ವತವಾದ ಸ್ವಾಸ್ಯಕ್ಕೆ "ಒಂದು

ಸಂಚಕಾರ"ವಾಗಿಯೂ ಇರುವದಕ್ಕಾಗಿಯೇ. ಉದಾಹರಣೆಗೆ, 2 ಕೊರಿಂಥ 1:21, 22ರಲ್ಲಿ ಪೌಲನು, "ನಮ್ಮನ್ನು ಅಭಿಷೇಕಿಸಿ ಕ್ರಿಸ್ತನ ಅನ್ಯೋನ್ಯತೆಯಲ್ಲಿ ಸೇರಿಸಿ ನಮ್ಮನ್ನು ನಿಮ್ಮೊಂದಿಗೆ ಸ್ಥಿರಪಡಿಸುವವನು ದೇವರೇ; ಆತನು ನಮ್ಮ ಮೇಲೆ *ಮುದ್ರೆ* ಹಾಕಿ ನಮ್ಮ ಹೃದಯಗಳಲ್ಲಿ ಪವಿತ್ರಾತ್ಮನನ್ನು *ಸಂಚಕಾರ*ವಾಗಿ ಅನುಗ್ರಹಿಸಿದ್ದಾನೆ" ಎಂದು ಹೇಳುತ್ತಾನೆ (ಒತ್ತಿ ಹೇಳಿದ್ದು ನನ್ನದು). ಎಫೆಸ 1:13, 14ರಲ್ಲಿ, ನಾವು ಹೀಗೆ ಓದುತ್ತೇವೆ, "ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ *ಮುದ್ರೆ*ಯನ್ನು ಹೊಂದಿದಿರಿ. ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುವ ದೆಂಬದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ *ಸಂಚಕಾರ*ವಾಗಿದ್ದಾನೆ . . ." (ಒತ್ತಿ ಹೇಳಿದ್ದು ನನ್ನದು).

ಬೈಬಲ್‌ನ ಕಾಲಗಳಲ್ಲಿ, ಒಂದು ಮುದ್ರೆಯು ವಿವಿಧ ಉದ್ದೇಶಗಳಿಗಾಗಿ ಉಪಯೋಗವಾಗುತ್ತಿತ್ತು: ಅದು ಒಡೆತನವನ್ನು ಸೂಚಿಸುವದಾಗಿತ್ತು, ದೃಢೀಕೃತತೆಗೆ ಖಾತರಿಯಾಗಿರುತ್ತಿತ್ತು, ಮತ್ತು ಭದ್ರತೆಯನ್ನು ಒದಗಿಸುವದಾಗಿತ್ತು. ಪವಿತ್ರಾತ್ಮನ ಮುದ್ರೆಯನ್ನು ಹೊಂದಿರುವದು ಈ ಎಲ್ಲಾ ಉದ್ದೇಶಗಳಿಗೆ ಸಂಬಂಧಪಟ್ಟಿರುತ್ತದೆ: ಅದು ನಮ್ಮನ್ನು ಕರ್ತನಿಗೆ ಸೇರಿದವರೆಂಬದಾಗಿ ಗುರುತಿಸುತ್ತದೆ (ನೋಡಿರಿ 1 ಕೊರಿಂಥ 6:19, 20), ನಾವು ನಿಜಕ್ಕೂ ಕ್ರೈಸ್ತರು ಎಂಬದನ್ನು ಘೋಷಿಸುತ್ತದೆ (8:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಮತ್ತು ನಮಗೆ ದೇವರಿಂದ ಭದ್ರತೆ ಸಿಕ್ಕುವದೆಂಬ ಭರವಸೆಯನ್ನು ಒದಗಿಸುತ್ತದೆ (ನೋಡಿರಿ 8:26-28, 37). ರೋಮಾ 8:9ರಲ್ಲಿ, ಪೌಲನು ದೈವಿಕ ಒಡೆತನದ ಅಂಶವನ್ನು ಎತ್ತಿತೋರಿಸುತ್ತಾನೆ. ಆತನು ಹೀಗೆ ಹೇಳುತ್ತಾನೆ, "ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ." ಆತನು ಗಲಾತ್ಯ 4:6ರಲ್ಲಿ, ದೃಢೀಕರಣದ ವಿಷಯವನ್ನು ಒತ್ತಿ ಹೇಳಿದನು. ಆ ವಚನದಲ್ಲಿ ಪೌಲನು, "ನೀವು ಪುತ್ರರಾಗಿರುವದರಿಂದ ದೇವರು ಅಪ್ಪಾ ತಂದೆಯೇ ಎಂದು ಕೂಗುವ ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು" ಎಂದು ಹೇಳುತ್ತಾನೆ. (ನಮ್ಮನ್ನು ಪುತ್ರರನ್ನಾಗಿ ಮಾಡುವದಕ್ಕೆ ದೇವರು ನಮ್ಮ ಹೃದಯಗಳಲ್ಲಿ ಪವಿತ್ರಾತ್ಮನನ್ನು ಕಳುಹಿಸಲಿಲ್ಲ, ಆದರೆ ನಾವು ಪುತ್ರರಾಗಿರುವದರಿಂದಲೇ ಕಳುಹಿಸಿ ಕೊಟ್ಟನು.)

ಪವಿತ್ರಾತ್ಮ ವರವು "ಸಂಚಕಾರವಾಗಿದ್ದಾನೆ" ಎಂದು ಸಹ ಮಾತಾಡಲ್ಪಟ್ಟಿದೆ. ಈಗಾಗಲೇ ಗಮನಿಸಿದ ವಾಕ್ಯಭಾಗದ ಜೊತೆಯಾಗಿ, 2 ಕೊರಿಂಥ 5:5 ದೇವರ ವಿಷಯದಲ್ಲಿ "ಆತನು ಪವಿತ್ರಾತ್ಮನನ್ನು ಸಂಚಕಾರವಾಗಿ ಅನುಗ್ರಹಿಸಿದ್ದಾನೆ" ಎಂದು ಹೇಳುತ್ತದೆ. "ಸಂಚಕಾರವಾಗಿದ್ದಾನೆ" ಎಂಬುದು ἀρραβών (*arrabōn*) ಎಂಬ ಪದದಿಂದ ಬಂದದ್ದು, ಅದು "ಖರೀದಿಗಾರನು ಠೇವಣಿಯಿಟ್ಟಿರುವ ಮತ್ತು ಖರೀದಿಯು ಪೂರ್ಣಗೊಳ್ಳದ ಪಕ್ಷದಲ್ಲಿ ಜುಲ್ಮಾನೆಯಾಗಿ ತೆಗೆದುಕೊಳ್ಳಲ್ಪಡುತ್ತಿದ್ದ 'ಮುಂಗಡ—ಹಣ'"ವನ್ನು ಸೂಚಿಸುತ್ತದೆ.[170] Bauerನ ಶಬ್ದ ಭಂಡಾರದಲ್ಲಿ ಈ ಅರ್ಥನಿರೂಪಣೆಗಳಿ ರುತ್ತವೆ "ಮೊದಲ ಕಂತು" ಮತ್ತು "ಮುಂಗಡ ಸಲ್ಲಿಕೆ."[171] *Arrabōn* ನ್ನು ವ್ಯಕ್ತಗೊಳಿಸುವ ಇತರೆ ಪದಗಳೆಂದರೆ "ಠೇವಣಿ" ಮತ್ತು "ಜಾಮೀನು."[172]

ಪವಿತ್ರಾತ್ಮನ ವರವು ಯಾವುದರ ಮೇಲೆ ಒಂದು "ಠೇವಣಿ" ಆಗಿರುತ್ತದೆ? ಅದು ಯಾವುದಕ್ಕೆ "ಜಾಮೀನು" ಕೊಡುತ್ತದೆ? ಎಫೆಸ 1:13, 14 ವಚನಗಳು "ವಾಗ್ದಾನಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. ದೇವರು ಸಂಪಾದಿಸಿಕೊಂಡ ಜನರಿಗೆ

*ವಿಮೋಚನೆಯಾಗುವದೆಂಬದಕ್ಕೆ* ಪವಿತ್ರಾತ್ಮನು ನಮ್ಮ *ಬಾಧ್ಯತೆಗೆ* ಸಂಚಕಾರವಾಗಿದ್ದಾನೆ" ಎಂದು ತಿಳಿಸುತ್ತವೆ (ಒತ್ತಿ ಹೇಳಿದ್ದು ನನ್ನದು). ನಂತರ, ಎಫೆಸ 4:30ರಲ್ಲಿ, ಪೌಲನು "ದೇವರ ಪವಿತ್ರಾತ್ಮನನ್ನು . . . ; ಆತನಲ್ಲಿಯೇ *ವಿಮೋಚನೆಯ ದಿನಕ್ಕಾಗಿ* ಮುದ್ರೆ ಹೊಂದಿದ್ದೀರಲ್ಲಾ" ಎಂದು ಮಾತಾಡುವಾಗ ಅದೇ ವಿಚಾರವನ್ನು ತಿಳಿಯಪಡಿಸಲು "ಮುದ್ರೆ" ಎಂಬ ಪದವನ್ನು ಉಪಯೋಗಿಸಿದನು (ಒತ್ತಿ ಹೇಳಿದ್ದು ನನ್ನದು). ಪವಿತ್ರಾತ್ಮನ ವರವು ಪರಲೋಕದ ಮೇಲೆ ಮಾಡಲ್ಪಟ್ಟಿರುವ ಒಂದು ಪವಿತ್ರ "ಠೇವಣಿ" ಆಗಿರುತ್ತದೆ, ನಮ್ಮ ನಿತ್ಯವಾದ ಪ್ರತಿಫಲಕ್ಕಾಗಿ ಒಂದು ದೈವಿಕ "ಜಾಮೀನು" ಆಗಿರುತ್ತದೆ.

ಈ *arrabōn* ಎಂಬದರ ಇನ್ನೊಂದು ಅಂಶವು ಗಮನಿಸುವದಕ್ಕೆ ಯೋಗ್ಯವಾಗಿದೆ. ಬೈಬಲ್ ಕಾಲಗಳಲ್ಲಿ, ಇಬ್ಬರು ವ್ಯಕ್ತಿಗಳು ಭೂಮಿಯನ್ನು ಖರೀದಿಸುವದಕ್ಕೆ ಒಪ್ಪಿಕೊಂಡಾಗ, ಮಾರುವವನು ಕೆಲವು ಸಾರಿ ಭೂಮಿಯಿಂದ ಒಂದು ತುಂಡು ಮೇಲ್ಪದರನ್ನು ಕಿತ್ತು ಒಳ್ಳೇ ನಂಬಿಕೆಗೆ *arrabōn* ರೂಪದಲ್ಲಿ ಖರೀದಿದಾರನಿಗೆ ಕೊಡುತ್ತಿದ್ದನು. ಒಂದು ಮನೆಯು ಮಾರಾಟ ಮಾಡಲ್ಪಡುವ ವೇಳೆಯಲ್ಲಿ, ಮಾರುವವನು ಒಂದು ಒಪ್ಪಂದವನ್ನು ಮಾಡಿಕೊಳ್ಳುವದಕ್ಕೆ ಗುಡಿಸಲಿನ ಚಾವಣಿಯಿಂದ ಒಂದು ಮುಷ್ಟಿಯಷ್ಟು ಹುಲ್ಲನ್ನು ಕಿತ್ತು *arrabōn* ಆಗಿ ಖರೀದಿದಾರನಿಗೆ ಕೊಡುತ್ತಿದ್ದನು. ನಾವು ಪವಿತ್ರಾತ್ಮನ ವರವನ್ನು ಪರಲೋಕದ "ಒಂದು ಜಾಮೀನು" ಆಗಿ ಮಾತ್ರವಲ್ಲದೆ, ನಾವು ಆ ವರವನ್ನು ಸ್ವತಃ ಪರಲೋಕದ "ಒಂದು ತುಣುಕು," ಬರಲಿರುವ ಆಶೀರ್ವಾದಗಳಿಗೆ ಒಂದು ಮುನ್‌ರುಚಿ ಎಂದು ಸಹ ಯೋಚಿಸಿಕೊಳ್ಳತಕ್ಕದ್ದು ಎಂದು ಕೆಲವು ಲೇಖಕರು ಅಭಿಪ್ರಾಯ ಪಡುತ್ತಾರೆ!

*ಪವಿತ್ರಾತ್ಮನ ನಿವಾಸಿಸುವಿಕೆ.* 2 ಕೊರಿಂಥ 1:22ರಲ್ಲಿ, ಪೌಲನು ಪವಿತ್ರಾತ್ಮವರದ ಬಗ್ಗೆ ಮಾತಾಡುವಾಗ, ಆತನು ಹೇಳಿದ್ದೇನೆಂದರೆ ದೇವರು "*ನಮ್ಮ ಹೃದಯಗಳಲ್ಲಿ* ಪವಿತ್ರಾತ್ಮನನ್ನು . . . ಅನುಗ್ರಹಿಸಿದ್ದಾನೆ" (ಒತ್ತಿ ಹೇಳಿದ್ದು ನನ್ನದು). ರೋಮಾ 5:5ರಲ್ಲಿ, ಆತನು "ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು *ನಮ್ಮ ಹೃದಯಗಳಲ್ಲಿ* ಧಾರಾಳವಾಗಿ ಸುರಿದದೆಯಲ್ಲಾ" ಎಂದು ಹೇಳುತ್ತಾನೆ (ಒತ್ತಿ ಹೇಳಿದ್ದು ನನ್ನದು). "ನಮ್ಮ ಹೃದಯಗಳಲ್ಲಿ" ಪವಿತ್ರಾತ್ಮನು ಎಂಬ ಭಾವನೆಯನ್ನು ವ್ಯಕ್ತಪಡಿಸುವದಕ್ಕೆ, ಪವಿತ್ರಾತ್ಮನು ನಮ್ಮಲ್ಲಿ *ವಾಸಿಸುತ್ತಾನೆ* ಎಂದು ಪೌಲನು ಹೇಳಿದನು. ಈ ಮುಂಚೆ ಗಮನಿಸಿದ ಹಾಗೆ, ಆ ವಿಧವಾಗಿ ಪರಿಭಾಷೆಯು ರೋಮಾ 8:9, 11ರಲ್ಲಿ ಮೂರು ಸಾರಿ ಉಪಯೋಗಿಸಲ್ಪಟ್ಟಿತು. ಪೌಲನು ಬೇರೆ ಪತ್ರಿಕೆಗಳಲ್ಲಿ ಸಹ ಆ ವಿಧವಾಗಿ ವ್ಯಕ್ತಗೊಳಿಸುವಿಕೆಯನ್ನು ಉಪಯೋಗಿಸಿರುತ್ತಾನೆ. ಉದಾಹರಣೆಗೆ, 1 ಕೊರಿಂಥ 3:16ರಲ್ಲಿ ಆತನು ಹೀಗೆ ಹೇಳಿದನು, "ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ *ವಾಸಮಾಡುತ್ತಾನೆಂದೂ* ನಿಮಗೆ ಗೊತ್ತಿಲ್ಲವೋ?" (ಒತ್ತಿ ಹೇಳಿದ್ದು ನನ್ನದು; ನೋಡಿರಿ 1 ಕೊರಿಂಥ 6:19; ಎಫೆಸ 2:22). ಪುನಃ, ತಿಮೊಥೆಯನಿಗೆ ಬರೆದ ತನ್ನ ಎರಡನೆಯ ಪತ್ರಿಕೆಯಲ್ಲಿ, ಆತನು ಪವಿತ್ರಾತ್ಮನ ವಿಷಯವಾಗಿ "ನಮ್ಮಲ್ಲಿ *ವಾಸವಾಗಿರುವ* ಪವಿತ್ರಾತ್ಮನ" ಎಂದು ಮಾತಾಡಿದನು (2 ತಿಮೊಥೆ 1:14; ಒತ್ತಿ ಹೇಳಿದ್ದು ನನ್ನದು). "ವಾಸವಾಗಿರುವ" ಎಂದು ಅನುವಾದಿತ ಗ್ರೀಕ್ ಪದದ (οἰκέω, *oikeō* ರಿಂದ ಬಂದ ಪದ) ಅರ್ಥವು "ಒಬ್ಬನಲ್ಲಿ ನಿವಾಸವನ್ನು ಮಾಡಿಕೊಳ್ಳುವದು" ಎಂದಾಗಿರುತ್ತದೆ. ಅದು "ನಿವಾಸಿಸುವವನು" ಈಗ "ನಿವಾಸಿಸುವಿಕೆಯ" ಮೇಲೆ ನಿಯಂತ್ರಣ ಮಾಡುತ್ತಾನೆಂಬುದನ್ನು

ಸೂಚಿಸುತ್ತದೆ.

ಪವಿತ್ರಾತ್ಮನು ನಮ್ಮೊಳಗೆ ವಾಸಿಸುತ್ತಾನೆಂಬ ವಾಸ್ತವಾಂಶವನ್ನು ನಾವು ಅಂಗೀಕರಿಸಿಕೊಳ್ಳುವದಾದರೆ, ಅದು ನಮ್ಮ ಜೀವಿತಗಳಲ್ಲಿ ಒಂದು ವ್ಯತ್ಯಾಸವನ್ನುಂಟು ಮಾಡತಕ್ಕದ್ದು (1 ಕೊರಿಂಥ 3:16, 17; 6:19, 20). ದೇವರು ಅಥವಾ ಕ್ರಿಸ್ತನು ನಿಮ್ಮ ಮನೆಯಲ್ಲಿ ವಾಸಮಾಡುವದಕ್ಕೆ ಬರುತ್ತಿದ್ದಾನೆಂಬ ಸುದ್ಧಿಯನ್ನು ನೀವು ಕೇಳಿದಾಗ, ಏನು ಮಾಡುವಿರಿ? ಬಹುಶಃ ನೀವು ಅವಸರದಿಂದ ಮನೆಗೆ ಓಡಿ ಹೋಗಿ ಮನೆಯನ್ನು ಶುಭ್ರಗೊಳಿಸಲಾರಂಬಿಸುವಿರಿ—ಮತ್ತು ನೀವು ಆ ಕೆಲಸವನ್ನು ಅರೆಮನಸ್ಸಿನಿಂದ ಮಾಡುವದಿಲ್ಲ. ಕೆಲವರ ಪ್ರಕಾರ, "ಮನೆಯನ್ನು ಶುಭ್ರಗೊಳಿಸುವದು" ಎಂದರೆ ಯಾವುದನ್ನಾದರೂ ಕಣ್ಣಿಗೆ ಬೀಳದಂತೆ ಕಪಾಟಿನಲ್ಲೋ ಅಥವಾ ಮಂಚದ ಕೆಳಗೋ ಸಿಕ್ಕಿಸಿ ಬಿಡುವದಾಗಿರುತ್ತದೆ. ಹೇಗೂ, *ದೇವರು* ಅವರೊಂದಿಗೆ ವಾಸಮಾಡಲು ಬರುವದಾಗಿದ್ದಲ್ಲಿ, ಅವರು *ಪ್ರತಿಯೊಂದು* ಸ್ಥಳವನ್ನು ಶುಚಿಗೊಳಿಸುವರು. ನಾವು ಪವಿತ್ರಾತ್ಮನಿಗೆ ವಾಸಸ್ಥಳ ಆಗಿದ್ದೇವೆ. ಆತನು ಪರಿಶುದ್ಧನಾಗಿರುವ ಕಾರಣದಿಂದ *ಪವಿತ್ರವಾದ ಆತ್ಮ* ಎಂದು ಕರೆಯಲ್ಪಟ್ಟಿದ್ದಾನೆ. ಆತನು ನಮ್ಮೊಳಗೆ ವಾಸಿಸಬೇಕೆಂದರೆ, ನಾವು ಪರಿಶುದ್ಧವಾದ ಜೀವಿತಗಳನ್ನು ನಡಿಸತಕ್ಕದ್ದು. ಈ ಸತ್ಯವನ್ನು ನಿರೂಪಿಸುವದೇ ಪೌಲನು ರೋಮಾ 8ನೇ ಅಧ್ಯಾಯದ ಮಾತುಗಳನ್ನು ಬರೆಯುವದರ ಉದ್ದೇಶಗಳ ಲ್ಲೊಂದಾಗಿತ್ತು: ಪವಿತ್ರಾತ್ಮನು ನಿಮ್ಮಲ್ಲಿ ಜೀವಿಸುತ್ತಿರುವದರಿಂದ, ನೀವು ಅದರಂತೆಯೇ *ನಡೆದು*ಕೊಳ್ಳಬೇಕು (ನೋಡಿರಿ 8:13).

ಅನೇಕರನ್ನು ಚಿಂತನೆಗೀಡು ಮಾಡುವ ಪ್ರಶ್ನೆಯೆಂದರೆ *ಹೇಗೆ*, ಅಥವಾ ಯಾವ ಅರ್ಥದಲ್ಲಿ, ಪವಿತ್ರಾತ್ಮನು ನಮ್ಮಲ್ಲಿ ವಾಸ ಮಾಡುತ್ತಾನೆ ಎಂಬುದೇ. ನಿವಾಸಮಾಡುವಿಕೆ "ಹೇಗೆ" ಎಂಬ ವಿಷಯದಲ್ಲಿ ವಿವರಿಸಲು ಪೌಲನು ಯಾವದೇ ಯತ್ನವನ್ನು ಮಾಡಲಿಲ್ಲ. ಆತನು ಕೇವಲ ಪವಿತ್ರಾತ್ಮನು ನಮ್ಮಲ್ಲಿ ವಾಸಿಸುತ್ತಾನೆ ಮತ್ತು ಅದು ನಮ್ಮ ಮೇಲೆ ಕನಿಷ್ಠ ಎರಡು ವಿಧದಲ್ಲಿ ಪರಿಣಾಮ ಬೀರತಕ್ಕದ್ದು ಎಂದಷ್ಟೇ ಆತನು ಹೇಳಿದನು: ಅದು ನಮ್ಮನ್ನು ದೃಢವಿಶ್ವಾಸದಿಂದ ತುಂಬಿಸತಕ್ಕದ್ದು, ಮತ್ತು ಅದು ನಮ್ಮನ್ನು ದೇವರಿಗೋಸ್ಕರ ಜೀವಿಸುವದಕ್ಕೆ ದೃಢಸಂಕಲ್ಪ ಮಾಡಿಕೊಳ್ಳುವಂತೆ ನಡಿಸತಕ್ಕದ್ದು.

ಈ ಮುಂಚೆ ಗಮನಿಸಿರುವ ಹಾಗೆಯೇ, ದೈವತ್ವದಲ್ಲಿನ ಒಬ್ಬ ವ್ಯಕ್ತಿಯು ಏನು ಮಾಡುವನೋ, ಅದನ್ನು ಮಿಕ್ಕವರು ಸಹ ಮಾಡುವವರಾಗಿದ್ದಾರೆ. ಆದುದರಿಂದ, ನಮ್ಮಲ್ಲಿ ತಂದೆ ಮತ್ತು ಕುಮಾರನು ಸಹ ವಾಸ ಮಾಡುತ್ತಾರೆಂಬದನ್ನು ಓದುವಾಗ ನಮಗೆ ಆಶ್ಚರ್ಯವೇನೂ ಅನ್ನಿಸುವದಿಲ್ಲ. 1 ಯೋಹಾನ 4:15ರಲ್ಲಿ ನಾವು ಹೀಗೆ ಓದುತ್ತೇವೆ, "ಯೇಸು ದೇವರ ಮಗನಾಗಿದ್ದಾನೆಂದು ಯಾವನು ಒಪ್ಪಿಕೊಂಡು ಹೇಳುತ್ತಾನೋ ಅವನಲ್ಲಿ ದೇವರು ನೆಲೆಗೊಂಡಿದ್ದಾನೆ, ಅವನು ದೇವರಲ್ಲಿ ನೆಲೆಗೊಂಡಿದ್ದಾನೆ." ಗಲಾತ್ಯ 2:20ರಲ್ಲಿ, ಪೌಲನು ಹೀಗೆ ಹೇಳುತ್ತಾನೆ, "ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ."

ದೇವರು ಅಥವಾ ಕ್ರಿಸ್ತನು ನಮ್ಮಲ್ಲಿ ವಾಸ ಮಾಡುವ ಕುರಿತಾಗಿ ಮಾತಾಡುವ ವಾಕ್ಯಭಾಗಗಳಲ್ಲಿ, ತಂದೆ ಅಥವಾ ಕುಮಾರನು ವಾಸಿಸುವದು/ನೆಲೆಗೊಂಡಿರುವದು ಎಷ್ಟು ಸಾರಿ ಪವಿತ್ರಾತ್ಮನೊಂದಿಗೆ ಸಂಬಂಧ ಕಲ್ಪಿಸಲ್ಪಟ್ಟಿರುತ್ತದೆ ಎಂಬುದನ್ನು ಗಮನಿಸುವದು ಯೋಗ್ಯವಾಗಿರುತ್ತದೆ. ಉದಾಹರಣೆಗೆ, ಯೋಹಾನ 14:23-ಪವಿತ್ರಾತ್ಮನನ್ನು ಕಳುಹಿಸಿ

ಕೊಡುತ್ತೇನೆಂಬ ಯೇಸುವಿನ ವಾಗ್ದಾನದ ಸನ್ನಿವೇಶಕ್ಕನುಸಾರವಾಗಿ (ಯೋಹಾನ 14:16, 17, 26)—ಹೇಳುವದೇನೆಂದರೆ ದೇವರು ಮತ್ತು ಕ್ರಿಸ್ತನು ಕ್ರಿಸ್ತನ ವಾಕ್ಯವನ್ನು ಕೈಕೊಂಡು ನಡೆಯುವವರಲ್ಲಿ ನೆಲೆಗೊಳ್ಳುವರು ಎಂಬದೇ. ಎಫೆಸ 3:16, 17ರಲ್ಲಿ, ಪೌಲನು ತನ್ನ ವಾಚಕರಿಗೋಸ್ಕರ ಪ್ರಾರ್ಥಿಸುತ್ತಾ ದೇವರು ಅವರಿಗೆ "ದೇವರಾತ್ಮನ ಮೂಲಕ ಅಂತರ್ಯದಲ್ಲಿ ವಿಶೇಷ ಬಲ ಹೊಂದಿದವರಾಗುವ ಹಾಗೆಯೂ ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ ಆತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ" ಎಂದು ಬೇಡಿಕೊಳ್ಳುತ್ತಾನೆ. ಯೋಹಾನನು ಹೀಗೆ ಬರೆದನು, "ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವನು ಆತನಲ್ಲಿ ನೆಲೆಗೊಂಡಿರುತ್ತಾನೆ, ಆತನು ಇವನಲ್ಲಿ ನೆಲೆಗೊಂಡಿರುತ್ತಾನೆ. ನಮ್ಮಲ್ಲಿ ನೆಲೆಗೊಂಡಿದ್ದಾನೆಂದು ಆತನು ನಮಗೆ ಅನುಗ್ರಹಿಸಿದ ಆತ್ಮನಿಂದಲೇ ಬಲ್ಲೆವು" (1 ಯೋಹಾನ 3:24). ಅದೇ ಪತ್ರಿಕೆಯಲ್ಲಿ ಸ್ವಲ್ಪ ಹೊತ್ತಿನ ನಂತರ, ಆತನು ಹೇಳಿದ್ದೇನೆಂದರೆ, ". . . ದೇವರು ನಮ್ಮಲ್ಲಿ ನೆಲೆಗೊಂಡಿದ್ದಾನೆ, ಮತ್ತು ಆತನಿಂದಾಗುವ ಪ್ರೀತಿಯು ನಮ್ಮಲ್ಲಿ ಸಿದ್ಧಿಗೆ ಬರುತ್ತದೆ. ದೇವರು ನಮಗೆ ತನ್ನ ಆತ್ಮದಲ್ಲಿ ಪಾಲನ್ನು ಅನುಗ್ರಹಿಸಿದ್ದರಿಂದಲೇ ನಾವು ಆತನಲ್ಲಿ ನೆಲೆಗೊಂಡಿದ್ದೇವೆಂತಲೂ ಆತನು ನಮ್ಮಲ್ಲಿ ನೆಲೆಗೊಂಡಿದ್ದಾನೆಂತಲೂ ತಿಳಿದುಕೊಳ್ಳುತ್ತೇವೆ" (1 ಯೋಹಾನ 4:12, 13).

ಬಹುಶಃ ಈ ವಿಧವಾದ ವಾಕ್ಯಭಾಗಗಳೇ ಕೆಲವರನ್ನು ದೇವರು ಮತ್ತು ಕ್ರಿಸ್ತನು ನಮ್ಮಲ್ಲಿ ಪ್ರಾತಿನಿಧ್ಯಾತ್ಮಕವಾಗಿ ವಾಸಿಸಿದರೆ, ಪವಿತ್ರಾತ್ಮನು ವೈಯಕ್ತಿಕವಾಗಿ ವಾಸಿಸುತ್ತಾನೆಂಬ ನಿರ್ಧಾರಕ್ಕೆ ಬರುವಂತೆ ಸ್ಫೂರ್ತಿಗೊಳಿಸಿರಬಹುದಾಗಿದೆ.[173] ಗತಕಾಲದಲ್ಲಿ, ಕ್ರೈಸ್ತ ಲೇಖಕರು ಹಳೇ ಒಡಂಬಡಿಕೆಯ ಕಾಲಗಳನ್ನು "ತಂದೆಯ ಯುಗ" (the dispensation of the Father) ಎಂದೂ, ಕ್ರಿಸ್ತನು ಭೂಮಿಯಲ್ಲಿದ್ದ ಕಾಲವನ್ನು "ಕ್ರಿಸ್ತನ ಯುಗ" (the dispensation of the Son) ಎಂದೂ, ಮತ್ತು ಕ್ರೈಸ್ತ ಯುಗವನ್ನು "ಪವಿತ್ರಾತ್ಮನ ವ್ಯವಸ್ಥೆ" (the dispensation of the Holy Spirit) ಎಂದೂ ಕರೆಯುವದು ಸಾಮಾನ್ಯವಾಗಿರುತ್ತದೆ.[174]

*ಪವಿತ್ರಾತ್ಮನ ನಿವಾಸಮಾಡುವಿಕೆಯು ಕ್ರೈಸ್ತರಿಗೆ ಸಹಾಯ ಮಾಡುವ ದಾರಿಗಳು.* ಪವಿತ್ರಾತ್ಮನು ನಿವಾಸ ಮಾಡುವಿಕೆಯು ಕ್ರೈಸ್ತರಿಗೆ ಏನು ಮಾಡುತ್ತದೆಂಬದ ಕುರಿತು ಪ್ರಾಥಮಿಕ ವಾಕ್ಯಭಾಗವೆಂದರೆ ರೋಮಾ 8ನೇ ಅಧ್ಯಾಯ. ಈ ಶ್ರೇಷ್ಠ ಅಧ್ಯಾಯವು ಪವಿತ್ರಾತ್ಮನ "ಮೇಲ್ಸೆಳೆತ"ವನ್ನು ಕುರಿತು (8:2); ನಮ್ಮ ದೇಹದ ಪುನರುತ್ಥಾನದಲ್ಲಿ ಪವಿತ್ರಾತ್ಮನ ಪಾತ್ರ (8:11); ಮತ್ತು ಪವಿತ್ರಾತ್ಮನ ಮೂಲಕ, ನಾವು ದೇಹದ ದುರಭ್ಯಾಸಗಳನ್ನು ನಾಶಗೊಳಿಸಬಲ್ಲೆವು ಎಂಬ ವಾಸ್ತವಾಂಶದ ಕುರಿತು ಕಲಿಸುತ್ತದೆ (8:13). ಅಲ್ಲದೆ ಅದು ಪವಿತ್ರಾತ್ಮನಿಂದ ನಡಿಸಿಕೊಳ್ಳಲ್ಪಡುವದರ ಕುರಿತು (8:14), ಪವಿತ್ರಾತ್ಮನು ನಮ್ಮ ಆತ್ಮದೊಂದಿಗೆ ಸಾಕ್ಷಿ ಹೇಳುವದರ ಕುರಿತು (8:16), ಮತ್ತು ನಮ್ಮ ಅಶಕ್ತಿಯಲ್ಲಿ ಪವಿತ್ರಾತ್ಮನು ನಮಗೆ ಸಹಾಯ ಮಾಡುವ ಕುರಿತು (8:26) ಸಹ ಉಪದೇಶಿಸುತ್ತದೆ. ಮತ್ತೊಂದು ಸಾರಿ, ಪವಿತ್ರಾತ್ಮನು ಈ ಕಾರ್ಯಗಳನ್ನು ಹೇಗೆ ಮಾಡುತ್ತಾನೆಂಬ ವಿಷಯದಲ್ಲಿ ವಿವಾದವಿರುತ್ತದೆ—ಮತ್ತು, ಮತ್ತೊಂದು ಸಾರಿ, ಪೌಲನು "ಹೇಗೆ" ಎಂಬದನ್ನು ವಿವರಿಸುವದಕ್ಕೆ ಯಾವದೇ ಯತ್ನವನ್ನು ಮಾಡಲಿಲ್ಲ. ಆತನು ಕೇವಲ

ಪವಿತ್ರಾತ್ಮನು ಮಾಡುತ್ತಾನೆ ಮತ್ತು, ತತ್ಫಲಿತವಾಗಿ, ನಾವು ಅದನ್ನು ಅಂಗೀಕರಿಸಿಕೊಳ್ಳಬೇಕು ಎಂದಷ್ಟೇ ಹೇಳುತ್ತಾನೆ.

ಪವಿತ್ರಾತ್ಮನು ನಮಗೆ ಸಹಾಯ ಮಾಡುವ ಒಂದು ಮುಖಾಂತರವೆಂದರೆ ತಾನು ಪ್ರೇರಿಸಿದ ವಾಕ್ಯದಿಂದಲೇ ಆಗಿದೆ. ಎಫೆಸ 6:17ರಲ್ಲಿ, ವಾಕ್ಯವು "ಪವಿತ್ರಾತ್ಮನು ಕೊಡುವ ದೇವರ ವಾಕ್ಯವೆಂಬ ಕತ್ತಿ" ಎಂದು ಕರೆಯಲ್ಪಟ್ಟಿದೆ. ನಾವು ಪವಿತ್ರಾತ್ಮನ ಸೇವೆಯ ನೋಟವನ್ನು ಮೀತಿಗೊಳಿಸುವ ಸಾಹಸಕ್ಕೆ ಕೈಹಾಕದಿರೋಣ. ವಾಕ್ಯವು ನಮ್ಮೊಳಗೆ ನಂಬಿಕೆಯನ್ನು ಉಂಟು ಮಾಡುತ್ತದೆ (ರೋಮಾ 10:17), ನಮ್ಮನ್ನು ಶುದ್ಧ ಮಾಡುತ್ತದೆ (ಯೋಹಾನ 15:3; ನೋಡಿರಿ ಅಪೊಸ್ತಲರ ಕೃತ್ಯಗಳು 15:9), ನಮ್ಮನ್ನು ಪರಿಶುದ್ಧರನ್ನಾಗಿಸುತ್ತದೆ (ಯೋಹಾನ 17:17, 19), ನಮ್ಮಲ್ಲಿ ಕಾರ್ಯಮಾಡುತ್ತದೆ (1 ಥೆಸಲೋನಿಕ 2:13), ಮತ್ತು ನಮ್ಮನ್ನು ರಕ್ಷಿಸುತ್ತದೆ (ಯಾಕೋಬ 1:21; ನೋಡಿರಿ 1 ಪೇತ್ರ 1:22, 23). ಪೌಲನು ನಮಗೆ "ದೇವರಾತ್ಮನಿಂದ ಉಂಟಾಗುವ ಫಲ"ವನ್ನು ಕೊಡುವಂತೆ ಸವಾಲುಗೊಳಿಸುತ್ತಾನೆ (ಗಲಾತ್ಯ 5:22, 23)—ಆದರೆ ಬೀಜವಿಲ್ಲದೆ ಯಾವ ಫಲವು ಬರಲಾರದು, ಮತ್ತು ಅದು "ದೇವರ ವಾಕ್ಯವೆಂಬ ಬೀಜ"ವೇ (ಲೂಕ 8:11).

ಕೆಲವರು ಪವಿತ್ರಾತ್ಮನ ಸೇವೆಯನ್ನು ವಾಕ್ಯಕ್ಕೆ ಮಾತ್ರವೇ ಸಿಮೀತಗೊಳಿಸುತ್ತಾರೆ, ಆದರೆ ಮೀತಿಗೊಳಿಸುವಿಕೆಯು ಅತಿರೇಕವೇನಿಸುತ್ತದೆ. ಈ ಮುಂಚೆ, ನಾವು ಗಮನಿಸಿದ್ದೇನೆಂದರೆ ಪವಿತ್ರಾತ್ಮನ ವರವು ಕ್ರೈಸ್ತ ಯುಗಕ್ಕೆ ವಿಶಿಷ್ಟವಾಗಿರುವಂತದ್ದು ಮತ್ತು ಅದು ಕ್ರೈಸ್ತೇತರರು ಹೊಂದಿಕೊಳ್ಳಲಾಗದಂತಹ ಸಂಗತಿಯಾಗಿದೆ. ಹೇಗೂ, ಹಳೇ ಒಡಂಬಡಿಕೆಯಲ್ಲಿರುವವರು ಪ್ರವಾದಿಗಳ ಮೂಲಕ ವಾಕ್ಯವನ್ನು ಪಡೆಯುತ್ತಿದ್ದರು, ಮತ್ತು ಇಂದು ಕ್ರೈಸ್ತೇತರರು ಬೈಬಲ್‌ನ ಒಂದು ಗ್ರಂಥವನ್ನು ಸ್ವಂತಕ್ಕೆ ಇಟ್ಟುಕೊಳ್ಳಬಹುದಾಗಿದೆ. ಬಹುಶಃ ನಾವು *ದೇವರ* ಆತ್ಮನ ಕುರಿತಾಗಿ ಮಾತಾಡುತ್ತಿದ್ದೇವೆಂಬುದನ್ನು ನಮಗೆ ಜ್ಞಾಪಿಸಿಕೊಳ್ಳುವದಾದರೆ ಸಹಾಯಕವಾಗಬಹುದು. ದೇವರು ನಮಗೆ ತನ್ನ ವಾಕ್ಯವನ್ನು ಕೊಟ್ಟ ಬಳಿಕ ನಮ್ಮನ್ನು ಕೈಬಿಟ್ಟುಬಿಟ್ಟನೋ? ಆತನು ಈಗಲೂ ತನ್ನ ಜನರ ಜೀವಿತಗಳಲ್ಲಿ ಕಾರ್ಯಮಾಡುವದನ್ನು ಮುಂದುವರೆಸಿರುವದಿಲ್ಲವೋ? ಪ್ರಾರ್ಥನೆಯಲ್ಲಿ ಉದ್ದೇಶ ಮತ್ತು ಶಕ್ತಿಗಳಿರುವದಿಲ್ಲವೋ (ಯಾಕೋಬ 5:16)?

ರೋಮಾ 8:28 ಘೋಷಿಸುವದೇನೆಂದರೆ ದೇವರು ನಮ್ಮ ಜೀವಿತಗಳಲ್ಲಿ ಅಗತ್ಯಕ್ಕನುಸಾರವಾಗಿ ಕೆಲಸ ಮಾಡುತ್ತಾನೆ. ದೈವತ್ವದಲ್ಲಿನ ಒಬ್ಬ ಸದಸ್ಯನು ಏನನ್ನು ಮಾಡುತ್ತಾನೆಂದು ಹೇಳಲಾಗುತ್ತದೋ ಅದನ್ನು ಮಿಕ್ಕವರು ಸಹ ಮಾಡುವರೆಂಬದನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ರೋಮಾ 8:28ರ ಸನ್ನಿವೇಶವು ಯಾವದೆಂದರೆ ಕ್ರೈಸ್ತನೊಬ್ಬನ ಜೀವಿತದಲ್ಲಿ ಪವಿತ್ರಾತ್ಮನ ಕಾರ್ಯ ಎಂಬುದೆ (ನೋಡಿರಿ 8:26, 27). ಆದ್ದರಿಂದ ನಾವು ಈ ಮುಕ್ತಾಯಕ್ಕೆ ಬರುತ್ತೇವೆ, ಏನೆಂದರೆ ಪವಿತ್ರಾತ್ಮನು ನಮ್ಮ ಜೀವಿತಗಳಲ್ಲಿ ಅಗತ್ಯಕ್ಕನುಸಾರವಾಗಿ ಕೆಲಸ ಮಾಡುತ್ತಾನೆ, "ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲ" ವಾಗುವ ಹಾಗೆ ಸಂಭವಗಳನ್ನು ಕ್ರಮಪಡಿಸುವ ಮೂಲಕ ಮಾಡುತ್ತಾನೆ.

ಪವಿತ್ರಾತ್ಮನು ನಮ್ಮಲ್ಲಿ ವಾಸಿಸುವ ಸಾಮರ್ಥ್ಯದಲ್ಲಿ ನಮಗೋಸ್ಕರ ಬೇರೆ ಇನ್ನೇನನ್ನಾದರೂ ಮಾಡುವನೋ? ರೋಮಾಪುರದವರಿಗೆ ಪತ್ರಿಕೆಯ ನಂತರದ ಭಾಗದಲ್ಲಿ, ನಾವು ಈ ಅಂತ್ಯಾಶೀರ್ವಾದವನ್ನು ಕಾಣುತ್ತೇವೆ: ನಿರೀಕ್ಷೆ ಮೂಲನಾದ ದೇವರು

ನಂಬಿಕೆಯಿಂದುಂಟಾಗುವ ಸಂತೋಷವನ್ನೂ ಮನಶ್ಶಾಂತಿಯನ್ನೂ ನಿಮಗೆ ಪರಿಪೂರ್ಣವಾಗಿ ದಯಪಾಲಿಸಿ ನೀವು *ಪವಿತ್ರಾತ್ಮನ ಬಲಗೂಡಿದವರಾಗಿ* ನಿರೀಕ್ಷೆಯಲ್ಲಿ ಅಭಿವೃದ್ಧಿಯನ್ನು ಹೊಂದುವಂತೆಯೂ ಅನುಗ್ರಹಿಸಲಿ (15:13; ಒತ್ತಿ ಹೇಳಿದ್ದು ನನ್ನದು). ಈ ಮುಂಚೆ, ಪೌಲನು ಎಫೆಸದವರಿಗೋಸ್ಕರ ಮಾಡಿದ ಪ್ರಾರ್ಥನೆಯಿಂದ ಉಲ್ಲೇಖ ಮಾಡಿದೆವು: "ನೀವು *ದೇವರಾತ್ಮನ ಮೂಲಕ ಆಂತರ್ಯದಲ್ಲಿ ವಿಶೇಷಬಲ ಹೊಂದಿದವರಾಗುವ* ಹಾಗೆಯೂ ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ ಆತನು [ದೇವರು] ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ" (ಎಫೆಸ 3:16; ಒತ್ತಿ ಹೇಳಿದ್ದು ನನ್ನದು). ಆ ಪ್ರಾರ್ಥನೆಯ ನಂತರ ಒಂದು ಅಂತ್ಯಾಶೀರ್ವಾದವು ಇರುತ್ತದೆ:

> ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದ ದೇವರಿಗೆ ಸಭೆಯಲ್ಲಿಯೂ ಕ್ರಿಸ್ತ ಯೇಸುವಿನಲ್ಲಿಯೂ ತಲಾತಲಾಂತರಕ್ಕೂ ಯುಗಯುಗಾಂತರಕ್ಕೂ ಸ್ತೋತ್ರ. ಆಮೆನ್ (ಎಫೆಸ 3:20, 21).

ಮತ್ತೊಂದಾವರ್ತಿ, ಪೌಲನು ವಾಸ್ತವಾಂಶಗಳನ್ನು ಮುಂದಿಡುತ್ತಾನೆ ಮತ್ತು "ಹೇಗೆ" ಎಂಬುದನ್ನು ವಿವರಿಸುವದಕ್ಕೆ ಯಾವ ಯತ್ನವನ್ನೂ ಮಾಡುವದಿಲ್ಲ.

*ದೇವರು ಒದಗಿಸಿದ್ದನ್ನು ಸ್ವಂತವಾಗಿಸಿಕೊಳ್ಳುವುದು*. ನಮಗೆ ಅದು ಪೂರ್ತಿಯಾಗಿ ಅರ್ಥವಾಗುತ್ತದೋ ಇಲ್ಲವೋ, ದೇವರು ತನ್ನ ಪವಿತ್ರಾತ್ಮನ ಮೂಲಕವಾಗಿ ಕ್ರೈಸ್ತರಿಗೋಸ್ಕರ ಅದ್ಭುತವಾದ ಸಂಪನ್ಮೂಲಗಳನ್ನು ಲಭ್ಯಗೊಳಿಸಿರುತ್ತಾನೆಂದು ಹೊಸ ಒಡಂಬಡಿಕೆಯು ಕಲಿಸುತ್ತದೆ. ಸಂಪನ್ಮೂಲಗಳು ಲಭ್ಯವಿರುತ್ತವೆಂಬ ವಾಸ್ತವಾಂಶವು ಅವುಗಳು ಉಪಯೋಗಪಡಿಸಿಕೊಳ್ಳಲ್ಪಡುವವು ಎಂಬ ಅರ್ಥವನ್ನು ಕೊಡುವದಿಲ್ಲ. ನಾನು ಸಮುದ್ರದೊಳಗೆ ಬಿದ್ದಂಥ ಒಬ್ಬ ಮನುಷ್ಯನ ಕುರಿತು ಓದಿದೆನು. ಆತನ ಪ್ರಾಣ ಉಳಿಸಿಕೊಳ್ಳುವದಕ್ಕಾಗಿ ಅವನಿಗೊಂದು ಜೀವರಕ್ಷಕವನ್ನು ಎಸೆಯಲಾಯಿತು, ಆದರೆ ಆತನು ಅದನ್ನು ಎಳೆದು ಹಿಡಿದುಕೊಳ್ಳುವದಕ್ಕೆ ನಿರಾಕರಿಸಿದನು—ಮತ್ತು ಮುಳುಗಿ ಹೋದನು. ನಾನು ತನ್ನ ಸಾಲದ ಕಂತುಗಳನ್ನು ಕಟ್ಟುವದಕ್ಕೆ ವಿಫಲನಾಗಿ ತನ್ನ ಮನೆಯನ್ನು ಕಳೆದುಕೊಂಡ ಮತ್ತೊಬ್ಬ ವ್ಯಕ್ತಿಯ ಬಗ್ಗೆ ಓದಿದೆನು. ಆತನು ತನ್ನ ಉಳಿದ ದಿನಗಳನ್ನು ಮನೆಯಿಲ್ಲದವನಾಗಿ ಬೀದಿಗಳಲ್ಲಿ ಅಲೆದಾಡುತ್ತಾ ಕಳೆದನು. ಆತನ ಮರಣದ ತರುವಾಯದಲ್ಲಿ, ಅವನ ಬ್ಯಾಂಕ್ ಖಾತೆಯಲ್ಲಿ $100,000 ಡಾಲರ್‌ಗಳಿರುವದು ಪತ್ತೆಯಾಯಿತು. ಆತನ ಬಳಿಯಲ್ಲಿ ಅವನಿಗೆ ಅಗತ್ಯವಾದ ಸಂಪನ್ಮೂಲಗಳಿದ್ದವು—ಆದರೆ, ಯಾವದೋ ಕಾರಣದಿಂದ, ಆತನು ಅವುಗಳನ್ನು ಉಪಯೋಗಿಸಬಾರದೆಂದು ತೀರ್ಮಾನಿಸಿದ್ದನು. ದೇವರು ನಮಗೆ ಕ್ರೈಸ್ತ ಜೀವನಗಳನ್ನು ನಡಿಸುವದಕ್ಕೆ ಅಗತ್ಯವಾಗಿರುವ ಸಂಪನ್ಮೂಲಗಳನ್ನು ಒದಗಿಸಿದ್ದಾನೆ, ಆದರೆ ಅವುಗಳ ಪ್ರಯೋಜನವನ್ನು ಪಡೆದುಕೊಳ್ಳುವುದು ನಮಗೆ ಬಿಟ್ಟ ವಿಚಾರ.

ದೇವರು ಒದಗಿಸಿರುವದನ್ನು ನಾವು *ಹೇಗೆ* ಸ್ವಂತವಾಗಿಸಿಕೊಳ್ಳುತ್ತೇವೆ? ನಾವು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ, ಪವಿತ್ರಾತ್ಮನು ನಮ್ಮನ್ನು ತನ್ನ ನಿವಾಸವಾಗಿ

ಮಾಡಿಕೊಳ್ಳುತ್ತಾನೆ—ಆತನು ನಮ್ಮೊಳಗೆ ವಾಸಿಸುತ್ತಾನೆ (ಅಪೊಸ್ತಲರ ಕೃತ್ಯಗಳು 2:38; ರೋಮಾ 8:11). ನಾವು ಪವಿತ್ರಾತ್ಮನನ್ನು ಒಬ್ಬ ಅಥಿತಿಯಂತೆ ಸಂತೋಷದಿಂದ ಸ್ವಾಗತಿಸುತ್ತೇವೋ ಅಥವಾ ಒಬ್ಬ ಬಯಸದೆ ಬಂದ ಭೇಟಿಗಾರನೆಂದು ನಿರ್ಲಕ್ಷಿಸುತ್ತೇವೋ ಎಂಬುದನ್ನು ನಾವೊಬ್ಬೊಬ್ಬರೂ ನಿರ್ಧರಿಸಬೇಕಾಗಿದೆ.

1 ಥೆಸಲೋನಿಕ 5:19 ರಲ್ಲಿ, ಪೌಲನು ಹೀಗೆ ಬರೆದನು, "ಪವಿತ್ರಾತ್ಮನನ್ನ ನಂದಿಸಬೇಡಿರಿ."[175] ಇಲ್ಲಿ ಸಾದೃಶ್ಯವು ಬೆಂಕಿಯನ್ನು ನಂದಿಸುವದಕ್ಕೆ ಅದರ ಮೇಲೆ ನೀರನ್ನು ಎಸೆಯುವದಾಗಿರುತ್ತದೆ. ಈ ಸಾಂಕೇತಿಕ ಭಾಷೆಯು ಪ್ರಥಮ ಶತಮಾನದ ಕ್ರೈಸ್ತರಿಗೆ ಬಲವಾಗಿ ಮನಃಸ್ಪರ್ಶಿಸುವಂತೆ ಮಾತಾಡುವದಾಗಿತ್ತು. ಬೆಂಕಿಯು ಬೆಚ್ಚಗಿರುವದಕ್ಕಾಗಿ ಮತ್ತು ಅಡುಗೆ ಮಾಡುವದಕ್ಕಾಗಿ ಅಗತ್ಯವಾಗಿತ್ತು. ಬೆಳಕನ್ನು ಪಡೆಯುವದಕ್ಕೆ ಅದೊಂದೇ ಮೂಲವಾಗಿತ್ತು. ಬೆಂಕಿಯು ನಂದಿಸಲ್ಪಟ್ಟರೆ, ಅವರು ಚಳಿಯಲ್ಲಿ, ಹಸಿವೆ, ಮತ್ತು ಕತ್ತಲೆಯಲ್ಲಿರಬೇಕಿತ್ತು. ಪವಿತ್ರಾತ್ಮನು ಅನೇಕ ವಿಧಗಳಲ್ಲಿ "ನಂದಿಸಲ್ಪ"ಡಬಹುದು. ಕೆಲವು ಸ್ಪಷ್ಟವಾಗಿರುವ ವಿಧಗಳನ್ನು ನೋಡೋಣ:

*ಅಜ್ಞಾನದ ಮೂಲಕವಾಗಿ*—ಅಂದರೆ, ದೇವರ ವಾಕ್ಯದ ಕುರಿತ ಅಜ್ಞಾನ. ನಾವು ಏನು ಮಾಡಬೇಕೆಂದು ಪವಿತ್ರಾತ್ಮನು ಇಚ್ಛಿಸುತ್ತಾನೆಂಬುದನ್ನು ತಿಳಿಯುವದಕ್ಕೆ ನಮಗಿರುವ ಏಕೈಕ *ವಸ್ತುನಿಷ್ಠ* ದಾರಿಯೆಂದರೆ ಆತನು ಪ್ರೇರಿಸಿದ ಗ್ರಂಥವನ್ನು ಓದುವದು ಮತ್ತು ಅಧ್ಯಯನ ಮಾಡುವದು.

*ಅಪನಂಬಿಕೆಯ ಮೂಲಕವಾಗಿ.* ಕೆಲವರು ಬೈಬಲ್ ಏನು ಹೇಳುತ್ತದೆಂಬುದು ಗೊತ್ತಿರುತ್ತದೆ, ಆದರೆ ಅದು ನಿಜವಾಗಿಯೂ ದೇವರಾತ್ಮನಿಂದ ಪ್ರೇರಿಸಲ್ಪಟ್ಟದ್ದೋ ಎಂಬ ಬಗ್ಗೆ ನಿಶ್ಚಯತೆಯನ್ನು ಹೊಂದಿರುವದಿಲ್ಲ.

*ಉದಾಸೀನತೆಯ ಮೂಲಕವಾಗಿ.* ಕೆಲವರು ಬೈಬಲ್‌ನುಸಾರದ ಉಪದೇಶದ ಬಗ್ಗೆ ಬಲ್ಲವರಾಗಿರುತ್ತಾರೆ, ಆದರೆ ಅವರಿಗೆ ವಾಕ್ಯದ ವಿಧಿಗಳನ್ನು ಅನುಸರಿಸುವದಕ್ಕೆ ಆಸಕ್ತಿಯಿರುವದಿಲ್ಲ.

*ಅವಿಧೇಯತೆಯ ಮೂಲಕವಾಗಿ.* ಕೆಲವರು ವಾಕ್ಯದಲ್ಲಿ ಪವಿತ್ರಾತ್ಮನಿಂದ ಕೊಡಲ್ಪಟ್ಟಿರುವ ಉಪದೇಶಗಳಿಗೆ ಅಲ್ಪವಾದ ಗಮನವನ್ನು ಕೊಡುತ್ತಾರೆ ಅಥವಾ ಸಂಪೂರ್ಣ ನಿರ್ಲಕ್ಷಿಸುತ್ತಾರೆ; ಅವರು ತಮ್ಮ ಸ್ವದಾರಿಯಲ್ಲಿ ಸಾಗುವದಕ್ಕೆ ಪಟ್ಟುಹಿಡಿಯುತ್ತಾರೆ. ರೋಮಾ 8ನೇ ಅಧ್ಯಾಯದ ಭಾಷೆಯಲ್ಲಿ ಹೇಳುವದಾದರೆ, ಅವರು ತಮ್ಮ ಶರೀರಭಾವಕ್ಕೆ ಅನುಸಾರವಾಗಿ ನಡೆಯುವವರೇ ಹೊರತು ಪವಿತ್ರಾತ್ಮನ ಅನುಸಾರವಾಗಿ ಅಲ್ಲ.

ನಾವು ಪವಿತ್ರಾತ್ಮನನ್ನು "ನಂದಿಸ"ಬಹುದು ಮಾತ್ರವಲ್ಲದೆ, ನಾವು ಆತನನ್ನು "ದುಃಖಪಡಿಸುವ"ದಕ್ಕೆ ಸಹ ಸಾಧ್ಯವಿರುತ್ತದೆ. ಪೌಲನು ಎಫೆಸದವರಿಗೆ ಹೀಗೆ ಹೇಳಿದನು, "ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ" (ಎಫೆಸ 4:30). ನೀವು ಎಂದಾದರೂ ನಿಮಗೆ ಪ್ರೀತಿಪಾತ್ರರಾದವರಿಂದ, ನೀವು ಸಹಾಯ ಮಾಡಲು ಮತ್ತು ಅಲೋಚನೆಯನ್ನು ಹೇಳುವದಕ್ಕೆ ಇಚ್ಛೆಸಿದ್ದಿರಿ ಆದರೆ ನಿಮ್ಮ ಸಹಾಯವನ್ನು ತಿರಸ್ಕರಿಸಿದ ಒಬ್ಬರಿಂದ ದುಃಖಪಡಿಸಲ್ಪಟ್ಟಿದ್ದೀರೋ? ಹಾಗಾದರೆ ದೇವರ ಮಕ್ಕಳು ಪವಿತ್ರಾತ್ಮನ ವಾಕ್ಯವನ್ನು ನಿರ್ಲಕ್ಷಿಸಿ ಆತನ ಸಹಾಯವನ್ನು ನಿರಾಕರಿಸುವಾಗ ಆತನಿಗೆ ಹೇಗೆ ಅನ್ನಿಸುತ್ತದೆಂಬುದನ್ನು

ನಿಮಗೆ ಅರ್ಥವಾಗುತ್ತದೆ. ಗತಕಾಲದ ಒಬ್ಬ ಪ್ರಖ್ಯಾತ ಬೋಧಕನು ಒಮ್ಮೆ ನಾವು ಎಷ್ಟು ರೀತಿಗಳಲ್ಲಿ ದೇವರಾತ್ಮನನ್ನು ದುಃಖಪಡಿಸಿದ್ದೇವೆಂಬುದನ್ನು ನ್ಯಾಯತೀರ್ಪಿನ ದಿನದಂದು ತಿಳಿದುಕೊಳ್ಳುವಾಗ ಬಹುಶಃ ನಾವೆಲ್ಲರೂ ಆಶ್ಚರ್ಯಗೊಳ್ಳುವೆವು ಎಂದು ಹೇಳಿದನು.

ಪವಿತ್ರಾತ್ಮನನ್ನು ನಂದಿಸುವ ಹಾಗೂ ದುಃಖಗೊಳಿಸುವದರ ಜೊತೆಯಲ್ಲಿ, ನಾವು "ಅಪಮಾನ" ಮಾಡಬಲ್ಲೆವು. ಇಬ್ರಿಯ ಪುಸ್ತಕದ ಲೇಖಕನು ಹೇಳಿದ್ದೇನೆಂದರೆ ಕ್ರೈಸ್ತರು "ಬೇಕೆಂದು ಪಾಪಮಾಡಿದರೆ" (ಇಬ್ರಿಯ 10:26) "ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ" (ಅಪಮಾನ) ಮಾಡಿದ್ದಾರೆ ಎಂಬದೆ (ಇಬ್ರಿಯ 10:29). ನನಗೆ ಅಪಮಾನಗೊಳಿಸಲ್ಪಡುವದು ಇಷ್ಟವಿಲ್ಲ, ನಿಮಗೆ? ಹಾಗೆಯೇ ಪವಿತ್ರಾತ್ಮನಿಗೂ ಇಷ್ಟವಿರುವದಿಲ್ಲ. ಹೇಗೂ, ನಾವು ಜೀವಿಸಬೇಕೆಂದು ದೇವರು ಇಚ್ಛಿಸುವದಕ್ಕೆ ವಿರುದ್ಧವಾಗಿ ಜೀವಿಸುವದನ್ನು ನಾವು ಮುಂದುವರೆದಾಗ, ನಾವು ಸರಿಯಾಗಿ ಅದನ್ನೇ ಮಾಡುವವರಾಗಿದ್ದೇವೆ.

ಈಗ ನಾವು ಸಕಾರಾತ್ಮಕವಾದದ್ದರೆಡೆಗೆ ಸಾಗೋಣ: ನಾವು ಹೇಗೆ ಪವಿತ್ರಾತ್ಮನನ್ನು ಸಂತೋಷದಿಂದ ಬರಮಾಡಿಕೊಳ್ಳುವ ಅಥಿತಿಯಾಗಿ ನಡಿಸಿಕೊಳ್ಳಬಹುದು ಮತ್ತು ಆತನಿಂದ ಸಹಾಯ ಪಡೆದುಕೊಳ್ಳಬಹುದು. ಎಫೆಸ 5:18-19aರಲ್ಲಿ, ಪೌಲನು "ಮದ್ಯಪಾನ ಮಾಡಿ ಮತ್ತರಾಗ ಬೇಡಿರಿ; ಅದರಿಂದ ಪಟಿಂಗತನವು ಹುಟ್ಟುತ್ತದೆ. ಆದರೆ ಪವಿತ್ರಾತ್ಮಭರಿತರಗಿದ್ದು . . ." ಎಂದು ಹೇಳುತ್ತಾನೆ. ಈ ವಚನದಲ್ಲಿ ಹಲವಾರು ತದ್ವಿರುದ್ಧತೆಗಳು ಕಂಡುಬರುತ್ತವೆ. ಮದ್ಯಪಾನದಿಂದ ತುಂಬಿರುವದರ ಬದಲಾಗಿ, ನಾವು ದೇವರಾತ್ಮನಿಂದ ತುಂಬಿದವರಾಗಿರಬೇಕು. ಮದ್ಯಪಾನಕ್ಕೆ ನಮ್ಮ ಮೇಲೆ ನಿಯಂತ್ರಣ ಮಾಡುವಂತೆ ಅನುಮತಿಸುವ ಬದಲಾಗಿ, ನಾವು ಪವಿತ್ರಾತ್ಮನಿಂದ ನಿಯಂತ್ರಣದಲ್ಲಿರಬೇಕು. ಮದ್ಯಪಾನದ ಮೇಲೆ ಆತುಕೊಳ್ಳುವದರ ಬದಲಾಗಿ, ನಾವು ದೇವರ ಆತ್ಮನ ಮೇಲೆ ಅವಲಂಭಿತರಾಗಿರಬೇಕು. ನಾನು ಈ "ಪವಿತ್ರಾತ್ಮಭರಿತರಾಗಿದ್ದು" ಎಂಬ ಮಾತುಗಳನ್ನು ಅಲೋಚಿಸುವಾಗ, ಪೌಲನು ಇಲ್ಲಿ ಶಬ್ದಾಡಂಭರವನ್ನು ತೋರ್ಪಡಿಸುತ್ತಿದ್ದಾನೋ ಎಂದು ಚಕಿತನಾಗುತ್ತೇನೆ.

ಪವಿತ್ರಾತ್ಮನು (πνεῦμα, *pneuma*) ಎಂಬದಕ್ಕಾಗಿರುವ ಪದವೇ "ಗಾಳಿ" ಎಂಬುದಕ್ಕೆ ಸಹ ಉಪಯೋಗಿಸಲ್ಪಡುತ್ತದೆ. ಪೌಲನ ವಾಚಕರಿಗೆ ಗಾಳಿಯ ಮೇಲೆಯೇ ಅವಲಂಬಿತಗೊಂಡಿದ್ದ ಹಾಯಿ ದೋಣಿಗಳ ಬಗ್ಗೆ ಪರಿಚಯವಿತ್ತು. ಒಂದು ಹಡಗು ಗಾಳಿಯಿಂದ ಮುಂದಕ್ಕೆ ನೂಕಲ್ಪಡಬೇಕಾಗಿದ್ದರೆ, ಅದರ ಹಾಯಿಗಳು ಸೂಕ್ತಸ್ಥಾನದಲ್ಲಿ *ಸ್ಥಿರಪಡಿಸಬೇಕಿತ್ತು*. ಅವುಗಳು ಸರಿಯಾಗಿ ಸ್ಥಿರಪಡಿಸಿ ನಿಲ್ಲಿಸಲ್ಪಟ್ಟರೆ, ಅವುಗಳು ಗಾಳಿಯಿಂದ ತುಂಬಲ್ಪಟ್ಟು ಹಡಗು ಮುಂದಕ್ಕೆ ಸಾಗಲು ಸಾಧ್ಯವಾಗುತ್ತಿತ್ತು. ರೋಮಾ 8ನೇ ಅಧ್ಯಾಯದಲ್ಲಿ, ನಮ್ಮ ಮನಸ್ಸುಗಳು ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳ ಮೇಲಿರಬೇಕು ಎಂಬದಾಗಿ ಪೌಲನು ಒತ್ತಿಹೇಳಿದನು (8:5, 6). ನಮ್ಮ ಮನಸ್ಸುಗಳ ಆ ರೀತಿಯಲ್ಲಿ ಮಾಡಿದಾಗ, ಪವಿತ್ರಾತ್ಮನು ಸೂಕ್ತವಾಗಿ ನಿಲ್ಲಿಸಲ್ಪಟ್ಟಿರುವ ಹಾಯಿಯಲ್ಲಿ ಗಾಳಿಯು ತುಂಬಿಕೊಳ್ಳಲ್ಪಡುವ ರೀತಿಯಲ್ಲಿಯೇ ನಮ್ಮ ಜೀವಿತಗಳನ್ನು ತುಂಬಿಸುವನು. ನಾನು ನನಗೆ ಗೊತ್ತಿರುವಷ್ಟು ಸರಳ ಮಾತುಗಳಲ್ಲಿ ಹೇಳುತ್ತೇನೆ: ಪವಿತ್ರಾತ್ಮನು ನನ್ನ ಜೀವಿತವನ್ನು ತುಂಬಿಸಬೇಕು ಮತ್ತು ಒಬ್ಬ ಕ್ರೈಸ್ತನಾಗಿ ಇರಬೇಕಾಗಬಹುದೆಲ್ಲವೂ ಆಗಿರುವಂತೆ ನನಗೆ

ಸಹಾಯ ಮಾಡಬೇಕೆಂದು ನಾನು ಇಚ್ಛಿಸುವದಾದರೆ, ನನಗೆ ಎಲ್ಲಕ್ಕಿಂತಲೂ ಮೇಲಾಗಿ ದೇವರ ಚಿತ್ತವನ್ನು ಮಾಡಬೇಕೆಂಬ ಒಂದು ಮನೋಧರ್ಮವು (ಮನೋರೂಢಿ) ಇರತಕ್ಕದ್ದು.

ಪವಿತ್ರಾತ್ಮನು ನಿಮ್ಮ ಜೀವಿತವನ್ನು ಆಶೀರ್ವದಿಸುವದಕ್ಕೆ ಮುಂಚೆ ನೀವು ಪವಿತ್ರಾತ್ಮನ ನಿಮ್ಮಲ್ಲಿ ವಾಸಮಾಡುವಿಕೆ ಮತ್ತು ಆತನ ಕೆಲಸದ ಕುರಿತು ಸಮಸ್ತವನ್ನೂ ತಿಳಿದುಕೊಳ್ಳಬೇಕಾಗಿರುತ್ತದೋ? ಆ ಪ್ರಶ್ನೆಗೆ ಉತ್ತರವು ಇಲ್ಲ ಎಂದಿರುತ್ತದೆಂಬದಕ್ಕಾಗಿ ನಾವು ಕೃತಜ್ಞತೆಯುಳ್ಳವರಾಗಿರಬಹುದು, ಯಾಕೆಂದರೆ ಯಾರೊಬ್ಬರೂ ಪವಿತ್ರಾತ್ಮನ ಬಗ್ಗೆ ಎಲ್ಲವನ್ನೂ ತಿಳುಕೊಂಡಿದ್ದೇವೆಂದು ಹೇಳಿಕೊಳ್ಳುವದಕ್ಕಾಗುವದಿಲ್ಲ. ನಾವು ಆತನ ಸಹಾಯವನ್ನು ಹೇಗೆ *ನಮ್ಮದಾಗಿಸಿಕೊಳ್ಳುತ್ತೇವೆ* ಎಂಬುದೇ ಪ್ರಾಮುಖ್ಯವಾದದ್ದು. ನಾನು ಚಿಕ್ಕವನಾಗಿದ್ದಾಗ, ಕೆಲವೊಂದು ಸಾರಿ ತೋಟವನ್ನು ಮಾಡುತ್ತಿದ್ದೆನು. ಬೀಜಗಳು ಹೇಗೆ ಮೊಳಕೆಯೊಡೆದು ಬೆಳೆಯುತ್ತವೆಂಬುದು ನನಗೆ ಅರ್ಥವಾಗುತ್ತಿರಲಿಲ್ಲ; ಆದರೆ ಅವುಗಳನ್ನು ಭೂಮಿಯಲ್ಲಿ ಹೇಗೆ ನೆಡಬೇಕು, ನೀರು ಹಾಕಬೇಕು, ಗೊಬ್ಬರ ನೀಡಬೇಕು, ಮತ್ತು ತೋಟದಲ್ಲಿ ಕಳೆಗಳಿರದಂತೆ ನೋಡಿಕೊಳ್ಳಬೇಕೆಂಬುದು ನನಗೆ ತಿಳಿದಿತ್ತು. ನಾನು ಮಿಕ್ಕದ್ದೆಲ್ಲವನ್ನೂ ದೇವರ ಕೈಗಳಲ್ಲಿ ಬಿಟ್ಟೆನು—ಮತ್ತು ಆತನು ನನಗೆ ಫಸಲನ್ನು ಅನುಗ್ರಹಿಸಿದನು. ಅದೇ ರೀತಿಯಲ್ಲಿಯೇ, ಪವಿತ್ರಾತ್ಮನು ಹೇಗೆ ನನ್ನೊಳಗೆ ವಾಸಿಸುತ್ತಾನೆ ಮತ್ತು ಆತನು ಹೇಗೆ ನನ್ನನ್ನು ಆಶೀರ್ವದಿಸುತ್ತಾನೆ ಎಂಬುದನ್ನು ಪೂರ್ತಿಯಾಗಿ ನನಗೆ ಅರ್ಥವಾಗುವದಿಲ್ಲ. ನನಗೆ ಗೊತ್ತಿರುವದೆಂದರೆ ನಾನು ಹೇಗೆ ಜೀವಿಸಬೇಕೆಂದು ದೇವರು ಇಚ್ಛಿಸುತ್ತಾನೆಂಬುದೇ. ನಾನು ಅದನ್ನು ಮಾಡಲು ಪ್ರಯತ್ನಿಸುತ್ತೇನೆ, ಮತ್ತು ಮಿಕ್ಕದ್ದೆಲ್ಲವನ್ನು ದೇವರ ಕೈಗಳಿಗೆ ಬಿಡುತ್ತೇನೆ. ಕ್ರೈಸ್ತ ಜೀವಿತವನ್ನು ಅರವತ್ತಕ್ಕೂ ಹೆಚ್ಚು ವರ್ಷಗಳ ವರೆಗೆ ಜೀವಿಸಿದ ಬಳಿಕ, ದೇವರು ನನ್ನನ್ನು ಎಂದಿಗೂ ನಿರಾಶೆಗೊಳಿಸಲಿಲ್ಲ ಎಂಬ ಸಾಕ್ಷಿಯನ್ನು ಹೇಳಬಲ್ಲೆನು. ತಂದೆ, ಕುಮಾರ, ಮತ್ತು ಪವಿತ್ರಾತ್ಮರು ಪಟ್ಟಿ ಮಾಡುವದಕ್ಕಾಗದಷ್ಟು ಅಸಂಖ್ಯಾತವಾದ ಆಶೀರ್ವಾದ ಗಳಿಂದ ನನ್ನನ್ನು ತುಂಬಿಸಿರುತ್ತಾರೆ.

*ಮುಕ್ತಾಯ.* ಈ ಮುಂಚೆ, ಪವಿತ್ರಾತ್ಮನು ನಮ್ಮೊಳಗೆ ವಾಸಿಸುತ್ತಾನೆಂಬುದನ್ನು ನಾವು ಹೇಗೆ ತಿಳುಕೊಳ್ಳಬಲ್ಲೆವು ಎಂಬದಾಗಿ ಕೇಳಿದೆನು, ಮತ್ತು ಅದಕ್ಕೆ ನಾನು ಬೈಬಲ್ ಇದನ್ನು ಕಲಿಸುತ್ತದೆ ಮತ್ತು ನಂಬಿಕೆಯಿಂದ ಅದನ್ನು ನಾವು ಅಂಗೀಕರಿಸಿಕೊಳ್ಳುತ್ತೇವೆಂದು ಹೇಳಿದೆನು. ಈ ಪ್ರಶ್ನೆಯ ಕುರಿತಾಗಿ McGarveyಯು ಒಂದು ಹೆಚ್ಚುವರಿ ವ್ಯಾಖ್ಯೆಯನ್ನು ಮಾಡುತ್ತಾನೆ:

> . . . ಪವಿತ್ರಾತ್ಮನ ಸಹಾಯವು, ವಾಸ್ತವ ಮತ್ತು ಪರಿಣಾಮಕರ ಆಗಿದ್ದಾಗ್ಯೂ, ಅದು ಸಹಾಯ ಮಾಡಲ್ಪಡುವವನನ್ನು ಆ ಸಹಾಯವನ್ನು . . . ಗಮನಕ್ಕೆ [ತನ್ನ ಇಂದ್ರಿಯಗಳಿಂದ] ತೆಗೆದುಕೊಳ್ಳುವಂತೆ ಶಕ್ತಗೊಳಿಸುವಷ್ಟು ಮುನ್ನುಗ್ಗುವಂಥದಲ್ಲ. ಎಲ್ಲಾ ತೋರಿಕೆಗಳಿಗೆ ಮತ್ತು [ದೈಹಿಕ] ಸಂವೇದನೆಗೆ ಶರೀರಭಾವದ ಜಯವು ಸಂಪೂರ್ಣ ಕ್ರೈಸ್ತನಿಗೆ ಸ್ವಂತ, ಮತ್ತು ಆತನು ತನ್ನ ಭಾರಗಳು . . . ಹಗುರಗೊಂಡಿವೆಯೆಂದು [ಆತನು ಗ್ರಹಿಸುವವನಾಗಿದ್ದಾನೆ] ಎಂಬ ಕಾರಣಕ್ಕಾಗಿ ಅಲ್ಲ, ಆದರೆ ಸರಿಯಾದದ್ದನ್ನು ಮಾಡಬೇಕೆಂದಬ ತನ್ನ ಪ್ರಯತ್ನಗಳಲ್ಲಿ [ಮುಂಚೆ] ವಿಫಲನಾಗುತ್ತಿದ್ದವನು ಈಗ ಸಫಲನಾಗುತ್ತಿದ್ದಾನೆಂಬ ವಾಸ್ತವಾಂಶದ ಕಾರಣದಿಂದಲೇ.[176]

ದೇವರ ಒಬ್ಬ ಮಗುವು[177] ತನ್ನ ಜೀವಿತವನ್ನು ತುಂಬುವಂತೆ ಪವಿತ್ರಾತ್ಮನಿಗೆ ಅವಕಾಶ ಕೊಟ್ಟಿದ್ದಾನೋ ಅಥವಾ ಪವಿತ್ರಾತ್ಮನನ್ನು ನಂದಿಸಿದ್ದಾನೋ ಎಂಬುದನ್ನು ತಿಳಿದುಕೊಳ್ಳಲು ಒಂದು ಪರೀಕ್ಷೆಯನ್ನು ಮಾಡಿಕೊಳ್ಳಬಹುದು. ಆ ಪರೀಕ್ಷೆಯು ಯಾವದೆಂದರೆ ಆತನ ಜೀವಿತದಲ್ಲಿ "ದೇವರಾತ್ಮನಿಂದ ಉಂಟಾಗುವ ಫಲ"ವು ವಿಕಾಸಗೊಳ್ಳುತ್ತಿದೆಯೋ ಎಂದು ನೋಡುವದೇ: "ದೇವರಾತ್ಮನಿಂದ ಉಂಟಾಗುವ ಫಲವೇನಂದರೆ—ಪ್ರೀತಿ ಸಂತೋಷ ಸಮಾಧಾನ ದೀರ್ಘಶಾಂತಿ ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ ಇಂಥವುಗಳೇ" (ಗಲಾತ್ಯ 5:22, 23). ಇವೆಲ್ಲವೂ ನಮ್ಮ ಕರ್ತನು ಹೊಂದಿದ್ದಂತಹ ಗುಣಗಳಾಗಿರುವದರಿಂದ, George Bailey ಈ ಆಲೋಚನೆಯನ್ನು ಹೀಗೆ ವ್ಯಕ್ತಪಡಿಸುತ್ತಾನೆ: "ಪ್ರಿಯರೇ, ಪವಿತ್ರಾತ್ಮನು ನಮ್ಮೊಳಗೆ ವಾಸಿಸುವದರ ಅಂತಿಮವಾದ ಉದ್ದೇಶವು ಮನುಷ್ಯರೊಳಗೆ ಕ್ರಿಸ್ತನ ಸೌಂದರ್ಯ ಮತ್ತು ಮಹಿಮೆಯನ್ನು ಪುನರುತ್ಪಾದಿಸುವದೇ ಆಗಿರುತ್ತದೆ. ನಿಮಗೆ ಭೂಮಿಯಲ್ಲಿ ಪರಲೌಕಿಕ tulip ಟ್ಯೂಲಿಪ್ ಹೂಗಳು [ಗಡ್ಡೆಯಿಂದ ಬೆಳೆಯುವ ಹೂ] ಭೂಮಿಯ ಮೇಲೆ ಕಾಣಬೇಕೆಂದು ಬಯಸಿದರೆ ಅದರ ಗೆಡ್ಡೆಗಳನ್ನು ಪರಲೋಕದಿಂದಲೇ ಆಮದು ಮಾಡಿಕೊಳ್ಳತಕ್ಕದ್ದು."[178] ನಮ್ಮ ಜೀವಿತಗಳಲ್ಲಿ "ದೇವರಾತ್ಮನಿಂದ ಉಂಟಾಗುವ ಫಲ" ಕಾಣುವಂತಾಗುವ ಹಾಗೆ ಪವಿತ್ರಾತ್ಮಾನುಸಾರವಾಗಿ ನಡೆಯಲು ದೇವರು ನಮಗೆ ಸಹಾಯ ಮಾಡಲಿ!

ಇಲ್ಲೊಂದು ಎಚ್ಚರಿಕೆಯ ಮಾತು ಸೂಕ್ತವಾಗಿರುತ್ತದೆ. ಕೆಲವರು ಪವಿತ್ರಾತ್ಮನ ಮತ್ತು ಆತನ ಕಾರ್ಯಗಳ ವಿಷಯದಲ್ಲಿ ಎಷ್ಟೊಂದು ತಲ್ಲೀನರಾಗಿರುತ್ತಾರೆಂದರೆ, ಅವರು ಕುಮಾರನಿಗಿಂತಲೂ ಪವಿತ್ರಾತ್ಮನಿಗೆ ಹೆಚ್ಚು ಗಮನವನ್ನು ಹರಿಸುತ್ತಾರೆ. ಖಂಡಿತವಾಗಿಯೂ, ಇದು ಪವಿತ್ರಾತ್ಮನಿಗೆ ದುಃಖವುಂಟು ಮಾಡುವದಾಗಿರಬೇಕಷ್ಟೆ. ಪವಿತ್ರಾತ್ಮನು ಬೈಬಲ್‌ನ್ನು ಪ್ರೇರಿಸಿದಾಗ, ತನ್ನನ್ನು ಪ್ರಕಟಿಸಿಕೊಳ್ಳುವದಾಗಲಿ ಅಥವಾ ತನ್ನನ್ನು ಹೆಚ್ಚಿಸಿಕೊಳ್ಳುವದಾಗಲಿ ಆತನ ಉದ್ದೇಶವಾಗಿರಲಿಲ್ಲ. ಯೇಸುವ ಹೀಗೆ ಹೇಳಿದನು, ". . . ನಾನು ನಿಮಗೆ ಕಳುಹಿಸಿಕೊಡುವ ಸಹಾಯಕನು, ಅಂದರೆ . . . ಸತ್ಯದ ಆತ್ಮನು ಬಂದಾಗ ಆತನು *ನನ್ನನ್ನು* ಕುರಿತು ಸಾಕ್ಷಿಹೇಳುವನು" (ಯೋಹಾನ 15:26; ಒತ್ತಿ ಹೇಳಿದ್ದು ನನ್ನದು). ಪೌಲನು, "ಪವಿತ್ರಾತ್ಮನನ್ನೇ ಹೊರತು ಬೇರೆ ಯಾವುದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು" ಎಂದು ಹೇಳಲಿಲ್ಲ. ಬದಲಾಗಿ, ಆತನು ಹೀಗೆ ಹೇಳಿದನು, "ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವುದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು" (1 ಕೊರಿಂಥ 2:2). ಅಪೊಸ್ತಲನು ಹೀಗೆ ಹೇಳಲಿಲ್ಲ, "ನನಗಾದರೋ ಪವಿತ್ರಾತ್ಮನ ಕೆಲಸದಲ್ಲಿಯೇ ಹೊರತು ಹೆಚ್ಚಳಪಡುವದು ಬೇಡವೇ ಬೇಡ." ಬದಲಾಗಿ ಆತನು, "ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವದು ಬೇಡವೇ ಬೇಡ" ಎಂದು ಹೇಳಿದನು (ಗಲಾತ್ಯ 6:14). ನಮಗೆ ಸಾಧ್ಯವಾದಷ್ಟು ಪವಿತ್ರಾತ್ಮನ ಹಾಗೂ ಆತನ ಕೆಲಸದ ಕುರಿತಾಗಿ ಕಲಿತುಕೊಳ್ಳೋಣ, ಆದರೆ ನಾವು ಯೇಸುವನ್ನು ಹಿಂಬಾಲಿಸುವಂತೆ ಸಹಾಯ ಮಾಡುವದಕ್ಕಾಗಿಯೂ ದೇವರಿಗೆ ನಮ್ಮನ್ನು ಸಮೀಪ ತರುವದಕ್ಕಾಗಿಯೂ ಪವಿತ್ರಾತ್ಮನು ದಯಪಾಲಿಸಲ್ಪಟ್ಟಿದ್ದಾನೆಂಬ ವಾಸ್ತವಾಂಶದ ಮೇಲಿನಿಂದ ನಮ್ಮ ದೃಷ್ಟಿಯನ್ನು ಕಳೆದುಕೊಳ್ಳದಿರೋಣ.

## ಪವಿತ್ರಾತ್ಮನು ಇಲ್ಲದಿದ್ದರೆ (8:9)

ರೋಮಾ 8:9 ಹೇಳುತ್ತದೆ "ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ." George Tipps ಇದರ ಬಗ್ಗೆ ವ್ಯಾಖ್ಯೆಯನ್ನು ಮಾಡಿದಾಗ, ಆತನು "ಕ್ರಿಸ್ತನ ಆತ್ಮನು" ಎಂಬುದನ್ನು ಕ್ರೈಸ್ತನ *ಹೃದಯಬಡಿತ* ಎಂದು ಕರೆದನು. ಆತನು ಗಮನಕ್ಕೆ ತಂದದ್ದೇನೆಂದರೆ, ಒಬ್ಬ ರೋಗಿಯು ಸತ್ತಿದ್ದಾನೋ ಅಥವಾ ಬದುಕಿದ್ದಾನೋ ಎಂಬುದನ್ನು ನಿರ್ಧರಿಸಲು ಪ್ರಯತ್ನಿಸುವ ವೇಳೆ, ಒಬ್ಬ ವೈದ್ಯನು ಮೊದಲು ನಾಡಿ ಹಾಗೂ ಹೃದಯಬಡಿತವನ್ನು ಪರೀಕ್ಷಿಸುತ್ತಾನೆ. ಅವನಲ್ಲಿ ಹೃದಯಬಡಿತ ಇಲ್ಲವಾದಲ್ಲಿ, ಆ ವ್ಯಕ್ತಿಯು ಸತ್ತವನಷ್ಟೇ. ಅದೇ ರೀತಿಯೇ, ಕ್ರಿಸ್ತನ ಆತ್ಮವಿಲ್ಲದೆ, ಒಬ್ಬನು ಆತ್ಮೀಕವಾಗಿ ಸತ್ತವನಷ್ಟೇ ಎಂದು Tipps ಹೇಳುತ್ತಾನೆ![179]

## ದೇವರ ಅತ್ಯಾಶ್ಚರ್ಯಕರವಾದ ಪ್ರೀತಿ (8:14-17)

ನಮ್ಮನ್ನು ತನ್ನ ಮಕ್ಕಳೆಂಬದಾಗಿ ಕರೆಯುವದರಲ್ಲಿ ದೇವರ ಪ್ರೀತಿಯು ಎಷ್ಟು ಶ್ರೇಷ್ಠವಾದದ್ದು ಎಂಬುದು ರೋಮಾ 8:14-17ರಲ್ಲಿ ಕಂಡು ಬರುತ್ತದೆ. ಖಂಡಿತವಾಗಿಯೂ, ದೇವರ ಪುತ್ರರು ಹಾಗೂ ಪುತ್ರಿಯರು ಎಂದು ಕರೆಯಿಸಿಕೊಳ್ಳುವದು ಒಂದು ಅತ್ಯಮೋಘವಾದ ಆಶೀರ್ವಾದವಾಗಿರುತ್ತದೆ! Stott ಹೀಗೆ ಬರೆಯುತ್ತಾನೆ,

> ಈ ವಾಕ್ಯಪರಿಚ್ಛೇದ ಕುರಿತು ತಕ್ಷಣವೇ ಗಮನಾರ್ಹವಾದದ್ದೇನೆಂದರೆ ಅದರ ನಾಲ್ಕು ವಚನಗಳಲ್ಲಿ ಒಂದೊಂದರಲ್ಲಿಯೂ ದೇವರ ಜನರನ್ನು ಮಕ್ಕಳು ಅಥವಾ ಪುತ್ರರು (ಅದರಲ್ಲಿ ಖಂಡಿತವಾಗಿಯೂ 'ಪುತ್ರಿಯರು' ಸಹ ಸೇರಿರುತ್ತಾರೆ) ಎಂದು ಕರೆಯಲಾಗಿರುತ್ತದೆ, ಮತ್ತು ಈ ಪ್ರತಿಯೊಂದು ಸೌಭಾಗ್ಯದ ಸ್ಥಾನವು ಪವಿತ್ರಾತ್ಮನ ಕೆಲಸದೊಂದಿಗೆ ಸಂಬಂಧ ಹೊಂದಿರುತ್ತದೆ ಎಂಬುದೇ.[180]

1 ಯೋಹಾನ 3:1ರಲ್ಲಿ, ಯೋಹಾನನು ಹೀಗೆ ಬರೆಯುತ್ತಾನೆ, "ದೇವರ ಮಕ್ಕಳೆಂಬ [τέκνον (*teknon*) ಎಂಬುದರ ಬಹುವಚನ] ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ; ನಾವು ಆತನ ಮಕ್ಕಳಾಗಿದ್ದೇವೆ." ಈ ವಾಕ್ಯಪರಿಚ್ಛೇದವು ಅಚ್ಚರಿ, ವಿಸ್ಮಯದಿಂದ ಸಹ ತುಂಬಿರುತ್ತದೆ. ವಿಶ್ವದ ಸೃಷ್ಟಿಕರ್ತನು—ಸಮಸ್ತದ ಒಡೆಯನು—ನಮ್ಮ *ತಂದೆ*ಯಾಗಿದ್ದಾನೆ, ಮತ್ತು ನಾವು ಆತನ *ಮಕ್ಕಳು*. "ಎಂಥಾ" ಎಂಬುದು ποταπός (*potapos*) ಎಂಬ ಪದದಿಂದ ಅನುವಾದಿಸಲ್ಪಟ್ಟಿದೆ, ಅದರ ಮೂಲ ಅರ್ಥವು "ಯಾವ ದೇಶದ್ದು"[181] ಎಂದಾಗಿತ್ತು. J. W. Roberts ಹೀಗೆ ಹೇಳುತ್ತಾನೆ, "ನಮ್ಮನ್ನು ಆತನ ಮಕ್ಕಳಾಗುವಂತೆ ಅನುಮತಿಸುವ ದೇವರ ಪ್ರೀತಿಯು, ಎಷ್ಟೊಂದು ದೊಡ್ಡದು ಮತ್ತು ಅದ್ಭುತವಾದದ್ದೆಂದರೆ ಅದನ್ನು ಈ ಲೋಕದಲ್ಲಿ ಯಾವದರೊಂದಿಗೂ ಹೋಲಿಕೆ ಮಾಡುವದಕ್ಕೆ ಸಾಧ್ಯವಿಲ್ಲದ್ದು."[182] ಒಬ್ಬ ಲೇಖಕನು ದೇವರ ಪ್ರೀತಿಯನ್ನು ಒಂದು "ಈ ಲೋಕದಲ್ಲಿಯೇ ಇಲ್ಲದಂತಹ ಒಂದು ಪ್ರೀತಿ"[183] ಎಂದು ಕರೆಯುತ್ತಾನೆ.

## ಕ್ರಿಸ್ತನಿಗೋಸ್ಕರ ಬಾಧೆಯನ್ನನುಭವಿಸುವದು (8:14-17)

8:14-17ರಲ್ಲಿ, ನಾವು ದೇವರ ಮಕ್ಕಳಾಗಿರುವದರ ಬಗ್ಗೆ ಪೌಲನು ಮಾತಾಡಿದನು. ಆತನು ಈ ವಿಧದಲ್ಲಿ ತನ್ನ ಆಲೋಚನೆಗಳನ್ನು ಪರಾಕಾಷ್ಠೆಗೆ ತೆಗೆದುಕೊಂಡು ಹೋದನು:

“ನಾವು ದೇವರ ಮಕ್ಕಳಾಗಿದ್ದೇವೆಂಬದಕ್ಕೆ . . . ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಭಾಧ್ಯರು” (8:16b, 17a). ದೇವರ ಬಾಧ್ಯರಾಗಿರುವದೆಂದರೆ ಅದೊಂದು ರೋಮಾಂಚಕಾರಿ ಭವಿಷ್ಯದ ನಿರೀಕ್ಷೆಯಾಗಿರುತ್ತದೆ—ಆದರೆ ಪೌಲನ ಮುಂದಿನ ಮಾತುಗಳ ಮೂಲಕ ನಾವು ಪುನಃ ಇಲ್ಲಿ ಮತ್ತು ಈಗ ಎಂಬುದಕ್ಕೆ ಕರೆತರಲ್ಪಡುತ್ತೇವೆ: “ಹೇಗಂದರೆ ಕ್ರಿಸ್ತನಿಗೆ ಸಂಭವಿಸಿದ *ಬಾಧೆಗಳಲ್ಲಿ* ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು” (8:17b; ಒತ್ತಿ ಹೇಳಿದ್ದು ನನ್ನದು).

ಕೆಲವು ಧಾರ್ಮಿಕ ಗುಂಪುಗಳು ಬಾಧೆಯನ್ನನುಭವಿಸಬೇಕೆಂಬ ವಾಸ್ತವಿಕತೆಯನ್ನು ಅಲ್ಲಗಳೆದರೆ, ಇನ್ನು ಕೆಲವು ಗುಂಪುಗಳು ಕ್ರೈಸ್ತರು ಎಂದಿಗೂ ಬಾಧೆಯನ್ನು ಅನುಭವಿಸಲೇಕೂಡದು ವಾದಿಸುತ್ತವೆ. ತದ್ವಿರುದ್ಧವಾದದ್ದೇನೆಂದರೆ, ಆದಾಮ ಮತ್ತು ಹವ್ವಳು ನಿಷೇಧಿಸಲ್ಪಟ್ಟ ಹಣ್ಣನ್ನು ತಿಂದ ದಿನದಿಂದ ಮೊದಲ್ಗೊಂಡು ಬಾಧೆಯನ್ನುವುದು ಜೀವನದ ಒಂದು ತಪ್ಪಿಸಿಕೊಳ್ಳಲಾಗದಂತಹ ಭಾಗವಾಗಿರುತ್ತದೆಂಬದಾಗಿ ಬೈಬಲ್ ಕಲಿಸುತ್ತದೆ. ಮಾನವರನ್ನು ಉಪದ್ರವ ಪಡಿಸುವಂತಹ ಸಮಸ್ತ ಕಷ್ಟಗಳಿಗೆ ಒಬ್ಬ ಕ್ರೈಸ್ತನು ಒಳಪಟ್ಟಿರುತ್ತಾನೆ, ಜೊತೆಗೆ ಯೇಸುವಿನ ನಾಮದ ನಿಮಿತ್ತ ಆತನು ಅನುಭವಿಸುವ ಬಾಧೆಗಳು ಸಹ ಸೇರಿರುತ್ತವೆ (1 ಪೇತ್ರ 4:16). ಕ್ರಿಸ್ತನು ತನ್ನ ಶಿಷ್ಯರಿಗೆ, “ಅವರು ನನ್ನನ್ನು ಹಿಂಸೆಪಡಿಸಿದರೆ ನಿಮ್ಮನ್ನು ಸಹ ಹಿಂಸೆ ಪಡಿಸುವರು” ಎಂದು ಹೇಳಿದನು (ಯೋಹಾನ 15:20). ಕೆಲವರಿಗಾದರೋ, ಕ್ರಿಸ್ತನ ಸಂಗಡ ಬಾಧೆಯನ್ನು ಅನುಭವಿಸುವದೆಂದರೆ ಮರಣವೆಂದಾಗಿರುತ್ತದೆ. ಅನೇಕರಿಗೆ, ಅದು ಮನಸ್ತಾಪ ಮತ್ತು ತಪ್ಪಾಗಿ ಮಾತಾಡಲ್ಪಡುವದಕ್ಕೆ ಗುರಿಯಾಗುವದಾಗಿರುತ್ತದೆ. ಎಲ್ಲರಿಗಾದರೋ, ಅದು ಪಾಪದಲ್ಲಿ ಕಳೆದುಹೋಗಿರುವ ಲೋಕದ ಒಂದು ಭಾಗವಾಗಿರತಕ್ಕದ್ದು (ನೋಡಿರಿ ಲೂಕ 19:10). ಶೀಘ್ರವಾಗಿ ಅಥವಾ ತಡವಾಗಿಯಾದರೂ, ಬಾಧೆಯೆಂಬುದು ಯೇಸುವಿಗಾಗಿ ಜೀವಿಸಲು ಪ್ರಯತ್ನಿಸುವದರಲ್ಲಿ ಒಂದು ಅನಿವಾರ್ಯವಾದ ಭಾಗವಾಗಿರುತ್ತದೆ (2 ತಿಮೊಥೆ 3:12).

ನಾವು ಬಾಧೆಯನ್ನು ಅನುಭವಿಸುವಾಗ ನಮ್ಮನ್ನು ಯಾವುದು ಎದೆಗುಂದದೆ ಮುನ್ನೆಡೆಯುವಂತೆ ಮಾಡುತ್ತದೆ? ಅದರಲ್ಲಿ ಒಂದು ಪ್ರಾಮುಖ್ಯವಾದ ಕಾರಣಾಂಶವೆಂದರೆ ನಿರೀಕ್ಷೆ. ಪೌಲನು, “ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ” ಎಂದು ಹೇಳಿದ ಬಳಿಕ, ಆತನು ಮುಂದುವರೆದು, “ಆತನ *ಮಹಿಮೆಯಲ್ಲಿಯೂ* ಪಾಲುಗಾರರಾಗುವವು” (8:17b; ಒತ್ತಿ ಹೇಳಿದ್ದು ನನ್ನದು).

## ಪುತ್ರಪದವಿಯನ್ನು ಪ್ರತಿಫಲಿಸುವದು (8:14-17)

ಹೈಸ್ಕೂಲ್‌ನಲ್ಲಿರುವಾಗ, ನನ್ನ ತಂದೆಯು ನನಗೆ ವೃತ್ತಿಪರ ಕೃಷಿಯ ಶಿಕ್ಷಕನು ಮತ್ತು FFA[184] ಸಲಹೆಗಾರ ಆಗಿದ್ದನು. ಪ್ರತಿ ವಸಂತಕಾಲದಲ್ಲಿ, ಆತನು ತನ್ನ ವಿದ್ಯಾರ್ಥಿಗಳ ಪ್ರದರ್ಶನ ಪ್ರಾಣಿಗಳಿಗೆ ವಿವಿಧ ಸ್ಪರ್ಧೆಗಳಲ್ಲಿ ಪ್ರವೇಶಿಸುವಂತಾಗಲು ಅವರನ್ನು Oklahoma ಪಟ್ಟಣದಲ್ಲಿ ನಡೆಯುತ್ತಿದ್ದ ಪಡೆಯುವಂತೆ ರಾಜ್ಯದ ಪರಿಷೆಗೆ ಕರೆದೊಯ್ಯುತ್ತಿದ್ದನು. ಆತನು ನಮ್ಮನ್ನು ವಾರದ ಮೊದಲಲ್ಲಿಯೇ ಕರೆದೊಯ್ದು, ಪ್ರಾಣಿಗಳನ್ನು ಆರೈಕೆ ಮಾಡುವಂತೆ ನಮ್ಮನ್ನು ಅಲ್ಲಿಯೇ ಬಿಟ್ಟು ಹೋಗುತ್ತಿದ್ದನು, ಮತ್ತು

ಸ್ಪರ್ಧೆಗೆ ಆರಂಭಗೊಳ್ಳುವ ಸಮಯವಾದ, ವಾರಂತ್ಯದಲ್ಲಿ ಹಿಂದಿರುಗಿ ಬರುತ್ತಿದ್ದನು. ಆತನು ಮೊದಲ ಬಾರಿಗೆ ನನ್ನನ್ನು ಪರಿಷೆಯ ಮೈದಾನದಲ್ಲಿ ಬಿಟ್ಟು ಹೋಗುವಾಗ, ಆತನು FFA ಜಾಕೇಟ್ ಮೇಲಿದ್ದ ನನ್ನ ಹೆಸರಿನ ಕಡೆಗೆ ಬೆರಳು ತೋರಿಸಿ ಹೀಗಂದನು, "ನೆನಪಿರಲಿ, ಅದು ನನ್ನ ಹೆಸರು ಸಹ ಆಗಿದೆ."[185] ಆತನು ಮಾತಿನ ತಾತ್ಪರ್ಯವು ನನಗೆ ಅರ್ಥವಾಯಿತು. ಆತನು ಅಲ್ಲಿಂದ ಹೊರಟು ಹೋದಾದ ಮೇಲೆ, ನಾನು ಒಳ್ಳೇಯನಾಗಿ ನಡೆದುಕೊಳ್ಳಬೇಕಿತ್ತು. ನಾನು ಏನಾದರೂ ತಪ್ಪನ್ನು ಮಾಡಿದರೆ, ಅದು ಆತನಿಗೆ ಕೆಟ್ಟ ಹೆಸರು ತರುವದಷ್ಟೇ ಅಲ್ಲದೆ, ನನಗೂ ಸಹ ಕೆಟ್ಟ ಹೆಸರನ್ನುಂಡು ಮಾಡುವದಾಗಿತ್ತು.

ಕ್ರೈಸ್ತರಾಗಿ, ನಾವು ದೇವರ ಪುತ್ರರು ಹಾಗೂ ಪುತ್ರಿಯರು ಆಗಿದ್ದೇವೆ. ನಾವು ತಕ್ಕದಾದ ರೀತಿಯಲ್ಲಿ ಜೀವಿಸದಿದ್ದರೆ, ಅದು ನಮ್ಮ ತಂದೆಗೆ ಅಗೌರವವನ್ನು ತರುತ್ತದೆ. ನೀವು ದೇವರ ಮಕ್ಕಳ ರೀತಿಯಲ್ಲಿ ನಡೆಯಲು ಮತ್ತು ಮಾತಾಡಲು ವಿಫಲರಾಗುವ ಮೂಲಕ ಆತನಿಗೆ ಅಗೌರವವನ್ನುಂಟು ಮಾಡಿರುವಿರೋ? ಹಾಗಿರುವದಾದಲ್ಲಿ, ಗತಕಾಲದ ಸಮಸ್ಯೆಗಳನ್ನು ನಿವಾರಿಸಿಕೊಳ್ಳಿರೆಂದು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16; 1 ಯೋಹಾನ 1:9), ಆಗ ನೀವು ಮತ್ತೊಂದಾವರ್ತಿ ಪುತ್ರತ್ವದ ಆಶೀರ್ವಾದಗಳನ್ನು ಆನಂದಿಸಬಲ್ಲಿರಿ.

## ದೇವರ ಮಕ್ಕಳು (8:14)

ಒಮ್ಮೆ ಒಬ್ಬ ಪ್ರಸಿದ್ಧ ಸ್ತ್ರೀಯ ಕಿರಿಯ ಮಗಳನ್ನು ಆಕೆಯ ತಾಯಿಗೆ ಮಕ್ಕಳಲ್ಲಿ ನೆಚ್ಚಿನವರು ಯಾರು ಎಂಬದಾಗಿ ಕೇಳಲಾಯಿತು. ಆ ಹುಡುಗಿಯು ಹೀಗೆ ಉತ್ತರಿಸಿದಳು, "ಅಮ್ಮ Danielನನ್ನು ಉತ್ತಮವಾಗಿ ಪ್ರೀತಿಸುತ್ತಾಳೆ, ಯಾಕೆಂದರೆ ಆತನು ಎಲ್ಲರಗಿಂತ ಹಿರಿಯವನು. ಮತ್ತು John ಎಲ್ಲರಗಿಂತ ಚಿಕ್ಕವನಾದ್ದರಿಂದ, ಆತನನ್ನು ಉತ್ತಮವಾಗಿ ಪ್ರೀತಿಸುತ್ತಾಳೇ. ಮತ್ತು ನಾನೊಬ್ಬಳೇ ಮಗಳಾಗಿರುವದರಿಂದ ಆಕೆಯು ನನ್ನನ್ನು ಉತ್ತಮವಾಗಿ ಪ್ರೀತಿಸುತ್ತಾಳೆ."[186] ನೀವು ದೇವರ ಒಬ್ಬ ಮಗನೋ ಅಥವಾ ಒಬ್ಬ ಮಗಳೋ? ಹಾಗಾದರೆ ದೇವರು "ನಿಮ್ಮನ್ನು ಉತ್ತಮವಾಗಿ ಪ್ರೀತಿಸುತ್ತಾನೆ" ಎಂಬುದನ್ನು ನೀವು ತಿಳಿಯಬಲ್ಲಿರಿ! ಆತನು ನಿಮ್ಮ ಸ್ಥಾನದಲ್ಲಿ ಮರಣಿಸುವದಕ್ಕೋಸ್ಕರ ತನ್ನ ಮಗನನ್ನು ಕಳುಹಿಸಿ ಕೊಡುವ ಮೂಲಕ ಅದನ್ನು ಸಾಭಿತುಪಡಿಸಿದ್ದಾನೆ!

## ಪುತ್ರರಾಗಿ ಸ್ವೀಕಾರ (8:15)

ಪುತ್ರ ಸ್ವೀಕಾರದ ವಿಷಯದಲ್ಲಿ, ಪೋಷಕರು ಒಂದು ಮಗುವನ್ನು ಆರಿಸಿಕೊಂಡು ತಮ್ಮ ಸ್ವಂತ ಮಗುವಿನಂತೆ ಪ್ರೀತಿಸಿ, ಪೋಷಣೆ ಮಾಡುವದರಲ್ಲಿ ಏನೋ ವಿಶೇಷವಿರುತ್ತದೆ. ನನ್ನ ಮಗಳಾದ Angi ಮತ್ತು ಆಕೆಯ ಗಂಡನಾದ Dan ಕೊರಿಯಾ ದೇಶದ ಒಬ್ಬ ಚಿಕ್ಕ ಹುಡುಗನನ್ನು—Elijah Ray Lovejoy—ದತ್ತುಸ್ವೀಕಾರ ಮಾಡಿಕೊಂಡಾಗಿನಿಂದ ನಾನು ಆ ಪ್ರಕ್ರಿಯೆಯನ್ನು ಮತ್ತಷ್ಟು ಮೆಚ್ಚಿಕೊಂಡಿರುತ್ತೇನೆ. Angiಯು ತನ್ನ ಮಗನಿಗೆ ದತ್ತುಸ್ವೀಕಾರದ ಕುರಿತು ಹೇಳುವದಕ್ಕೋಸ್ಕರ *Elijah's Story* ಎಂಬ ಚಿತ್ರಪುಸ್ತಕವನ್ನು ಮುದ್ರಿಸಿಟ್ಟುಕೊಂಡಿದ್ದಳು.[187] ಆ ಪುಸ್ತಕದ ವಾಕ್ಯದಲ್ಲಿನ ಕೆಲವು ಆಯ್ದ ಭಾಗಗಳು ಇಲ್ಲಿರುತ್ತವೆ:

> ಬಂದು ನಿನ್ನನ್ನು ಕರೆದುಕೊಂಡು ಹೋಗಬೇಕಾದ ಸಮಯ ಬಂದಾಗ, ನಾವು ಒಂದು ವಿಮಾನವನ್ನು ಹತ್ತಿದೆವು. ಅದು ಓಕ್ಲಾಹೋಮಾದಿಂದ ಕೊರಿಯಾದ ವರೆಗಿನ ದೀರ್ಘ ಪಯಣ! ನಾವು ಆ ವಿಮಾನದಲ್ಲಿ ಬಹಳ, ಬಹಳ ಹೊತ್ತು ಪ್ರಯಾಣಿಸಿದೆವು. ವಿಮಾನದಲ್ಲಿ ಬಹಳಷ್ಟು ಜನರು ನಿದ್ರಿಸುತ್ತಿದ್ದರು; ಆದರೆ ನಾವು ಬಹಳ ರೋಮಾಂಚನಗೊಂಡಿದ್ದೆವು, ನಮಗಂತೂ ನಿದ್ದೆಯೇ ಬರುತ್ತಿರಲಿಲ್ಲ!
>
> ನಾವು ಕೊರಿಯಾ ದೇಶವನ್ನು ತಲುಪಿದ ಬಳಿಕ, ನಾವು ನಿನ್ನನ್ನು ಮೊದಲ ಬಾರಿಗೆ ಸಂಧಿಸಿದೆವು. ನಾವು ನಿನ್ನನ್ನು ಮೊದಲು ನೋಡಿದಾಗ . . . , ನೀನು ಸದಾ ಹೊರಳಾಡುತ್ತಾ ಸಂತೋಷದಿಂದ ಇದ್ದಿ. ನೀನು ನಮಗೊಂದು ದೊಡ್ಡದಾದ, ಅದ್ಭುತವಾದ ಮುಗುಳ್ನಗೆಯನ್ನು ಬೀರಿದೆ. ನಾವು ನಿನ್ನನ್ನು ಬಹಳವಾಗಿ ಪ್ರೀತಿಸಿದೆವು! . . .
>
> ನಿನ್ನ ಪೋಷಕರಾಗಿರುವದಕ್ಕೆ ನಾವು ಅತ್ಯಂಥ ಧನ್ಯರು ಎಂಬದು ನಮಗೆ ಗೊತ್ತಿತ್ತು. ನಾವು ನಿನಗೆ ಎಂದು Elijah ಹೆಸರಿಟ್ಟೆವು, ಅದರರ್ಥವು, “ಕರ್ತನೇ ದೇವರು.” ನೀನು ದೇವರ ಒಬ್ಬ ಮುದ್ದಾದ ಮಗುವಾಗಿ ಜನಿಸಿದವನಾಗಿದ್ದಿ ಮತ್ತು ಆತನು ನಿನ್ನ ಜೀವಿತವನ್ನು ಆಶೀರ್ವದಿಸಲೆಂದು ಪ್ರಾರ್ಥಿಸುತ್ತೇವೆ.

Angi ಮತ್ತು Dan ಸೇರಿಕೊಂಡು Elijahನನ್ನು ಆದುಕೊಂಡರು—ಮತ್ತು ನಮ್ಮನ್ನು ದೇವರು ಆದುಕೊಂಡನು,[188] ನಮ್ಮನ್ನು ತನ್ನ ಕುಟುಂಬದೊಳಗೆ ದತ್ತುಸ್ವೀಕರಿಸಿ ಕೊಂಡನು! Phillips ತರ್ಜುಮೆಯು ಇದರ ಭಾವಾನುವಾದವನ್ನು ಹೀಗೆ ನೀಡುತ್ತದೆ, ಏನೆಂದರೆ ನಾವು “ನಾವು ಸ್ವತಃ ದೇವರ ಕುಟುಂಬದ ಬಳಗದೊಳಗೇ ದತ್ತುಸ್ವೀಕಾರ ಮಾಡಿಕೊಳ್ಳಲ್ಪಟ್ಟಿದ್ದೇವೆ.” ಒಂದು ಕ್ಷಣವನ್ನು ತೆಗೆದುಕೊಂಡು ಆ ವಾಸ್ತವಾಂಶವನ್ನು ಆಸ್ವಾದಿಸಿರಿ.

## ಪುತ್ರ ಸ್ವೀಕಾರವನ್ನು ಪೂರ್ತಿಗೊಳಿಸುವದು (8:15, 23)

ರೋಮಾ 8:15ನೇ ವಚನವು “ದತ್ತುಪುತ್ರ ಸ್ವೀಕಾರ ಆತ್ಮನನ್ನು ಹೊಂದಿದವರಾಗಿದ್ದೀರಿ” ಎಂದು ಹೇಳುತ್ತದೆ, ಆದರೆ 8:23ನೇ ವಚನವು ನಾವು “ದೇವಪುತ್ರರ ಪದವಿಯನ್ನು . . . ಎದುರುನೋಡುತ್ತಾ” ಎಂದು ಹೇಳುತ್ತದೆ. *ಒಂದು ಅರ್ಥದಲ್ಲಿ* ನಾವು ಈಗಾಗಲೇ ದೇವರ ದತ್ತು ಮಕ್ಕಳಾಗಿದ್ದೇವೆ ಮತ್ತು *ಇನ್ನೊಂದು ಅರ್ಥದಲ್ಲಿ* ನಾವು ಇನ್ನೂ ಪೂರ್ಣಗೊಳ್ಳಬೇಕಾಗಿರುವ ದತ್ತು ಪ್ರಕ್ರಿಯೆಯಲ್ಲಿರುತ್ತೇವೆ. ನಮಗೆ ಈಗಾಗಲೇ ದೇವಪುತ್ರರ ಪದವಿಯ ಸವಲತ್ತನ್ನು ಹೊಂದಿದ್ದೇವಾದರೂ, ಕ್ರಿಸ್ತನ ಪುನರಾಗಮನದಲ್ಲಿ ಸಂಭವಿಸುವ ದೇಹದ ಪುನರುತ್ಥಾನದ ತನಕ ಪುತ್ರಸ್ವೀಕಾರ ಪ್ರಕ್ರಿಯೆಯು ಪೂರ್ತಿಗೊಳ್ಳುವದಿಲ್ಲ.

ನಮ್ಮ ಕುಟುಂಬವು Oklahoma ಪಟ್ಟಣದಲ್ಲಿರುವ ನ್ಯಾಯಾಲಯಕ್ಕೆ ಹೋದಂಥ ಆ ವಿಶೇಷ ದಿನವು ನನಗೆ ನೆನಪಿಗೆ ಬರುತ್ತದೆ, ಆ ದಿನ ನ್ಯಾಯಧೀಶನು ನಮ್ಮ ಮೊಮ್ಮಗನಾದ Elijahನ ದತ್ತುಸ್ವೀಕಾರ ಪ್ರಕ್ರಿಯೆಯನ್ನು ಅಂತಿಮಗೊಳಿಸಿದನು. ಇದಕ್ಕೆ ಮುಂಚೆ ಸಹ Elijahಗೆ ಎಷ್ಟೋ ಅಧಿಕ ಪ್ರೀತಿ ಮತ್ತು ಆರೈಕೆಯನ್ನು ಮಾಡಲಾಗುತ್ತಿತ್ತು, ಈಗ ಅದಕ್ಕಿಂತ ಹೆಚ್ಚಿನದ್ದೇನನ್ನೂ ಮಾಡಬೇಕಿರಲಿಲ್ಲ, ಆದರೆ ನ್ಯಾಯಾಲಯದ ಕಾರ್ಯಕಲಾಪವು ದತ್ತುಸ್ವೀಕಾರವನ್ನು *ಅಧಿಕೃತ*ಗೊಳಿಸಿತ್ತು.

## ಬಾಧ್ಯರು (8:17)

ಹಲವು ವರ್ಷಗಳ ಹಿಂದೆ, Philadelphiaದ Henrietta Garrett ಎಂಬ ಒಬ್ಬ ವೃದ್ಧ ಸ್ತ್ರೀಯು ಮರಣ ಹೊಂದಿದಳು. ಆಕೆಯ ಶವ ಸಂಸ್ಕಾರಕ್ಕೆ ಕೇವಲ ಬೆರಳೆಣಿಕೆಯಷ್ಟು ಜನರು ಮಾತ್ರವೇ ಹಾಜರಾಗಿದ್ದರು—ಆದರೆ ಬಳಿಕ ಉಳಿಲು ಪ್ರಾಮಾಣೀಕರಿಸುವ ನ್ಯಾಯಾಲಯವು ಈ ಮಕ್ಕಳಿಲ್ಲದ ಸ್ತ್ರೀಯು 17 ದಶಲಕ್ಷ ಡಾಲರ್‌ಗಳಷ್ಟು ಸ್ವತ್ತು ಬಿಟ್ಟುಹೋಗಿದ್ದಾಳೆಂದು ವರದಿ ಮಾಡಿತ್ತು. ಏಕಾಏಕಿಯಾಗಿ, ಪ್ರತಿಯೊಬ್ಬರೂ ಆಕೆಗೆ ಬಾಧ್ಯಸ್ಥರಾಗಿರುವದಕ್ಕೆ ತುದಿಗಾಲಲ್ಲಿ ನಿಂತಿದ್ದರು. ವರ್ಷಗಳ ಬಳಿಕ, ಅವರು ಆಗಲೂ ಕಾನೂನಿನ ಜಂಜಾಟವನ್ನು ಬಗೆಹರಿಸಿಕೊಳ್ಳುವದಕ್ಕೆ ಪ್ರಯತ್ನಿಸುತ್ತಿದ್ದರು. ಸ್ವತ್ತು ಈಗ 30 ದಶ ಲಕ್ಷಗಳಷ್ಟು ಬೆಳೆದಿತ್ತು, ಮತ್ತು 26,000 ಜನರು ತಾವೇ ಅದಕ್ಕೆ ಬಾಧ್ಯಸ್ಥರೆಂದು ಹೇಳಿಕೊಳ್ಳುತ್ತಲಿದ್ದರು![189] Henrietta Garrett ಳಿಗೆ ಬಾಧ್ಯಸ್ತರಾಗಿರುವದು ಚೆನ್ನಾಗಿರುತ್ತದೆ—ಆದರೆ ದೇವರಿಗೆ ಬಾಧ್ಯರಾಗಿದ್ದರೆ ಇನ್ನೆಷ್ಟೋ ರೋಮಾಂಚಕಾರಿ ಆಗಿರುತ್ತದೆ ಅಲ್ಲವೇ!

## ಕೃಪೆ ಹಾಗೂ ಮಹಿಮಪದವಿಯ ಮಧ್ಯದಲ್ಲಿ (8:17-25)

"ಕೃಪೆ ಹಾಗೂ ಮಹಿಮಪದವಿಯ ಮಧ್ಯದಲ್ಲಿ" (ಈ ಮಧ್ಯದಲ್ಲಿ ನರಳಾಟವಿರುತ್ತದೆ) ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಪಾಠವನ್ನು ಅಭಿವೃದ್ಧಿಪಡಿಸಬಹುದು. ವಾಕ್ಯಭಾಗವನ್ನು ಮೂರು ಭಾಗಗಳಲ್ಲಿ ವಿಂಗಡಿಸಬಹುದು: (1) "ಒಂದು ತದ್ವಿರುದ್ಧತೆ"—ಬಾಧೆಯನ್ನನುಭವಿ ಸುವದು ಮತ್ತು ಮಹಿಮಪದವಿ ಪಡೆಯುವದರ ನಡುವೆ (8:17, 18); (2) "ಒಂದು ಸಂಬಂಧ"—ಸೃಷ್ಟಿ ಮತ್ತು ಕ್ರೈಸ್ತರ ನಡುವೆ (8:19-23); ಮತ್ತು (3) "ಒಂದು ಮನವರಿಕೆ"—ಎದುರುನೋಡುವಿಕೆ ಕಾರಣದಿಂದ (8:24, 25).

ಹಲವಾರು ಲೇಖಕರು ರೋಮಾ 8:19-22ನ್ನು ಈ ಲೋಕದ ವಿಷಯದಲ್ಲಿ ಕ್ರೈಸ್ತರು ಉತ್ತಮ ಮನೆವಾರ್ತೆಯವರಾಗಿರುವ (ಉದಾಹರಣೆಗೆ, ಅದನ್ನು ಮಾಲಿನ್ಯಗೊಳಿಸ ಬಾರದು ಅಥವಾ ಸಂಪನ್ಮೂಲಗಳನ್ನು ಬರಿದುಗೊಳಿಸಬಾರದು) ಅಗತ್ಯವಿದೆಯೆಂಬುದಕ್ಕೆ ಅನ್ವಯಿಸುತ್ತಾರೆ.

## ಕ್ರಿಸ್ತನಲ್ಲಿ ನಿರೀಕ್ಷೆ (8:18-25)

ರೋಮಾ 8:18-25ರಲ್ಲಿ ನಿರೀಕ್ಷೆಯು ಪ್ರಮುಖ ಚರ್ಚೆಯಾಂಶವಾಗಿದೆ. "ಎದುರುನೋಡುವಿಕೆ" ಅಥವಾ ನಿರೀಕ್ಷೆ—ಅದು ನಾಮಪದ ಹಾಗೂ ಕ್ರಿಯಾಪದಗಳೆರ ಡರಲ್ಲೂ ಕಾಣಿಸಿಕೊಳ್ಳುತ್ತದೆ—ಈ ವಾಕ್ಯಭಾಗದಲ್ಲಿ ಆರು ಸಾರಿ ಸಿಕ್ಕುತ್ತದೆ (8:20, 24, 25). 24ನೇ ವಚನವು "ನಾವು ರಕ್ಷಣೆಯನ್ನು ಹೊಂದಿದವರಾಗಿದ್ದರೂ ಇನ್ನೂ ಎದುರು ನೋಡುವವರಾಗಿದ್ದೇವೆ" ಎಂದು ಹೇಳುತ್ತದೆ. ಈ ಪದವು ಸಿಕ್ಕದಂತಹ ವಚನಗಳಲ್ಲಿ ಸಹ ಎದುರುನೋಡುವಿಕೆಯ ಭಾವನೆಯು ತುಂಬಲ್ಪಡುತ್ತದೆ. ನಾವು ಎರಡು ವಾಸ್ತವಾಂಶ ಗಳನ್ನು ಮನಸ್ಸಿನಲ್ಲಿಟ್ಟುಕೊಂಡರೆ ಇದು ನಮಗೆ ಸ್ಪಷ್ಟವಾಗುವದು: (1) ಬೈಬಲ್‌ನುಸಾರ ವಾದ ನಿರೀಕ್ಷೆಯು ಹಾರೈಕೆಯ ಯೋಚಿಸುವಿಕೆಯಲ್ಲ ಆದರೆ "ಹಂಬಲದ ಜೊತೆಗೆ *ಎದುರುನೋಡುವಿಕೆ"* ಆಗಿರುತ್ತದೆ; ಮತ್ತು (2) ಬೈಬಲ್‌ನುಸಾರದ ನಿರೀಕ್ಷೆಯು ನಮಗೆ

ಕಾಣಬಹುದಾದ್ದರ ಮೇಲೆ ಆಧಾರವಾಗಿರುವದಿಲ್ಲ (8:24), ಆದರೆ ನಮ್ಮ ನಂಬಿಕೆಯ ನಿಮಿತ್ತವಾಗಿ ನಾವು ನಿರೀಕ್ಷಿಸುವಂತದ್ದರ ಮೇಲೆ ಆಧಾರವಾಗಿರುತ್ತದೆ.

ಪೌಲನು ಎಫೆಸದವರಿಗೆ ಬರೆಯುವ ವೇಳೆ, ಕ್ರೈಸ್ತರಾಗುವ ಮುಂಚೆ ಅವರಿದ್ದಂತಹ ಸ್ಥಿತಿಯ ಕುರಿತು ಅವರಿಗೆ ಜ್ಞಾಪಕಪಡಿಸುತ್ತಾನೆ: "ನೀವು ಪೂರ್ವಕಾಲದಲ್ಲಿ ಕ್ರಿಸ್ತನನ್ನು ಸೇರದವರಾಗಿದ್ದು ಇಸ್ರಾಯೇಲ್ಯ ಹಕ್ಕಿನಲ್ಲಿ ಪಾಲಿಲ್ಲದವರೂ [ಅಬ್ರಹಾಮನಿಗೆ ಉಂಟಾದ] ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಗಳಲ್ಲಿ ಸೇರದವರೂ ಈ ಲೋಕದಲ್ಲಿ *ಯಾವ ನಿರೀಕ್ಷೆಯಿಲ್ಲದವರೂ* ದೇವರನ್ನರಿಯದವರೂ ಆಗಿದ್ದೀರೆಂದು ಜ್ಞಾಪಕಮಾಡಿಕೊಳ್ಳಿರಿ" (ಎಫೆಸ 2:12; ಒತ್ತಿ ಹೇಳಿದ್ದು ನನ್ನದು). ಎಂಥಾ ಭಯಾನಕವಾದ ಮಾತುಗಳು: "ಯಾವ ನಿರೀಕ್ಷೆಯಿಲ್ಲದವರೂ"! ಜೀವನದ ಜಂಜಾಟಗಳಲ್ಲಿ, ನಿರೀಕ್ಷೆಯು ನಮ್ಮನ್ನು ಮುನ್ನಡೆಯುವಂತೆ ಮಾಡುತ್ತದೆ. ನಾವು ರೋಗದಲ್ಲಿ ಬೀಳುವಾಗ, ನಮಗೆ ಆರೋಗ್ಯಗೊಳ್ಳುವ ನಿರೀಕ್ಷೆಯಿದ್ದರೆ ಅದನ್ನು ಸೈರಿಸಿಕೊಳ್ಳಬಲ್ಲೆವು. ನಮಗೆ ಬಡತನ ಎದುರಾಗುವಾಗ, ನಮಗೆ ಸಹಾಯ ಸಿಕ್ಕುತ್ತದೆಂಬ ನಿರೀಕ್ಷೆಯಿದ್ದಲ್ಲಿ ನಾವು ಬದುಕುಳಿಯಬಲ್ಲೆವು. ನಮಗೆ ಮನೆಯಲ್ಲಿ ಸಮಸ್ಯೆ ಉಂಟಾಗುವಾಗ, ಪರಿಸ್ಥಿತಿಯು ಸುಧಾರಿಸುವದೆಂಬ ನಿರೀಕ್ಷೆಯು ನಮಗಿದ್ದರೆ ನಾವು ಮುಂದೆ ಸಾಗುತ್ತಲಿರಬಲ್ಲೆವು. ಹೇಗೂ, ನಾವು ಕಷ್ಟದ ಸಮಯಗಳಿಗೆ ತುತ್ತಾಗುವಾಗ ಮತ್ತು ನಮಗೆ ನಿರೀಕ್ಷೆಯೇ ಇಲ್ಲವೆಂದನ್ನಿಸುವಾಗ, ನಾವು ಸೋಲೊಪ್ಪಿಕೊಳ್ಳುವದಕ್ಕೆ, ಹತಾಶೆಗೊಳ್ಳುವದಕ್ಕೆ ಒಲವು ತೋರಿಸುತ್ತೇವೆ. ನಿರೀಕ್ಷೆಯು ನಮ್ಮೆಲ್ಲರಲ್ಲಿಯೂ ಒಂದಯ ವ್ಯತ್ಯಾಸವನ್ನುಂಟು ಮಾಡುತ್ತದೆ.

Viennaಗೆ ಸೇರಿದ Viktor Emil Frankl ಎಂಬ ಒಬ್ಬ ಯೆಹೂದಿ ಮನೋಶಾಸ್ತ್ರಜ್ಞನು 2ನೇ ವಿಶ್ವ ಯುದ್ಧದ ವೇಳೆಯಲ್ಲಿ ಜರ್ಮನಿಯ Auschwitzನಲ್ಲಿರುವ ಸೆರೆ ಶಿಬಿರದಲ್ಲಿ ಹಾಕಲ್ಪಟ್ಟನು. ಕೆಲವು ಕೈದಿಗಳು ಬದುಕುಳಿಯುವದಕ್ಕಾಗಿನ ಹೋರಾಟವನ್ನು ಕೈಬಿಟ್ಟು ತಮ್ಮನ್ನು ಮರಣಿಸುವದಕ್ಕೆ ಒಪ್ಪಿಸಿಕೊಂಡರೆಂಬುದನ್ನೂ, ಇನ್ನು ಕೆಲವರು ದುರಂತಕರ ಪರಿಸ್ಥಿತಿಗಳ ಮೇಲೆ ಜಯಗೊಂಡದ್ದನ್ನೂ ಗಮನಿಸಿದನು. ಇಲ್ಲಿ ವ್ಯತ್ಯಾಸವೇನೆಂದರೆ ಮೊದಲಿನ ಗುಂಪು ತಮಗೆ ಇನ್ನು ಮೇಲೆ ನಿರೀಕ್ಷೆಯೇ ಇಲ್ಲವೆಂದು ಭಾವಿಸಿಕೊಂಡರೆ, ಎರಡನೆಯ ಗುಂಪಿನವರಾದರೋ ಒಂದು ದಿನ ನಾಜಿಗಳು ಸೋಲಿಸಲ್ಪಡುವರು ಹಾಗೂ ತಾವು ಬಿಡುಗಡೆಗೊಳಿಸಲ್ಪಡುವೆವು ಎಂಬ ವಿಶ್ವಾಸವಿಟ್ಟು ಕೊಂಡಿದ್ದರು. ಆ ನಿರೀಕ್ಷೆಯನ್ನಿಟ್ಟುಕೊಂಡಿದ್ದವರೇ ಸೆರೆಶಿಬಿರದಿಂದ ಜೀವಂತವಾಗಿ ಹೊರಗೆ ಬಂದರು ಮತ್ತು ಅದಾದ ನಂತರ ಅರ್ಥಪೂರ್ಣವಾದ ಜೀವಿತಗಳನ್ನು ನಡಿಸುವದಕ್ಕೆ ಶಕ್ತರಾಗಿದ್ದರು.[190] ನಿರೀಕ್ಷೆಯೇ ವ್ಯತ್ಯಾಸವನ್ನುಂಟು ಮಾಡಿತ್ತು.

ನಿರೀಕ್ಷೆಯನ್ನಿಟ್ಟುಕೊಳ್ಳಲು ಯಾವ ಕಾರಣವೂ ಇರದಂತೆ ತೋರುವ ಆ ಸಮಯಗಳ ವಿಷಯವೇನು? ಒಬ್ಬ ವಿಶ್ವಾಸಿಯೇತರ ವ್ಯಕ್ತಿಯು ನಿರೀಕ್ಷೆಯನ್ನು ಕಾಣುವದಕ್ಕೆ ಅಶಕ್ತನಾಗಿ ರಬಹುದು, ಆದರೆ ಒಬ್ಬ ನಂಬಿಗಸ್ತ ಕ್ರೈಸ್ತನು ಯಾವಾಗಲೂ ಒಂದು ಸಂಗತಿಗಾಗಿ ನಿರೀಕ್ಷೆಯನ್ನಿಟ್ಟುಕೊಳ್ಳಬಲ್ಲನು. ಆತನ ವ್ಯಾದಿಯು ಸ್ವಸ್ಥಪಡಿಸಲಾಗದ ವ್ಯಾದಿಯಾಗಿದ್ದರೆ, ಆತನು ಮುಂದೆ ಒಂದು ಲೋಕವನ್ನು ಎದುರುನೋಡಬಹುದು, ಅಲ್ಲಿ "ಇನ್ನು ಮರಣವಿರುವದಿಲ್ಲ, ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ" (ಪ್ರಕಟಣೆ

21:4). ಈ ಲೋಕದ ಸ್ವತ್ತುಗಳು ಕಸಿದುಕೊಳ್ಳಲ್ಪಟ್ಟರೆ, ಆತನಿಗೆ "ಪರಲೋಕದಲ್ಲಿ ಗಂಟು" ಇರುತ್ತದೆಂಬದನ್ನು ಬಲ್ಲವನಾಗಿರುತ್ತಾನೆ (ಮತ್ತಾಯ 6:20). ವೇದನೆ ಹಾಗೂ ಅರ್ಥವಾಗದಂತಹ ದುರಂತಗಳಿಂದ ಸುತ್ತುವರೆಯಲ್ಪಟ್ಟಿರುವಾಗ, ಆತನಿಗೆ ಒಂದು ದಿನ ಕರ್ತನ ಪ್ರಭಾವವುಳ್ಳ ಸನ್ನಿಧಿಯಲ್ಲಿರುವೆನೆಂಬ ನಿರೀಕ್ಷೆಯಿರುತ್ತದೆ (ನೋಡಿರಿ ಯೋಹಾನ 14:1-3).

ವರ್ಷಗಳ ಹಿಂದೆ, ನನ್ನ ಕುಟುಂಬದವರು ಮತ್ತು ನಾನು ರೋಮ್ ನಗರಕ್ಕೆ ಭೇಟಿ ಕೊಟ್ಟಿದ್ದೆವು. ನಮ್ಮನ್ನು ಪಟ್ಟಣದ ಅಡಿಯಲ್ಲಿದ್ದ ಸಮಾಧಿಗೂಡುಗಳನ್ನು ತೋರಿಸುತ್ತಾ ಕರೆದೊಯ್ಯಲಾಯಿತು, ಅಲ್ಲಿ ಅನೇಕ ಕ್ರೈಸ್ತರು ಹೂಣಲ್ಪಟ್ಟಿದ್ದರು. ಅಲ್ಲದೆ ಭೂಮಿಯ ಮೇಲ್ಗಡೆಯಲ್ಲಿ ಕ್ರೈಸ್ತೇತರರ ವೈಭವದಿಂದ ಕೂಡಿದ್ದ ಸಮಾಧಿಗಳನ್ನು ಸಹ ನಮಗೆ ತೋರಿಸಲಾಯಿತು. ಕ್ರೈಸ್ತ ಸಮಾಧಿಗಳ ಮೇಲಿದ್ದ ಅತ್ಯಂಥ ಸರ್ವಸಾಧಾರಣವಾದ ಕೆತ್ತನೆಯ ಬರಹವು "ನಿರೀಕ್ಷೆ" ಎಂದು ನಮಗೆ ಹೇಳಲ್ಪಟ್ಟಿತು, ಆದರೆ ಮರಣ ಹೊಂದಿದ ವಿಗ್ರಹಾರಾಧಕ ಜನರ ಸಮಾಧಿಗಳ ಮೇಲೆ ಅಂತಹ ಯಾವದೇ ಕೆತ್ತನೆಯ ಬರಹವು ಕಾಣಿಸುವದಿಲ್ಲ. ಇಬ್ರಿಯ ಪುಸ್ತಕದ ಲೇಖಕನು ನಿರೀಕ್ಷೆಯನ್ನು ಅದು "ನಮ್ಮ ಪ್ರಾಣಕ್ಕೆ ಲಂಗುರದ ಹಾಗಿದ್ದು" ಎಂದು ಕರೆಯುತ್ತಾನೆ (ಇಬ್ರಿಯ 6:19). ಒಂದು ಲಂಗುರವು ಬಿರುಗಾಳಿಯ ವೇಳೆಯಲ್ಲಿ ಒಂದು ಹಡಗನ್ನು ಭದ್ರವಾಗಿ ನಿಲ್ಲಿಸುತ್ತದೋ, ಹಾಗೆಯೇ ನಮ್ಮ ನಿರೀಕ್ಷೆಯು ನಮ್ಮನ್ನು ಜೀವನದ ಬಿರುಗಾಳಿಗಳ ಸಮಯದಲ್ಲಿ ನಮ್ಮನ್ನು ಸ್ಥಿರವಾಗಿ ನಿಲ್ಲಿಸುವದು.

"ರೋಮಾಪುರದವರಿಗೆ 8ನೇ ಅಧ್ಯಾಯವು ಅಪರಾಧನಿರ್ಣಯವು ಇಲ್ಲ ಎಂಬದರೊಂದಿಗೆ ಆರಂಭಗೊಂಡು ಅಗಲಿಸಲಾರವೆಂದು ಹೇಳುವ ಮೂಲಕ ಅಂತ್ಯಗೊಳ್ಳುತ್ತದೆ,"[191] ಅದರ ಮಧ್ಯದಲ್ಲಿ ಹತಾಶೆ ಎಂಬುದಿಲ್ಲ ಎಂದು ಹೇಳಲಾಗಿರುತ್ತದೆ.[192] ರೋಮಾ 8:18-25 ಬಾಧೆಯನ್ನನುಭವಿಸುವದು ಎಂಬದರೊಂದಿಗೆ ಆರಂಭಗೊಳ್ಳುತ್ತದೆ ಆದರೆ ಶೀಘ್ರವೇ *ಎದುರುನೋಡುವಿಕೆ* ವಿಷಯಕ್ಕೆ ಸಾಗುತ್ತದೆ. "ಎದುರುನೋಡುವಿಕೆ" ಯನ್ನು McGuiggan ಯು "ಕ್ರೈಸ್ತರು ಉಸಿರಾಡುವಂತಹ ಗಾಳಿ"[193] ಎಂಬದಾಗಿ ಕರೆದನು. ನಿಮ್ಮಲ್ಲಿ ಈ ನಿರೀಕ್ಷೆಯು ಇರುತ್ತದೋ? ಪೌಲನು ಕೊಲೊಸ್ಸೆಯವರಿಗೆ ಬರೆಯುವಾಗ, ಆತನು "ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿದ್ದಾನೆ" ಎಂದು ಹೇಳಿದನು (ಕೊಲೊಸ್ಸೆ 1:27). ಕ್ರಿಸ್ತನು ನಿಮ್ಮೊಳಗೆ ಇರುವನೋ, ಮತ್ತು ನೀವು ಕ್ರಿಸ್ತನಲ್ಲಿ ಇದ್ದೀರೋ?

## ನಾಳೆಯ ದಿನಕ್ಕಾಗಿ ನಿರೀಕ್ಷೆ (8:18)

ರೋಮಾ 8:18 ಹೀಗೆ ಹೇಳುತ್ತದೆ, "ನಮಗೋಸ್ಕರ ಮುಂದಿನ ಕಾಲದಲ್ಲಿ ಪ್ರತ್ಯಕ್ಷವಾಗುವ ಮಹಿಮಪದವಿಯನ್ನು ಆಲೋಚಿಸಿ ಈಗಿನ ಕಾಲದ ಕಷ್ಟಗಳು ಅಲ್ಪವೇ ಸರಿ ಎಂದು ಎಣಿಸುತ್ತೇನೆ." ಯಾವಾಗಲೂ ತನ್ನ ಬೈಬಲ್‌ನ್ನೇ ಓದುತ್ತಿರುತ್ತಿದ್ದ ಒಬ್ಬ ಮನುಷ್ಯನನ್ನು ಆತನಿಗೆ ಆ ಗ್ರಂಥದಿಂದ ಯಾವ ಸಂದೇಶ ಸಿಕ್ಕಿತು ಎಂದು ಕೇಳಲಾಯಿತು. ಆತನು ಮುಗುಳ್ನಕ್ಕು ಹೀಗೆ ಹೇಳಿದನು, "ಇಷ್ಟು ಮಾತ್ರವೇ: ಅತ್ಯಂಥ ಕೆಟ್ಟ ಸಂಗತಿಗಳೇ ಕೊನೆಯಲ್ಲ." ಏನೇ ಸಂಭವಿಸಿದರೂ ಸರಿಯೇ, ಒಬ್ಬ ಕ್ರೈಸ್ತನಿಗೆ ನಾಳೆಯ ದಿನಕ್ಕಾಗಿ

ನಿರೀಕ್ಷೆಯಿರುತ್ತದೆ.

## "ದೇಹಕ್ಕೆ ಬರಬೇಕಾದ ವಿಮೋಚನೆ" (8:23)

ಒಮ್ಮೆ ನಾನು ಒಬ್ಬ ದಂಪತಿಯ ಬಗ್ಗೆ ಓದಿದೆನು, ಅವರಿಗೆ Touretteದ ರೋಗಲಕ್ಷಣ ಹೊಂದಿದ್ದ ಜಸ್ಟಿನ್ ಎಂಬ ಮಗನಿದ್ದನು, ಅದೊಂದು ಅನುವಂಶಿಕ ರೋಗವಾಗಿದ್ದು ಅದಕ್ಕೆ ತುತ್ತಾದವರಿಗೆ ದೇಹವು ನಿಯಂತ್ರಣವಿಲ್ಲದೆ ಸೆಳೆತಕ್ಕೊಳಗಾಗುತ್ತಿರುತ್ತದೆ ಮತ್ತು ಅವರು ಅವಲಕ್ಷಣವಾದ ಶಬ್ದಗಳನ್ನು ಮಾಡುತ್ತಿರುತ್ತಾರೆ. ಔಷದವನ್ನು ತೆಗೆದುಕೊಳ್ಳುವದರಿಂದ ಕೆಲವು ಸಾರಿ ಸಹಾಯಕವಾಗುತ್ತದೆ, ಆದರೆ ಅದು ವಾಸಿಯಾಗಲಾರದಂತಹ ಖಾಯಿಲೆಯಾಗಿದೆ. ಒಂದು ದಿನ, ತಾಯಿಯು ಆತನನ್ನು ಮತ್ತು ಆತನ ಇಬ್ಬರು ಸಹೋದರಿಯರನ್ನು ಕರೆದುಕೊಂಡು ನಗರಕ್ಕೆ ಹೋಗಿದ್ದಳು. ಆ ಹುಡುಗನಿಗೆ ಸಾರ್ವಜನಿಕ ಸ್ಥಳದಲ್ಲಿ ಮುಜುಗುರವುಂಟಾಗುವಂತಹ ಘಟನೆ ನಡೆದದ್ದರಿಂದ ಆ ಕುಟುಂಬವು ಅವಸರವಾಗಿ ಅಲ್ಲಿಂದ ಹೊರಡಬೇಕಾಯಿತು. ಸಹೋದರಿಯರಲ್ಲೊಬ್ಬಳು ಕಣ್ಣೀರು ಹಾಕುತ್ತಾ ತನ್ನ ತಾಯಿಗೆ, "ಜಸ್ಟಿನ್ ಯಾವಾಗಲೂ ಹೀಗೆಯೇ ಇರಲಿದ್ದಾನೆಯೋ?" ಎಂದು ಕೇಳಿದಳು. ತಾಯಿಯು ಈ ವಿಷಯವನ್ನು ತಂದೆಗೆ ತಿಳಿಸುತ್ತಾಳೆ, ಆತನು ಆಕೆಗೆ "ನೀನು ಆಕೆಗೆ ಏನೆಂದು ಉತ್ತರಿಸಿದಿ?" ಎಂದು ಕೇಳಿದನು. ಆಕೆ ತನ್ನ ಕಣ್ಣೀರನ್ನು ಒರೆಸಿಕೊಳ್ಳುತ್ತಾ, "ಆಕೆಗೆ ಏನು ಹೇಳಬೇಕೆಂಬುದು ನನಗೆ ಗೊತ್ತಿಲ್ಲ" ಅಂದಳು. ತಂದೆಯು ತನ್ನ ಹೆಂಡತಿಯ ಸುತ್ತ ಕೈಗಳನ್ನು ಹಾಕಿ ಆಕೆಗೆ ಹೀಗೆ ಹೇಳಿದನು, "ಮುಂದಿನ ಸಾರಿ, ಜಸ್ಟಿನ್ ಹೀಗೆಯೇ ಇರುವವನಾಗಿರುವದಿಲ್ಲ ಎಂದು ಆಕೆಗೆ ಹೇಳು. ಒಂದು ದಿನ, ಕರ್ತನು ತಿರಿಗಿ ಬರುವನು, ಮತ್ತು ಜಸ್ಟಿನ್‌ಗೆ ಒಂದು ಅದ್ಭುತವಾದ ದೇಹವು, ಯಾವದೇ ಊನ ಅಥವಾ ನ್ಯೂನ್ಯತೆಯಿಲ್ಲದಂತಹ ದೇಹವು ಕೊಡಲ್ಪಡುವುದು."[194]

ನಿಮ್ಮ ದೇಹವು ನೋವುಗಳಿಂದ ಧ್ವಂಶಗೊಂಡಿದೆಯೋ? ನಿಮಗೆ ಶರೀರಭಾವದ ಬಲಹೀನತೆಯ ವಿಷಯದಲ್ಲಿ ಹೋರಾಟವಿರುತ್ತದೋ? ನೀವು ದೇವರ ಒಬ್ಬ ನಂಬಿಗಸ್ತ ಮಗುವಾಗಿದ್ದರೆ, ಯಾವಾಗಲೂ ಹೀಗೆಯೇ ಇರುವದಿಲ್ಲ! ಯೋಹಾನನು ಹೀಗೆ ಬರೆದನು, "ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ; ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು" (1 ಯೋಹಾನ 3:2)!

## ದೇವರ ಸಹಾಯ (8:26-28)

ನಿಮಗೆ ಸಹಾಯದ ಅಗತ್ಯವೋ? ಕೀರ್ತನೆಗಾರನು ಹೀಗೆ ಬರೆಯುತ್ತಾನೆ, "ದೇವರು ನಮಗೆ ಆಶ್ರಯದುರ್ಗವಾಗಿದ್ದಾನೆ; ಆತನು ಇಕ್ಕಟ್ಟಿನಲ್ಲಿ ನಮಗೆ ವಿಶೇಷ ಸಹಾಯಕನು" (ಕೀರ್ತನೆ 46:1). ಕರ್ತನು ತನ್ನ ಜನರಿಗೆ, "ನೀನಂತು ಹೆದರಬೇಡ, ನಾನೇ ನಿನ್ನೊಂದಿಗಿದ್ದೇನೆ; ದಿಗ್ಭ್ರಮೆಗೊಳ್ಳದಿರು, ನಾನೇ ನಿನ್ನ ದೇವರು; ನಾನು ನಿನ್ನನ್ನು ಬಲಪಡಿಸುತ್ತೇನೆ; ಹೌದು, ನಿನಗೆ ಸಹಾಯಕೊಡುತ್ತೇನೆ" ಎಂದು ಹೇಳಿದನು (ಯೆಶಾಯ 41:10). ನಿಮಗೆ ಅಶಕ್ತರಗಿರುವ ವೇಳೆ ಸಹಾಯದ ಅಗತ್ಯವೊ? "ಪವಿತ್ರಾತ್ಮನು . . . ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ" (8:26a). ನಿಮಗೆ ಪ್ರಾರ್ಥಿಸುವ ವೇಳೆಯಲ್ಲಿ

ಸಹಾಯ ಅಗತ್ಯವೊ? "ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ" (8:26b).

ಜೀವನವು ನಿಮ್ಮನ್ನು ಸದೆಬಡಿಯುವ ಬೆದರಿಕೆಯೊಡ್ಡುವಾಗ ಮತ್ತು ನಿಮಗೆ ಕರ್ತನ ಸಹಾಯದ ಕುರಿತು ಅರುಹು ಇಲ್ಲದಂತಹ ಆ ಸಮಯಗಳ ವಿಷಯವೇನು? ಅಂತಹ ಸಂದರ್ಭಗಳಲ್ಲಿ, ದೇವರು ತೆರೆಮರೆಯಲ್ಲಿ ಕಾರ್ಯಮಾಡುತ್ತಿದ್ದಾನೆ, ಹಿತಕ್ಕಾಗಿ ಎಲ್ಲವನ್ನೂ ಅನುಕೂಲಮಾಡುತ್ತಿದ್ದಾನೆಂಬುದನ್ನು ನೀವು ತಿಳಿಯಬಲ್ಲಿರಿ (8:28a): ನಿಮ್ಮನ್ನು ಉತ್ತಮ ವ್ಯಕ್ತಿಯನ್ನಾಗಿಸಿ ಪರಲೋಕಕ್ಕೋಸ್ಕರ ನಿಮ್ಮನ್ನು ಸಿದ್ಧಪಡಿಸುವದು. ಈ ಸಂಗತಿಯನ್ನು ತಿಳಿದಿರುವದಾದರೆ ಅದು ಜೀವನದ ಕುರಿತು ನಿಮಗೆ ಬೇರೊಂದು ದೃಷ್ಟಿಕೋನವನ್ನು ಒದಗಿಸುತ್ತದೆ. ಅದು ಜೀವನವನ್ನು ಸರಳಗೊಳಿಸದಿರಬಹುದು, ಆದರೆ ಅದನ್ನು ಸಹಿಸಿಕೊಳ್ಳತಕ್ಕದ್ದನ್ನಾಗಿಯಂತೂ ಮಾಡುತ್ತದೆ.

ದೇವರು ತನ್ನ ಮಕ್ಕಳಿಗೆ ಒದಗಿಸುವ ಸಹಾಯದ ಕುರಿತಾಗಿ J. D. Thomas ಮಾತಾಡುವದನ್ನು ಆಲಿಸಿದ್ದು ನನಗೆ ಜ್ಞಾಪಕಕ್ಕೆ ಬರುತ್ತದೆ. ಆತನು ಸ್ವಲ್ಪ ತಡೆದು ಹೀಗೆ ಕೇಳಿದನು, "ಒಬ್ಬ ನಾಸ್ತಿಕನು ತನ್ನ ಮರಣದ ಹಾಸಿಗೆಯಲ್ಲಿರುವಾಗ, ಆತನ ದೇಹವು ಕ್ಯಾನ್ಸರ್‌ನಿಂದ ತಿಂದುಹಾಕಲ್ಪಡುತ್ತಿರುವಾಗ, ಆತನು ಸಹಾಯಕ್ಕಾಗಿ ಯಾರನ್ನು ಕೇಳಲು ಸಾಧ್ಯ? ಆತನು ಯಾರನ್ನು ಅವಲಂಭಿಸಬಲ್ಲನು?"[195] ದೇವರು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ನಮ್ಮ ಜೀವಿತಗಳಲ್ಲಿ ಕಾರ್ಯಮಾಡುತ್ತಿದ್ದಾನೆಂಬುದನ್ನು ತಿಳಿದಿರುವದು—ಏನೇ ಸಂಭವಿಸಿದಾಗ್ಯೂ ಸರಿಯೇ—ಎಲ್ಲಕ್ಕಿಂತಲೂ ಅತ್ಯಂಥ ಪ್ರಾಮುಖ್ಯವಾದ ಸಹಾಯವಾಗಿರಬಹುದಾಗಿದೆ.

ಕರ್ತನ ಸಹಾಯವು ಆತನ "ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ" ಗೆ ಮಾತ್ರವೇ ಲಭ್ಯವಿರುತ್ತದೆ (8:28b). ನಾವು ದೇವರನ್ನು ನಿಜವಾ ಗಿಯೂ ಪ್ರೀತಿಸುವದಾದರೆ, ಆತನು ಮಾಡಬೇಕೆಂದು ನಮಗೆ ಹೇಳಿದ್ದನ್ನು ನಾವು ಮಾಡುತ್ತೇವೆ (1 ಯೋಹಾನ 5:13). ದೇವರು ನಮ್ಮನ್ನು ಸುವಾರ್ತೆಯ—ಕ್ರಿಸ್ತನ ಮರಣ, ಹೂಣಲ್ಪಡುವಿಕೆ ಹಾಗೂ ಪುನರುತ್ಥಾನ (1 ಕೊರಿಂಥ 15:3, 4)—ಶುಭ ಸಂದೇಶದ ಮೂಲಕವಾಗಿ ಕರೆಯುತ್ತಾನೆ (2 ಥೆಸಲೋನಿಕ 2:14). ನಾವು ಆ ಕರೆಯುವಿಕೆಗೆ ಪ್ರತ್ಯುತ್ತರ ಕೊಡಬೇಕು ಮತ್ತು ಕರ್ತನ ಆಮಂತ್ರಣಕ್ಕೆ ಓಗೊಡಬೇಕು (ನೋಡಿರಿ ಮತ್ತಾಯ 11:28-30). ನಾವು ಸುವಾರ್ತೆಗೆ ವಿಧೇಯತೆಯುಳ್ಳವರಾಗಿರಬೇಕು (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38) ಮತ್ತು ನಂತರ ಅನುದಿನವೂ ದೇವರಿಗೋಸ್ಕರ ಜೀವಿಸಬೇಕು (ಪ್ರಕಟಣೆ 2:10).

## ಪವಿತ್ರಾತ್ಮನ ಸಹಾಯ (8:26)

ರೋಮಾ 8:26 ಹೀಗೆ ಹೇಳುತ್ತದೆ, "ಪವಿತ್ರಾತ್ಮನು . . . ನಮ್ಮ ಅಶಕ್ತಿಯನ್ನು ನೋಡಿ ಸಹಾಯಮಾಡುತ್ತಾನೆ." "ಸಹಾಯಮಾಡುತ್ತಾನೆ" ಎಂಬುದರ ಅನುವಾದಿತ ಗ್ರೀಕ್ ಪದ συναντιλαμβάνομαι (*sunantilambanomai*) ಎಂಬುದು, ಇದರರ್ಥವು "ಒಬ್ಬ ವ್ಯಕ್ತಿಯ ಎದುರು ಬದಿಯಲ್ಲಿ ನಿಂತು ಆತನ ಭಾರ ಹೊತ್ತುಕೊಳ್ಳಲು ಸಹಾಯ ಹಸ್ತ ನೀಡುವದು." ನನ್ನ ಕುಟುಂಬವು ಹಲವಾರು ಸಾರಿ ಮನೆಗಳನ್ನು ಬದಲಾಯಿಸಿರುವದರಿಂದ

ಮತ್ತು ಭಾರವಾದ ಪೀಠೋಪಕರಣಗಳನ್ನು ಎತ್ತುವದಕ್ಕೆ ಒದ್ದಾಟಪಟ್ಟಿದ್ದರಿಂದ, ನನ್ನ ಜ್ಞಾಪಕಕ್ಕೆ ಬರುವಂಥ ಒಂದು ಚಿತ್ರವೆಂದರೆ, ನಾನೊಂದು ದೊಡ್ಡದಾದ ಸೋಫಾ (ಸುಪತ್ತಿಗೆ ಹಾಸಿಗೆ) ಮೇಲೆ ನಿಂತುಕೊಂಡು ನಾನೇನು ಮಾಡಬೇಕೆಂದು ದಿಕ್ಕುತೋಚದೆ ಇದ್ದದ್ದು. ಅದನ್ನು ಹೊತ್ತುಕೊಳ್ಳುವದಿರಲಿ, ಮೇಲೆತ್ತುವದಕ್ಕೆ ಸಹ ನನಗೆ ಸಾಧ್ಯವೇ ಇರಲಿಲ್ಲ. ಆಗ ಒಬ್ಬ ಸ್ನೇಹಿತನು—ಬಲಿಷ್ಠ, ಮಾಂಸಖಂಡ ತುಂಬಿರುವ ಸ್ನೇಹಿತನು—ಅಲ್ಲಿಗೆ ಬಂದನು. ಆತನು ನನ್ನನ್ನು ನೋಡಿ ಮುಗುಳ್ನಗುತ್ತಾನೆ, ಸೋಫಾದ ಇನ್ನೊಂದು ಬದಿಗೆ ಹೋಗಿ ಅದನ್ನು ಮೇಲೆತ್ತುತ್ತಾನೆ. ಹಾಗೆಯೇ, ನನ್ನ ಭಾರಗಳನ್ನು ಹೊತ್ತುಕೊಳ್ಳಲು ಹಾಗೂ ನನ್ನ ಸವಾಲುಗಳನ್ನು ಸಂಧಿಸುವಂತೆ ಪವಿತ್ರಾತ್ಮನು ನನಗೆ ಸಹಾಯ ಮಾಡುತ್ತಾನೆ. (ಪವಿತ್ರಾತ್ಮನು ಹೊರೆಯಲ್ಲಿ "ಹೆಚ್ಚು ಭಾರವುಳ್ಳ ತುದಿ"ಯನ್ನು ಎತ್ತಿಕೊಳ್ಳುತ್ತಾನೆಂದು ಹೇಳಿದರೆ ಈ ಚಿತ್ರಕ್ಕೆ ಅತಿಯಾದ ಅರ್ಥವನ್ನು ಕಲ್ಪಿಸಿದಂತಾಗದೆಂದು ನಾನು ನಿರೀಕ್ಷಿಸುತ್ತೇನೆ.)

**"ಹೇಗೆ" ಅಥವಾ "ಏನು" ಬೇಡಿಕೊಳ್ಳಬೇಕು (8:26)**

8:26ರಲ್ಲಿ, ಪೌಲನು ಹೀಗೆ ಬರೆಯುತ್ತಾನೆ, "ನಾವು ತಕ್ಕ ಪ್ರಕಾರ ಏನು [ಅಥವಾ 'ಹೇಗೆ'] ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ." ವೈಯಕ್ತಿವಾಗಿ, ನಾನು ಎರಡೂ ಪದಗಳೊಂದಿಗೆ ನನ್ನನ್ನು ಗುರುತಿಸಿಕೊಳ್ಳಬಲ್ಲೆನು. ನನಗೆ ಅನೇಕ ಸಾರಿ ಏನು ಪ್ರಾರ್ಥಿಸಬೇಕೆಂದು ಗೊತ್ತಾಗುವದಿಲ್ಲ ಯಾಕೆಂದರೆ ವಿಷಯದ ಕುರಿತು ದೇವರ ಚಿತ್ತವೇನೆಂಬುದು ನನಗೆ ಖಚಿತವಾಗಿ ತಿಳಿದಿರುವದಿಲ್ಲ, ಮತ್ತು ಅಂತ್ಯದಲ್ಲಿ ಯಾವುದು ಅತ್ಯುತ್ತಮವೆಂಬುದು ನನಗೆ ತಿಳಿಯದ್ದಾಗಿರುತ್ತದೆ. ನನಗೆ ಒಂದು ಕಷ್ಟವಿರುವಾಗ, ನಾನು ಕರ್ತನಿಗೆ ಅದನ್ನು ತೆಗೆದುಹಾಕುವಂತೆ ಬೇಡಿಕೊಳ್ಳಬೇಕೋ ಅಥವಾ ಅದನ್ನು ಸಹಿಸಿಕೊಳ್ಳಲು ಬಲಪಡಿಸುವಂತೆ ಬೇಡಿಕೊಳ್ಳಬೇಕೋ? ನಾನು ನನಗೆ ಪ್ರೀತಿಯುಳ್ಳ ಒಬ್ಬನ ಪಕ್ಕದಲ್ಲಿರುವಾಗ, ಆತನು ಭಯಂಕರ ಬಾಧೆಯನ್ನನುಭವಿಸುವದನ್ನು ನೋಡಿದರೆ, ಆತನು ನಮ್ಮೊಂದಿಗೆ ಇರುವಂತಾಗಲು ಪ್ರಾರ್ಥಿಸಲೋ ಅಥವಾ ಆತನು ಹೊರಡು ಹೋಗಿ ಕರ್ತನ ಸಂಗಡ ಇರುವಂತಾಗಲೆಂದು ಪ್ರಾರ್ಥಿಸಲೋ? ಅನೇಕ ಸಂದರ್ಭಗಳಲ್ಲಿ, ನಾನು ನನ್ನ ತಲೆಯನ್ನು ಅಲ್ಲಾಡಿಸಿ, "ನಾನು 'ನಿನ್ನ ಚಿತ್ತವು ನೆರವೇರಲಿ' ಎಂದು ಪ್ರಾರ್ಥಿಸುವದನ್ನಷ್ಟೆ ಮಾಡಬೇಕೆಂದು ಬಲ್ಲೆನು" ಎಂದು ಒಪ್ಪಿಕೊಳ್ಳಬೇಕಾಗುತ್ತದೆ.

ಅಲ್ಲದೆ, ಅನೇಕ ವಿಧಗಳಲ್ಲಿ, ನನಗೆ ಹೇಗೆ ಪ್ರಾರ್ಥಿಸಬೇಕೆಂಬುದು ನನಗೆ ಗೊತ್ತಿರುವದಿಲ್ಲ ಎಂಬ ಅರುಹು ನನಗೆ ಇರುತ್ತದೆ. ನನ್ನ ಪ್ರಾಣವನ್ನು ರಕ್ಷಿಸಿ ನನ್ನನ್ನು ಅನುದಿನವೂ ಆಶೀರ್ವದಿಸುತ್ತಿರುವವನನ್ನು ಹೇಗೆ ಸಾಕಾಗುವಷ್ಟು ಸ್ತುತಿಸಬೇಕೆಂದು ನನಗೆ ಗೊತ್ತಿಲ್ಲ. ನನ್ನ ವಿಜ್ಞಾಪನೆಗಳಿಂದ ಸ್ವಾರ್ಥದ ಕಲೆಗಳನ್ನು ಹೇಗೆ ತೆಗೆದುಹಾಕಬೇಕೆಂದು ನನಗೆ ಗೊತ್ತಿರುವದಿಲ್ಲ. ವಿಶ್ವದ ಸೃಷ್ಟಿಕರ್ತ ಹಾಗೂ ಒಡೆಯನನ್ನು ಸಂಬೋಧಿಸುವದಕ್ಕೆ ಮಾನವ ಭಾಷೆಯು ಸಾಕಾದದ್ದಾಗಿರುವದಿಲ್ಲ ಎಂಬುದನ್ನು ನೋವಿನಿಂದ ಬಲ್ಲವನಾಗಿದ್ದೇನೆ. ನನ್ನ ಹೃದಯದಲ್ಲಿ, ನಾನು ಕೆಲವು ಸಾರಿ ಮಗುವಿನಂತೆ ಭಿನ್ನವಿಸುವ ಮಟ್ಟಕ್ಕೆ ಇಳಿಯುತ್ತೇನೆ: "ಕರ್ತನೇ, ನನ್ನನ್ನು ಕ್ಷಮಿಸು, ಮತ್ತು ನನಗೆ ಸಹಾಯ ಮಾಡು. ನನಗೆ ಸಹಾಯ ಮಾಡು; ನನಗೆ ಸಹಾಯ ಮಾಡು."

## ಪವಿತ್ರಾತ್ಮನು ನಮಗೋಸ್ಕರ ಬೇಡಿಕೊಳ್ಳುವಿಕೆ (8:26)

"ಪವಿತ್ರಾತ್ಮನು ತಾನೇ ಮಾತಿಲ್ಲದ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ" (8:26). ಪವಿತ್ರಾತ್ಮನು ನಿಖರವಾಗಿ ಏನು ಮಾಡುತ್ತಾನೆ ಅಥವಾ ಅದನ್ನು ಹೇಗೆ ಮಾಡುತ್ತಾನೆಂಬುದು ನನಗೆ ತಿಳಿಯದು. ನಾನು ಆಗಾಗ ಭಾಷಾಂತರಕಾರನೊಂದಿಗೆ ಪ್ರಸಂಗ ಮಾಡಿರುವದರಿಂದ, ಪವಿತ್ರಾತ್ಮನ ವಿಷಯವಾಗಿ ಆತನು ನನ್ನ ಆತ್ಮೀಕ ಭಾಷಾಂತರಕಾರನೆಂದು ಯೋಚಿಸಿಕೊಳ್ಳಲು ಇಷ್ಟಪಡುತ್ತೇನೆ. ನಾನು ಇಟಾಲಿಯನ್, ಜರ್ಮನ್, ಜಪಾನ್, ರೋಮಾನಿಯಾದ, ಅಥವಾ ರಷ್ಯಾದ ಭಾಷೆಗಳನ್ನಾಡುವ ಶ್ರೋತೃಗಳ ಮುಂದೆ ನಿಂತಿರುತ್ತೇನೆ. ನನಗೆ ಆ ಭಾಷೆಗಳನ್ನಾಡುವದಕ್ಕೆ ಬರುತ್ತಿರಲಿಲ್ಲ, ಮತ್ತು ನನ್ನ ಶ್ರೋತೃಗಳಲ್ಲಿ ಅನೇಕರೊಂದಿಗೆ ಸಂವಹನ ಮಾಡಲು ನನ್ನ ಆಂಗ್ಲ ಮಾತುಗಳು ಸಾಕಾಗುತ್ತಿರಲಿಲ್ಲ. ಭಾಷಾಂತರಕಾರರು ನನ್ನ ಮಾತುಗಳನ್ನು ಮತ್ತು ಆಲೋಚನೆಗಳನ್ನು ಆಲಿಸಿದರು ಮತ್ತು ಬಳಿಕ ನಾನು ಹೇಳುವಂತದ್ದು ಶ್ರೋತೃಗಳಿಗೆ ಅರ್ಥವಾಗುವಂತೆ ಅವುಗಳನ್ನು ವ್ಯಕ್ತಪಡಿಸುತ್ತಿದ್ದರು. ಪವಿತ್ರಾತ್ಮನು ಸಹ ಅದೇ ಬಗೆಯಲ್ಲಿ ಕಾರ್ಯಮಾಡುವದನ್ನು ನಾನು ಊಹಿಸಿಕೊಳ್ಳಬಲ್ಲೆನು. ನನಗೆ ಇತರ ಭಾಷೆಗಳನ್ನಾಡುವ ಪರಿಮಿತನಾದ ಮನುಷ್ಯ ಜೀವಿಗಳೊಂದಿಗೆ ಸಂವಹನ ಮಾಡುವದಕ್ಕೆ ಸಾಧ್ಯವಿಲ್ಲವಾದಲ್ಲಿ, ಒಬ್ಬ ಅಪರಿಮಿತನಾದ ದೇವರ ಸಂಗಡ ಸಂವಹನ ಮಾಡುವದಕ್ಕೆ ಇನ್ನೆಷ್ಟು ಅಲ್ಪ ಜ್ಞಾನವಿರುವವನು! ನನ್ನ ಶೋಚನೀಯವಾಗಿ ಅಮಸರ್ಮಕವಾದಂತಹ ಯತ್ನಗಳನ್ನು ತೆಗೆದುಕೊಂಡು, ಯಥಾಃರೀತಿಯಲ್ಲಿಯೇ, ಅವುಗಳನ್ನು ಪರಲೋಕದ ಸಿಂಹಾಸನದ ಕೋಣೆಯಲ್ಲಿ ಮಾತಾಡಲ್ಪಡುವ ಭಾಷೆಯಲ್ಲಿ ತರ್ಜುಮೆಗೊಳಿಸುತ್ತಾನೆಂಬುದಕ್ಕೆ ನಾನು ಕೃತಜ್ಞನಾಗಿದ್ದೇನೆ.

ಇನ್ನು ಕೆಲವರು ಪ್ರಾರ್ಥನೆಯಲ್ಲಿನ ನಮ್ಮ ಪ್ರಯತ್ನಗಳನ್ನು ಒಂದು ಮಗುವಿನ ತೊದಲುನುಡಿಗಳಿಗೆ ಹೋಲಿಕೆ ಮಾಡುತ್ತಾರೆ. ಒಂದು ಚಿಕ್ಕ ಮಗುವು ಮಾತಾಡುವದನ್ನು ನಾನು ಕೇಳಿಸಿಕೊಳ್ಳುವಾಗ, ಅನೇಕ ಸಾರಿ ಆತನು ಏನನ್ನು ಹೇಳಬಯಸುತ್ತಿದ್ದಾನೆಂಬುದು ನನಗೆ ಅರ್ಥವಾಗುವದಿಲ್ಲ; ಆದರೆ ಒಬ್ಬ ಪ್ರೀತಿಯುಳ್ಳ ತಾಯಿಯು ಆಲಿಸುತ್ತಾಳೆ ಮತ್ತು ಅರ್ಥಮಾಡಿಕೊಳ್ಳುತ್ತಾಳೆ: "ನನಗೆ ಹಸಿವೆಯಾಗಿದೆ," "ನನಗೆ ಖುಷಿಯಾಗಿದೆ," "ನನ್ನ ಉಡುಪನ್ನು ಬದಲಾಯಿಸಬೇಕಿದೆ," ಅಥವಾ "ನನ್ನನ್ನು ಹಿಡಿದುಕೋ." ಯಾವ ಮನುಷ ದೃಷ್ಟಾಂತವೂ ಪರಿಪೂರ್ಣವಾಗಿರುವದಿಲ್ಲ, ಆದರೆ ಇದರ ಬಗ್ಗೆ ನಾವು ನಿಶ್ಚಯದಿಂದಿರಬಹುದು: ನಾವು ಪ್ರಾರ್ಥಿಸುವಾಗ, ಪವಿತ್ರಾತ್ಮನು ನಮ್ಮ ಪರವಾಗಿ ಬೇಡಿಕೊಳ್ಳುತ್ತಾನೆ.

## ಪವಿತ್ರಾತ್ಮನ ನರಳಾಟ (8:26)

ರೋಮಾ 8ನೇ ಅಧ್ಯಾಯದ ಬಗ್ಗೆ "ಕೃಪೆ ಹಾಗೂ ಮಹಿಮಪದಿವೆಯ ಮಧ್ಯದಲ್ಲಿ ನರಳಾಟವಿರುತ್ತದೆ" ಎಂದು ಹೇಳಲಾಗಿದೆ[196] ಅಂದರೆ, ದೇವರ ಮಗುವಾಗುವ ಕೃಪೆ ಹಾಗೂ ಒಂದು ದಿನ ಪ್ರತ್ಯಕ್ಷವಾಗಲಿರುವ ಮಹಿಮಪದವಿಯ ಮಧ್ಯದಲ್ಲಿ, ಪ್ರತಿ ದಿನ ಯೇಸುವಿಗೋಸ್ಕರ ಜೀವಿಸಲು ಪ್ರಯತ್ನಿಸುವದರಲ್ಲಿ ನರಳಾಟವು ಸೇರಿರುತ್ತದೆ. ರೋಮಾ

8ನೇ ಅಧ್ಯಾಯವು ಈಗಾಗಲೇ ಎರಡು ನರಳಾಟಗಳ ಬಗ್ಗೆ ಪ್ರಸ್ತಾವಿಸಿರುತ್ತದೆ: ನಾಶದ ವಶದಿಂದ ನಿಡುಗಡೆಯಾಗುವದಕ್ಕಾಗಿ (8:21) ಜಗತ್ತಿನ ನರಳಾಟ (8:22) ಮತ್ತು ನಾವು ದೇಹದ ಪುನರುತ್ಥಾನಕ್ಕಾಗಿ ಎದುರುನೋಡುತ್ತಾ ಕ್ರೈಸ್ತರು ಅನುಭವಿಸುವ ನರಳಾಟ (8:23). ಮೂರನೆಯ ನರಳಾಟವು ನಮ್ಮ ಪ್ರಾರ್ಥನೆಗಳಿಗೆ ಸಂಬಂಧಿಸಿದಂತೆ ಸೂಚಿಸಲ್ಪಟ್ಟಿರುತ್ತದೆ: ಪವಿತ್ರಾತ್ಮನ ಮಾತಿಲ್ಲದ ನರಳಾಟ (8:26). ನಮ್ಮಲ್ಲಿ ಬಹುತೇಕರಿಗೆ ಆತ್ಮೀಕ ನರಳಾಟದ ಬಗ್ಗೆ ಗೊತ್ತಿರುತ್ತದೆ. ನಾವು ಆತ್ಮೀಕವಾಗಿ ಏನಾಗಿರಬೇಕು ಮತ್ತು ತಕ್ಕದನ್ನು ಮಾಡಬೇಕು ಎಂಬ ವಿಷಯದಲ್ಲಿ ಉಪಶಮನದ ಅಗತ್ಯವಿದೆ, *ಸಹಾಯ*ದ ಅಗತ್ಯವಿದೆ ಎಂಬದನ್ನು ಅನುಭವಿಸಿದ್ದೇವೆ. ಈ ಸನ್ನಿವೇಶದಲ್ಲಿ, ಪವಿತ್ರಾತ್ಮನು ನಮಗೋಸ್ಕರ ಪ್ರಾರ್ಥಿಸುವವನಾಗಿ ನರಳಾಡುತ್ತಾನೆ. ಈ ಚಿತ್ರವು ಎತ್ತಿತೋರಿಸುವದೇನೆಂದರೆ ದೇವರು ನಮಗೋಸ್ಕರ ಕಾಳಜಿಯುಳ್ಳವನು ಮತ್ತು ನಾವು ಜಯಶಾಲಿಗಳಾಗಬೇಕೆಂದು ಬಹುವಾಗಿ ಬಯಸುತ್ತಾನೆ ಎಂಬುದೇ.

## ದೇವರ ಅನುಗ್ರಹ (8:28)

ಬಹಳಷ್ಟು ಸಂಕಷ್ಟಗಳನ್ನು ಅನುಭವಿಸಿದ್ದ ಒಬ್ಬ ವೃದ್ಧಳಾದ ದೇವಭಕ್ತಳಿಗೆ ಆಕೆ ಎಂದಾದರೂ ಗೊಣಗಬೇಕೆಂದು ಅನ್ನಿಸಿತ್ತೋ ಎಂದು ಕೇಳಲಾಯಿತು. ಅದಕ್ಕೆ ಅವಳು ಉತ್ತರಿಸಿ, "ನನಗೆ ಹಾಗೆ ಅನ್ನಿಸಿದರೆ, ನನ್ನನ್ನು ನನ್ನ ಆರಾಮ ಕುರ್ಚಿಯಲ್ಲಿ ಕೂಡ್ರಿಸಿ ಶಾಂತವಾಗಿಡುವಂತೆ ಕರ್ತನನ್ನು ಬೇಡಿಕೊಳ್ಳುತ್ತೇನಷ್ಟೆ." ಆ ಪ್ರಶ್ನೆಯನ್ನು ಕೇಳಿದಾತನು ಸುತ್ತಲು ನೋಡಿದನು ಆದರೆ ಅಲ್ಲಿ ಯಾವದೇ ಆರಾಮ ಕುರ್ಚಿಯು ಕಾಣಸಲಿಲ್ಲ, ಆದ್ದರಿಂದ ಆತನು ಆಕೆಗೆ ಅದರರ್ಥವೇನೆಂದು ಕೇಳಿದನು. ಆಕೆಯು ಹೀಗೆ ಹೇಳಿದಳು, "ನನ್ನ ಆರಾಮ ಕುರ್ಚಿಯು ರೋಮಾ 8:28: 'ಆತನನ್ನು [ದೇವರನ್ನು] ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ'" (KJV).[197]

*ಒಂದು ಅತ್ಯಾವಶ್ಯಕವಾದ ಅನುಗ್ರಹ.* ಇದು "ಅನುಗ್ರಹ"ದ ಕುರಿತಾದ ಒಂದು ಅಧ್ಯಯನ. "ಅನುಗ್ರಹ" ಎಂಬ ಪದವು ಬೈಬಲ್‌ನಲ್ಲಿ ಸಿಕ್ಕುವದಿಲ್ಲ (ಅದು ಪ್ರಾಸಂಗಿಕವಾಗಿ ಅಪೊಸ್ತಲರ ಕೃತ್ಯಗಳು 24:2ರಲ್ಲಿ ಉಪಯೋಗಿಸಲ್ಪಟ್ಟಿದೆ), ಆದರೆ ದೈವಿಕ ಅನುಗ್ರಹದ ಭಾವನೆಯು ಪುಸ್ತಕದೊಳಗೆ ವ್ಯಾಪಿಸಿಕೊಂಡಿರುತ್ತದೆ.

1. ಅಗುಗ್ರಹ ಎಂದರೇನು. "ಅನುಗ್ರಹ" (providence) ಎಂಬುದು ಲ್ಯಾಟಿನ್‌ನ ಎರಡು ಪದಗಳಿಂದ ತೆಗೆದುಕೊಳ್ಳಲ್ಪಟ್ಟಿದೆ. ಮೊದಲನೆಯದು *pro.* ಇಂದು, ನಾವು "pro" ಎಂಬ ಪದವನ್ನು "professional" (ವೃತ್ತಿಪರ) ಎಂಬುದರ ಸಂಕ್ಷೇಪಣವಾಗಿ ಉಪಯೋಗಿಸುತ್ತೇವೆ; ಅಥವಾ "pro" ಮತ್ತು "con" ಎಂಬ ಬಗ್ಗೆ ಮಾತಾಡುತ್ತೇವೆ, ಇಲ್ಲಿ "*pro*" ಎಂದರೆ "ಗಾಗಿ" ಎಂದರ್ಥವಾಗಿರುತ್ತದೆ. ಇವುಗಳಲ್ಲಿ ಯಾವ ಪದವೂ "providence" ದಲ್ಲಿನ "*pro*" ದ ಅರ್ಥವನ್ನು ವ್ಯಕ್ತಪಡಿಸುವದಿಲ್ಲ. "pro" ಬದಲಾಗಿ "pre" ಯೋಚಿಸಿರಿ: *ಮುಂಚೆ* ಇರುವಂತದ್ದು. ಲ್ಯಾಟಿನ್‌ನ ಎರಡನೆಯ ಪದವು *vid.* "Video" ಎಂಬದನ್ನು ಯೋಚಿಸಿರಿ: *ಕಾಣಿಸು*ವಂತದ್ದು. ಈ ಎರಡು ಪದಗಳನ್ನು "providence" ನಲ್ಲಿ ಒಂದುಗೂಡಿಸಿದಾಗ, ನಮಗೆ ಅದು ಅಗತ್ಯ ಬೀಳುವ *ಮುಂಚೆ*ಯೇ ನಮಗೇನು ಅಗತ್ಯವೆಂಬುದನ್ನು *ಕಾಣುವ*ದನ್ನು—ಮತ್ತು ನಂತರ ಆ ಅಗತ್ಯತೆಯನ್ನು

ಅನುಗ್ರಹಿಸುವದನ್ನು ಸೂಚಿಸುತ್ತದೆ. ("Provide" [ಒದಗಿಸು], "provision" [ಸರಬರಾಜು], and "providence" [ಅನುಗ್ರಹ] ಎಂಬ ಪದಗಳು ಒಂದಕ್ಕೊಂದು ಸಂಬಂಧ ಹೊಂದಿವೆ.)

"ದೇವರಿಗೆ ನನ್ನ ಅಗತ್ಯತೆಗಳೇನೆಂದು ಕಾಲಕ್ಕೆ ಮುಂಚಿತವಾಗಿಯೇ ಹೇಗೆ ತಿಳಿದುಕೊಳ್ಳಲು ಸಾಧ್ಯ?" ಎಂದು ನೀವು ಕೇಳಬಹುದು. ನಾವು ಜೀವಿಸುವಂತಹ ಕಾಲ ವಲಯಕ್ಕಿಂತ "ವ್ಯತ್ಯಾಸವಾದ ಒಂದು ಕಾಲ ವಲಯ" ದಲ್ಲಿ ದೇವರು ಜೀವಿಸುತ್ತಾನೆ ಎಂದು Clay Bryant ಹೇಳುತ್ತಾನೆ.[198] Oklahoma ದಲ್ಲಿರುವ ಜನರು CST-Central Standard Time (ಕೇಂದ್ರಿಯ ಪ್ರಮಾಣಕ ಕಾಲಮಾನ)–ದಲ್ಲಿ ಜೀವಿಸುತ್ತಾರೆ, ಆದರೆ ದೇವರು "DST"—"Divine Standard Time" ಯಲ್ಲಿ ಜೀವಿಸುತ್ತಾನೆಂದು Clay ಅಭಿಪ್ರಾಯ ಪಡುತ್ತಾನೆ. ಆ "ಕಾಲ ವಲಯ"ದಲ್ಲಿ, ಭೂತ, ವರ್ತಮಾನ, ಮತ್ತು ಭವಿಷ್ಯತ್ಕಾಲಗಳೆಲ್ಲವೂ ಒಂದೇ ಆಗಿರುತ್ತವೆ. ನನಗೆ ಇದು ಅರ್ಥವಾಗುತ್ತದೋ? ಇಲ್ಲ, ಆದರೆ ನಂಬಿಕೆಯ ಮೂಲಕ ಬಲ್ಲವನಾಗಿದ್ದೇನೆ, ಏನೆಂದರೆ ದೇವರು ನಮ್ಮ ಅಗತ್ಯತೆಗಳನ್ನು ಮೊದಲೇ ಎದುರುನೋಡಿ ಆ ಅಗತ್ಯತೆಗಳು ಅಸ್ತಿತ್ವಕ್ಕೆ ಬರುವ ಮುನ್ನವೇ ನಮಗೋಸ್ಕರ ಅನುಗ್ರಹಗೊಳಿಸುವದಕ್ಕೆ ಶಕ್ತನಾಗಿದ್ದಾನೆ ಎಂಬುದೇ.

ದೇವರು ತನ್ನವರಿಗಾಗಿ ಒಂದು ವಿಶೇಷ ರೀತಿಯಲ್ಲಿ ಅನುಗ್ರಹಿಸುತ್ತಾನೆಂಬದಾಗಿ ಶಾಸ್ತ್ರಗಳು ಸಾಕ್ಷಿಹೇಳುತ್ತವೆ. ಈ ಸತ್ಯದಿಂದ ನಾನು ಎರಡು ಮುಕ್ತಾಯಗಳಿಗೆ ಬರುವವನಾಗಿದ್ದೇನೆ. ಮೊದಲನೆಯದಾಗಿ, ದೇವರು ಈಗಿನ ಲೋಕದಲ್ಲಿ ಸಕಕ್ರಿಯನಾಗಿದ್ದಾನೆ; ಆತನು ಕೇವಲ ಲೋಕವನ್ನು ಸೃಷ್ಟಿಸಿಬಿಟ್ಟು ಹೊರಟು ಹೋಗಲಿಲ್ಲ. ಎರಡನೆಯದಾಗಿ, ದೇವರು ತನ್ನ ಮಕ್ಕಳಿಗೆ ಆಶೀರ್ವಾದವುಂಟಾಗುವ ರೀತಿಯಲ್ಲಿ ಘಟನೆಗಳನ್ನು *ವ್ಯವಸ್ಥೆಗೊಳಿಸುತ್ತಾನೆ!*

2. ನಾನು ಏಕೆ ಅದನ್ನು ನಂಬುತ್ತೇನೆ. ದೇವರ ಅನುಗ್ರಹದಲ್ಲಿ ನನಗೆ ಏಕೆ ನಂಬಿಕೆಯಿರುತ್ತದೆಂಬುದಕ್ಕೆ ನಾನು ಹಲವಾರು ಕಾರಣಗಳನ್ನು ಕೊಡಬಲ್ಲೆನು. ಉದಾಹರಣೆಗೆ, ಅದು *ಸಮಂಜಸವಾದದ್ದು* ಎಂಬ ಕಾರಣಕ್ಕೆ ನಂಬುತ್ತೇನೆ. ದೇವರು ಈ ಲೋಕವನ್ನು ಮಾನವರಿಗೆ ನಿವಾಸ ಸ್ಥಾನವಾಗಿ ನಿರ್ಮಿಸಿದನು. ಬಳಿಕ ಆತನು ಪುರುಷ ಮತ್ತು ಸ್ತ್ರೀಯನ್ನು ಉಂಟು ಮಾಡಿದನು, ಆತನ ಸೃಷ್ಟಿಯ ಸಾಧನೆಗಳಲ್ಲಿ ಇದು ಮುಕುಟವಾಗಿರುತ್ತದೆ. ಆತನು ಪ್ರಾಣಿ ಜಗತ್ತನ್ನು, ಸಸ್ಯ ಜಗತ್ತನ್ನು, ಮತ್ತು ಖನಿಜ ಜಗತ್ತನ್ನು ಮಾನವನ ದೊರೆತನಕ್ಕೆ ಒಳಪಡಿಸಿದನು. ಅಷ್ಟೆಲ್ಲಾ ಪ್ರಯಾಸವನ್ನು ತೆಗದುಕೊಂಡಂತಹ ದೇವರು, ಹೇಗೆ ತನ್ನ ಸೃಷ್ಟಿಯನ್ನು ಸುಮ್ಮನೆ ಬಿಟ್ಟುಬಿಡುವದಕ್ಕೆ ಮತ್ತು ನಿರ್ಲಕ್ಷಿಸುವದಕ್ಕೆ ಆಗುತ್ತದೆ? ಒಬ್ಬನು ಮಗುವೊಂದನ್ನು ಹುಟ್ಟಿಸಿದ ಬಳಿಕ, ಆತನ ಅನುದಿನದ ಅಗತ್ಯಗಳ ಬಗ್ಗೆ ಚಿಂತಿಸದೆ ಆ ಮಗುವನ್ನು ತೊರೆದುಬಿಟ್ಟರೆ ಆ ಮನುಷ್ಯನ ಬಗ್ಗೆ ನೀವು ಏನೆಂದು ಯೋಚಿಸುವಿರಿ? ನೀವು ಆತನನ್ನು ಒಬ್ಬ ತಂದೆಯಾಗಿರುವದಕ್ಕೆ ವಿಫಲನಾದವನು ಎಂದು ಪರಿಗಣಿಸುವಿರಿ. ದೇವರು ವಿಫಲನಾದವನಲ್ಲ. ಆತನು ನಮ್ಮನ್ನು ಉಂಟು ಮಾಡಿದ್ದು ಮಾತ್ರವಲ್ಲದೆ, ಆತನು ನಿರಂತರವಾಗಿ ನಮ್ಮನ್ನು ಪೋಷಣೆ ಮಾಡುತ್ತಾ ನಮ್ಮ ಅಗತ್ಯತೆಗಳನ್ನು ಅನುಗ್ರಹಿಸುತ್ತಾನೆ. ಆದಕಾರಣ, ದೇವರ ಅನುಗ್ರಹಿಸುವಿಕೆಯು ಅರ್ಥ ನೀಡುತ್ತದಾದ್ದರಿಂದ ನಾನು ಅದರಲ್ಲಿ ನಂಬುತ್ತೇನೆಂದು ಹೇಳಬಲ್ಲೆನು.

ಹೇಗೂ, ನಾನು ಮಾನವ ತರ್ಕದ ಮೇಲೆ ಮಾತ್ರವೇ ಆತುಕೊಳ್ಳುವದಿಲ್ಲ. ತರ್ಕವು ದೋಷದಿಂದ ಕೂಡಿರಬಹುದಾಗಿದೆ. ನನ್ನ ನಂಬಿಕೆಗೆ ಹೆಚ್ಚು ಪ್ರಾಮುಖ್ಯವಾಗಿರುವದೆಂದರೆ ದೇವರು ತನ್ನ ಮಕ್ಕಳಿಗೋಸ್ಕರ ವಿಶೇಷ ಅನುಗ್ರಹವನ್ನು ಮಾಡುತ್ತಾನೆಂಬುದನ್ನು ಸಿದ್ಧಾಂತಪಡಿಸುವ ಬೈಬಲಿನ ಅನೇಕ *ಉದಾಹರಣೆಗಳೇ* ಆಗಿವೆ. J. W. McGarvey ಬರೆದಿರುವ ಸಂದೇಶಗಳ ಒಂದು ಪುಸ್ತಕದಲ್ಲಿ "ದೇವರ ಅನುಗ್ರಹಿಸುವಿಕೆ" ಎಂಬದರ ಬಗ್ಗೆ ಎರಡು ಪಾಠಗಳನ್ನೊಳಗೊಂಡಿದೆ.[199] ಅದರಲ್ಲೊಂದೆಂದರೆ ಯೋಸೇಫನ ಕಥೆ. ಬೈಬಲ್ ವಿವರಿಸುವಂಥ ಕಥೆಯ ಅಂತ್ಯದ ವೇಳೆಗೆ, ಕೊನೆಗೂ ಯೋಸೇಫನು ತನಗೆ ಸಂಭವಿಸಿದ ಎಲ್ಲದರಲ್ಲಿಯೂ ದೇವರ ಹಸ್ತವಿರುವದನ್ನು ಕಾಣುತ್ತಾನೆ. ಆತನು ತನ್ನ ಸಹೋದರರಿಗೆ ಹೀಗೆ ಹೇಳುತ್ತಾನೆ,

> ನಿಮ್ಮ ಜನವು ಭೂಮಿಯ ಮೇಲೆ ಉಳಿಯುವಂತೆಯೂ ನೀವು ಈ ವಿಪತ್ತಿಗೆ ಸಿಕ್ಕದೆ ಬಹುಜನವಾಗುವಂತೆಯೂ *ದೇವರು* ನನ್ನನ್ನು ನಿಮ್ಮ ಮುಂದೆ ಕಳುಹಿಸಿದನು. *ದೇವರೇ* ನನ್ನನ್ನು ಇಲ್ಲಿಗೆ ಕಳುಹಿಸಿದನಲ್ಲದೆ ನೀವು ಕಳುಹಿಸಲಿಲ್ಲ; ಆತನು ನನ್ನನ್ನು ಫರೋಹನ ಮಂತ್ರಿಯನ್ನಾಗಿಯೂ ಫರೋಹನ ಅರಮನೆಯಲ್ಲಿ ಅಧಿಪತಿಯನ್ನಾಗಿಯೂ ಐಗುಪ್ತ ದೇಶಕ್ಕೆ ಸರ್ವಾಧಿಕಾರಿಯನ್ನಾಗಿಯೂ ಮಾಡಿದ್ದಾನೆ (ಆದಿಕಾಂಡ 45:7, 8; ಒತ್ತಿ ಹೇಳಿದ್ದು ನನ್ನದು).

ಎರಡನೆಯದು ಎಸ್ತೇರ ರಾಣಿಯ ಕಥೆ—ಅದರಲ್ಲಿ ಎಸ್ತೇರಳ ಸೋದರಸಂಬಂಧಿಯಾದ ಮೊರ್ದಕೈಯು ಆಕೆಗೆ ಹೀಗೆ ಹೇಳುತ್ತಾನೆ, "ಇದಲ್ಲದೆ ನೀನು ಇಂಥ ಸಂದರ್ಭಕ್ಕಾಗಿಯೇ ಪಟ್ಟಕ್ಕೆ ಬಂದಿರಬಹುದು, ಯಾರು ಬಲ್ಲರು" (ಎಸ್ತೇರಳು 4:14).

ನಾನು ದೇವರ ಅನುಗ್ರಹಿಸುವಿಕೆಯಲ್ಲಿ ನಂಬಿಕೆಯಿಡುವದಕ್ಕೆ ಇನ್ನೂ ಒಂದು ಕಾರಣವಿರುತ್ತದೆ, ಅದು ಎಲ್ಲವುಗಳಿಗಿಂತಲೂ ಅತ್ಯಂಥ ಪ್ರಾಮುಖ್ಯವಾದ ಕಾರಣ: ದೇವರ ಪ್ರೇರಿಸಲ್ಪಟ್ಟ *ವಾಗ್ದಾನಗಳ* ಕಾರಣದಿಂದ. ನಮ್ಮ ಮೇಲೆ ದೇವರಿಗಿರುವ ಪ್ರೀತಿ ಹಾಗೂ ಕಾಳಜಿಯ ಕುರಿತು ಮಾತಾಡುವಂತಹ ಅನೇಕ ವಾಕ್ಯಭಾಗಗಳನ್ನು ತೆರೆಯಬಲ್ಲೆವು.[200] ಉದಾಹರಣೆಗೆ, ಯಾಕೋಬ 1:17 ಹೀಗೆ ಹೇಳುತ್ತದೆ, "ಎಲ್ಲಾ ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣ ನಾದವನಿಂದ ಇಳಿದುಬರುತ್ತದೆ." ಅಲ್ಲದೆ ನಾವು ನಮಗೆಲ್ಲಾ ಪರಿಚಿತವಾದ ಈ ಮಾತುಗಳ ಸೂಚ್ಯಾರ್ಥವನ್ನು ಸಹ ಪರಿಗಣಿಸಬಹುದು: "ದೇವರು ಲೋಕವನ್ನು ಎಷ್ಟೋ *ಪ್ರೀತಿಸಿ*" (ಯೋಹಾನ 3:16; ಒತ್ತಿ ಹೇಳಿದ್ದು ನನ್ನದು). ಹೇಗೂ, ಅನೇಕರಿಗಾದರೋ, ಈ ವಿಷಯದ ಕುರಿತು ನೆಚ್ಚಿನ ವಾಕ್ಯಭಾಗವೆಂದರೆ ರೋಮಾ 8:28: "ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ."

*ಒಂದು ರೋಮಾಂಚಕಾರಿ ವಾಗ್ದಾನ.* KJV ತರ್ಜುಮೆಯಲ್ಲಿ "ಪ್ರೀತಿಸುವವರ ಒಳ್ಳೆಯದಕ್ಕಾಗಿ ಎಲ್ಲವುಗಳು ಒಟ್ಟಾಗಿ ಸಂಭವಿಸುತ್ತವೆ" ಎಂದು ಇರುತ್ತದೆ. NASB ತರ್ಜುಮೆಯಲ್ಲಿ, "ದೇವರು ಎಲ್ಲವನ್ನು ಒಳ್ಳೇದಕ್ಕೆ ಅನುಕೂಲವಾಗುವಂತೆ ಮಾಡುವನು" ಎಂದಿರುತ್ತದೆ. ವಾಕ್ಯಭಾಗದಲ್ಲಿ "ದೇವರು" ಎಂಬ ಪದವು ಇರಲಿ ಅಥವಾ ಇಲ್ಲದಿರಲಿ,

ಜೀವನದಲ್ಲಿ ಸಂಗತಿಗಳು ಸ್ವಯಂಚಾಲಿತವಾಗಿ "ಹಿತಕ್ಕೋಸ್ಕರ ಅನುಕೂಲವಾಗುವದಿಲ್ಲ" ಎಂಬುದು ನಮ್ಮಲ್ಲಿ ಬಹುತೇಕರಿಗೆ ತಿಳಿದಿರುವ ವಿಚಾರವಾಗಿದೆ. *ದೇವರ* ಹಸ್ತವು ಪಾತ್ರವಹಿಸುವದು ಸ್ಪಷ್ಟವಾಗಿ ಗೊತ್ತಾಗುತ್ತದೆ. ದೇವರು ನಮಗೋಸ್ಕರ ಏನು ಮಾಡುತ್ತಾನೆಂಬುದನ್ನು ಇನ್ನಷ್ಟು ಪೂರ್ಣವಾಗಿ ಗ್ರಹಿಸಿಕೊಳ್ಳಲು ಈ ರೋಮಾಂಚಕಾರಿ ವಾಕ್ಯಭಾಗವನ್ನು ಸೂಕ್ಷ್ಮವಾಗಿ ಗಮನಿಸೋಣ.

1. ನಾವು ಮೊದಲನೆಯದಾಗಿ ರೋಮಾ 8:28 ಒಂದು ದೃಢವಿಶ್ವಾಸದ ಹೇಳಿಕೆಯಾಗಿದೆ ಎಂಬದನ್ನು ನೋಡುತ್ತೇವೆ. ಪೌಲನು "ನಮಗೆ *ಗೊತ್ತದೆ"* ಎಂಬ ಮಾತುಗಳನ್ನು ಉಪಯೋಗಿಸುತ್ತಾನೆ. ಅಪೊಸ್ತಲನು ಅನೇಕ ಸಾರಿ "ಬಲ್ಲೆನು" (ನೋಡಿರಿ 2 ತಿಮೊಥೆ 1:12) ಅಥವಾ "ಬಲ್ಲೆವು" (2 ಕೊರಿಂಥ 5:1) ಎಂದು ಹೇಳುವ ಮೂಲಕ ತನ್ನ ದೃಢವಿಶ್ವಾಸವನ್ನು ವ್ಯಕ್ತಪಡಿಸುತ್ತಾನೆ. ಆತನು ಅದೇ ವಿಧವಾದ ದೃಢವಿಶ್ವಾಸವನ್ನು ರೋಮ 8:28ರಲ್ಲಿ ತಿಳಿಯಪಡಿಸುತ್ತಾನೆ. Batsell Barrett Baxter ಹೀಗೆ ಹೇಳುತ್ತಾನೆ,

> ಕೆಲವು ವ್ಯಕ್ತಿಗಳು ಈ ವಾಕ್ಯಭಾಗದ ವಿಷಯವಾಗಿ, "ಇದು ಸತ್ಯವಾಗಿರಬಹುದೋ?" ಎಂದು ಹೇಳುತ್ತಾರೆ. ಇತರರು, "ಇದು ಸತ್ಯವಾಗಿದ್ದರೆ ಚೆನ್ನಾಗಿರುತ್ತಿತ್ತು" ಎಂದು ಹೇಳುತ್ತಾರೆ. ಇನ್ನು ಕೆಲವರು, "ಇದು ಸತ್ಯವೆಂದು ನಿರೀಕ್ಷಿಸುತ್ತೇನೆ" ಎಂದೆನ್ನುತ್ತಾರೆ. ಆದರೆ ಪೌಲನು ವಚನವನ್ನು "ನಮಗೆ ಗೊತ್ತದೆ" ಎಂದು ಆರಂಭಿಸುತ್ತಾನೆಂಬುದನ್ನು ಗಮನಿಸಿರಿ. ಇದು ಕೇವಲ ಒಂದು ನಿರೀಕ್ಷೆ ಅಥವಾ ಒಂದು ಹಾರೈಕೆ ಅಥವಾ ಒಂದು ಸಾಧ್ಯತೆ ಮಾತ್ರವಾಗಿರುವದಿಲ್ಲ, ಯಾಕೆಂದರೆ ಪೌಲನು ಹೇಳುತ್ತಾನೆ, ". . . ನಮಗೆ ಗೊತ್ತದೆ."[201]

2. ಅಲ್ಲದೆ ನಮ್ಮ ವಾಕ್ಯಭಾಗವು ಒಂದು *ಸಮಗ್ರತೆಯ* ಹೇಳಿಕೆಯಾಗಿರುತ್ತದೆ ಎಂಬುದನ್ನು ನೋಡುತ್ತೇವೆ: ದೇವರಿಂದ ". . . ಹಿತಕ್ಕಾಗಿ *ಎಲ್ಲಾ ಕಾರ್ಯಗಳು* ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ." ಬೈಬಲ್‌ನಲ್ಲಿ "ಎಲ್ಲಾ ಕಾರ್ಯಗಳು" ಎಂದರೆ ಅದು ಯಾವಾಗಲೂ "ಪ್ರತಿಯೊಂದು ಸಂಗತಿ" ಎಂಬ ಅರ್ಥವಾಗಿರುವದಿಲ್ಲ ಎಂಬುದನ್ನು ನಮ್ಮಲ್ಲಿ ಬಹುತೇಕರು ಬಲ್ಲವರಗಿದ್ದೇವೆ (ನೋಡಿರಿ 1 ಕೊರಿಂಥ 3:21; 13:7; 2 ಕೊರಿಂಥ 5:18). ಅಲ್ಲದೆ ವಾಕ್ಯಭಾಗವು ಪಾಪ ಮಾಡುವಂತೆ ನಮ್ಮನ್ನು ಪ್ರೋತ್ಸಾಹಿಸುತ್ತಿಲ್ಲ ಮತ್ತು ಪಾಪಮಯತೆ ನಮಗೆ ಹಿತಕರವಾಗಿರುವದೆಂದು ಕಲಿಸುತ್ತಿಲ್ಲ ಎಂಬುದನ್ನು ಸಹ ನಾವು ಅರ್ಥಮಾಡಿಕೊಳ್ಳುತ್ತೇವೆ (ನೋಡಿರಿ 1 ಕೊರಿಂಥ 15:34; ಎಫೆಸ 4:26; 1 ಯೋಹಾನ 2:1).[202] ಈ ವಾಕ್ಯಭಾಗವು ಹೇಳುವದೇನೆಂದರೆ ನಮ್ಮ ಜೀವನದಲ್ಲಿ ನಡೆಯುವಂಥದ್ದೆಲ್ಲವೂ—ಒಳ್ಳೇದಾಗಲಿ ಅಥವಾ ಕೆಟ್ಟದ್ದಾಗಲಿ—ದೇವರಿಂದ ಅಂತಿಮವಾಗಿ ನಮಗೆ ಹಿತವುಂಟು ಮಾಡುವಂತೆ ಉಪಯೋಗಿಸಲ್ಪಡಬಲ್ಲದು. ದೇವರು ನಮ್ಮನ್ನು ಪ್ರೀತಿಸುವದರಿಂದ ಇದನ್ನು ನಮಗೋಸ್ಕರ ಮಾಡುವನೆಂದು ಸನ್ನಿವೇಶವು ಒತ್ತಿಹೇಳುತ್ತದೆ:

> ಹಾಗಾದರೆ ಈ ವಿಷಯಗಳಲ್ಲಿ ನಾವು ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ ನಮ್ಮನ್ನು ಎದುರಿಸುವವರು ಯಾರು? ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟ ಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೆ ಇರುವನೇ? . . . ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು

ಅಗಲಿಸುವವರು ಯಾರು? ಕಷ್ಟವೋ ಸಂಕಟವೋ ಹಿಂಸೆಯೋ ಅನ್ನವಿಲ್ಲದಿರುವದೋ ವಸ್ತ್ರವಿಲ್ಲದಿರುವದೋ ಗಂಡಾಂತರವೋ ಖಡ್ಗವೋ? . . . ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ. ಹೇಗಂದರೆ ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು (8:31-39).

3. ನಾನು ಮುಂದೆ ನಮ್ಮ ವಾಕ್ಯಭಾಗವು ಒಂದು ಹೊಂದಾಣಿಸುವ ಹೇಳಿಕೆ ಎಂದು ಅಭಿಪ್ರಾಯ ಪಡುತ್ತೇನೆ—ಅಂದರೆ, ಅದು ಕಾರ್ಯಗಳು "ಅನುಕೂಲವಾಗುತ್ತವೆ" ಎಂಬ ಕುರಿತು ಮಾತಾಡುತ್ತದೆ: ದೇವರಿಂದ ". . . ಹಿತಕ್ಕಾಗಿ *ಎಲ್ಲಾ ಕಾರ್ಯಗಳು* ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ." ಎಲ್ಲಾ ಕಾರ್ಯಗಳು ಹಿತವಾದವುಗಳಲ್ಲ, ಆದರೆ ಅವುಗಳು "ಹಿತಕ್ಕಾಗಿ ಅನುಕೂಲವಾಗುತ್ತವೆ."

ಒಂದು ಭಾನುವಾರದ ಮದ್ಯಾಹ್ನದ ವೇಳೆಯಂದು, ನನ್ನ ಹೆಂಡತಿ ಮತ್ತು ನಾನು Arkansas ದಿಂದ Oklahoma ಗೆ ಪ್ರಯಾಣಿಸುತ್ತಿದ್ದೆವು. ಸಾಯಂಕಾಲದ ಆರಾಧನಾ ಸಮಯದ ಹೊತ್ತಿಗೆ, ನಾವು Oklahoma ದ Henryetta ಹತ್ತಿರ ತಲುಪಿದ್ದೆವು, ಆದ್ದರಿಂದ ನಾವು ಅಲ್ಲಿ ಆರಾಧನೆಯಲ್ಲಿ ಪಾಲ್ಗೊಳ್ಳುವದಕ್ಕೆ ಪ್ರಯಾಣವನ್ನು ನಿಲ್ಲಿಸಿದೆವು. ನನಗೆ ಅನೇಕ ವರ್ಷಗಳ ಮುಂಚೆ ಪರಿಚಿತನಿದ್ದ Red Coleman ಎಂಬ ಯುವಕನು ಒಂದು ಸುವಾರ್ತಾಕೂಟದಲ್ಲಿ ಬೋಧಿಸುತ್ತಿದ್ದನು. ಆ ರಾತ್ರಿಯಲ್ಲಿ ಆತನು ರೋಮಾ 8:28ನ್ನು ವಾಕ್ಯಭಾಗವಾಗಿ ಉಪಯೋಗಿಸಿ ಅದನ್ನೊಂದು ಆಸಕ್ತಿಕರವಾದ ವಿಧದಲ್ಲಿ ದೃಷ್ಟಾಂತಪಡಿಸಿದನು. ಆತನು ಸಭಾಂಗಣದ ಮುಂದೆ ಉದ್ದಕ್ಕೂ ಒಂದು ಗುಂಪು ಮಕ್ಕಳನ್ನು ನಿಲ್ಲಿಸಿದನು. ಆತನು ಹಿಟ್ಟಿನ ಡಬ್ಬವೊಂದನ್ನು ಮೊದಲಲ್ಲಿದ್ದ ಮಗುವಿನ ಕೈಗೆ ಕೊಟ್ಟು ಅದನ್ನು ರುಚಿಸುವಂತೆ ಹೇಳಿದನು. ಆತನು ರುಚಿ ನೋಡಿ ಅದು ಹಿತವಾದ ರುಚಿಯುಳ್ಳದ್ದಲ್ಲವೆಂಬದನ್ನು ತೋರ್ಪಡಿಸುವ ಮುಖವನ್ನು ಚಹರೆಯನ್ನು ಮಾಡಿದನು. Red ಮುಂದಿನ ಮಗುವಿಗೆ ಹಿಟ್ಟಿನ ಭಕ್ಷ್ಯ ತಯಾರಿಸಲು ಬಳಸುವ ಕೊಬ್ಬಿನಿಂದ ತುಂಬಿದ್ದ ಡಬ್ಬವನ್ನು ಕೊಟ್ಟನು, ಮತ್ತು ಈ ಪ್ರಕ್ರಿಯೆಯು ಮುಂದುವರೆಯಿತು. ಆತನು ಅದೇ ರೀತಿಯಲ್ಲಿ ಉಪ್ಪು, ಅಡುಗೆ ಸೋಡ, ವಿವಿಧ ಸ್ವಾದಗಳು, ಹಾಲು, ಸಕ್ಕರೆ, ಮತ್ತು ಇತರೆ ಅಡುಗೆ ಮಾಡುವ ಪದಾರ್ಥಗಳ ಡಬ್ಬಗಳನ್ನು ಕೊಡುತ್ತಾ ಹೋದನು. ಹಾಲು ಹಾಗೂ ಸಕ್ಕರೆ ಮಕ್ಕಳಿಗೆ ಇಷ್ಟವಾದವು, ಆದರೆ ಅವರು ಇತರ ಪದಾರ್ಥಗಳ ರುಚಿಯ ಬಗ್ಗೆ ಗಮನವನ್ನೇ ಕೊಡಲಿಲ್ಲ. ಬಳಿಕ Red ಎಲ್ಲಾ ಡಬ್ಬಗಳನ್ನು ತೆಗೆದುಕೊಂಡು, ಅವುಗಳಲ್ಲಿದ್ದದನ್ನೆಲ್ಲಾ ಪಾತ್ರೆಯೊಂದರಲ್ಲಿ ಹಾಕಿದನು, ಮತ್ತು "ಕೆಟ್ಟ" ಹಾಗೂ "ಒಳ್ಳೇ" ಸಂಗತಿಗಳೆರಡೂ "ಹಿತಕ್ಕಾಗಿ ಅನುಕೂಲ" ವಾಗುವ ಕುರಿತು ಮಾತಾಡುತ್ತಾ ಪಾತ್ರೆಯಲ್ಲಿರುವದನ್ನೆಲ್ಲಾ ಮಿಶ್ರಣಗೊಳಿಸಿದನು. ಅಷ್ಟೊತ್ತಿಗೆಲ್ಲಾ ಆತನು ಕೇಕ್ ತಯಾರಿಸುತ್ತಿದ್ದನೆಂಬುದು ಎಲ್ಲರಿಗೂ ಗೊತ್ತಾಗಿತ್ತು. ಆತನು ಪ್ರಸಂಗ ಪೀಠದ ಹಿಂದೆ ಕೈಹಾಕಿ ಆ ಎಲ್ಲಾ ಪದಾರ್ಥಗಳನ್ನು ಹಾಕಿ ಮುಂಚೆಯೇ ತಯಾರಿಸಿಟ್ಟಿದ್ದ ಕೇಕ್‌ನ್ನು ಹೊರಗೆ ತೆಗೆದನು, ಮತ್ತು ಅದನ್ನು ಆ ಚಿಕ್ಕ ಮಕ್ಕಳಿಗೆ ಹಂಚಿದನು. ಆಗ ಅವರು ಎಲ್ಲಾ

ಪದಾರ್ಥಗಳು "ಒಟ್ಟಾಗಿ ಅನುಕೂಲ [ಕಾರ್ಯಮಾಡುವಾಗ] ವಾಗುವಾಗ" "ಹಿತ" ವಾದದ್ದು ಹೊರಹೊಮ್ಮುತ್ತದೆಂಬುದನ್ನು ಒಪ್ಪಿಕೊಂಡರು!

ಸಂಗತಿಗಳು ಹಿತಕ್ಕಾಗಿ "ಅನುಕೂಲವಾಗುವ" ವಿಷಯದಲ್ಲಿ ಇನ್ನು ಅನೇಕ ಉದಾಹರಣೆಗಳನ್ನು ಕೊಡಬಹುದಾಗಿದೆ. McGarveyಯ ಎಸ್ತೇರಳ ಕುರಿತ ಸಂದೇಶದಲ್ಲಿ, ಚಿಕಾಗೋದ ಮಹಾ ಜಾತ್ರೆಯಲ್ಲಿ ನೋಡಿದ ಒಂದು ನೇಯ್ಗೆ ಯಂತ್ರದ ದೃಷ್ಟಾಂತವನ್ನು ಉಪಯೋಗಿಸುತ್ತಾನೆ. ಅಲ್ಲಿ ಮಾನವ ಕೈಯು ಕಾಣಿಸುತ್ತಿರಲಿಲ್ಲ. ಮಗ್ಗದ ಲಾಳಿಗಳು ಹಾರಾಡುತ್ತಿದ್ದವು, ದಾರಗಳು ಸುತ್ತಿಕೊಳ್ಳುತ್ತಿದ್ದವು, ಯಂತ್ರವು ಲಟಲಟ ಸದ್ದುಮಾಡುತ್ತಲಿತ್ತು, ಮತ್ತು ಹೆಣೆಯಲ್ಪಟ್ಟ ಸುಂದರವಾದ ರೇಷ್ಮೆಯ ಪಟ್ಟೆಗಳು ಯಂತ್ರದಿಂದ ಹೊರಗೆ ಬರುತ್ತಿದ್ದವು. McGarveyಯ ಮುಕ್ತಾಯದ ಮಾತುಗಳನ್ನು ನಾನು ಸರಳಾನುವಾದ ಮಾಡುತ್ತೇನೆ: "ಈ ಹೆಣೆಯಲ್ಪಟ್ಟ ಪಟ್ಟೆಗಳು ಆಕಸ್ಮೀಕವಾಗಿ ಸಂಭವಿಸಿರುವಂತವುಗಳೆಂದು ಯಾರೊಬ್ಬರೂ ನನಗೆ ಮನವರಿಕೆ ಮಾಡಲಾಗದು, ಮತ್ತು ಎಸ್ತೇರಳ ಕಥೆಯು ಅನುಕೂಲಕರವಾಗಿ ಮುಕ್ತಾಯಗೊಂಡಿದ್ದು ಆಕಸ್ಮೀಕವಾಗಿ ಎಂದು, ಅಥವಾ ನಮ್ಮ ಜೀವಿತಗಳಲ್ಲಿ ಅನುಕೂಲತೆಯು ಆಕಸ್ಮೀಕವಾಗಿ ನಡೆಯುತ್ತದೆಂದು ಯಾರೂ ನನಗೆ ಮನವರಿಕೆ ಮಾಡುವದಕ್ಕಾಗದು. ಮನುಷ್ಯರ ಜೀವಿತಗಳಲ್ಲಿ ದೇವರು ಆಳ್ವಿಕೆ ಮಾಡುತ್ತಾನೆ!"[203]

ದೇವರು ಈ ಲೋಕದಲ್ಲಿ ಮತ್ತು ನಮ್ಮ ಜೀವಿತಗಳಲ್ಲಿ ನಮ್ಮ ಹಿತಕ್ಕೋಸ್ಕರ ಕಾರ್ಯಮಾಡುತ್ತಿದ್ದಾನೆ. ನಮಗೆ ಕಷ್ಟಗಳು ಮತ್ತು ಸಂಕಟಗಳಿರಬಹುದು, ಆದರೆ ಆತನ ಸಹಾಯದೊಂದಿಗೆ, ಅಂತ್ಯದಲ್ಲಿ ನಾವು ಜಯಶಾಲಿಗಳಾಗುವೆವೆಂಬ ಭರವಸೆಯಿಂದಿರಬಲ್ಲೆವು. ನಾವು ಈಗಾಗಲೆ 37ನೇ ವಚನವನ್ನು ಓದಿದ್ದೇವೆ, ಅಲ್ಲಿ ಪೌಲನು ಹೀಗೆ ಹೇಳಿದನು, "ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ."

4. ನಮ್ಮ ವಾಕ್ಯಭಾಗವು ಒಂದು *ಸಂತೈಸುವಂತಹ* ಹೇಳಿಕೆ ಸಹ ಆಗಿರುತ್ತದೆ: ದೇವರಿಂದ "ತನ್ನನ್ನು ಪ್ರೀತಿಸುವವರ *ಹಿತ*ಕ್ಕಾಗಿ *ಎಲ್ಲಾ ಕಾರ್ಯಗಳು* ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ." ಜೀವನದಲ್ಲಿ ನಮಗೆ ಏನೇ ಸಂಭವಿಸಿದಾಗ್ಯೂ, ನಾವು ಈ ಸತ್ಯಕ್ಕೆ ಅಂಟಿಕೊಂಡಿರಬಹುದು: ನಾವು ದೇವರಲ್ಲಿ ನಮ್ಮ ನಂಬಿಕೆಯನ್ನು ಕಾಪಾಡಿಕೊಳ್ಳುವದಾದರೆ, ಅಂತ್ಯದಲ್ಲಿ ಒಳ್ಳೇ ಫಲಿತ ಹೊರಹೊಮ್ಮುವಂತೆ ಆತನು ಖಚಿತಪಡಿಸುವನು.

ಕೆಲವರಿಗೆ ಇದನ್ನು ನಂಬುವದಕ್ಕೆ ಕಷ್ಟಕರವಾಗಿರುತ್ತದೆ. ಅವರು ಒಬ್ಬ ನೀತಿವಂತ ಮನುಷ್ಯನು ಸಮಸ್ಯೆಗಳಿಂದ—ರೋಗ, ಬಡತನ, ಮತ್ತು ತನ್ನ ಮಿತ್ರರನ್ನು ಕಳೆದುಕೊಂಡಿರುವದು ಸೇರಿದಂತೆ—ಹೋರಾಟ ಪಡುತ್ತಿರುವದನ್ನು, ಅದೇ ವೇಳೆಯಲ್ಲಿ, ಅನೀತಿವಂತರು ಸಮೃದ್ಧಿಗೊಳ್ಳುತ್ತಿರುವದನ್ನು ನೋಡುತ್ತಾರೆ. ಅವರು ಹೀಗೆ ಹೇಳುತ್ತಾರೆ, "ದೇವರ ಅನುಗ್ರಹದ ವಿರುದ್ಧವಾಗಿರುವ ಸಾಕ್ಷಿಯು ನಮ್ಮ ಕಣ್ಣುಗಳ ಮುಂದೆಯೇ ಇರುವಾಗ, ನಾವು ಹೇಗೆ ಅದನ್ನು ನಂಬುವದಕ್ಕೆ ಸಾಧ್ಯ?" ಈ ಪ್ರಶ್ನೆಗೆ ಹಲವಾರು ಉತ್ತರಗಳಿರುತ್ತವೆ, ಆದರೆ ನಾನು "ಹಿತ" ಎಂಬ ಪದದ ಕುರಿತ ನಮ್ಮ ಅರ್ಥ ನಿರೂಪನೆಯ ಮೇಲೆ ಗಮನವನ್ನು ಹರಿಸಲಿಚ್ಛಿಸುತ್ತೇನೆ.

ಈ ಲೋಕವು ನಮ್ಮ ನಿವಾಸಸ್ಥಾನ ಎಂದು ಯೋಚಿಸುವಂತೆ ಮೋಸಕ್ಕೊಳಗಾಗುವದು ಸುಲಭವಾಗಿರುತ್ತದೆ. ಅದು ಸಂಭವಿಸಿದಾಗ, ನಾವು ಭೌತಿಕ ಸಂಗತಿಗಳೇ—ಗೌರವ, ಐಶ್ವರ್ಯ, ಭೋಗ, ಪ್ರಸಿದ್ಧಿ, ಮತ್ತು ಉತ್ತಮ ಆರೋಗ್ಯ ಸಹ—ಅತ್ಯಂಥ ಮುಖ್ಯವಾದವುಗಳು ಎಂದು ಭಾವಿಸಿಕೊಳ್ಳುತ್ತೇವೆ. ನಾವು ಅಂತಹ ನಿರ್ಣಯಕ್ಕೆ ಬರುವದಾದರೆ, ನಾವು ತಪ್ಪಾದ ಅಳತೆಗೋಲಿನಿಂದ ಅಳತೆ ಮಾಡುವವರಾಗಿರುತ್ತೇವೆ.

ವರ್ಷಗಳ ಹಿಂದೆ ನಾನು Greater Oklahoma ಪಟ್ಟಣದಲ್ಲಿರುವ ಒಂದು ಸಭೆಯಲ್ಲಿ ಬೋಧನೆಯನ್ನು ಆರಂಭಿಸಿದಾಗ, Earl Matthews (ಸ್ವಲ್ಪ ಬೋಧನೆ ಮಾಡಿದ ಅನುಭವ ಹೊಂದಿದ್ದ ನಮ್ಮ ಸದಸ್ಯರಲ್ಲೊಬ್ಬನು) ಎಂಬವನು ಈ ಭೂಮಿಯ ಮೇಲೆ ಕರ್ತನು ಏಕೆ ಜನರನ್ನು ಇಟ್ಟಿದ್ದಾನೆಂದು ನನ್ನನ್ನು ಪ್ರಶ್ನಿಸಿದನು. ಇದು ನಾನು ಈ ಮುಂಚೆ ಯೋಚನೆಗೆ ತೆಗೆದುಕೊಂಡಿರದಂತಹ ಒಂದು ಪ್ರಶ್ನೆಯಾಗಿತ್ತು. Earl ಕೆಲವೊಂದು ವಾಕ್ಯಭಾಗಗಳನ್ನು ಹಂಚಿಕೊಂಡನು, ಮತ್ತು ಆತನು ಕಲಿಸಿದ ಪಾಠಗಳನ್ನು ಮರೆತುಹೋಗದಂತೆ ನಾನು ನನ್ನ ಬೈಬಲಿನ ಮುಂದಿನ ಪುಟದಲ್ಲಿ ಕೆಲವು ವಾಕ್ಯಭಾಗಗಳನ್ನು ಬರೆದುಕೊಂಡೆನು.

> ಕರ್ತನೇ, ನನ್ನ ದೇವರೇ, ಮನಃಪೂರ್ವಕವಾಗಿ ನಿನ್ನನ್ನು ಕೊಂಡಾಡುವೆನು;
> ಎಂದೆಂದಿಗೂ ನಿನ್ನ ನಾಮವನ್ನು ಘನಪಡಿಸುವೆನು (ಕೀರ್ತನೆ 86:12).

> ವಿಷಯವು ತೀರಿತು; ಎಲ್ಲವೂ ಕೇಳಿ ಮುಗಿಯಿತು; ದೇವರಿಗೆ ಭಯಪಟ್ಟು ಆತನ ಆಜ್ಞೆಗಳನ್ನು ಕೈಕೊಳ್ಳು . . . (ಪ್ರಸಂಗಿ 12:13).

> "ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು" (ಮತ್ತಾಯ 5:16).

> ಕರ್ತನೇ, ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ; ಸಮಸ್ತವನ್ನು ಸೃಷ್ಟಿಸಿದಾತನು ನೀನೇ; ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು, ನಿನ್ನ ಚಿತ್ತದಿಂದಲೇ ನಿರ್ಮಿತವಾದವು (ಪ್ರಕಟನೆ 4:11).

ಜೀವನದಲ್ಲಿ ನಮ್ಮ ಉದ್ದೇಶವು ಇಮ್ಮಡಿಯಾದದ್ದಾಗಿದೆ: ದೇವರನ್ನು ಕೊಂಡಾಡುವದು ಮತ್ತು ದೇವರ ಸಂಗಡ ನಿತ್ಯತ್ವದುದ್ದಕ್ಕೂ ಇರುವದಕ್ಕೆ ಸಿದ್ಧಪಡಿಸಿಕೊಳ್ಳುವದು. ಈ ಎರಡೂ ಗುರಿಗಳಿಗೆ ಸಹ ಹೆಚ್ಚೆಚ್ಚು ದೇವರಂತಾಗುವದಕ್ಕೆ ಶ್ರಮಿಸುವದು ಅಗತ್ಯವಿರುತ್ತದೆ. ವಿಷಯವು ಹಾಗಿರುವಾಗ, *ನಮ್ಮನ್ನು ದೇವರಿಂದ ದೂರಕ್ಕೆ ಕೊಂಡೊಯ್ಯುವ ಯಾವದೇ ಸಂಗತಿಯು "ಕೆಟ್ಟದ್ದು," ಮತ್ತು ನಮ್ಮನ್ನು ದೇವರಿಗೆ ಸಮೀಪ ತರುವ ಯಾವದೇ ಸಂಗತಿಯಾಗಲಿ "ಒಳ್ಳೇದು."*

ಈ ಪರಿಜ್ಞಾನವನ್ನು ನಮ್ಮ ಅಳತೆಗೋಲನ್ನಾಗಿ ಉಪಯೋಗಿಸುವದಾದರೆ ಅದು ನಮಗೆ ಸಂಭವಿಸುವದನ್ನು ಒಂದು ವ್ಯತ್ಯಾಸವಾದ ದೃಷ್ಟಿಕೋನದಿಂದ ನೋಡುವಂತೆ ಮಾಡುತ್ತದೆ. ಉದಾಹರಣೆಗೆ, ಈ ಲೋಕವು ನಮಗೆ ಹೊಗಳುಭಟ್ಟತೆಯನ್ನು ತೋರಿಸುವದಕ್ಕಿಂತಲೂ ಅದು ನಮ್ಮನ್ನು ಕೆಟ್ಟದ್ದಾಗಿ ನಡಿಸಿಕೊಳ್ಳುವದು ನಮಗೆ ಉತ್ತಮವಾಗಿರಬಲ್ಲದಾಗಿದೆ. ಭೌತಿಕ ಆಶೀರ್ವಾದಗಳು ಕೆಲವು ವ್ಯಕ್ತಿಗಳನ್ನು ದೇವರಿಗೆ ಸಮೀಪ ತರಲಾರವು, ಆದರೆ ಅವುಗಳು ಅದಕ್ಕೆ ಅಡ್ಡಿಯಾಗಿರುತ್ತವೆ. ಯೇಸು ಹೀಗೆ

ಎಚ್ಚರಿಸಿದನು, "ಎಲ್ಲಾ ಲೋಭಕ್ಕೂ ಎಚ್ಚರಿಕೆಯಾಗಿದ್ದು ನಿಮ್ಮನ್ನು ಕಾಪಾಡಿಕೊಳ್ಳಿರಿ. ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವಾಧಾರವಾಗುವದಿಲ್ಲ" (ಲೂಕ 12:15). ಕರ್ತನು ಹೇಳಿದ್ದೇನೆಂದರೆ "ಐಶ್ವರ್ಯವಂತನು ದೇವರ ರಾಜ್ಯದಲ್ಲಿ ಸೇರುವದಕ್ಕಿಂತ ಒಂಟೆಯು ಸೂಜಿಯ ಕಣ್ಣಿನಲ್ಲಿ ನುಗ್ಗುವದು ಸುಲಭ" (ಮತ್ತಾಯ 19:24).

ಜೀವನದ ಇತರ ಕ್ಷೇತ್ರಗಳ ವಿಷಯದಲ್ಲಿ ಸಹ ಈ ಸಾಮಾನ್ಯ ಸೂತ್ರವು ಅಷ್ಟೇ ಸತ್ಯವಾದದ್ದು. ಅನಾರೋಗ್ಯವು ಸಹ ನಮಗೆ ರೋಗಕ್ಕಿಂತ ಉತ್ತಮವಾದ ಸೇವೆಯನ್ನು ಮಾಡಬಲ್ಲದು. ನನ್ನನ್ನು ಅಪಾರ್ಥಮಾಡಿಕೊಳ್ಳಬೇಡಿರಿ. ನಾವು ಅನಾರೋಗ್ಯವನ್ನು ತಂದುಕೊಳ್ಳಬೇಕು ಅಥವಾ ನಮ್ಮ ದೇಹಗಳ ಆರೈಕೆಯನ್ನು ಮಾಡಿಕೊಳ್ಳಬಾರದು ಎಂಬದಾಗಿ ನಾನು ಹೇಳುತ್ತಿಲ್ಲ; ಹಾಗೆ ಹೇಳಿದರೆ ಅದು 1 ಕೊರಿಂಥ 6:19, 20ರಲ್ಲಿನ ಉಪದೇಶಕ್ಕೆ ತದ್ವಿರುದ್ಧವಾಗುವದು. ಬದಲಾಗಿ, ನಾನು ಹೇಳುತ್ತಿರುವದೇನೆಂದರೆ, ನಮ್ಮ ಮನೋಭಾವವು ಸರಿಯಾದದ್ದಾಗಿದೆ ದೇವರು ನಮ್ಮ ರೋಗವನ್ನು ಸಹ ನಮ್ಮ ಹಿತಕ್ಕಾಗಿ ಉಪಯೋಗಿಸಬಲ್ಲನು. ವೇದನೆಯ ಹಾಸಿಗೆಯಲ್ಲಿ ಸಮಯ ಕಳೆಯುವ ಪುರುಷ ಅಥವಾ ಸ್ತ್ರೀಯು ಸಂಗತಿಗಳನ್ನು ಹೆಚ್ಚು ಬೆಳಕಿನಲ್ಲಿ ನೋಡುವವರಾಗಿರುತ್ತಾರೆ. ನನ್ನ ಜೀವನದಲ್ಲಿ ಹಲವಾರು ಸಮಯಗಳಲ್ಲಿ, ನಾನು ವಿಸ್ತರಿತ ಕಾಲದ ವರೆಗೆ ಬೆನ್ನ ಮೇಲೆ ಮಲಗಿಕೊಳ್ಳಬೇಕಾಗಿತ್ತು—ಮತ್ತು ಅದು ನನಗೆ ಯಾವುದು ಪ್ರಾಮುಖ್ಯವಾದದ್ದು ಮತ್ತು ಯಾವುದು ಪ್ರಾಮುಖ್ಯವಲ್ಲ ಎಂಬದರ ಬಗ್ಗೆ ಸ್ಪಷ್ಟವಾದ ದೃಷ್ಟಿಕೋನವನ್ನು ಒದಗಿಸಿತ್ತು.

ಕೀರ್ತನೆಗಾರನು ವ್ಯಾದಿಯಿಂದಾಗುವ ಒಂದು ಸಂಭಾವ್ಯ ಆಶೀರ್ವಾದದ ಬಗ್ಗೆ ಕೀರ್ತನೆ 119:71ರಲ್ಲಿ ಉಲ್ಲೇಖಿಸುತ್ತಾನೆ: "ಕಷ್ಟಾನುಭವವು ನನಗೆ ಹಿತಕರವಾಯಿತು; ಅದರಿಂದಲೇ ನಿನ್ನ ನಿಬಂಧನೆಗಳನ್ನು ಕಲಿತೆನು." ನಾನು Tennesseeಯ Murfreesboro ಪಟ್ಟಣದ ಒಬ್ಬ ಕ್ರೈಸ್ತ ಸಹೋದರನ ಬಗ್ಗೆ ಓದಿದೆನು, ಆತನ ಜೀವನದ ಸಾಮಾನ್ಯವಾಗಿ ಜೀವಿಸಬೇಕಾದ ಹಲವಾರು ವರ್ಷಗಳನ್ನು tuberculosis (ಕ್ಷಯರೋಗವು) ಕಸಿದುಕೊಂಡಿತ್ತು. ಆತನು ತನ್ನ ಸಮಯವನ್ನೆಲ್ಲಾ ವಾಕ್ಯದ ಅಧ್ಯಯನ ಮತ್ತು ವಾಕ್ಯಭಾಗಗಳನ್ನು ಕಂಠಪಾಠ ಮಾಡುವದರಲ್ಲಿ ಕಳೆದನು. ಆತನು ಆ ವರ್ಷಗಳನ್ನು ತನ್ನ ಜೀವಿತದಲ್ಲಿಯೇ ಅತ್ಯಂಥ ಆಶೀರ್ವಾದಕರವಾದ ವರ್ಷಗಳೆಂದು ನೆನಪಿಸಿಕೊಳ್ಳುತ್ತಾ ಹೀಗೆ ಹೇಳಿದನು, "ನಾನು ಈ ವ್ಯಾದಿಯು ಬಂದಿಲ್ಲವಾಗಿದ್ದರೆ ಎಂದಿಗೂ ಸಮಯ ತೆಗೆದುಕೊಂಡು ವಾಕ್ಯಭಾಗಗಳನ್ನು ಕಲಿತುಕೊಳ್ಳದೆ ಇದ್ದಿರು ತ್ತಿದ್ದೇನೋ ಆ ವಾಕ್ಯಭಾಗಗಳನ್ನು ಈ ಕಾಲದಲ್ಲಿ ಕಂಠಪಾಠ ಮಾಡಿದೆನು."[204]

ರೋಗದಿಂದಾಗುವ ಇತರ ಪ್ರಯೋಜನಗಳನ್ನು ಪ್ರಸ್ತಾವಿಸಬಹುದು, ಉದಾಹರಣೆಯೆಂದರೆ ಆತ್ಮೀಕ ಪಕ್ವತೆಯನ್ನು ಪಡೆದುಕೊಳ್ಳುವ ಸಾಧ್ಯತೆ. ನೀವು ಸಾಕಷ್ಟು ಕಷ್ಟಗಳನ್ನು ಅನುಭವಿಸಿಲ್ಲವಾದಲ್ಲಿ, ಬಹುಶಃ ನೀವು ಕರ್ತನಲ್ಲಿ ಅಷ್ಟಾಗಿ ಬೆಳೆದಿಲ್ಲ ಎಂದು ಹೇಳಲಾಗುತ್ತದೆ (ಮತ್ತು ಅದು ಅನೇಕ ಸಾರಿ ಸತ್ಯವಾಗಿರುತ್ತದೆ). ಅಷ್ಟು ಮಾತ್ರವಲ್ಲದೆ, ನಾವು ರೋಗವನ್ನು ಅನುಭವಿಸುವದರಿಂದ, ಇತರರು ಆ ವೇದನೆಯನ್ನು ಹಾದುಹೋಗುವ ವೇಳೆ ಅವರನ್ನು ಹೆಚ್ಚು ಅರ್ಥಮಾಡಿಕೊಳ್ಳುವದಕ್ಕೆ ಮತ್ತು ಅವರನ್ನು ಸಂತೈಸುವದಕ್ಕೆ ನಮ್ಮನ್ನು ಅರ್ಹಗೊಳಿಸುತ್ತದೆ.

ನಮ್ಮ ಜೀವನದಲ್ಲಿ ನಾಶನಗಳು ಸಂಭವಿಸುವಾಗ ಮತ್ತು ನಡೆಯುತ್ತಿರುವ

ಎಲ್ಲದರಲ್ಲಿಯೂ ದೇವರ ಹಸ್ತವನ್ನು ಕಾಣುವದಕ್ಕೆ ನಮಗೆ ಕಷ್ಟವಾಗುತ್ತಿರುವಾಗ, ನಾವು "ಹಿತ" ವಾದದ್ದೇನು ಎಂಬ ನಮ್ಮ ಅರ್ಥನಿರೂಪನೆಯನ್ನು ಕ್ರಮಪಡಿಸಿಕೊಳ್ಳುವ ಅಗತ್ಯವಿರುತ್ತದೆ. ದೇವರು "ಎಲ್ಲಾ ಕಾರ್ಯಗಳು" ನ್ನು–ಬಯಸುವ ಅಥವಾ ಬಯಸದಿರುವ–ನಮ್ಮ "ಹಿತಕ್ಕಾಗಿ" ಅನುಕೂಲಗೊಳಿಸಲು, ನಮ್ಮನ್ನು ತನಗೆ ಸಮೀಪ ತಂದುಕೊಳ್ಳಲು ಉಪಯೋಗಿಸಬಲ್ಲನು.

5. ನಮ್ಮ ವಾಕ್ಯಭಾಗವು ಒಂದು *ಶರತ್ತುಬದ್ಧ* ಹೇಳಿಕೆಯಾಗಿದೆ ಎಂಬುದು ಸ್ಪಷ್ಟವಾಗಿದೆ. ರೋಮಾ 8:28ರಲ್ಲಿ ಸಿಕ್ಕುವ ವಾಗ್ದಾನವು ಪ್ರತಿಯೊಬ್ಬರಿಗಾಗಿಯೂ ಇರುವದಿಲ್ಲ. ಅದು ಕೇವಲ "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ" ಗೆ ಮಾತ್ರವೇ ಆಗಿರುತ್ತದೆ.

ನಾನು "[ದೇವರನ್ನು] ಆತನನ್ನು ಪ್ರೀತಿಸುವವರ" ಎಂಬ ಪದಗಳನ್ನು ಓದುವಾಗ, ನನಗೆ "ಮಹಾ ಆಜ್ಞೆಯ" ಕುರಿತಾಗಿ ಯೇಸು ಹೇಳಿದ ಮಾತು ನೆನಪಿಗೆ ಬರುತ್ತದೆ: "ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಬುದ್ಧಿಯಿಂದಲೂ ಪ್ರೀತಿಸಬೇಕು" (ಮತ್ತಾಯ 22:36, 37). ನನಗೆ ಯೋಹಾನನ ಮಾತುಗಳು ಸಹ ನೆನಪಿಗೆ ಬರುತ್ತವೆ: "ದೇವರ ಮೇಲಣ ಪ್ರೀತಿಯು ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ" (1 ಯೋಹಾನ 5:3; ನೋಡಿರಿ 2 ಯೋಹಾನ 6).

"ಕರೆಯಲ್ಪಟ್ಟು" ಎಂಬ ಪದವು ಸುವಾರ್ತೆಯ ಕರೆಗೆ ಉತ್ತರಿಸುವದನ್ನು ಸೂಚಿಸುತ್ತದೆ (ನೋಡಿರಿ 2 ಥೆಸಲೋನಿಕ 2:14). ಜನರು ಈ ದೈವಿಕ ಕರೆಗೆ ನಂಬಿಕೆಯಿಟ್ಟು ಪ್ರತ್ಯುತ್ತರ ಕೊಡುವಾಗ, ಅವರಿಗೆ ದೀಕ್ಷಾಸ್ನಾನ ಮಾಡಿಸಲಾಗುತ್ತದೆ (ಅಪೊಸ್ತಲರ ಕೃತ್ಯಗಳು 2:36–38) ಮತ್ತು ಕರ್ತನು ಅವರನ್ನು ತನ್ನ ದೇಹವಾದ ಸಭೆಗೆ ಸೇರ್ಪಡೆಗೊಳಿಸುತ್ತಾನೆ (ಅಪೊಸ್ತಲರ ಕೃತ್ಯಗಳು 2:47; KJV; ನೋಡಿರಿ 1 ಕೊರಿಂಥ 12:13). ಈ ವಿಧದಲ್ಲಿ, ಅವರು ದೇವರ "ಹೊರಕ್ಕೆ ಕರೆಯಲ್ಪಟ್ಟವರ" (ἐκκλησία, *ekklēsia*) ಭಾಗವಾಗುತ್ತಾರೆ.

"ಆತನ ಸಂಕಲ್ಪದ ಮೇರೆಗೆ" ಎಂಬ ಪದವನ್ನು ಅಸಡ್ಡೆ ಮಾಡಬೇಡಿರಿ. *ದೇವರ* ಸಂಕಲ್ಪಗಳನ್ನು ನೆರವೇರಿಸಬೇಕು ಮತ್ತು *ದೇವರ* ಚಿತ್ತವನ್ನು ಮಾಡಬೇಕು ಎಂಬ ಬಯಕೆಯು ನಮ್ಮ ಮನಸ್ಸುಗಳಲ್ಲಿಯೂ ಹೃದಯಗಳಲ್ಲಿಯೂ ಅತ್ಯಂಥ ಆದ್ಯತೆಯ ಸ್ಥಾನವನ್ನು ಹೊಂದಿರಬೇಕು. ರೋಮಾ 8:28ರಲ್ಲಿ, ಪೌಲನು ನಮಗೆ ದೇವರ ವಾಗ್ದಾನಗಳಲ್ಲಿ ಹಾಗೂ ಆಶೀರ್ವಾದಗಳಲ್ಲಿ ಹಾರಾಡುವಂತೆ ಅನುಮತಿಸಿದನು, ಆದರೆ ನಂತರ ಆತನು ನಮ್ಮನ್ನು ಕೆಲವು ಕಾರ್ಯರೂಪದ ಟಿಪ್ಪಣಿಗಳಿಂದ ಭೂಮಿಗೆ ಕರೆದು ತಂದನು. ನಾವು ದೇವರ ವಾಗ್ದಾನಗಳನ್ನು ಮತ್ತು ಆಶೀರ್ವಾದಗಳನ್ನು ಪಡೆದುಕೊಳ್ಳಲು ಇಚ್ಛಿಸುವದಾದರೆ, ನಮ್ಮ ಜೀವಿತಗಳನ್ನು ಆತನಿಗೆ ಒಪ್ಪಿಸಿಕೊಳ್ಳುವಷ್ಟರ ಮಟ್ಟಿಗೆ ಆತನನ್ನು ನಾವು ಪ್ರೀತಿಸತಕ್ಕದ್ದು. ನಾವು ಸುವಾರ್ತೆಯ ಕರೆಗೆ ನಂಬಿಕೆಯ ಮೂಲಕ ಪ್ರತಿಸ್ಪಂದಿಸಬೇಕು, ಮತ್ತು ನಮ್ಮ ಚಿತ್ತವನ್ನು ಆತನ ಚಿತ್ತಕ್ಕೆ ಅಧೀನಪಡಿಸಬೇಕು.

*ಮುಕ್ತಾಯ.* ಬೈಬಲ್‌ನಲ್ಲಿ ನನಗೆ ನೆಚ್ಚಿನ ವಾಕ್ಯಭಾಗವೆಂದರೆ ರೋಮಾ 8:28: "ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ." ಈ ವಚನವು

ಅರ್ಥಪೂರ್ಣವಾಗಿರುತ್ತದೆ—ಆದರೆ ಕರ್ತನಿಗೆ ತಮ್ಮ ಜೀವಿತಗಳನ್ನು ಕರ್ತನಿಗೆ ಒಪ್ಪಿಸಿಕೊಂಡವರಿಗೆ ಮಾತ್ರವೇ ಅದು ಅರ್ಥಪೂರ್ಣವಾಗಿರುತ್ತದೆ. ನೆನಪಿರಲಿ: ರೋಮಾ 8:28ರ ವಾಗ್ದಾನವು ಪ್ರತಿಯೊಬ್ಬರಿಗಾಗಿಯೂ ಇರುವದಿಲ್ಲ; ಅದು "ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ" ಗಾಗಿ ಮಾತ್ರವೇ.

### ದೇವರ ಕಾರ್ಯ (8:28)

ರೋಮಾ 8:28 ರಿಂದ ಒಂದು ವಾಕ್ಯಭಾಗಾಧಾರಿತ ಸಂದೇಶವು ಹೊರಬೆಮ್ಮುತ್ತದೆ: (1) ದೇವರಿಗೆ ಒಂದು ಶಕ್ತಿಯಿದ್ದು ಅದನ್ನು ಉಪಯೋಗಿಸುತ್ತಿದ್ದಾನೆ (ದೇವರಿಂದ "ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ"); (2) ದೇವರಿಗೆ ಒಂದು ಜನತೆಯಿದ್ದು ಆತನು ಅವರಿಗೆ ಸಹಾಯ ಮಾಡುತ್ತಿದ್ದಾನೆ ("ಆತನ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ"); (3) ದೇವರಿಗೆ ಒಂದು ಸಂಕಲ್ಪವಿದ್ದು ಅದನ್ನು ನೆರವೇರಿಸುತ್ತಿದ್ದಾನೆ ("ಆತನ ಸಂಕಲ್ಪದ ಮೇರೆಗೆ").

### ದೇವರ ಯೋಜನೆಗಳಲ್ಲಿ ಹೊಂದಿಕೆಗೊಳ್ಳುವದು (8:28)

ದೇವರು, ತನ್ನ ಯೋಜನೆಗೆ ಅನುಗುಣವಾಗಿ, ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಕರೆಯುತ್ತಾನೆ—ಆದರೆ ನಾವು ಪ್ರೀತಿಯಿಂದ ಪ್ರತಿಸ್ಪಂದಿಸಬೇಕು ಹಾಗೂ ವಿಶ್ವಾಸದಿಂದ ವಿಧೇಯರಾಗಬೇಕು. LBಯ ಭಾವಾನುವಾದವು 28ನೇ ವಚನವನ್ನು ಈ ಅರ್ಹತೆಗಳಿಂದ ಮುಕ್ತಾಯಗೊಳ್ಳುತ್ತದೆ: "ನಾವು ದೇವರನ್ನು ಪ್ರೀತಿಸುವದಾದರೆ ಮತ್ತು ಆತನ ಯೋಜನೆಗಳೊಳಗೆ ಹೊಂದಿಕೆಗೊಳ್ಳುವದಾದರೆ." ನಮ್ಮ ಜೀವಿತಗಳಿಗಾಗಿ ದೇವರು ಹೊಂದಿರುವ ಸಂಕಲ್ಪಗಳೊಳಗೆ ನಮ್ಮನ್ನು "ಸರಿಹೊಂದಿಸಿಕೊಳ್ಳಲು" ಮನಸ್ಸುಳ್ಳವರಾಗಿದ್ದರೆ, ನಮಗೆ ಈ ಆಶ್ಚರ್ಯವಾದ ವಾಗ್ದಾನವು ಇರುತ್ತದೆ: ಆತನು ನಮ್ಮ ಜೀವಿತದಲ್ಲಿ ಎಲ್ಲಾ ಕಾರ್ಯಗಳನ್ನು ಹಿತಕ್ಕಾಗಿ ಅನುಕೂಲ ಮಾಡುವನು!

### ದೇವರ ಪೂರ್ವಜ್ಞಾನ (8:29, 30)

James Bentleyಯು ತನ್ನ ಮೊಮ್ಮಗಳ ಜೊತೆಯಲ್ಲಿ ಮಕ್ಕಳ ಸಿನಿಮಾವೊಂದರ ವಿಡಿಯೋ ನೋಡಿದ್ದರ ಬಗ್ಗೆ ಹೇಳಿಕೊಳ್ಳುತ್ತಾನೆ. ಆ ಚಿಕ್ಕ ಹುಡುಗಿ ಸಿನಿಮಾವನ್ನು ಎಷ್ಟೊಂದು ಸಾರಿ ವೀಕ್ಷಿಸಿದ್ದಳೆಂದರೆ ಆ ಸಿನಿಮಾದಲ್ಲಿ ಮುಂದೆ ಏನಾಗುತ್ತದೆಂಬದನ್ನು ಕಂಠಪಾಠವಾಗಿ ಹೇಳುತ್ತಿದ್ದಳೆಂದು ಆತನು ತಿಳಿಸುತ್ತಾನೆ. ಆಕೆಯು ಸಿನಿಮಾದಲ್ಲಿನ ಒಂದು ಪಾತ್ರದಾರಿಯು ಮಾತಾಡುವದಕ್ಕೆ ಮುಂಚೆಯೇ ಆತನು ಏನು ಹೇಳುತ್ತಾನೆಂಬ ದನ್ನು ಈಕೆಯು ಹೇಳಿಬಿಡುತ್ತಿದ್ದಳು ಮತ್ತು ಮುಂದೆ ಏನಾಗುತ್ತದೆಂಬುದನ್ನು ತನ್ನ ತಾತನಿಗೆ ತಿಳಿಸುತ್ತಿದ್ದಳು. James ಹೀಗೆ ಹೇಳುತ್ತಾನೆ, "ಮುಂದೆ ಏನು ಬರುತ್ತಿದೆ ಎಂಬುದು ನನ್ನ ಮೊಮ್ಮಗಳಿಗೆ ಗೊತ್ತಿತ್ತೆಂದ ಮಾತ್ರಕ್ಕೆ ಮುಂದೆ ಬಂದದ್ದಕ್ಕೆಲ್ಲಾ ಆಕೆಯೇ ಜವಾಬ್ದಾರಳಾಗುವದಿಲ್ಲ." ಆತನು ನಂತರ ಮುಗುಳ್ನಕ್ಕು ಹೀಗೆ ಹೇಳಿದನು, "ದೇವರ ವಿಷಯದಲ್ಲಿ ಹೇಳುವದಾದರೆ, ಆತನು ಈಗಾಗಲೇ ವಿಡಿಯೋವನ್ನು ವೀಕ್ಷಿಸಿ ಬಿಟ್ಟಿದ್ದಾನೆ."[205]

ಒಂದು ನೆಚ್ಚಿನ ಕಥೆಯನ್ನಿಟ್ಟುಕೊಂಡಿರುವ ಪರಿಚಯಸ್ಥನೊಬ್ಬನು ನಿಮಗಿದ್ದಾನೋ? ಆತನು ಕಥೆಯನ್ನು ಹೇಳಲಾರಂಭಿಸುವಾಗ (ನೂರನೆಯ ಬಾರಿಗೆ!), ಆತನು ಮುಂದೇನು

ಹೇಳಲಿಕ್ಕಿದ್ದಾನೆಂಬುದನ್ನು ಬಹುಶಃ ನೀವು ಎದುರುನೋಡಬಹುದಾಗಿದೆ—ಆದರೆ ಹಾಗೆಂದ ಮಾತ್ರಕ್ಕೆ ಆತನು ಹೇಳುವದೆಲ್ಲಕ್ಕೂ ನೀವು ಜವಾಬ್ದಾರರಾಗುವದಿಲ್ಲ. ನೀವು ಈ ಮುಂಚೆಯೇ ಕಥೆಯನ್ನು ಕೇಳಿಸಿಕೊಂಡಿರುವಿರೆಂದಷ್ಟೇ ಅದರ ಅರ್ಥವಾಗಿರುತ್ತದೆ. ಖಂಡಿತವಾಗಿಯೂ, ಇಂತಹ ಹೋಲಿಕೆಗಳೆಲ್ಲಾ ಸಾಕಾದವುಗಳಾಗಿರುವದಿಲ್ಲ, ಆದರೆ ನಡೆಯುವಂಥದ್ದಕ್ಕೆ ಜವಾಬ್ದಾರರಾಗದೆಯೇ ಮುಂದೆ ಏನಾಗುತ್ತದೆಂಬದನ್ನು ಮುಂಚಿತವಾಗಿ ತಿಳಿದಿರುವದು ಹೇಗೆ ಸಾಧ್ಯವಿರುತ್ತದೆಂಬದನ್ನು ಕನಿಷ್ಠ ಅದು ದೃಷ್ಟಾಂತಪಡಿಸುತ್ತದೆ.

## ಕ್ರಿಸ್ತನಲ್ಲಿ ಭದ್ರತೆ (8:31-39)

8:31-39 ರಲ್ಲಿ ಸಿಕ್ಕುವ ಪ್ರಮುಖ ಪ್ರಶ್ನೆಗಳನ್ನು ಎತ್ತಿತೋರಿಸುವ ಮೂಲಕ ಒಂದು ಪಾಠವನ್ನು ಅಭಿವೃದ್ಧಿಗೊಳಿಸಬಹುದಾಗಿದೆ: "ನಮ್ಮನ್ನು ಎದುರಿಸುವವರು ಯಾರು?" (8:31); "ಯಾರು ತಪ್ಪು ಹೊರಿಸಾರು?" (8:33); ಮತ್ತು "ನಮ್ಮನ್ನು ಅಗಲಿಸುವವರು ಯಾರು?" (8:35). ಎಲ್ಲಾ ಮೂರು ಪ್ರಶ್ನೆಗಳಿಗೆ ಒಂದು ಉತ್ತರವು ಸತ್ಯವಾಗಿರುತ್ತದೆ: "ಯಾರೂ ಇಲ್ಲ!"

ಕ್ರಿಸ್ತನಲ್ಲಿ ಸಿಕ್ಕುವಂತಹ ಭದ್ರತೆಯು ಆತನಲ್ಲಿ ವಿಶ್ವಾಸವಿಟ್ಟು ಆತನಿಗೆ ವಿಧೇಯರಾಗುವಂತೆ—ನಂಬಿಕೆ ಮತ್ತು ದೀಕ್ಷಾಸ್ನಾನದ ಮೂಲಕ ಕ್ರಿಸ್ತನಿಂದ ಧರಿಸಲ್ಪಡುವದು—ಕ್ರೈಸ್ತೇತರರನ್ನು ಸ್ಫೂರ್ತಿಗೊಳಿಸತಕ್ಕದ್ದು (ಗಲಾತ್ಯ 3:26, 27). ಈ ವಿಚಾರವು ನಮ್ಮನ್ನು ಅಂತಿಮ ಪ್ರಶ್ನೆಗೆ ನಡಿಸುತ್ತದೆ: ಕ್ರಿಸ್ತನನ್ನು ಮತ್ತು ಆತನ ಮಾರ್ಗವನ್ನು ಅಂಗೀಕರಿಸಿಕೊಳ್ಳದೆಯೇ ಯಾರು ರಕ್ಷಣೆ ಹೊಂದಬಲ್ಲರು? ಮತ್ತೊಂದಾವರ್ತಿ, ಉತ್ತರವು "ಯಾರೂ ಇಲ್ಲ!" ಎಂದಾಗಿರುತ್ತದೆ. ಆತನೇ "ಮಾರ್ಗವು," "ಸತ್ಯವು," ಮತ್ತು "ಜೀವವು" ಆಗಿದ್ದಾನೆ (ಯೋಹಾನ 14:6). "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ" (ಅಪೊಸ್ತಲರ ಕೃತ್ಯಗಳು 4:12).

## ವಿಜಯ (8:31-39)

ಪಂಡಿತನಾದ Handley C. G. Moule ರೋಮನ್ ಕ್ರೀಡಾಮೈದಾನಕ್ಕೆ ರಾತ್ರಿಯ ಹೊತ್ತಿನಲ್ಲಿ ಭೇಟಿ ಕೊಟ್ಟಿದ್ದನು. ಒಬ್ಬರು ಆತನನ್ನು "ನಿನಗೆ ಹುತಾತ್ಮರ ಅವಶೇಷ ಬೇಕಾ? ಕ್ರೀಡಾ ಮೈದಾನದಿಂದ ಮಣ್ಣನ್ನು ಶೇಖರಿಸಿಕೋ; ಅದೆಲ್ಲಾ ರಕ್ತಸಾಕ್ಷಿಯಾಗಿ ಸತ್ತವರಿಂದ ಕೂಡಿರುತ್ತದೆ" ಎಂದು ಹೇಳುತ್ತಾರೆ. Moule ಮತ್ತು ಆತನ ಮಿತ್ರರು ಚಂದ್ರನ ಬೆಳಕಿನಲ್ಲಿ ರೋಮಾ 8ನೇ ಅಧ್ಯಾಯವನ್ನು ಓದಿದರು. ಬಳಿಕ ಅವರು "ತನ್ನ ಭಕ್ತರಲ್ಲಿ ಜೀವ ಮತ್ತು ಮರಣಗಳ ಮೇಲೆ, ಕಾಡುಮೃಗಗಳು, ಮತ್ತು ಮನುಷ್ಯರ, ಮತ್ತು ದೆವ್ವಗಳ ಮೇಲೆ ಜಯಗೊಂಡಿದ್ದ ದೇವರಿಗೆ ಸ್ತೋತ್ರ ಸಲ್ಲಿಸಿದರು."[206]

## ದೇವರ ಆಶ್ಚರ್ಯವಾದ ಪ್ರೀತಿ (8:32)

ಪೌಲನು ರೋಮಾ 8:32ರಲ್ಲಿ ದೇವರು "ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ" ಎಂದು ಹೇಳುವ ಮೂಲಕ ದೇವರ ಪ್ರೀತಿಯನ್ನು

ಒತ್ತಿ ಹೇಳಿದನು. ಈ ಸ್ವಾರ್ಥರಹಿತ ಕ್ರಿಯೆಯು ನಮ್ಮ ಮೇಲೆ ದೇವರು ಎಷ್ಟೊಂದು ಪ್ರೀತಿಯನ್ನಿಟ್ಟಿದ್ದಾನೆಂಬದನ್ನು ತೋರ್ಪಡಿಸುತ್ತದೆ.

G. C. Brewer ಒಮ್ಮೆ ಯೇಸುವನ್ನು ಗೆತ್ಸೇಮನೆ ತೋಟದಲ್ಲಿ, "ನನ್ನ ತಂದೆಯೇ, ಸಾಧ್ಯವಾದರೆ, ಈ ಪಾತ್ರೆಯು ನನ್ನನ್ನು ದಾಟಿ ಹೋಗಲಿ" ಎಂದು ಬೇಡಿಕೊಳ್ಳುತ್ತಿರುವ ರೀತಿಯಲ್ಲಿ ಬಣ್ಣಿಸಿದನು (ಮತ್ತಾಯ 26:39). ಬಳಿಕ (ಈ ನರತ್ವಾರೋಪವನ್ನು ಉಪಯೋಗಿಸಿದ್ದಕ್ಕಾಗಿ ಕ್ಷಮೆ ಕೋರುತ್ತಾ),[207] Brewer ಈ ಕೆಳಗಿನ ದೃಶ್ಯವನ್ನು ಕಲ್ಪನೆ ಮಾಡಿಕೊಂಡನು:

> ಗೆತ್ಸೇಮನೆಯಲ್ಲಿನ ಆ ಗೋಳಾಟದ ಕೂಗು ಪರಲೋಕಕ್ಕೆ ಏರಿ ಹೋಯಿತು ಮತ್ತು ದೇವದೂತರು ಹಾಡುವದನ್ನು ನಿಲ್ಲಿಸಿಬಿಟ್ಟರು ಮತ್ತು ಸೆಟೆದು ನಿಂತರು. ಅವರು ತಂದೆಯನ್ನು ನೋಡುತ್ತಾ ಆತನಿಂದ ಆಜ್ಞೆಗಾಗಿ ಕಾಯುತ್ತಿರುವದನ್ನು ಕಂಡೆನು. ತಂದೆಯು ವಿಶ್ವದ ಸಿಂಹಾಸನದ ಮೇಲೆ ಕೂತಿರುವದನ್ನು ಮತ್ತು ಆತನ ಸುತ್ತಲು ದೇವದೂತರು ಹಾಗೂ ಪ್ರಧಾನ ದೂತರು ನಿಂತಿರುವದನ್ನು ನೋಡಿದೆನು. ಆತನು ಕೂಗನ್ನು ಆಲಿಸುತ್ತಾನೆ ಮತ್ತು ಕೆಳಕ್ಕೆ ನೋಡಿದಾಗ ತನ್ನ ಪಾದಪೀಠದ ಧೂಳಿನಲ್ಲಿ ತನ್ನ ಪವಿತ್ರ ಮಗುವು ಸಾಷ್ಟಾಂಗ ಬಿದ್ದಿರುವದನ್ನು ಕಾಣುತ್ತಾನೆ. ನಾನು ಮಹಾ ತಂದೆಯ ಎದೆಯು ಭಾವುಕತೆಯಿಂದ ಏರುವದನ್ನು ಮತ್ತು ಇಳಿಯುವದನ್ನು ಕಾಣುತ್ತೇನೆ. ಮಹಾ ದವಡೆಯು ಕಂಪಿಡಸುವದನ್ನು ಮತ್ತು ಕೆನ್ನೆಯಿಂದ ಕಣ್ಣೀರು ಹರಿಯಲಾರಂಭಿಸಿದ್ದನ್ನು ಕಂಡೆನು. ಖಂಡಿತವಾಗಿಯೂ ತಂದೆಯು ಆ ಪಾತ್ರೆಯನ್ನು ತೊಲಗಿಸುವನು! ಆತನು ಪುನಃ ಕೆಳಕ್ಕೆ ನೋಡುತ್ತಾನೆ ಮತ್ತು ರೋಷದಿಂದ ಕೂಡಿ ಅರ್ಥಹೀನ ಜನರು ಹಸಿದ ಮೃಗಗಳಂತೆ, ಬೇಟೆಯನ್ನು ಅಡ್ಡಗಟ್ಟುವ ರೀತಿಯಲ್ಲಿ ಕಳ್ಳತನದಿಂದ ಬೆಟ್ಟ ಏರುತ್ತಿರುವದನ್ನು ಕಾಣುತ್ತಾನೆ. ಆ ಕಡುಸಂಕಟದ ಕೂಗು ಪುನಃ ಪರಲೋಕವನ್ನು ತೂರಿಕೊಂಡು ಬರುತ್ತದೆ ಮತ್ತು ದೇವದೂತರು ಕಣ್ಣೀರು ಹಾಕುತ್ತಾರೆ. ತಂದೆಯು ಈಗ ಮಗನನ್ನು ಉಳಿಸಿಕೊಳ್ಳುವನೋ?
>
> ತಂದೆಯು ಪುನಃ ದೃಷ್ಟಿಸುತ್ತಾನೆ ಮತ್ತು ಅಲ್ಲಿ ಆತನು ಮುಂದೆ ಮತ್ತೊಂದು ದೃಶ್ಯವು ಉದಯಿಸುತ್ತದೆ. ಆತನು ಯುಗಯುಗಗಳನ್ನು ದಾಟಿ ನೋಡುತ್ತಾನೆ ಮತ್ತು ಲಕ್ಷಾಂತರ ಜನರು ತಮ್ಮ ಪಾಪದ ಭಾರಗಳ ಕೆಳಗೆ ಜೀವನದ ಹಂತದಲ್ಲಿ ತತ್ತರಿಸಿ ಹೋದವರಾಗಿ ಒದ್ದಾಡುತ್ತಾ ಸಂಟಕಪಡುವದನ್ನು ಕಾಣುತ್ತಾನೆ. ಅವರು ಕನಿಕರಕ್ಕಾಗಿ ಮೊರೆಯಿಡುವದನ್ನು ಆತನು ಕೇಳಿಸಿಕೊಳ್ಳುತ್ತಾನೆ. ಅವರು ಮುರಿದ ಮತ್ತು ರಕ್ತಸುರಿಯುತ್ತಿದ್ದ ಹೃದಯಗಳೊಂದಿಗೆ ತೆರೆದ ಸಮಾಧಿಯ ಬಳಿಯಲ್ಲಿ ನಿಂತಿರುವದನ್ನು, ಬೆಳಕಿಗೋಸ್ಕರ ಹಂಬಲಿಸುವದನ್ನು ಕಾಣುತ್ತಾನೆ. ಆತನು ನನ್ನನ್ನು ಮತ್ತು ನಿನ್ನನ್ನು ಕಂಡನು, ನಾವು ಅತ್ತುಅತ್ತು ಕಣ್ಣುಗಳು ಊದಿಕೊಂಡಿರುವದನ್ನು ಮತ್ತು ನಮ್ಮ ಪ್ರಾಣಗಳು ಪಾಪದಿಂದ ಕಲೆಗೊಂಡಿರುವದನ್ನು ನೋಡಿದನು. ನಾವೆಲ್ಲರೂ ನಿತ್ಯವಾದ ಸಂಕಟದ ತುದಿಯೆಡೆಗೆ ಸಾಗುತ್ತಿರುವದನ್ನು ಆತನು ಕಂಡನು, ಮತ್ತು ಆತನು ನಮ್ಮನ್ನು ಪ್ರೀತಿಸಿದನು, ಆತನ ನಾಮಕ್ಕೆ ಸ್ತುತಿ ಉಂಟಾಗಲಿ; ಆತನು ನಮ್ಮನ್ನು ಪ್ರೀತಿಸಿದ್ದರಿಂದ ನಮ್ಮನ್ನು ವಿಮೋಚಿಸಿದನು. ಆತನು ಈ ಸಂದೇಶದೊಂದಿಗೆ ದೇವದೂತನನ್ನು ಭೂಮಿಗೆ ಕಳುಹಿಸಿ ಕೊಟ್ಟದ್ದನ್ನು ಕಂಡೆನು:
>
> "ನನ್ನ ಮಗನೇ, ಅದು ಸಾಧ್ಯವಿಲ್ಲ. ನೀನು ಈ ಪಾತ್ರೆಯನ್ನು ಕುಡಿಯದಿದ್ದರೆ, ಭೂಮಿಯ ನನ್ನ ನತದೃಷ್ಟ ಮಕ್ಕಳು ಶಾಶ್ವತವಾಗಿ ನಾಶವಾಗಿ ಹೋಗುವರು." ಬಳಿಕ ದೇವದೂತನು ಆತನನ್ನು ಆದರಿಸಿದನು, ಆತನನ್ನು ಬಲಪಡಿಸಿದನು, ಮತ್ತು ಆತನ ಭಯವನ್ನು ಹೋಗಲಾಡಿಸಿದನು. "ದೇವರ ಮೇಲಣ ಭಯಭಕ್ತಿಯ ನಿಮಿತ್ತ ಕೇಳಲ್ಪಟ್ಟನು" (ಇಬ್ರಿಯ 5:7-9).[208]

ಈ ಲೋಕದ ಸಮಸ್ಯೆಗಳು ನಮ್ಮನ್ನು ಕುಗ್ಗಿಸಿಬಿಡುವಾಗ, ನಾವು ಎಂದಾದರೂ ನಮ್ಮ

ಮೇಲಿರುವ ದೇವರ ಪ್ರೀತಿಯ ಬಗ್ಗೆ ಸಂಶಯಗೊಳ್ಳುತ್ತೇವೋ? ನಾವು ನಮ್ಮ ಸಮಸ್ಯೆಗಳ ಮೇಲಿನಿಂದ ನನ್ನ ದೃಷ್ಟಿಯನ್ನು ತೆಗೆದು ಬಿಡಬೇಕು, ಮತ್ತು ಶಿಲುಬೆಯ ಮೇಲೆ ನಮ್ಮ ದೃಷ್ಟಿಯನ್ನು ಇಡಬೇಕು. ನಾವು ಕಲ್ವಾರಿಯ ಮೇಲೆ ಕ್ರಿಸ್ತನು ಪಟ್ಟ ವೇದನೆಯನ್ನು ಕಲ್ಪನೆ ಮಾಡಿಕೊಳ್ಳಬೇಕು ಮತ್ತು ನಂತರ ಈ ಸತ್ಯವನ್ನು ಆಲೋಚಿಸಿಕೊಳ್ಳಬೇಕು: ದೇವರು ನಮ್ಮನ್ನು ಎಷ್ಟೋ ಪ್ರೀತಿಸಿ ತನ್ನ ಮಗನಿಗೆ ಇಲ್ಲ ಎಂದನು, ಹೀಗೆ ಮಗನು ನಮಗೆ ಹೌದು ಎಂದು ಹೇಳುವದಕ್ಕೆ ಸಾಧ್ಯವಾಯಿತು. ಶಿಲುಬೆಯು ಸಂಶಯಕ್ಕೆ ಅವಕಾಶವನ್ನೇ ಕೊಡುವದಿಲ್ಲ: ದೇವರು ನಮ್ಮನ್ನು ಪ್ರೀತಿಸುತ್ತಾನೆ!

## ಯೇಸು ನಮ್ಮ ವಿಷಯದಲ್ಲಿ ಬೇಡಿಕೊಳ್ಳುತ್ತಾನೆ (8:33, 34)

"ದೇವರು ಆದುಕೊಂಡವರ ಮೇಲೆ ಯಾರು ತಪ್ಪು ಹೊರಿಸಾರು? ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ. ಅಪರಾಧಿಗಳೆಂದು ನಿರ್ಣಯಿಸುವವರು ಯಾರು?" ಎಂದು ಕೇಳುವ ಮೂಲಕ ಪೌಲನು ನ್ಯಾಯಾಲಯದ ಸಾದೃಶ್ಯವನ್ನು ಉಪಯೋಗಿಸಿದನು (8:33, 34a). ನಂತರ ಆತನು ಒತ್ತಿ ಹೇಳಿದ್ದೇನೆಂದರೆ ಯೇಸು– "ಮರಣವನ್ನು ಹೊಂದಿದ್ದಲ್ಲದೆ," "ಜೀವಿತನಾಗಿ ಎದ್ದು," ಮತ್ತು "ದೇವರ ಬಲಗಡೆಯಲ್ಲಿದ್ದು"– "ನಮಗೋಸ್ಕರ ಬೇಡುವವನಾಗಿದ್ದಾನೆ" (8:34b).

ನನ್ನ ಕಲ್ಪನೆಯಲ್ಲಿ, ಸೈತಾನನು ದೇವರ ಸಿಂಹಾಸನದ ಮುಂದೆ ನಿಂತಿರುವದನ್ನು ಕಾಣುತ್ತೇನೆ, ಡೇವಿಡ್ ರೋಪರನ ಅನೇಕ ಪಾಪಗಳ ಮತ್ತು ತಪ್ಪುಗಳ ಪಟ್ಟಿಯನ್ನು ಮಾಡುತ್ತಾನೆ. ನಂತರ ನಾನು ಯೇಸುವನ್ನು ಕಾಣುತ್ತೇನೆ. ಆತನು ನನ್ನ ಪಕ್ಕಕ್ಕೆ ಬಂದು ನನ್ನ ಭುಜದ ಮೇಲೆ ಕೈಯನ್ನಿಡುತ್ತಾನೆ. ಆತನು ತನ್ನ ತಂದೆಗೆ, "ಈತನು ನನ್ನ ಸಹೋದರನು. ನಾನು ಆತನಿಗೋಸ್ಕರ ಮರಣಿಸಿದೆನು. ಆತನ ಪಾಪದ ಬೆಲೆಯನ್ನು ನಾನು ಕಟ್ಟಿದೆನು, ಮತ್ತು ಅವುಗಳು ನನ್ನ ರಕ್ತದಿಂದ ತೊಳೆದು ಹಾಕಲ್ಪಟ್ಟಿರುತ್ತವೆ. ಈತನು ನೀತಿವಂತನೆಂದು ನಿರ್ಣಯಿಸಲ್ಪಟ್ಟಿದ್ದಾನೆ ಮತ್ತು 'ಅಪರಾಧಿಯಲ್ಲ' ಎಂದು ಘೋಷಿಸಲ್ಪಟ್ಟಿದ್ದಾನೆ!" ಎಂದು ಹೇಳುತ್ತಾನೆ. ಆಗ ಸೈತಾನನು ಜೋಲು ಮುಖವನ್ನು ಹಾಕಿಕೊಂಡ, ತಲೆಯನ್ನು ಬಾಗಿಸಿ, ಸೋಲಿಸಲ್ಪಟ್ಟವನಾಗಿ ಅಲ್ಲಿಂದ ಹೊರಟು ಹೋಗುವದನ್ನು ಕಲ್ಪಿಸಿಕೊಂಡೆನು–ಯಾಕೆಂದರೆ ಯೇಸು ನನಗೋಸ್ಕರ ಬೇಡಿಕೊಳ್ಳಲು ಮನಸ್ಸುಳ್ಳವನಾಗಿದ್ದನು.

ನಮ್ಮ ಮೇಲೆ ಎಂದಾದರೂ ಒಂದು ಅಪರಾಧ ಮಾಡಿದ ಆರೋಪ ಮಾಡಲ್ಪಟ್ಟರೆ ಮತ್ತು ನಾವು ನ್ಯಾಯಾಲಯಕ್ಕೆ ಹೋಗಬೇಕಾಗಿ ಬಂದಲ್ಲಿ, ನಾವು ಲಭ್ಯವಿರುವ ಅತ್ಯುತ್ತಮ ಪ್ರತಿವಾದ ಮಾಡುವ ವಕೀಲನನ್ನು ಇಟ್ಟುಕೊಳ್ಳಲು ಬಯಸುತ್ತೇವೆ–ಆದರೆ ಆ ರೀತಿಯ ಪ್ರತಿವಾದಿ ವಕೀಲನನ್ನು ಏರ್ಪಡಿಸಿಕೊಳ್ಳಲು ನಮ್ಮಲ್ಲಿ ಬಹುತೇಕರ ಬಳಿಯಲ್ಲಿ ಅಷ್ಟೊಂದು ಹಣವಿರುವದಿಲ್ಲ. ನಮ್ಮ ಕೈಲಾದಷ್ಟು ಹಣಕ್ಕೆ ಒಪ್ಪಿಕೊಳ್ಳುವ ವಕೀಲನು ನಮ್ಮ ಮೊಕದ್ದಮೆಯಲ್ಲಿ ನಾವು ನಿರಪರಾಧಿಗಳೆಂಬುದನ್ನು ರುಜುವಾತುಪಡಿಸುವನು ಎಂಬ ನಿರೀಕ್ಷೆಯಲ್ಲಿ ನಾವು ನ್ಯಾಯಾಲಯದೊಳಗೆ ಪ್ರವೇಶಿಸುತ್ತೇವೆ, ಆದರೆ ಅಂತಿಮ ಫಲಿತದ ಬಗ್ಗೆ ಯಾವುದೇ ಖಾತರಿ ಇರುವದಿಲ್ಲ. (ನೀವು ಈ ಸ್ಥಿತಿಯನ್ನು ಹಾದುಹೋಗಬೇಕಾಗಿ ಬಂದಿದ್ದರೆ, ಅದು ಎಷ್ಟೊಂದು ಭಯಾನಕವಾಗಿರಬಲ್ಲದು ಎಂಬುದು ನಿಮಗೆ ಗೊತ್ತಿರುತ್ತದೆ.)

ಆತ್ಮೀಕ ಮಟ್ಟದಲ್ಲಾದರೋ, ನಮಗೆ ವಿಶ್ವದಲ್ಲಿಯೇ ಅತ್ಯುತ್ತಮವಾದ ಪ್ರತಿವಾದಿ ಇರುತ್ತಾನೆಂಬುದನ್ನು ತಿಳಿಯುವದು ಎಷ್ಟು ಅದ್ಭುತಕರವಾಗಿದೆಯಲ್ಲವೇ: ಯೇಸು ಕ್ರಿಸ್ತನು ನಮ್ಮ ವಿಷಯದಲ್ಲಿ ಬೇಡಿಕೊಳ್ಳುತ್ತಾನೆ! ಅಷ್ಟುಮಾತ್ರವಲ್ಲದೆ, ಆತನು ಅದನ್ನು "ಉಚಿತವಾಗಿ" ಮಾಡುತ್ತಾನೆ–ಅದಕ್ಕೆ ಆತನು ನಮ್ಮನ್ನು ಪ್ರೀತಿಸುತ್ತಾನೆಂಬುದೇ ಕಾರಣವಾಗಿರುತ್ತದೆ! ಆತನು ತನ್ನ ಪ್ರತಿವಾದದಲ್ಲಿ ಯಶಸ್ವಿಗೊಳ್ಳುವನೆಂದು ನಮಗೆ ಗೊತ್ತದೆ! ಯೇಸುವಿನ ನಿಮಿತ್ತದಿಂದ, "ದೇವರು ಆದುಕೊಂಡವರ ಮೇಲೆ ಯಾರು ತಪ್ಪು ಹೊರಿಸಾರು?" ಎಂಬ ಪ್ರಶ್ನೆಗೆ ಉತ್ತರವು "ಯಾರೂ ಇಲ್ಲ" ಎಂದಾಗಿರುತ್ತದೆ!

## ದುರಂತದ ಮೇಲೆ ಜಯ (8:35-37)

ನಿಮ್ಮ ಜೀವನದಲ್ಲಿ ದುರಂತವು ಸಂಭವಿಸುವಾಗ, ದೇವರು ಕೈಬಿಟ್ಟಿದ್ದಾನೆಂದು ಅದರರ್ಥವಾಗುವದಿಲ್ಲ. ಆ ರೀತಿಯಲ್ಲಿ ಭಾವಿಸಿಕೊಳ್ಳುವದು ಸುಲಭವಾಗಿರುತ್ತದೆ, ಅಲ್ಲವೇ? ಸಮಸ್ಯೆಗಳು ಒಂದಾದ ಮೇಲೊಂದರಂತೆ ಬರುತ್ತವೆ, ನಮ್ಮನ್ನು ಸಮಸ್ಯೆಗಳು ಕುಗ್ಗಿಸಿ ಬಿಡುತ್ತವೆ, ಮತ್ತು ಕರ್ತನು ಈಗಲೂ ನಮ್ಮನ್ನು ಪ್ರೀತಿಸುತ್ತಾನೋ ಎಂದು ಕೌತುಕಗೊಳ್ಳುತ್ತೇವೆ. ಆ ವಿಷಯದಲ್ಲಿ, ಪೌಲನ ಉತ್ತರವು, "ಹೌದು, ಆತನು ಈಗಲೂ ಪ್ರೀತಿಸುತ್ತಾನೆ" ಎಂದಿರುತ್ತದೆ! ರೋಮಾ 8:37 ಹೀಗೆ ಹೇಳುತ್ತದೆ, "ಆದರೆ ನಮ್ಮನ್ನು *ಪ್ರೀತಿಸಿದಾತನ* ಮೂಲಕವಾಗಿ ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ" (ಒತ್ತಿ ಹೇಳಿದ್ದು ನನ್ನದು).

Fritz Ridenour ಹೀಗೆ ಬರೆಯುತ್ತಾನೆ, "ಬಾಧೆಗಳಿಂದ ತಪ್ಪಿಸಿಕೊಳ್ಳುವದನ್ನು ಬೈಬಲ್ ವಾಗ್ದಾನ ಮಾಡುವದಿಲ್ಲ. ಹಾಗೆ ವಾಗ್ದಾನ ಮಾಡಿದ್ದೇ ಆಗಿದ್ದರೆ, ಪ್ರತಿಯೊಬ್ಬನೂ ಕ್ರೈಸ್ತರಾಗುತ್ತಿದ್ದನು–ಆಪಘಾತಗಳನ್ನು, ಸಮಸ್ಯೆಗಳನ್ನು, ಹೃದಯಾಘಾತಗಳನ್ನು, ಕ್ಯಾನ್ಸರ್ ಇತ್ಯಾದಿಗಳನ್ನು ತಪ್ಪಿಸಿಕೊಳ್ಳಬೇಕೆಂಬುದಕ್ಕಾದರೂ ಕ್ರೈಸ್ತರಾಗುತ್ತಿದ್ದರು."[209] (ಬೇರೆ ಮಾತುಗಳಲ್ಲಿ ಹೇಳುವದಾದರೆ, ಜನರು ತಪ್ಪಾದ ಕಾರಣಗಳಿಗೋಸ್ಕರ ಕ್ರೈಸ್ತರಾಗುವದಕ್ಕೆ ಬಯಸುತ್ತಿದ್ದರು.) ಬೈಬಲ್ ಏನನ್ನು ವಾಗ್ದಾನ ಮಾಡುತ್ತದೆಂದರೆ, ಏನೇ ಸಂಭವಿಸಿದರೂ ಸರಿಯೇ ದೇವರು ನಮ್ಮನ್ನು ಪ್ರೀತಿಸುವದನ್ನು ಮುಂದುವರೆಸುವನು, ಮತ್ತು ಅಂತ್ಯದಲ್ಲಿ, ದೇವರು ಎಲ್ಲಾ ಕಾರ್ಯಗಳನ್ನು ನಮ್ಮ ಹಿತಕ್ಕಾಗಿ ಅನುಕೂಲಗೊಳಿಸುವನು ಎಂಬುದೇ (8:28).

ನಾನು ವಾಸಿಸುವ ಸ್ಥಳದಲ್ಲಿನ ಟಿವಿ ಕೇಂದ್ರಗಳು ಮರಣಾಂತಿಕವಾದ ಅಪಘಾತಕ್ಕೊಳಗಾಗಿದ್ದ ಒಬ್ಬ ಗರ್ಭಿಣಿ ಯುವತಿಯ ಕುರಿತು ದುರಂತ ಸುದ್ಧಿಯನ್ನು ವರದಿ ಮಾಡಿದ್ದವು. ಆಕೆಯ ಗರ್ಭವನ್ನು ಕತ್ತರಿಸಿ ಮಗುವನ್ನು ಹೊರಗೆ ತೆಗೆಯಬೇಕಾಗಿತ್ತು. ಆ ಸ್ತ್ರೀಯ ವಿವಾಹ ಹಾಗೂ ಶವಸಂಸ್ಕಾರವನ್ನು ನೆರವೇರಿಸಿದ್ದ ಬೋಧಕನನ್ನು ಟಿವಿಯಲ್ಲಿ ಸಂದರ್ಶನ ಮಾಡಲಾಯಿತು. ಸುದ್ಧಿ ವರದಿಗಾರನು ಹೀಗೆ ಕೇಳಿದನು, "ಇದನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬಲ್ಲೆವು?" ಅದಕ್ಕೆ ಬೋಧಕನು "ಇದೇ ಕಥೆಯ ಅಂತ್ಯವಲ್ಲ"[210] ಎಂದು ಉತ್ತರಿಸಿದನು. ದೇವರ ನಂಬಿಗಸ್ತ ಮಗುವಿನ ವಿಷಯದಲ್ಲಿ, ದುರಂತವು ಎಂದಿಗೂ "ಕಥೆಯ ಅಂತ್ಯವಾಗಿರುವದಿಲ್ಲ." ಕಥೆಯ ಅಂತ್ಯವೇನೆಂದರೆ ದೇವರು ನಮ್ಮನ್ನು ಪ್ರೀತಿಸುತ್ತಾನೆ–ಏನೇ ಸಂಭವಿಸಿದರೂ ಸರಿಯೇ.

## “ಜಯಶಾಲಿಗಳಿಗಿಂತಲೂ ಹೆಚ್ಚಿನವರಾಗಿದ್ದೇವೆ” (8:37; KJV)

C. E. Macartneyಯು ಈ ದೃಷ್ಟಾಂತವನ್ನು ಕೊಡುತ್ತಾನೆ:

> Lord Nelsonನು ನೈಲ್ ಯುದ್ಧದಲ್ಲಿ ಫ್ರೆಂಚ್ ಹಡಗುಪಡೆಯ ಮೇಲೆ ಸಾಧಿಸಿದ ತನ್ನ ಮಹಾ ವಿಜಯದ ಬಗ್ಗೆ ತನ್ನ ಬ್ರಿಟಿಷ್ ನೌಕಾ ಇಲಾಖೆಗೆ ವರದಿ ಮಾಡಿದಾಗ, ನಡೆದದ್ದನ್ನು ವರ್ಣಿಸುವದಕ್ಕೆ “ವಿಜಯ” ಎಂಬುದು ಸಾಕಾಷ್ಟು ದೊಡ್ಡ ಪದವಾಗಿರುವದಿಲ್ಲ ಎಂಬದಾಗಿ ಆತನು ಹೇಳುತ್ತಾನೆ.
>
> ಪೌಲನು ಯೇಸು ಕ್ರಿಸ್ತನ ಮೂಲಕವಾಗಿ ತನ್ನ ಜೀವನದ ಎಲ್ಲಾ ಕೆಡುಕುಗಳು, ವಿರೋಧಿಗಳು ಮತ್ತು ಶೋಧನೆಗಳು ಹಾಗೂ ವೇದನೆಗಳ ಮೇಲೆ ಹೊಂದಿದ ಜಯವನ್ನು ಕುರಿತು ಮಾತಾಡುವಾಗ, ಎಲ್ಲವುಗಳಿಗಿಂತಲೂ ದೊಡ್ಡ ಪದವಾದ “ಜಯಶಾಲಿಗಳು,” ಎಂಬುದು ಅದನ್ನು ವರ್ಣಿಸಲು ಸಾಕಾಗಲಾರದ್ದಾಗಿತ್ತು; ಮತ್ತು ಆ ಕಾರಣದಿಂದ ಆತನು “ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ಜಯಶಾಲಿಗಳಿಗಿಂತಲೂ ಹೆಚ್ಚಿನವರಾಗಿದ್ದೇವೆ”[211] ಎಂದು ಹೇಳುತ್ತಾನೆ.

## Matterhorn ಪರ್ವತ (8:38, 39)

ವಿಶ್ವದಲ್ಲಿಯೇ ಅತ್ಯಂಥ ಪ್ರಸಿದ್ಧ ಹಾಗೂ ವೈಭವಯುಕ್ತ ಪರ್ವತಗಳಲ್ಲೊಂದು ಎಂದರೆ Matterhorn (ಮ್ಯಾಟ್ಟರ್‌ಹಾರ್ನ್) ಪರ್ವತ, 14,692 ಅಡಿಗಳಷ್ಟು (4,478 ಮೀಟರುಗಳಷ್ಟು) ಎತ್ತರವಾಗಿದ್ದು Switzerland ಮತ್ತು Italy ದೇಶಗಳ ಮಧ್ಯದ ಪರ್ವತಶಿಖರದಲ್ಲಿರುತ್ತದೆ. ಈ ಪರ್ವತವನ್ನು ಸ್ವಿಟ್ಜರ್‌ಲ್ಯಾಂಡಿನ ಕಡೆಯಿಂದ ಏರುವದು ಕಷ್ಟಕರವಾಗಿರುತ್ತದೆ, ಹೀಗಿದ್ದರೂ ನುರಿತ ಪರ್ವತಾರೋಹಿಗಳಿಂದ ಸುಲಭವಾಗಿ ಏರಲ್ಪಡುತ್ತದೆ. ಇಟಲಿಯ ಕಡೆಯಿಂದ ಹತ್ತುವಾಗ ವಿಷಯ ಬೇರೆಯಾಗಿರುತ್ತದೆ, ಅದು ಸಮಾನವಾದ ಗೋಡೆಗಳ ಪಂಕ್ತಿಯನ್ನು ಹೊಂದಿದ್ದು ವಿಪರೀತ ಅಪಾಯಕಾರಿಯಾಗಿರುತ್ತದೆ. ಜೂನ್ 14, 1865ರ ಆಚೆಗಷ್ಟೆ, ಇಟಲಿಯ ಬದಿಯಿಂದ ಶಿಖರವನ್ನು ಏರಲಾಗಿತ್ತು. ಮೂವರು ಪರ್ವತಾರೋಹಿಗಳ ತಂಡದಲ್ಲಿದ್ದ ಒಬ್ಬ ಮಾರ್ಗದರ್ಶಿ ಸೇರಿದಂತೆ ಎಲ್ಲರೂ ಸಹ ಆ ಅಪಾಯಕಾರಿ ಗೋಡೆಗಳನ್ನು ಏರುವಾಗ ತಮ್ಮ ಪ್ರಾಣಗಳನ್ನು ಕಳೆದುಕೊಂಡಿದ್ದರು, ಅಲ್ಲಿ ಒಂದು ಹೆಜ್ಜೆ ತಪ್ಪಿದರೆ ಮರಣ ಖಚಿತವಾಗಿತ್ತು. Matterhorn ಆ ಪ್ರಾಂತ್ಯದಲ್ಲಿರುವ ಮಿಕ್ಕ ಪರ್ವತಗಳಷ್ಟು ಎತ್ತರವೇನಾಗಿರಲಿಲ್ಲ, ಆದರೆ ಅದರ ಕುರಿತು ಒಂದು ವಿಭಿನ್ನವಾದ ವೈಭವ ಹಾಗೂ ಭವ್ಯತೆಯಿತ್ತು. ಸೂರ್ಯೋದಯ ಅಥವಾ ಸೂರ್ಯಾಸ್ತಮಾನದ ಸಮಯದಲ್ಲಿ, ಪರ್ವತವು ಕಡುಗೆಂಪು ಹೊಳಪಿನಿಂದ ಕೂಡಿರುತ್ತದೆ. ಪರ್ವತದ ಸೌಂದರ್ಯವನ್ನು “ವರ್ಣನಾತೀತ” ಎಂದು ಕರೆಯಲಾಗಿರುತ್ತದೆ.

ಬೈಬಲ್‌ನ ಅನೇಕ ವೈಭವಕರ ವಿಭಾಗಗಳು ನಮಗೆ Matterhornನ್ನು ನೆನಪಿಸುತ್ತವೆ. ಉದಾಹರಣೆಗೆ, ಹಳೆಯ ಒಡಂಬಡಿಕೆಯಲ್ಲಿ, ನಮಗೆ ಧರ್ಮೋಪದೇಶಕಾಂಡ 33:37a, ಯೆಶಾಯ 40:31, ಮತ್ತು ಮೀಕನು 6:8 ಇರುತ್ತವೆ. ಹೊಸ ಒಡಂಬಡಿಕೆಯಲ್ಲಿ, ಸಾಹಿತ್ಯದಲ್ಲಿಯೇ ನಂಬಿಕೆಯ ಅತ್ಯಂಥ ವೈಭವಕರವಾದ ಪದಪ್ರಯೋಗಗಳೆಂದು ಕರೆಯಲ್ಪಟ್ಟಿರುವ ಎರಡು ವಚನಗಳೆಂದರೆ ರೋಮಾ 8:38, 39:

> ಹೇಗಂದರೆ ಮರಣವಾಗಲಿ ಜೀವವಾಗಲಿ ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ

ಸಂಗತಿಗಳಾಗಲಿ ಮುಂದಣ ಸಂಗತಿಗಳಾಗಲಿ ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿ ಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು.

ಈ ವಾಕ್ಯಭಾಗದ ಸಾಹಿತ್ಯಕ ಸೌಂದರ್ಯವನ್ನು ಪ್ರಶಂಸಿಸುವದು ಸುಲಭವಾಗಿರುತ್ತದೆ, ಆದರೆ ಅದನ್ನು ನಮ್ಮ ಅನುದಿನದ ಜೀವಿತಕ್ಕೆ ಅನ್ವಯಿಸಿಕೊಳ್ಳುವದು ಮತ್ತು ಏನೇ ಸಂಭವಿಸಿದಾಗ್ಯೂ, ದೇವರು ನಮ್ಮನ್ನು ಪ್ರೀತಿಸುತ್ತಾನೆಂಬ ವಾಸ್ತವಾಂಶವನ್ನು ನಿಜವಾಗಿಯೂ ಅಂಗೀಕರಿಸಿಕೊಳ್ಳುವದು ಕಷ್ಟವೇ ಸರಿ! ಇದನ್ನು ಕಲಿತುಕೊಳ್ಳಬೇಕಾದ ಸ್ಥಳವೆಂದರೆ ನಮ್ಮ ಮನೆಯೇ. ತಂದೆತಾಯಿಗಳು ಈ ಸತ್ಯವನ್ನು ತಮ್ಮ ಮಕ್ಕಳ ಮನಸ್ಸುಗಳಲ್ಲಿ ಅಚ್ಚು ಒತ್ತಬೇಕಾಗಿರುತ್ತದೆ: "ನಮ್ಮ ದಾರಿಯಲ್ಲಿ ಯಾವ ಸಮಸ್ಯೆಯು ಬಂದರೂ ಸರಿಯೇ, ದೇವರು ನಮ್ಮ ಸಂಗಡ ಇದ್ದಾನೆ!" Harold Hazelip ಹೀಗೆ ಬರೆಯುತ್ತಾನೆ, "ಒಬ್ಬನು ಬೈಬಲ್‌ನ ಎರಡು ಅಥವಾ ಮೂರು ವಾಕ್ಯಭಾಗಗಳನ್ನಷ್ಟೆ ಕಂಠಪಾಠ ಮಾಡಿಕೊಳ್ಳುವದಾದಲ್ಲಿ, ಈ ಎರಡು ವಚನಗಳನ್ನು ಅದರಲ್ಲಿ ಸೇರ್ಪಡೆಗೊಳಿಸಿಕೊಳ್ಳತಕ್ಕದ್ದು."[212] ನಾನು ಈ ಸಲಹೆಯನ್ನು ಇಲ್ಲಿ ಸೇರಿಸುತ್ತೇನೆ: ಅವುಗಳ ಕೇವಲ ಕಂಠಪಾಠ ಮಾಡದಿರಿ, ಆದರೆ ಅವುಗಳನ್ನು ಜೀವನದ ಕುರಿತ ನಿಮ್ಮ ದೃಷ್ಟಿಕೋನದ ಭಾಗವನ್ನಾಗಿ ಮಾಡಿಕೊಳ್ಳಿರಿ.

### "ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ" (8:39)

ನಾನು ಸಾಂಕೇತಿಕವಾಗಿ "ಎತ್ತರದ ಸ್ಥಾನಗಳನ್ನು ತಲುಪುವ" ಬಗ್ಗೆ ಯೋಚಿಸುವಾಗ, ನನಗೆ James A. Garfield ಜ್ಞಾಪಕಕ್ಕೆ ಬರುತ್ತಾನೆ, ಆತನು ಅಮೆರಿಕದ ಅಧ್ಯಕ್ಷನಾಗುವ ಮುಂಚೆ Lord's church ಒಬ್ಬ ಸದಸ್ಯನಾಗಿದ್ದು ಅದರ ಬೋಧಕನಾಗಿಯೂ ಹಿರಿಯನಾಗಿಯೂ ಸೇವೆ ಸಲ್ಲಿಸಿದ್ದನು. ಒಬ್ಬ ಯುವ ಬೋಧಕನು ಸಂದೇಶಕ್ಕಾಗಿ ಸೂಕ್ತವಾದ ಒಂದು ವಾಕ್ಯಭಾಗವನ್ನು ಸಲಹೆ ಮಾಡುವಂತೆ Garfield ಗೆ ಕೇಳಿದನು. Garfieldನು ಕೀರ್ತನೆ 17:15ನ್ನು ಉಲ್ಲೇಖಿಸಿದನು: "ನಾನು ಎಚ್ಚರವಾದಾಗ ನಿನ್ನ ಹೋಲಿಕೆಯೊಂದಿಗೆ ತೃಪ್ತಿ ಹೊಂದುವೆನು" (KJV). ಅದಾಗಿ ಹೆಚ್ಚು ಕಾಲವಾಗಿರಲಿಲ್ಲ, ಒಬ್ಬ ಕೊಲೆಗಾರನಿಂದ ಬಂದ ಗುಂಡು Garfieldನನ್ನು ಈ ಜೀವನದಿಂದ ಬೇರ್ಪಡಿಸಿತ್ತು—ಆದರೆ ದೇವರ ಪ್ರೀತಿಯಿಂದಲ್ಲ. ನಾನು "ಆಳಗಳಿಗೆ ಹೋಗುವ" ಬಗ್ಗೆ ಯೋಚಿಸುವಾಗ, ಕೀರ್ತನೆಗಾರನ ಈ ಅರ್ಥಪೂರ್ಣವಾದ ಮಾತುಗಳನ್ನು ಜ್ಞಾಪಿಸಿಕೊಳ್ಳುತ್ತೇನೆ: "ಯೆಹೋವನೇ, ಜಲಾಗಾಧದಲ್ಲಿದ್ದು ನಿನ್ನನ್ನು ಕೂಗಿಕೊಳ್ಳುತ್ತೇನೆ" (ಕೀರ್ತನೆ 130:1).

---

### ಅಡಿ ಟಿಪ್ಪಣಿಗಳು

[1]Leon Morris, *The Epistle to the Romans* (Grand Rapids, Mich.: Wm. B. Eerdmans Publishing Co., 1988), 299. [2]John R. W. Stott, *The Message of Romans: God's Good News for the World*, The Bible Speaks Today (Downers Grove, Ill.: Inter-Varsity Press,

1994), 216. [3]R. C. Bell; quoted in J. D. Thomas, *Romans*, The Living Word (Austin, Tex.: R. B. Sweet Co., 1965), 68. [4]Morris, 300. [5]Coy Roper, "More Than Conquerors," *Truth for Today* 9, no. 3 (August 1988): 12. [6]F. F. Bruce, *The Letter of Paul to the Romans*, 2d ed., The Tyndale New Testament Commentaries (Grand Rapids, Mich.: Wm. B. Eerdmans Publishing Co., 1985), 151. [7]Glen Pace, sermon preached at Judsonia church of Christ, Judsonia, Arkansas, 30 March 2003. [8]Halford E. Luccock, *Preaching Values in the Epistles of Paul*, vol. 1, *Romans and First Corinthians* (New York: Harper & Brothers, 1959), 51ರಿಂದ ಆಯ್ದುಕೊಳ್ಳಲ್ಪಟ್ಟಿದೆ. [9]Romans 8ರಲ್ಲಿನ ಅದರ ಕೆಲವು ಉಪಯೋಗಗಳಲ್ಲಿ, "ದರೆ" ಎಂಬುದರ್ಥವು "ಆದ್ದರಿಂದ"; ಆದರೆ ಅವುಗಳ ಅನೇಕ ಉಲ್ಲೇಖಗಳಲ್ಲಿ, "ದರೆ" ಎಂಬ ಪದವು ಮಾಡತಕ್ಕ ಒಂದು ಷರತ್ತನ್ನು ವ್ಯಕ್ತಪಡಿಸುತ್ತದಷ್ಟೆ. [10]ಈ ಮೂರು ನಿಲುವುಗಳ ಕುರಿತ ಒಂದು ವಿಸ್ತರಿತ ಚರ್ಚೆಗಾಗಿ, ನೋಡಿರಿ David Roper, *Jesus Christ and Him Crucified* (Arvada, Colo.: Christian Communications, 1976), 89-96.

[11]Douglas J. Moo, *Romans*, The NIV Application Commentary (Grand Rapids, Mich.: Zondervan Publishing House, 2000), 258. [12]Ibid. [13]ಕೆಲವು ಲೇಖಕರು "ಪಾಪ ಮರಣಗಳಿಗೆ ಕಾರಣವಾದ ನಿಯಮ" ಎಂಬುದನ್ನು ಈ ವಿಧದಲ್ಲಿ ವ್ಯಕ್ತಪಡಿಸುತ್ತಾರೆ: "ನೀನು ಪಾಪ ಮಾಡಿದರೆ, ಸಾಯುವಿ!" ಹಲವಾರು ಖ್ಯಾತ ಪಂಡಿತರು "ಪಾಪ ಮರಣಗಳಿಗೆ ಕಾರಣವಾದ ನಿಯಮ"ವು ಮೋಶೆಯ ಧರ್ಮಶಾಸ್ತ್ರವೆಂದು ನಂಬುತ್ತಾರೆ. ಪೌಲನು ಎಲ್ಲಿಯ ವರೆಗೆ ನೇಮನಿಷ್ಠೆ/ಕ್ರಿಯೆಗಳ ವ್ಯವಸ್ಥೆಯ ಅಧೀನದಲ್ಲಿರುವನೋ ಅಲ್ಲಿಯ ತನಕ ಅದನ್ನು ಆತನಲ್ಲಿ ಕ್ರಿಯೆಮಾಡುತ್ತಿದ್ದ "ಧರ್ಮಶಾಸ್ತ್ರ" ಎಂದು ಯೋಚಿಸುವದು ಉತ್ತಮವೆಂದು ಕಾಣುತ್ತದೆ. [14]Stott, 218; Jim McGuiggan, *The Book of Romans*, Looking Into The Bible Series (Lubbock, Tex.: Montex Publishing Co., 1982), 231. ಈ ಅರ್ಥನಿರೂಪನೆಯು ಅನೇಕ ಸಾರಿ "ಪಾಪಮರಣಗಳಿಗೆ ಕಾರಣವಾದ ನಿಯಮ" ಎಂಬುದನ್ನು ಮೋಶೆಯ ಧರ್ಮಶಾಸ್ತ್ರದೊಂದಿಗೆ ಜೋಡಿಸಲ್ಪಡುತ್ತದೆ. [15]"ಪಾಪಮರಣಗಳಿಗೆ ಕಾರಣವಾದ ನಿಯಮ"ವು ಮೋಶೆಯ ಧರ್ಮಶಾಸ್ತ್ರ ಆಗಿದ್ದಾದರೆ, ಮೋಶೆಯ ಧರ್ಮಶಾಸ್ತ್ರವು ಆತನನ್ನು ಮೋಶೆಯ ಧರ್ಮಶಾಸ್ತ್ರದಿಂದ ಬಿಡಿಸುವದಕ್ಕಾಗಲಿಲ್ಲ ಎಂಬದಾಗಿ ಪೌಲನು ಹೇಳುತ್ತಿದ್ದನೆಂದಾಗುತ್ತದೆ—ಅದು ಹಾಗಿರುವದು ಅಸಂಭವವಷ್ಟೆ. [16]Dave Miller, sermon presented on the *Truth in Love* television program, Fort Worth, Texas, 2 February 2002. [17]Moo, 249. [18]Morris, 302. [19]"Docetic" ಎಂಬುದು δοκέω (*dokeō*, "ತೋರು")ಎಂಬ ಗ್ರೀಕ್ ಪದದಿಂದ ಬಂದದ್ದು. Docetism ಎಂಬುದು ಯೇಸುವು ನಿಜವಾದ ಮಾನವ ಶರೀರವನ್ನು ಹೊಂದಿರಲಿಲ್ಲ ಆದರೆ ಮಾಂಸದಂತೆ ತೋರುವ ಶರೀರವನ್ನುಹೊಂದಿದ್ದನೆಂಬುದು Gnosticರ ದೋಷಪೂರಿತ ನಂಬಿಕೆಯಾಗಿತ್ತು. [20]Bruce, *Romans*, 152.

[21]McGuiggan, 233. [22]Bryan Chapell, *In the Grip of Grace* (Grand Rapids, Mich.: Baker Book House, 1992), 23. [23]Charles Spurgeon, *Spurgeon's Commentary on Great Chapters of the Bible*, comp. Tom Carter (Grand Rapids, Mich.: Kregel Publications, 1998), 258. [24]W. E. Vine, Merrill F. Unger, and William White, Jr., *Vine's Complete Expository Dictionary of Old and New Testament Words* (Nashville: Thomas Nelson Publishers, 1985), 339. [25]ಇನ್ನೊಂದು ಸಂಭಾವ್ಯ ಅರ್ಥನೀರುಪನೆಯೆಂದರೆ ಕ್ರಿಸ್ತನ ಮರಣವು ಹಳೇ ಒಡಂಬಡಿಕೆಯನ್ನು ನೆರವೇರಿಸುವ ಮೂಲಕ ಅದನ್ನು ತೆಗೆದುಹಾಕಿತು ಎಂಬುದನ್ನು ಈ ವಚನವು ಸೂಚಿಸುತ್ತದೆ ಎಂಬದೆ. ಹೇಗೂ, ರೋಮಾ 8:4ರ ಮುಕ್ತಾಯದ ಬೆಳಕಿನಲ್ಲಿ, ಮೇಲೆ ಕೊಡಲಾದ ಅರ್ಥನಿರೂಪನೆಯು ಉತ್ತಮವಾಗಿ ಸರಿಹೊಂದುವಂತೆ ಕಾಣುತ್ತದೆ. [26]Thomas, *Romans*, 56. [27]Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick W. Danker (Chicago: University of Chicago Press, 2000), 1065. [28]Moo, 250. [29]Leslie C. Allen, "Romans," in *New International Bible Commentary*, ed. F. F. Bruce (Grand Rapids, Mich.: Zondervan Publishing House, 1979), 1331. [30]ಈ ರೀತಿಯ ಮನೋಭಾವದ ಕುರಿತ ಒಂದು ಬೈಬಲ್‌ನುಸಾರದ ದೃಷ್ಟಾಂತಕ್ಕಾಗಿ, ಮತ್ತಾಯ 16:23ರಲ್ಲಿ ಪೇತ್ರನು ಯೇಸುವಿನಿಂದ ಗದರಿಸಲ್ಪಡುವದನ್ನು ನೋಡಿರಿ.

[31]Spurgeon, 259. [32]"ಪವಿತ್ರಾತ್ಮನು" ಎಂಬುದು ಚಿಕ್ಕ "s," ನಿಂದ ಬರೆಯಲ್ಪಡಬಹುದು, ಅದು

"ಶರೀರಸಂಬಂಧವಾದವುಗಳು" ಎಂಬುದರ ವಿರುದ್ಧವಾಘಿ ಈ "ಆತ್ಮೀಕ ಸಂಗತಿಗಳು" ಎಂದಾಗಿಸುವದು (McCord). "ಪವಿತ್ರಾತ್ಮನಿಗೆ ಸಂಬಂಧಪಟ್ಟವುಗಳು" "ಆತ್ಮೀಕ ಸಂಗತಿಗಳು" (ಮತ್ತು ಪ್ರತಿಕ್ರಮದಲ್ಲಿರಬಹುದು) ಆಗಿರುವದರಿಂದ, ದೊಡ್ಡ "S" ಅಥವಾ ಚಿಕ್ಕ "s" ಉಪಯೋಗಿಸಿದರೂ ಅಷ್ಟಾಗಿ ಹೆಚ್ಚಿನ ವ್ಯತ್ಯಾಸವಾಗುವದಿಲ್ಲ. [33]McGuiggan, 237. [34]C. G. Wilke and Wilibald Grimm, *A Greek-English Lexicon of the New Testament*, trans. and rev. Joseph Henry Thayer (Edinburgh: T. & T. Clark, 1901; reprint, Grand Rapids, Mich.: Baker Book House, 1977), 265. [35]Morris, 306. [36]ಕೆಲವರು ರೋಮಾ 8:7ನ್ನು 7:1ರಲ್ಲಿ ಪೌಲನು ಆರಂಭಿಸಿದ ಧರ್ಮಶಾಸ್ತ್ರದ ಕುರಿತ ಚರ್ಚೆಯ ಸಮಾಪ್ತಿಯೆಂದು ಪರಿಗಣಿಸುತ್ತಾರೆ. [37]ಗ್ರೀಕ್ ವಾಕ್ಯದಲ್ಲಿ "ನೀವಾದರೋ" ಎಂಬುದರ ಮೇಲೆ ಎರಡು ಸಾರಿ ಒತ್ತುಕೊಡಲಾಗಿರುತ್ತದೆ. ಮೊದಲನೆಯದಾಗಿ, ಕ್ರಿಯಾಪದವೊಂದಕ್ಕೆ "ನೀವು" ಎಂದು ಸೇರಿಸಲ್ಪಟ್ಟಿದ್ದು ಅದು "ನೀವಾದರೋ" (ὑμεῖς ... ἐστὲ, *humeis . . . este*) ಎಂದರ್ಥವಾಗುತ್ತದೆ. ಎರಡನೆಯದಾಗಿ, "ನೀವಾದರೋ" ಎಂಬ ಪದವನ್ನು ಒತ್ತುನೀಡುವದಕ್ಕಾಗಿ ವಾಕ್ಯವೃಂದದ ಆರಂಭದಲ್ಲಿಯೇ ಇರಿಸಲಾಗಿದೆ. [38]F. F. Bruce, *The Book of the Acts*, rev. ed., The New International Commentary on the New Testament (Grand Rapids, Mich.: Wm. B. Eerdmans Publishing Co., 1988), 71. The promise of the Spirit is discussed in David L. Roper, *Acts 1—14*, Truth for Today Commentary (Searcy, Ark.: Resource Publications, 2001), 87-88. [39]Morris, 308. [40]Handley C. G. Moule, *The Epistle of St. Paul to the Romans*, 10th ed., The Expositor's Bible (London: Hodder and Stoughton, 1894), 206.

[41]Bruce Barton, David Veerman, and Neil Wilson, *Romans*, Life Application Bible Commentary (Wheaton, Ill.: Tyndale House Publishers, 1992), xxvi. ಹೆಚ್ಚುವರಿ ಅನುರೂಪತೆ ವಚನಗಳಿಗಾಗಿ ಮತ್ತು ಈ "ಕ್ರೈಸ್ತನು" ಎಂಬ ಪದದ ಕುರಿತ ಹೆಚ್ಚಿನ ಚರ್ಚೆಗಾಗಿ, ನೋಡಿರಿ David L. Roper, *Acts 1—14*, 429—30. [42]Thomas, *Romans*, 57. [43]ಗ್ರೀಕ್ ವಾಕ್ಯದಲ್ಲಿ ಅಕ್ಷರಶಃ "ಪವಿತ್ರಾತ್ಮನು ಜೀವವಾಗಿ [ದ್ದಾನೆ]." ಆದ್ದರಿಂದ ಕೆಲವು ತರ್ಜುಮೆಗಳಲ್ಲಿ "ಪವಿತ್ರಾತ್ಮನು ಜೀವವಾಗಿದ್ದಾನೆ" ಎಂದಿರುತ್ತದೆ (ನೋಡಿರಿ KJV). ಪುನಃ, ಇಲ್ಲಿ ಚಿಕ್ಕ "s" ಅಥವಾ ದೊಡ್ಡ "S" ಯಾವದು ಉಪಯೋಗಿಸಲ್ಪಟ್ಟಿದ್ದರೂ, ಪ್ರಾಥಮಿಕವಾಗಿ ಉಪದೇಶವು ಒಂದೇ ಆಗಿದೆ: ಜೀವದಾಯಕ ಪವಿತ್ರಾತ್ಮನು ನಮ್ಮ ಆತ್ಮಗಳಿಗೆ ಜೀವವನ್ನು ಒದಗಿಸುತ್ತಾನೆ. [44]ಇನ್ನೊಂದು ಸಂಭಾವ್ಯ ಅರ್ಥನಿರೂಪನೆಯೇನೆಂದರೆ "ದೇಹ" ಎಂಬುದು "ಶರೀರ" ಎಂಬುದರ ಮತ್ತೊಂದು ಪದವಾಗಿರುತ್ತದೆ: "[ಆತ್ಮೀಕವಾಗಿ] ಮರ್ತ್ಯದೇಹ." ಹೇಗೂ, 10ನೇ ವಚನವು 11ನೇ ವಚನದೊಂದಿಗೆ ನಿಕಟ ಸಂಬಂಧ ಹೊಂದಿದೆ, ಅದು ಪ್ರತಿಯೊಬ್ಬ ವ್ಯಕ್ತಿಯು ನೆಲೆಸಿರುವ ಮರ್ತ್ಯ ದೇಹ ಎಂಬ ಅರ್ಥನಿರೂಪನೆಗೆ ಒಲವು ತೋರುವದು. [45]ಈ ವಚನದಲ್ಲಿ "ನೀತಿಯು" ಎಂದು ಅನುವಾದಿಸಲ್ಪಟ್ಟಿರುವ ಗ್ರೀಕ್ ಪದವು δικαιοσύνη (*dikaiosunē*), "ನೀತಿವಂತರೆಂಬ ನಿರ್ಣಯ" ಎಂದು ಸಹ ಅನುವಾದಿಸಲ್ಪಡಬಹುದಾಗಿದೆ. [46]Stott, 227. [47]Adapted from McGuiggan, 240. [48]ಗ್ರೀಕ್‌ನಲ್ಲಿ ದ್ವಿತೀಯಾ ವಿಭಕ್ತಿಯು ಒಂದು ನೇರವಾದ ವಸ್ತುನಿಷ್ಠವನ್ನು ಸೂಚಿಸಿದರೆ, ಷಷ್ಠೀ ವಿಭಕ್ತಿಯು ವಿವಿಧ ರೀತಿಯ ಇತರೆ ಸಂಬಂಧಗಳನ್ನು ಸೂಚಿಸುತ್ತದೆ. [49]J. W. McGarvey and Philip Y. Pendleton, *Thessalonians, Corinthians, Galatians and Romans*, The Standard Bible Commentary (Cincinnati: Standard Publishing, n.d.), 360. [50]"ಪೌಲನು ಇಲ್ಲಿ ನಮ್ಮನ್ನು ಜೀವಿತರಾಗಿ ಎಬ್ಬಿಸುವದರಲ್ಲಿ ಪವಿತ್ರಾತ್ಮನು ಮಧ್ಯವರ್ತಿಯೆಂದು ಹೇಳುತ್ತಿದ್ದಾನೋ ಅಥವಾ ನಾವು ಎಬ್ಬಿಸಲ್ಪಡುತ್ತೇವೆಂಬುದಕ್ಕೆ ಖಾತರಿದಾರನು ಎಂದು ಹೇಳುತ್ತಿದ್ದಾನೋ ಎಂಬುದು ಸ್ಪಷ್ಟವಾಗಿರುವದಿಲ್ಲ. ಎರಡೂ ಸತ್ಯವೇ ಆಗಿವೆ . . ." (Morris, 311).

[51]Bauer, 742. [52]Richard Rogers, *Paid in Full: A Commentary on Romans* (Lubbock, Tex.: Sunset Institute Press, 2002), 122. [53]Morris, 312. [54]R. C. H. Lenski, *The Interpretation of St. Paul's Epistle to the Romans* (N.p.: Lutheran Book Concern, 1936; reprint, Minneapolis: Augsburg Publishing House, 1961), 517. [55]Bauer, 443. [56]Stott, 228. [57]ನಮ್ಮ ದೇಹಗಳು ದೇವರ ಆಲಯವಾಗಿವೆ ಮತ್ತು ಅದನ್ನು ಕೆಡಿಸಬಾರದು ಎಂದು ಬೈಬಲ್ ಕಲಿಸುತ್ತದೆ (1 ಕೊರಿಂಥ 6:19; ಎಫೆಸ 5:28, 29). [58]Moo, 260. [59]J. H. Gilmore, "He Leadeth Me," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [60]J. D. Thomas, Class Notes, *Romans*, Abilene Christian College (1955).

[61]Morris, 314. [62]ಅಧ್ಯಾಯ 6ರಲ್ಲಿ, ಪೌಲನು ನಾವು "ನೀತಿಗೆ ದಾಸರಾದದರಿಂದಲೂ" (6:18), ಆದರೆ ನಮಗೆ ದಾಸರ "ಭಾವ" (ಪ್ರವೃತ್ತಿ) ಇರುವದಿಲ್ಲ ಎಂದು ಹೇಳುತ್ತಾನೆ. ನಮ್ಮ ದೃಷ್ಟಿಕೋನವು ಪುತ್ರರದ್ದಾಗಿದೆ. [63]Jim Townsend, *Romans: Let Justice Roll Down* (Elgin, Ill.: David C. Cook Publishing Co., 1988), 67ರಿಂದ ಆಯ್ದುಕೊಳ್ಳಲಾಗಿದೆ. [64]Chris R. Bullard, "No Condemnation, No Separation," sermon preached at Overland Park church of Christ, Overland Park, Kansas, 16 September 1990, cassette. [65]ಕಾರಣಾಂತರದಿಂದ, 15ನೇ ವಚವನದಲ್ಲಿನ ಪದವನ್ನು NIVಯು "ಮಗನಭಾವ" ಎಂದು ಅನುವಾದಿಸುತ್ತದೆ ಆದರೆ 23ನೇ ವಚನದಲ್ಲಿ "ದೇವಪುತ್ರರ ಪದವಿ" ಎಂಬುದರಲ್ಲಿ ಅದೇ ಪದದ ಭಾವಾರ್ಥವನ್ನು ಒದಗಿಸುತ್ತದೆ. [66]Vine, 13-14. [67]ಯೆಹೂದಿ ಪುತ್ರಸ್ವೀಕಾರ ಕುರಿತು ಹಳೇ ಒಡಂಬಡಿಕೆಯು ಹೆಚ್ಚು ತಿಳಿಸುವದಿಲ್ಲ (ನೋಡಿರಿ ಎಸ್ತೇರಳು 2:7, 15), ಆದರೆ ಅದು ಪೌಲನ ದಿನಗಳಲ್ಲಿ ಶಾಸ್ತ್ರಿಗಳ ಪಂಗಡದಿಂದ ಆಚರಿಸಲ್ಪಡುತ್ತಿತ್ತು. (Josephus *Wars* 2.8.2.) [68]Bruce, *Romans*, 157. [69]8:23ರಲ್ಲಿ, ಪೌಲನು ಎತ್ತಿತೋರಿಸಿದ್ದೇನೆಂದರೆ, ನಾವು ಪುತ್ರಪದವಿಯನ್ನು ಆನಂದಿಸುತ್ತಿದ್ದೇವಾದರೂ, "ಪುತ್ರಸ್ವೀಕಾರ"ದ ಪ್ರಕ್ರಿಯೆಯು ಕ್ರಿಸ್ತನ ಪುನರಾಗಮನದ ತನಕ ಪೂರ್ಣಗೊಳ್ಳುವದಿಲ್ಲ. [70]KJV ತರ್ಜುಮೆಯಲ್ಲಿ "ತಾನೇ" ಎಂಬುದರ ಬದಲಾಗಿ "ಅದೇ" ಎಂದಿರುತ್ತದೆ. "ಅದೇ" ಎಂಬುದು ತಪ್ಪಾಗಿ ತರ್ಜುಮೆಗೊಂಡಿರುವದಲ್ಲ, ಯಾಕೆಂದರೆ ಪವಿತ್ರಾತ್ಮನು (*pneuma*) ಎಂಬುದಕ್ಕಿರುವ ಗ್ರೀಕ್ ಪದವು ನಿರ್ಲಿಂಗರೂಪದಲ್ಲಿರುತ್ತೆ. ಹೇಗೂ "ಅದೇ" ಎಂದು ಹೇಳುವಾಗ ಪವಿತ್ರಾತ್ಮನು ಒಬ್ಬ ವ್ಯಕ್ತಿ ಎಂಬುದಕ್ಕಿಂತಲು ಒಂದು ವಸ್ತು ಎಂಬರ್ಥವನ್ನು ಕೊಡುವದಾಗಿದೆ, ಆದ್ದರಿಂದ (NKJVಯಲ್ಲಿರುವ ಪ್ರಕಾರ) "ತಾನೇ" ಎಂಬುದು ಸೂಕ್ತವಾಗಿರುತ್ತದೆ.

[71]McGuiggan, 244-45. [72]ಇದು "ಪ್ರತ್ಯಕ್ಷ ಸಾಕ್ಷಿ" ಎಂದು ಕರೆಯಲ್ಪಡುತ್ತದೆ, ಅದನ್ನು ಪಂಚೇಂದ್ರಿಯಗಳಿಂದ ಅನುಭವ ಮಾಡಬಹುದಾಗಿದೆ. [73]Thomas, Class Notes, *Romans*. [74]R. C. Bell, *Studies in Romans* (Austin, Tex.: Firm Foundation Publishing House, 1957), 89. [75]McGuiggan, 246. [76]ನಾನು ಬೆಳೆಯುತ್ತಿರುವ ಹಾಗೆ, ಅನೇಕ ಸಾರಿ "ಹಿರಿಯ ಸಹೋದರ" (ಅಣ್ಣ) ಎಂಬ ಪದಗುಚ್ಛವನ್ನು ಕೇಳಿಸಿಕೊಂಡಿದ್ದೇನೆ. ನಾನು ಬೋಧಿಸುವದಕ್ಕೆ ಆರಂಭಿಸಿದಾಗ, ಆ ನಿರ್ದಿಷ್ಟವಾದ ಪದಕ್ಕಾಗಿ ಹೊಸ ಒಡಂಬಡಿಕೆಯಲ್ಲಿ ವ್ಯರ್ಥವಾದ ಹುಡುಕಾಟ ನಡಿಸಿದೆನು. ಬಹುಶಃ ಅದು ರೋಮಾ 8:29ರ ಮೇಲೆ ಆಧಾರವಾಗಿದ್ದಿರಬಹುದು. [77]Bruce, *Romans*, 150. [78]Thomas, *Romans*, 61. [79]Charles Spurgeon, *Spurgeon's Commentary on Great Chapters of the Bible*, comp. Tom Carter (Grand Rapids, Mich.: Kregel Publications, 1998), 263. [80]Barclay M. Newman and Eugene A. Nida, *A Translator's Handbook on Paul's Letter to the Romans*, Helps for Translators, vol. 14 (Stuttgart: United Bible Societies, 1973), 157.

[81]Vine, 217-18. [82]F. Godet, *Commentary on the Epistle to the Romans*, trans. A. Cusin, rev. and ed. Talbot W. Chambers (N.p.: Funk and Wagnall, 1883; reprint, Grand Rapids, Mich.: Zondervan Publishing House, 1969), 313. [83]Guy N. Woods, *How to Read the Greek New Testament* (Memphis: By the author, 1970), 21 ರಿಂದ ಆಯ್ದುಕೊಳ್ಳಲ್ಪಟ್ಟಿದೆ. [84]*Ekdechomai* ಒಂದು ಸಂಯುಕ್ತ ಪದವಾಗಿದ್ದು, ἐκ (*ek*, "ಅದರಿಂದ") ಮತ್ತು δέχομαι (*dechomai*, "ಪಡೆದುಕೊಳ್ಳು") ಎಂಬ ಪದಗಳನ್ನು ಒಂದುಗೂಡಿಸುತ್ತದೆ. [85]Vine, 218, 663. [86]KJV ಯಲ್ಲಿ 19, 20, ಮತ್ತು 21 ವಚನಗಳಲ್ಲಿ "ಸೃಷ್ಟಿಜೀವಿಯು" ಎಂದಿರುತ್ತದೆ, ಆದರೆ 22ನೇ ವಚನದಲ್ಲಿ "ಸೃಷ್ಟಿ" ಎಂದು ಹೇಳುತ್ತದೆ. ಎಲ್ಲಾ ವಚನಗಳಲ್ಲಿಯೂ ಗ್ರೀಕ್‌ನ ಪ್ರಾಥಮಿಕ ಪದವಾದ *ktisis* ಎಂಬುದು ಕಂಡುಬರುತ್ತದೆ. [87]Vine, 137. [88]ರಲ್ಲಿ ಈ ಪ್ರಶ್ನೆಯ ಕುರಿತ ಚರ್ಚೆಯನ್ನು ನೋಡಿರಿ Moses E. Lard, *Commentary on Paul's Letter to Romans* (Lexington, Ky.: N.p., 1875; reprint, Delight, Ark.: Gospel Light Publishing Co., n.d.), 273-74. [89]Thomas, *Romans*, 63. [90]McGarvey and Pendleton, 362.

[91]Moo, 266. [92]Larry Deason, *"The Righteousness of God": An In-depth Study of Romans*, rev. ed. (Clifton Park, N.Y.: Life Communications, 1989), 222. [93]KJV ಯಲ್ಲಿ "ವ್ಯರ್ಥತ್ವಕ್ಕೆ ಅಧೀನಪಡಿಸಲ್ಪಟ್ಟಿತು" ಎಂದಿರುತ್ತದೆ. "ವ್ಯರ್ಥತ್ವ" ಎಂಬುದು ಒಂದು ಲ್ಯಾಟಿನ್ ಪದದಿಂದ ಬಂದಿದ್ದು ಅದರರ್ಥವು "ಬರಿದು" ಎಂದಾಗಿರುತ್ತದೆ, ಈ ದಿನಗಳಲ್ಲಿ ಅದನ್ನು "ಗರ್ವ" ಎಂಬುದಕ್ಕೆ ಪರ್ಯಾಯ ಪದವಾಗಿ ಉಪಯೋಗಿಸಲ್ಪಡುತ್ತಿದೆ. NKJV ಯಲ್ಲಿ "ನಿರರ್ಥಕ" ಎಂದಿರುತ್ತದೆ. [94]Vine, 657, 198. [95]NASB ಯಲ್ಲಿ "Him" (ಆತನು ಎಂಬುದು ದೊಡ್ಡ "H" ನಿಂದ ಉಲ್ಲೇಖಿಸಲ್ಪಟ್ಟಿರುತ್ತದೆ) ಎಂದಿದ್ದು ದೇವರೇ ಅದನ್ನು ಒಳಪಡಿಸಿದನೆಂಬುದನ್ಉ ಸೂಚಿಸುತ್ತದೆ. ಕೆಲವರು "ಆತನು" ಎಂಬುದು ಆದಾಮ, ಸೈತಾನನನ್ನು ಅಥವಾ

ಇಬ್ಬರನ್ನೂ ಸೂಚಿಸುತ್ತದೆಂದು ಭಾವಿಸುತ್ತಾರೆ—ಆದರೆ ಅಲ್ಲಿ ಹೇಳಿಕೆಯು ನಿರೀಕ್ಷೆಯೊಂದಿಗೆ ಜೋಡಿಸಲ್ಪಟ್ಟಿದೆ. ಆದಾಮ ಮತ್ತು ಸೈತಾನನು ಭೂಮಿಯನ್ನು ಸಮಸ್ಯೆಗೆ ಸಿಲುಕಿಸಿದಂತಹ ಪಾಪದಲ್ಲಿ ಪಾತ್ರವಹಿಸಿದ್ದರು, ಆದರೆ ಅದರ ಮಧ್ಯದಲ್ಲಿ ಒಂದು ನಿರೀಕ್ಷೆಯನ್ನು ಸೇರ್ಪಡೆಗೊಳಿಸಿದವನು ದೇವರೇ. [96]ಬಿತ್ತಲ್ಪಟ್ಟ ಬೀಜ ಮತ್ತು ಅದರಿಂದ ಫಲಿತಗೊಳ್ಳುವ ಗಿಡದ ನಡುವೆ ಒಂದು ಸಂಬಂಧವಿರುತ್ತದೆ. ಗಿಡವು ಬೀಜದಂತೆ ತೋರುವದಿಲ್ಲ, ಆದರೆ ಅದು ಹೇಗೆ ಕಾಣಿಸುತ್ತದೆಂಬುದು ಬೀಜದ ಮೇಲೆ ಅವಲಂಬಿತವಾಗಿರುತ್ತದೆ. [97]ಪರಲೋಕವನ್ನು ವರ್ಣಿಸುವದಕ್ಕೆ ಬೈಬಲ್‌ನಲ್ಲಿ ವಿವಿಧ ಸಾಂಕೇತಿಕ ಭಾಷೆಗಳು ಉಪಯೋಗಿಸಲ್ಪಟ್ಟಿವೆ. ಪ್ರಕಟನೆ 21 ಮತ್ತು 22ರಲ್ಲಿ, ಒಂದು ಪಟ್ಟಣದ ಚಿತ್ರಣವನ್ನು ಉಪಯೋಗಿಸಲಾಗಿದೆ. ನಮ್ಮ ಭೂಮಿಯಲ್ಲಿ ನೆಟ್ಟಿರುವ ಮಾನವ ಮನಸ್ಸುಗಳಿಗೆ ಆತ್ಮೀಕ ವಾಸ್ತವಿಕತೆಗಳನ್ನು ಗ್ರಹಿಸಿಕೊಳ್ಳಲು ಸಾಧ್ಯವಿಲ್ಲದ್ದರಿಂದ, ಪರಲೋಕವು ಹೇಗಿರುತ್ತದೆಂಬ ಬಗ್ಗೆ ಒಂದು ತಿಳುವಳಿಕೆಯನ್ನು ಕೊಡುವದಕ್ಕಾಗಿ "ನೂತನ ಆಕಾಶ ಮತ್ತು ಭೂಮಿ" ಮತ್ತು ಒಂದು ಪರಲೌಕಿಕ ಪಟ್ಟಣ ಎಂಬ ಸಂಕೇತಗಳನ್ನು ಉಪಯೋಗಿಸಲಾಗಿರುತ್ತದೆ. [98]"ನರಳಾಟ" ಮತ್ತು "ಪ್ರಸವ ವೇದನೆ" ಎಂಬ ಪದಗಳೆರಡೂ *sun* ("ಯೊಂದಿಗೆ" ಅಥವಾ "ಒಟ್ಟಾಗಿ") ಎಂಬ ಉಪಸರ್ಗವನ್ನು ಒಳಗೊಂಡಿರುತ್ತವೆ. ಜಗತ್ತು ಯಾರೊಂದಿಗೆ ನರಳುತ್ತದೆ ಮತ್ತು ಪ್ರಸವವೇದನೆ ಪಡುತ್ತದೆ ಎಂಬುದು ಸ್ಪಷ್ಟವಾಗಿರುವದಿಲ್ಲ. ಬಹುಶಃ ಅದು ನಮ್ಮೊಂದಿಗೆ ಆಗಿರಬಹುದು ಅಥವಾ ಪೌಲನು ಸೃಷ್ಟಿಯ ವಿವಿಧ ಭಾಗಗಳು ಒಟ್ಟಾಗಿ ನರಳಾಡುವದನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿರಬಹುದು. [99]G. Bertram, "*ōdín*," in *Theological Dictionary of the New Testament*, ed. Gerhard Kittel and Gerhard Friedrich, trans. and abr. Geoffrey W. Bromiley (Grand Rapids, Mich.: Wm. B. Eerdmans Publishing Co., 1985), 1353. [100]This comment has been attributed to John Calvin. (Morris, 323.)

[101]D. Stuart Briscoe, *Romans*, The Communicator's Commentary (Waco, Tex.: Word Books, 1982), 172. [102]Townsend, 69. [103]"ದೇವರಾತ್ಮನಿಂದ ಉಂಟಾಗುವ ಫಲವೇನೆಂದರೆ" ಎಂಬುದರ ಪ್ರಾಥಮಿಕ ಅರ್ಥವು "ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ" ಎಂಬ ಅದೇ ಅರ್ಥವೇ ಆಗಿರುತ್ತದೆ (ಎಫೆಸ 1:13, 14; 8:9, 11ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). [104]3:24b ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ. [105]William Barclay, *The Letter to the Romans*, rev. ed., The Daily Study Bible (Philadelphia: Westminster Press, 1975), 110. [106]Adapted from E. C. McKenzie, *14,000 Quips & Quotes* (New York: Wings Books, 1980), 242. [107]Moo, 268. [108]ಹೊಸ ಒಡಂಬಡಿಕೆಯಲ್ಲಿ ಈ ಪದವು ಕಾಣಿಸಿಕೊಳ್ಳುವ ಇತರ ಒಂದೇ ಒಂದು ಸ್ಥಳವೆಂದರೆ ಲೂಕ 10:40, ಅಲ್ಲಿ ಮರಿಯಳು ಮಾರ್ಥಳಿಗೆ ಬಂದು ಸಹಾಯ ಮಾಡುವಂತೆ ಕೇಳಿಕೊಳ್ಳುತ್ತಾಳೆ. [109]A. T. Robertson, *A Grammar of the Greek New Testament in the Light of Historical Research* (Nashville: Broadman Press, 1934), 573. [110]Bauer, 1006-7.

[111]*The Analytical Greek Lexicon* (London: Samuel Bagster & Sons, 1971), 14. [112]ತಮ್ಮ ಪ್ರಿಯರನ್ನು ದುರಂತಕರವಾಗಿ ಕಳೆದುಕೊಂಡವರ ಮನೆಗಳಿಗೆ ಹೋದ ಸಮಯಗಳನ್ನು ನಾನು ಯೋಚಿಸುತ್ತೇನೆ. ಅಂಥ ಗಳಿಗೆಯಲ್ಲಿ ಯಾವ ಶಬ್ದಗಳು ಸಹ ಸಾಕಾಗುವದಿಲ್ಲ. ನಾನು ಕೇವಲ ದುಃಖಿಸುವವರ ಸಂಗಡ ಕುಳಿತುಕೊಂಡು, ಆ ಮೂಲಕ ಅವರ ನೋವಿನಲ್ಲಿ ಅವರೊಂದಿಗೆ "ನರಳಾಡುವದನ್ನು" ಮಾತ್ರವೇ ಮಾಡುವದಕ್ಕೆ ಸಾಧ್ಯವಾಗುತ್ತಿತ್ತಷ್ಟೆ. [113]ಹೊಸ ಒಡಂಬಡಿಕೆಯಲ್ಲಿ "ಭಾಷೆಗಳು" ಅಂದರೆ ಜನರು ಮಾತಾಡುವ ಭಾಷೆಗಳನ್ನು ಸೂಚಿಸುತ್ತಿತ್ತು (ನೋಡಿರಿ ಅಪೊಸ್ತಲರ ಕೃತ್ಯಗಳು 2:4—6), ಹೊರತು ಗೊಂದಲಕರವಾದ ಮಾತುಗಳನ್ನು ನುಡಿಯುವದಾಗಿರಲಿಲ್ಲ. [114]ರಲ್ಲಿ ಹೆಚ್ಚಿನ ಮಾಡಹಿತಿಯು ಕೊಡಲ್ಪಟ್ಟಿದೆ Owen D. Olbricht, "Miracles & the Holy Spirit," *Truth for Today* 19, no. 8 (January 1999): 31-36. [115]*Glossolalia* ಎಂದರೆ "ಭಾಷೆಗಳನ್ನು—ಆಡುವದು" ಎಂದಾಗಿರುತ್ತದೆ ಮತ್ತು ಅದು ಹೊಸ ಒಡಂಬಡಿಕೆಯಲ್ಲಿ ಭಾಷೆಗಳನ್ನಾಡುವ ಅದ್ಭುತಕರ ವರವನ್ನು ಸೂಚಿಸುವದಕ್ಕೆ ಉಪಯೋಗಿಸಲ್ಪಡುತ್ತಿತ್ತು. [116]Stott, 245. [117]ಅಕ್ಷರಶಃ, ಗ್ರೀಕ್ ವಾಕ್ಯವು ಕೇವಲ "ದೇವರ ಪ್ರಕಾರವಾಗಿ" ಎಂದಿರುತ್ತದೆ. ಪೌಲನ ತಾತ್ಪರ್ಯವು "ದೇವರ ಚಿತ್ತ ಅಥವಾ ಸಂಕಲ್ಪದ ಪ್ರಕಾರವಾಗಿ" ಎಂದಾಗಿತ್ತೆಂಬುದು ಅರ್ಥಮಾಡಿಕೊಳ್ಳತಕ್ಕದ್ದಾಗಿದೆ. [118]Stott, 246. [119]Moo, 277. [120]Stott, 247.

[121]Moo, 269. [122]Stott, 246. [123]Jimmy Allen, *Survey of Romans*, 7th ed. (Searcy, Ark.: By the author, 1994), 82. [124]Lard, 279. [125]Ibid. [126]ಫ್ರೆಂಚ್ ದೈವಶಾಸ್ತ್ರಜ್ಞನಾದ John Calvin (1509-1564) ನು ಪ್ರೊಟೆಸ್ಟಂಟ್‌ರ ಸುಧಾರಣೆಯಲ್ಲಿ (Protestant Reformation) ಪ್ರಮುಖ ಪಾತ್ರ ವಹಿಸಿದ್ದನು. ಸುಧಾರಣೆಯನ್ನು ಆಕಾರಕ್ಕೆ ತರುವದರಲ್ಲಿ ಆತನ ಬರಹಗಳು ದೊಡ್ಡ ಪ್ರಭಾವವನ್ನು ಬೀರಿದ್ದವು. [127]Barclay,

114. [128]Allen, 82. [129]Vine, 346 (ಒತ್ತಿ ಹೇಳಿದ್ದು ನನ್ನದು). [130]Vine, 165.

[131]"ಸಹೋದರರಿದ್ದು" ಎಂಬುದು ಜಾತಿವಿಶಿಷ್ಟ ರೂಪದಲ್ಲಿ ಉಪಯೋಗಿಸಲ್ಪಟ್ಟಿದ್ದು ಅದು ಕ್ರಿಸ್ತನಲ್ಲಿರುವ ಸಹೋದರರು ಹಾಗೂ ಸಹೋರಿಯರಿಬ್ಬರನ್ನು ಸೂಚಿಸುತ್ತದೆ. [132]ಉದಾಹರಣೆಗೆ, ಆತನು ಎರಡರಷ್ಟು ಬಾಧ್ಯತೆಯನ್ನು ಪಡೆದುಕೊಂಡನು (ಧರ್ಮೋಪದೇಶಕಾಂಡ. 21:17). [133]Bruce, *Romans*, 168. [134]Moo, 271. [135]Stott, 246. [136]Moo, 281. [137]ಕೆಲವು ವ್ಯಾಖ್ಯಾನಕಾರರು ಇಡೀ ಪತ್ರಿಕೆಯನ್ನು ಪೌಲನು ಈ ವಿಷಯವನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದನೆಂದು ಯೋಚಿಸುತ್ತಾರೆ; ಇತರರು 5ನೇ ಅಧ್ಯಾಯವನ್ನು ಎಂದು; ಇನ್ನು ಕೆಲವರು 8ನೇ ಅಧ್ಯಾಯವನ್ನು ಈ ವಿಷಯವನ್ನಿಟ್ಟುಕೊಂಡು ಬರೆದನೆಂದು ಅಭಿಪ್ರಾಯ ಪಡುತ್ತಾರೆ. ಪೌಲನು ನಿಖರವಾಗಿ ಇಲ್ಲಿ ಏನನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದನೆಂಬುದು ನಮಗೆ ತಿಳಿಯದು. [138]ಈ ವಾಕ್ಯಭಾಗದುದ್ದಕ್ಕೂ, "ನಾವು" ಎಂಬುದು ನಂಬಿಗಸ್ತ ಕ್ರೈಸ್ತರನ್ನು ಸೂಚಿಸುತ್ತದೆ. [139]ಒಂದು ಅರ್ಥದಲ್ಲಿ, ಕ್ರಿಸ್ತನು ಸರ್ವರಿಗಾಗಿಯೂ ಮರಣಿಸಿದನು; ಆದರೆ ಮತ್ತೊಂದು ಅರ್ಥದಲ್ಲಿ, ಆತನು ತನ್ನ ಮರಣದ ಪ್ರಯೋಜನವನ್ನು ಅಂಗೀಕರಿಸಿಕೊಳ್ಳುವವರಿಗೋಸ್ಕರ ಮಾತ್ರವೇ ಮರಣಿಸಿದನು. ಇಲ್ಲಿ ಎರಡನೆಯ ಭಾವಾರ್ಥವು ಕಂಡಬರುತ್ತದೆ. [140]ಅಧ್ಯಾಯ 8:32ರಲ್ಲಿ, "*ಸ್ವಂತ* ಎಂಬುದು ಒಂದು ವಿಶೇಷವಾದ ಸಂಬಂಧವನ್ನು ತೋರಿಸುತ್ತದೆ," ಅದು "ಕ್ರಿಸ್ತನ ಪುತ್ರತ್ವವನ್ನು ನಮ್ಮ ಪುತ್ರತ್ವದಿಂದ ವ್ಯತ್ಯಾಸವಾಗಿಸುತ್ತದೆ" (Morris, 335, n. 149).

[141]Octavius Winslow, *No Condemnation in Christ Jesus* (London: John Farquhar Shaw, 1853), 361. [142]ದೇವರು ನಮ್ಮನ್ನು ತನ್ನ ಮಗನಾದ ಯೇಸುವಿನಿಂದ ಪ್ರತ್ಯೇಕವಾಗಿ ಮತ್ತು ಹೊರತಾಗಿ ಆಶೀರ್ವದಿಸುವದಿಲ್ಲ. ಎಲ್ಲಾ ಆಶೀರ್ವಾದಗಳು ಅವರಿಬ್ಬರಿಂದಲೂ ಬರುತ್ತವೆ. [143]Vine, 196. [144]Bauer, 273. ಲೂಕನು ಅಪೊಸ್ತಲರ ಕೃತ್ಯಗಳು ಪುಸ್ತಕದಲ್ಲಿ ಪೌಲನ ವಿರುದ್ಧವಾಗಿ ಮಾಡಲ್ಪಟ್ಟ ಆರೋಪಗಳನ್ನು ಸೂಚಿಸುವದಕ್ಕಾಗಿ ಹಲವಾರು ಸಾರಿ *enkaleō* ಎಂಬ ಪದವನ್ನು ಉಪಯೋಗಿಸಿದನು (ಅಪೊಸ್ತಲರ ಕೃತ್ಯಗಳು 19:38; 23:28, 29; 26:2, 7). [145]Ibid., 519. [146]Moo, 282. [147]McGuiggan, 266. ಇದು ರೋಮಾ 14ರಲ್ಲಿ ಪೌಲನು ತಿಳಿಸಿದ ದೊಡ್ಡ ವಿಷಯವಾಗಿರುತ್ತದೆಂದು McGuiggan ಅಭಿಪ್ರಾಯ ಪಡುತ್ತಾನೆ. [148]Stott, 246. [149]Vine, 17. [150]Ibid., 27.

[151]William Hendriksen, *Exposition of Paul's Epistle to the Romans*, New Testament Commentary (Grand Rapids, Mich.: Baker Book House, 1981), 290. [152]Vine, 468. [153]Deason, 240. [154]Eusebiusನ *Ecclesiastical History* 2.25ಯಲ್ಲಿ ಬರೆದಿಡಲ್ಪಟ್ಟಿರುವ ಪ್ರೇರಿಸಲ್ಪಡದ ಬರಹಗಳನ್ನು ನೋಡಿರಿ. [155]ಇಸ್ರಾಯೇಲ್ಯರು ಬಾಬಿಲೋನಿಗೆ ಸೆರೆಯಾಳುಗಳಾಗಿ ಒಯ್ಯಲ್ಪಡುವಂತೆ ದೇವರು ಅನುಮತಿಸಿದ್ದಕ್ಕೆ ಕಾರಣವು ಅವರು ನಿರಂತರವಾಗಿ ಪಾಪದಲ್ಲಿ ಜೀವಿಸುವವರಾಗಿದ್ದದ್ದು ಮಾತ್ರವಲ್ಲದೆ ಜೊತೆಗೆ ಪಶ್ಚಾತಾಪವಿಲ್ಲದವರಾಗಿದ್ದರು. ಹೇಗಿದ್ದರೂ, ನೇರವಾಗಿ ಅಥವಾ ಪರೋಕ್ಷವಾಗಿ, ಸೆರೆವಾಸವು ಅವರು ದೇವರ ವಿಶೇಷ ಜನಾಂಗವಾಗಿರುವದರೊಂದಿಗೆ ಸಂಬಂಧ ಹೊಂದಿತ್ತು. [156]ಈ ಗ್ರೀಕ್ ಪದವು ಆಂಗ್ಲದ "hyper" ಎಂಬ ಪೂರ್ವಪ್ರತ್ಯಯದಲ್ಲಿ ಪ್ರತಿಬಿಂಬಗೊಂಡಿರುತ್ತದೆ. [157]*Nikaō* ಎಂಬುದು νίκη (*nikē*) ಎಂಬ ನಾಮಪದಕ್ಕೆ ಸಂಬಂಧ ಹೊಂದಿದೆ, ಅದರರ್ಥವು "ವಿಜಯ" ಎಂದಾಗಿರುತ್ತದೆ. ಗ್ರೀಕ್‌ರು ನೈಕ್ (Nike) ವಿಜಯ ದೇವತೆಯನ್ನು ಪೂಜಿಸುತ್ತಿದ್ದರು. ಇಂದು, ನೈಕ್ ಎಂಬುದು ಕ್ರೀಡಾ ಉಡುಪುಗಳ ಪ್ರಖ್ಯಾತ ಹೆಸರಾಗಿರುತ್ತದೆ, ಅದು ತಾನು ತಯಾರಿಸುವ ಶೂಗಳಿಗೆ ಪ್ರಸಿದ್ಧವಾಯಿತು. [158]ಪೌಲನು ಏಕೆ ಇಲ್ಲಿ ಭೂತಕಾಲವನ್ನು ಉಪಯೋಗಿಸಿದನು? ಆತನು ಪ್ರಾಥಮಿಕವಾಗಿ ಶಿಲುಬೆಯ ಮೇಲೆ ತೋರಲಾದ ಕ್ರಿಸ್ತನ ಪ್ರೀತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಳಿದನು. ಬಹುಶಃ ಆತನು ಕರ್ತನ ಪ್ರೀತಿಯು ಸ್ಥಿರವಾದದ್ದು ಮತ್ತು ಮಾರ್ಪಡುವದಕ್ಕೆ ಸಾಧ್ಯವಿಲ್ಲದ್ದು ಎಂಬುದನ್ನು ಒತ್ತಿಹೇಳಲಿಚ್ಛಿಸಿದ್ದನು. [159]McGarvey and Pendleton, 371. [160]ಪೌಲನು ಇಲ್ಲಿ ತಪ್ಪು ಬೋಧನೆ ಮಾಡುತ್ತಿದ್ದ (ಮತ್ತಾಯ 24:11, 12ರಲ್ಲಿ ಉಲ್ಲೇಖಿಸಲ್ಪಟ್ಟಿರುವವರ ರೀತಿಯ) ಮಾನವ ಸಂದೇಶಕರನ್ನು ಸೂಚಿಸುತ್ತಿದ್ದಾನೆಂದು ಕೆಲವರು ಅಭಿಪ್ರಾಯ ಪಡುತ್ತಾರೆ. ಇನ್ನು ಕೆಲವರು ಈ "ಸಂದೇಶಕರನ್ನು" ನಮ್ಮನ್ನು ಕ್ರಿಸ್ತನಿಗಾಗಿ ಜೀವಿಸದಂತೆ ನಿರುತ್ಸಾಹಗೊಳಿಸುವ ಮಿಥ್ಯ ಸ್ನೇಹಿತರೆಂದು ಗುರುತಿಸುತ್ತಾರೆ.

[161]Moo, 287. [162]Everett F. Harrison, "Romans," in *The Expositor's Bible Commentary*, vol. 10, *Romans—Galatians*, ed. Frank E. Gaebelein (Grand Rapids, Mich.: Zondervan Publishing House, 1976), 100. [163]Moo, 284. [164]John Locke; quoted in James Burton Coffman, *Commentary on Romans* (Austin, Tex.: Firm Foundation Publishing House, 1973), 324. [165]Coy Roper, "More Than Conquerors (Romans 8)," 14. [166]McGarvey and Pendleton, 371 (emphasis added). [167]ಆದಿಕಾಂಡ 1:26ರಲ್ಲಿ "ನಮ್ಮ" ("ನಮ್ಮ ಸ್ವರೂಪದಲ್ಲಿ . . . ಮನುಷ್ಯರನ್ನು ಉಂಟು ಮಾಡೋಣ") ಎಂಬುದು ದೈವತ್ವವನ್ನು (ಅಥವಾ ತ್ರೈಯೇಕತ್ವವನ್ನು)

ಸೂಚಿಸಬಹುದಾಗಿದೆ. [168]ಮತ್ತಾಯ 28:19ರಲ್ಲಿ ತ್ರಿಮೂರ್ತಿವಾದದ ಸೂತ್ರದ ಮುಂದೆ ಕಾಣಿಸಿಕೊಳ್ಳುವಾಗ ಈ ಹೆಸರು "ಏಕವಚನದಲ್ಲಿ" ಇರುವದು ಆಸಕ್ತಿರಕವಾದದ್ದು. [169]ಯೇಸು "ಬೇರೊಬ್ಬ ಸಹಾಯಕನು" ಎಂದು ಹೇಳಿದನು ಯಾಕೆಂದರೆ ಇದುವರೆಗೂ ಭೂಮಿಯ ಮೇಲಿರುವ ವೇಳೆ ಆತನೇ ಅಪೊಸ್ತಲರ ಸಹಾಯಕನಾಗಿದ್ದನು. [170]Vine, 190.

[171]Bauer, 134. [172]J. Behm, "*arrabṓn*," in *Theological Dictionary of the New Testament*, 80. [173]See McGarvey and Pendleton, 359. [174]H. Leo Boles, *The Holy Spirit: His Personality, Nature, Works* (Nashville: Gospel Advocate Co., 1942), 51-53. [175]ಮೊದಲ ಥೆಸಲೋನಿಕ 5:19ನೇ ವಚವವು ಅದ್ಭುತಕರವಾದ ಮತ್ತು ಅದ್ಭುತಕರವಲ್ಲದೆ ಎರಡೂ ಚಟುವಟಿಕೆಗಳನ್ನು ಸೂಚಿಸುವಂತಹ ಸನ್ನಿವೇಶ ಹೊಂದಿರುತ್ತದೆ. ಮೊದಲ ಶತಮಾನದಲ್ಲಿ, ಒಬ್ಬನು "ಪವಿತ್ರಾತ್ಮನ ಅಸಾಧಾರಣವಾದ ವರ" ಹೊಂದಿದ್ದರೂ ಸರಿಯೇ ಅಥವಾ "ಪವಿತ್ರಾತ್ಮನ ಸಾಧಾರಣ ವರ" ಹೊಂದಿದ್ದರೂ ಸರಿಯೇ, "ಪವಿತ್ರಾತ್ಮನನ್ನು ನಂದಿಸಬೇಡಿರಿ" ಎಂಬ ಬುದ್ಧಿವಾದವು ಎರಡಕ್ಕು ಅನ್ವಯವಾಗುವಂಥದಾಗಿತ್ತು. [176]McGarvey and Pendleton, 360. [177]ಇಲ್ಲಿ "ದೇವರ ಮಗು" ಎಂಬದಾಗಿ ನಿರ್ದಿಷ್ಟವಾಗಿ ಉಲ್ಲೇಖಿಸಲ್ಪಟ್ಟಿರುವದಕ್ಕೆ ಕಾರಣವೇನೆಂದರೆ ಒಬ್ಬ ವಿಶ್ವಾಸಿಯೇತರನು ಸಹ ಗಲಾತ್ಯ 5:22, 23ರಲ್ಲಿ ಉಲ್ಲೇಖೀಸಲಾಗಿರುವ ಗುಣಗಳನ್ನು ಹೊಂದಿರುವ ಸಾಧ್ಯತೆಯಿರುತ್ತದೆ. ಹೇಗೂ, ಒಬ್ಬ ದೇವರ ಮಗುವಿನ ವಿಷಯದಲ್ಲಾದರೋ ಆತನು ಕನಿಷ್ಠ ಈ ಗುಣಗಳನ್ನು ಬೆಳೆಸಿಕೊಳ್ಳುವ ಪ್ರಕ್ರಿಯೆಯಲ್ಲಿ ಇಲ್ಲದೆಯೇ "ಪವಿತ್ರಾತ್ಮನಿಂದ ತುಂಬಿಸಲ್ಪಟ್ಟಿರುವದಕ್ಕೆ" ಸಾಧ್ಯವಿಲ್ಲ. [178]George Bailey, lecture presented at Central Christian College, Bartlesville, Oklahoma (now Oklahoma Christian University, located in Edmond, Oklahoma). [179]George Tipps, "Ask for the Ancient Paths," sermon preached at Judsonia church of Christ, Judsonia, Arkansas, 8 July 2003. [180]Stott, 230.

[181]Wilke and Grimm, 532-33. [182]J. W. Roberts, *The Letters of John*, The Living Word Commentary (Austin, Tex.: R. B. Sweet Co., 1968), 76. [183]Warren W. Wiersbe, *The Bible Exposition Commentary*, vol. 2 (Wheaton, Ill.: Victor Books, 1989), 504. [184]Future Farmers of America (FFA) ಎಂಬುದು ಅಮೆರಿಕದ ಯುವಜನತೆಗೆ ಕೃಷಿ ಮತ್ತು ಪಶುಸಾಕಾಣೆ ಬಗ್ಗೆ ಕಲಿಸಿಕೊಡುವ ಸಂಸ್ಥೆಯಾಗಿರುತ್ತದೆ. [185]ನನ್ನ ತಂದೆ ಮತ್ತು ನನ್ನ ಹೆಸರುಗಳಲ್ಲಿ "ಡೇವಿಡ್" ಎಂಬ ನಾಮವು ಇರುತ್ತದೆ. [186]Adapted from David F. Burgess, comp., *Encyclopedia of Sermon Illustrations* (St. Louis: Concordia Publishing House, 1988), 131. [187]The book was printed and bound for her by MyPublisher.com, 2004. [188]ನೋಡಿರಿ ಎಫೆಸ 1:4; ಕೊಲೊಸ್ಸೆ 3:12; 2 ಥೆಸಲೋನಿಕ 2:13; 2 ತಿಮೊಥೆ 2:10; ತೀತನಿಗೆ 1:1. [189]Luccock, 55 ರಿಂದ ಆಯ್ದುಕೊಳ್ಳಲ್ಪಟ್ಟಿದ್ದು. [190]Harold T. Bryson, "Hope," in *Illustrating Paul's Letter to the Romans*, comp. James F. Hightower (Nashville: Broadman Press, 1984), 61 ರಿಂದ ಆಯ್ದುಕೊಳ್ಳಲ್ಪಟ್ಟಿದೆ.

[191]Spurgeon, 257. [192]C. A. Fox; quoted in Morris, 299 ರಿಂದ ಆಯ್ದುಕೊಳ್ಳಲ್ಪಟ್ಟಿದೆ. [193]McGuiggan, 258. [194]Chapell, 57-58 ರಿಂದ ಆಯ್ದುಕೊಳ್ಳಲ್ಪಟ್ಟಿದೆ. [195]Thomas, Class Notes, *Romans*. [196]Bullard, "No Condemnation, No Separation." [197]Frank L. Cox, "My Easy Chair," *20th Century Christian* (May 1958): 17 ರಿಂದ ಆಯ್ದುಕೊಳ್ಳಲ್ಪಟ್ಟಿದೆ. [198]Clay Bryantನು Eastside church of Christ in Midwest City, Oklahoma ಬೋಧಕರಲ್ಲೊಬ್ಬನಾಗಿದ್ದಾನೆ. ಆತನು ಸೇವೆಯ ವಿಶೇಷ ಕ್ಷೇತ್ರವೆಂದರೆ ಹದಿವಯಸ್ಸಿನ ಮಕ್ಕಳೊಂದಿಗೆ ಸೇವೆ ಮಾಡುವದಾಗಿದೆ. [199]J. W. McGarvey, *McGarvey's Sermons* (Lexington, Ky.: N.p., 1893; reprint, Delight, Ark.: Gospel Light Publishing Co., 1975), 215-46. [200]ದೇವರು ತನ್ನ ಮಕ್ಕಳ ಪೋಷಣೆ ಮಾಡುವ ಕುರಿತು ತಿಳಿಸುವ ಅನೇಕ ವಾಕ್ಯಭಾಗಗಳಿರುತ್ತವೆ. ಕೆಲವು ಉದಾಹರಣೆಗಳು ಹೀಗಿರುತ್ತವೆ: ಕೀರ್ತನೆ 3:3—6; 4:8; 5:11, 12; 17:7, 8; 23:1—4; 27:1; 28:7; 34:4, 7, 17, 19; 46:1; ಯೆಶಾಯ 40:28—31; 41:10; ಮತ್ತಾಯ 10:29—31; 28:20; ಇಬ್ರಿಯ 13:5, 6.

[201]Batsell Barrett Baxter, "Providence of God," transcript of sermon preached at the Hillsboro church of Christ, Nashville, Tennessee, 18 October 1959 (emphasis added). [202]ಹೇಗೂ, ದೇವರು ಗತಕಾಲದ ಪಾಪವನ್ನು—ಪಾಪಿಯು ಪಶ್ಚಾತ್ತಾಪ ಪಟ್ಟ ಮೇಲೆ—ಹೇಗೆ ಹಿತಕ್ಕಾಗಿ ಉಪಯೋಗಿಸಿದನೆಂಬದನ್ನು ತಿಳಿಸುವ ಯಾವದೇ ಉದಾಹರಣೆಗಳನ್ನು ಬೈಬಲ್ ನಮಗೆ ಕೊಡುವದಿಲ್ಲ

(ನೋಡಿರಿ ಲೂಕ 22:32). [203]Based on McGarvey, 245-46. [204]Batsell Barrett Baxter, *Great Preachers of Today: Sermons of Batsell Barrett Baxter* (Abilene, Tex.: Biblical Research Press, 1960), 154 ರಿಂದ ಆಯ್ದುಕೊಳ್ಳಲ್ಪಟ್ಟಿದೆ. [205]James Bentley, remarks following a Bible class, 5 December 2003. [206]Moule, 242-43. [207]"Anthropomorphism" ಎಂಬುದು ದೇವರ ಕುರಿತು ಆತನು ಮಾನವ ಗುಣಲಕ್ಷಣಗಳನ್ನು ಹೊಂದಿದ್ದನೋ ಎಂಬಂತೆ ಮಾತಾಡುವದರ ಕುರಿತಾಗಿರುತ್ತದೆ. ಬೈಬಲ್ ಕೆಲವು ಸಾರಿ ದೇವರ "ಮುಖ," "ಕಣ್ಣುಗಳು," ಮತ್ತು "ಕೈಗಳು" ಎಂಬದಾಗಿ ಮಾತಾಡುತ್ತಾ ಈ ವಿಧವಾದ ಹೊಂದಾಣಿಕೆಯ ಭಾಷೆಯನ್ನು ಉಪಯೋಗಿಸುತ್ತದೆ. [208]G. C. Brewer, *Christ Crucified: A Book of Sermons* (N.p., 1928; reprint, Nashville: B. C. Goodpasture, 1959), 53. [209]Fritz Ridenour, ed., *How to Be a Christian Without Being Religious* (Glendale, Calif.: Regal Books, G/L Publications, 1967), 74. [210] ಈ ದೃಷ್ಟಾಂತವು Mel Stinnett ರಿಂದ Eastside church of Christ, Midwest City, Oklahoma, 26 December 2004 ರಲ್ಲಿ ಕಲಿಸಲ್ಪಟ್ಟ ಬೈಬಲ್ ಅಧ್ಯಯನದ ವೇಳೆ ಉಪಯೋಗಿಸಲ್ಪಟ್ಟಿತು.

[211]C. E. Macartney, quoted in Paul Lee Tan, *Encyclopedia of 7,700 Illustrations* (Rockville, Md.: Assurance Publishers, 1979), 520. [212]Harold Hazelip, *Discipleship*, The 20th Century Sermons Series (Abilene, Tex.: Biblical Research Press, 1977), 160.